








ರಾಷ್ಟ್ರ ವಿದ್ಯಾ, ಪರಿಶೋಧನೆ, ಶಿಕ್ಷಣ ಸಂಸ್ಥೆ
ತೆಲಂಗಾಣ, ಹೈದರಾಬಾದು.





ಪರಿಸರ ವಿಜ್ಞಾನ











# ನಾವು - ನಮ್ಮ ಪರಿಸರ

## ನಾಲ್ಕನೇ ತರಗತಿ

FREE

Environmental Studies
Class IV
(Kannada Medium)





ತೆಲಂಗಾಣ ಸರ್ಕಾರ ಪ್ರಚುರಣೆ,ಹೈದರಾಬಾದು.

ತೆಲಂಗಾಣ ಸರ್ಕಾರದ ಉಚಿತ ವಿತರಣೆ

TELANGANA

## ಮಕ್ಕಳೇ ! ಈ ಪಠ್ಯಪುಸ್ತಕವನ್ನು ಹೇಗೆ ಉಪಯೋಗಿಸಬೇಕೋ ನೋಡಿರಿ.

- ಈ ಪಠ್ಯಪುಸ್ತಕವು ನಿಮಗಾಗಿ ತಯಾರಾಗಿದೆ. ಪ್ರತಿ ಪಾಠವನ್ನು ನೀವು ಸ್ವತಃ ಓದಬೇಕು.
- ನಿಮ್ಮ ಶಿಕ್ಷಕರು ನೀವೇನು ಮಾಡಬೇಕೆಂದು ತಿಳಿಸುತ್ತಾರೆ. ಆ ವಿಧವಾಗಿ ನೀವು ಮಾಡಬೇಕಾಗುತ್ತದೆ. ಗುಂಪಾಗಿ ಚಟುವಟಿಕೆಯನ್ನು ಮಾಡುವುದು, ಚರ್ಚಿಸುವುದು ಮಾಡಬೇಕಾಗುತ್ತದೆ.
- ನೀವು ಪಾಠಶಾಲೆಗಳಲ್ಲಿನ ವಿಷಯ ಅರ್ಥಮಾಡಿಕೊಳ್ಳುವುದಕ್ಕೆ ನಿಮ್ಮ ಸ್ನೇಹಿತರೊಡನೆ ಸೇರಿ ಚಟುವಟಿಕೆಗಳನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ನೀವು ಗುಂಪಿನಲ್ಲಿ ಕೆಲಸ ಮಾಡುವುದು, ಚರ್ಚೆಗಳನ್ನು ಮಾಡಬೇಕು.
- ಪಾಠಗಳಲ್ಲಿ ಚಿತ್ರಗಳನ್ನು ಎಚ್ಚರಿಕೆಯಿಂದ ನೋಡಿರಿ. ಚಿತ್ರದಲ್ಲಿರುವ ಪ್ರಶ್ನೆಗಳನ್ನು ಓದಿರಿ. ಅವು ಅರ್ಥವಾಗದಿದ್ದರೆ ನಿಮ್ಮ ಸ್ನೇಹಿತರೊಂದಿಗೆ, ಶಿಕ್ಷಕರೊಂದಿಗೆ ಚರ್ಚಿಸಿರಿ. ಆಲೋಚಿಸಿ, ಉತ್ತರಗಳನ್ನು ತಿಳಿದುಕೊಳ್ಳಿರಿ.
- ಪಾಠಗಳಲ್ಲಿ ಜೊತೆಯಾಗಿ ಚರ್ಚಿಸಿರಿ ಎಂದಿರುತ್ತದೆ. ಹೀಗಿರುವಾಗ ನೀವು ನಾಲ್ಕೈದು ಮಕ್ಕಳು ಸೇರಿ ಜೊತೆಯಾಗಿ ಚರ್ಚಿಸಿ ಪ್ರಶ್ನೆಗೆ ಉತ್ತರ ತಿಳಿಯಿರಿ.
- ಕೆಲವು ಕಡೆ ಸಂಗ್ರಹಿಸಿರಿ ಎಂದಿರುತ್ತದೆ. ಅಂತಹ ಪ್ರಶ್ನೆಗಳಿಗೆ ಸಮೀಪದಲ್ಲಿನ ವ್ಯಕ್ತಿಗಳು, ಸಂಸ್ಥೆಗಳಿಗೆ ಹೋಗಿ ಮಾಹಿತಿ ಕೇಳಿ ತಿಳಿದುಕೊಳ್ಳಿ. ಅಗತ್ಯವಿದ್ದರೆ ಸಮಾಚಾರವನ್ನು ಹೇಗೆ ಸಂಗ್ರಹಿಸಬೇಕೆಂದು ನಿಮ್ಮ ಶಿಕ್ಷಕರನ್ನು ಕೇಳಿ ತಿಳಿದುಕೊಳ್ಳಿ.
- ಕೆಲವು ಪಾಠಗಳಲ್ಲಿ ಇವುಗಳನ್ನು ಮಾಡಿರಿ / ಹೀಗೆ ಮಾಡಿರಿ ಎಂದಿರುತ್ತದೆ. ಇವು ಪ್ರಯೋಗಗಳು, ಇವುಗಳನ್ನು ನೀವು ತಪ್ಪದೇ ಮಾಡಿ ನೋಡಬೇಕು. ಏನು ವೀಕ್ಷಿಸಿದಿರೋ ದಾಖಲಿಸಿಕೊಳ್ಳಿ. ಅವುಗಳ ಕುರಿತು ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.
- ನಿಮಗೆ ತೆಲಂಗಾಣ ಭೂಪಟ, ಜಿಲ್ಲಾ ಭೂಪಟ, ಮಂಡಲ ಭೂಪಟಗಳು ಅಗತ್ಯವಾಗುತ್ತದೆ. ಇವುಗಳನ್ನು ಶಿಕ್ಷಕರನ್ನು ಕೇಳಿ ತೆಗೆದುಕೊಳ್ಳಿ.
- ಪ್ರತಿ ಪಾಠದಲ್ಲಿರುವ ''ನಾವು ಎಲ್ಲಿಯವರೆಗೂ ಕಲಿತ್ತಿದ್ದೇವೆ'' ಯಲ್ಲಿನ ಪ್ರಶ್ನೆಗಳಿಗೆ ನೀವೆ ಸ್ವತಃ ಆಲೋಚಿಸಿ ಉತ್ತರಿಸಿ. ಗೈಡ್‌ನಲ್ಲಿ ನೋಡಿ ಉತ್ತರಗಳನ್ನು ಬರೆಯಬಾರದು. ನೀವು ಬರೆದ ನಂತರ ನಿಮ್ಮ ಶಿಕ್ಷಕರಿಗೆ ತೋರಿಸಿರಿ. ಗೈಡ್‌ಗಳನ್ನು ಕೊಳ್ಳಬೇಡಿ. ಬಳಸಬೇಡಿ. ಗೈಡ್ ಬಳಿಸಿದರೆ ನೀವು ಎಂದೂ ಸ್ವತಃ ಆಲೋಚಿಸಲಾರಿರಿ.
- ಪಾಠದ ಕೊನೆಯಲ್ಲಿರುವ ''ನಾನಿದನ್ನು ಮಾಡಬಲ್ಲೆನೆ ?'' ಯಲ್ಲಿನ ಅಂಶಗಳನ್ನು ಓದಿರಿ. ಪ್ರತಿ ದಿನ ನೀವು ಮಾಡಿದರೆ ಹೌದು ಎನ್ನುವುದಕ್ಕೆ '✓' ಗುರ್ತು ಹಾಕಿರಿ. ಒಂದು ವೇಳೆ ನೀವು ಮಾಡದಿದ್ದರೆ ಖಂಡಿತವಾಗಿ ನಿಮ್ಮ ಉಪಾಧ್ಯಾಯರನ್ನು ಕೇಳಿ ಕಲಿಯಿರಿ.
- ಪಾಠ ಮಾಡುವಾಗ, ಜೊತೆಯಲ್ಲಿ ಚರ್ಚಿಸುವಾಗ ಯಾವುದಾದರೂ ವಿಷಯ ಅರ್ಥವಾಗದಿದ್ದರೆ ನೀವು ತಕ್ಷಣವೇ ನಿಮ್ಮ ಶಿಕ್ಷಕರನ್ನು ಕೇಳಿ ತಿಳಿಯಿರಿ.

### ತೆಲಂಗಾಣ ಸರಕಾರ

**ಮಹಿಳಾ ಅಭಿವೃದ್ಧಿ ಮತ್ತು ಶಿಶು ಕಲ್ಯಾಣ ಶಾಖೆ - ಚೈಲ್ಡ್‌ಲೈನ್ ಫೌಂಡೇಷನ್**

ಶಾಲೆಯಲ್ಲಾಗಲಿ, ಶಾಲೆಯ ಹೊರಗಾಗಲಿ ವೇದನೆಗೆ ಗುರಿ ಆಗುತ್ತಿದ್ದರೆ

ಆಪತ್ತಿನಲ್ಲಿ, ಕಷ್ಟದಲ್ಲಿ ಇರುವ ಮಕ್ಕಳನ್ನು ರಕ್ಷಿಸಲು

CHILD LINE 1098 NIGHT & DAY

24 HOUR NATIONAL HELPLINE

ಮಕ್ಕಳಿಂದ ಕೆಲಸ ಮಾಡಿಸುತ್ತಿರುವ ಅವರನ್ನು ಶಾಲೆಗೆ ಕಳಿಸದೆ ಬೇರೆ ಕೆಲಸಗಳಲ್ಲಿ ಉಪಯೋಗಿಸುತ್ತಿದ್ದರೆ

ಕುಟುಂಬದ ಸದಸ್ಯರಾಗಲಿ ಬಂಧುಗಳಾಗಲಿ ಇಬ್ಬಂದಿಕರವಾಗಿ ಅಸಭ್ಯವಾಗಿ ವರ್ತಿಸುತ್ತಿದ್ದರೆ

1098 (ಹತ್ತು - ಒಂಬತ್ತು - ಎಂಟು) ಉಚಿತ ಟೆಲಿಫೋನ್ ಸೇವಾ ಸೌಕರ್ಯಕ್ಕಾಗಿ ಫೋನ್ ಮಾಡಿರಿ.

# ಆಶಿಸಿದ ಅಭ್ಯಾಸದ ಫಲಿತಾಂಶಗಳು

## ಪರಿಸರ ವಿಜ್ಞಾನ 4ನೇ ತರಗತಿ

## ವಿದ್ಯಾರ್ಥಿಗಳು ಇವೆಲ್ಲವನ್ನು ಕಲಿಯುತ್ತಾರೆ.....

- ಗಿಡಗಳು, ಎಲೆಗಳು, ಕಾಂಡ, ಬೇರು (ಆಕಾರ, ಬಣ್ಣ, ಸ್ಥಾನ, ವಾಸನೆಯಂತಹ) ಮತ್ತು ಪ್ರಾಣಿಗಳು, ಪಕ್ಷಿಗಳು, ಚಲನೆ, ವಾಸಿಸುವ ಸ್ಥಳ, ಆಹಾರದ ಅಭ್ಯಾಸ, ಶಬ್ದ ಮೊದಲಾದವು) ಸಾಮಾನ್ಯ ಲಕ್ಷಣಗಳನ್ನು ಗುರುತಿಸುತ್ತಾರೆ.
- ತಮ್ಮ ಸುತಮುತಲಿರುವ ಪರಿಸರದೊಳಗೆ, ಹೂಗಳು, ಹಣ್ಣುಗಳು, ಬೇರು (ಆಕಾರ, ಬಣ್ಣ, ವಾಸನೆ, ಹೆಚ್ಚಾಗುವ ಸ್ಥಳ ಮೊದಲಾದವುಗಳನ್ನು) ಇವುಗಳು ಪ್ರಾಣಿಗಳು, ಪಕ್ಷಿಗಳು (ಮುಖ/ಹಲ್ಲು, ಕಿವಿ, ಉಗುರುಗಳು, ಕಿವಿ, ನೆತಿಯಿಂದ/ಹಸುವಿನ ಹಾಲು ಮೊದಲಾದವುಗಳು) ಇವುಗಳ ಸಾಧಾರಣ ಲಕ್ಷಣಗಳನ್ನು ಗುರುತಿಸುತಾರೆ.
- ಕುಟುಂಬದಲ್ಲಿರುವ ಸದಸ್ಯರ ಜೊತೆಗೆ ತನಗೆ ಇರುವ ಸಂಬಂಧವನ್ನು ದೊಡ್ಡ (ಅವಿಭಕ್ತ) ಕುಟುಂಬದಲ್ಲಿನ ಸದಸ್ಯರ ಜೊತೆಗೆ ತಮ್ಮ ಸಂಬಂಧವನ್ನು ಯಾರು ಯಾರಿಗೆ ಏನು ಆಗುತಾರೋ ಎನ್ನುವುದನ್ನು ಗುರುತಿಸುತ್ತಾರೆ.
- ನಿತ್ಯಜೀವನದಲ್ಲಿ ವಿವಿಧ ರೀತಿಯ ನೈಪುಣ್ಯಗಳ ಕೆಲಸಗಳು (ವ್ಯವಸಾಯದ ನಿರ್ಮಾಣಕ್ಕಾಗಿ, ಡ್ರಾಯಿಂಗ, ಹಸಕಲೆ) ವಾರದ ಪೂರ್ತಿದಿನದ ಕೆಲಸ ಕಲೆ(ಪೂರ್ವಜರಿಂದ ಹಿಡಿದು ಹೊಂದಿದವುಗಳು) ಶಿಕ್ಷಣಕ್ಕೆ (ವಿವಿಧ ಸಂಸ್ಥೆಗಳ ಪಾತ್ರ) ಬಗ್ಗೆ ವಿವರಿಸುತ್ತಾರೆ.
- ಕುಟುಂಬದಲ್ಲಿನ ಬದಲಾವಣೆ (ಉದಾಹರಣೆಗೆ ಮಗುಹುಟ್ಟಿದ ಮೇಲೆ ಮದುವೆ, ವರ್ಗಾವಣೆ) ಪ್ರಾಣಿಗಳು (ಇರುವೆಗಳು, ಜೇನುಹುಳು, ಆನೆಗಳು) ಪಕ್ಷಿಗಳು (ಗೂಡು ತಯಾರಿಸುವುದರಲ್ಲಿ) ಪರಿವರ್ತನೆಯ ಬಗ್ಗೆ ವಿವರಿಸುತ್ತಾರೆ.
- ನಿತ್ಯವಸರ ವಸ್ತುಗಳನ್ನು ಉತ್ಪತ್ತಿ ಮಾಡುವುದು, ಕಾಯ್ದಿರಿಸುವುದು, ಅದೇ ರೀತಿಯಾಗಿ ಉತ್ಪತ್ತಿ ಮಾಡುವ ಸ್ಥಳದಿಂದ ಮನೆಗೆ ಸೇರುವ ವಿಧಾನವನ್ನು ವಿವರಿಸುತ್ತಾರೆ.
- ಆಗಿನ ಈಗಿನ ಕಾಲದಲ್ಲಿ ವಿನಿಯೋಗಿಸುತ್ತಿರುವ ವಸ್ತುಗಳು, ಕೆಲಸದ ಮಧ್ಯ ವ್ಯತ್ಯಾಸಗಳನ್ನು ಹೇಳುತ್ತಾರೆ. (ಉದಾ: ದ್ರವ್ಯಗಳು, ಮನೆ, ವಸ್ತುಗಳು, ಪರಿಕರಗಳು ನೈಪುಣ್ಯಗಳು ಮೊದಲಾದವುಗಳು).
- ಪ್ರಾಣಿಗಳು, ಪಕ್ಷಿಗಳು, ಗಿಡಗಳು, ವಸ್ತುಗಳ ಬಗ್ಗೆ ಲಕ್ಷಣ, ರೂಪದ ಉಪಯೋಗಗಳು, ಲಕ್ಷಣಗಳ ಆಧಾರದ ಮೇಲೆ ಗುಂಪುಗಳು ಮಾಡುತಾರೆ.
- ಚಿತ್ರಪಟದಲ್ಲಿರುವ ಗುರುತುಗಳನ್ನು ಉಪಯೋಗಿಸಿ ಲ್ಯಾಂಡ್ ಮಾರ್ಕ ಆಧಾರವಾಗಿ ಪಾಠಶಾಲೆ ಮತ್ತು ಮುಖ್ಯಸ್ಥರನ್ನು ಗುರುತಿಸುತ್ತಾರೆ.
- ಸೂಚನೆಗಳು, ಪೋಸ್ಟರಗಳು, ಹಣ (ನೋಟುಗಳು, ನಾಣ್ಯಗಳು) ರೈಲ್ವೆ ಟಿಕೇಟ್, ಸಮಯ ಪಾಲನೆಯಲ್ಲಿರುವ ಸಮಾಚಾರವನ್ನು ಉಪಯೋಗಿಸುವುದಕ್ಕೆ ಹೇಳುತ್ತಾರೆ.
- ಪಾಠಶಾಲೆಯಲ್ಲಿರುವ/ಮನೆಯ ಸುತ್ತಮುತ್ತಲಿರುವ ವ್ಯರ್ಥ ಪದಾರ್ಥಗಳ ಬಗ್ಗೆ ಉಪಯೋಗವಾಗುವಂತಃ ಆಕಾರಗಳು, ವಸ್ತುಗಳು, ರಂಗೋಲಿ, ಪೋಸ್ಟರಗಳು, ಆಲ್ಬಮ್ ಗಳು, ಚಿತ್ರಗಳು ಮುಂತಾದವು ರೂಪಿಸಬಲ್ಲರು.
- ಮತ್ತೆ, ಮತ್ತೆ ಉಪಯೋಗಿಸಿಕೊಳ್ಳುವುದು ರಿಸೈಕಲ್ ಮಾಡುವುದು ವಿವಿಧ ಜೀವರಾಶಿಗಳ ಕುರಿತು ಶ್ರದ್ಧೆವಹಿಸುವುದಕ್ಕೆ ಸೂಚನೆಗಳು ಮಾಡಬಲ್ಲರು.
- ಆಟಗಳ ನಿಯಮಗಳು, ಆಡುವ ವಿಧಾನ, ಆಟಗಾರರ ಹೆಸರು ಪ್ರಾಮುಖ್ಯತೆ ಕುರಿತು ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳಬಲ್ಲರು.
- ದೇಶದ ಇತಿಹಾಸ ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳಬಲ್ಲರು. ಇತಿಹಾಸ, ಸಂಸ್ಕೃತಿ, ಪ್ರಮುಖ ವ್ಯಕ್ತಿಗಳ ಐತಿಹಾಸಿಕ ಕಟ್ಟಡಗಳ ಕುರಿತು ವಿವರಿಸಬಲ್ಲರು.
- ನಿತ್ಯಜೀವನದಲ್ಲಿ ವಿವಿಧ ಸಂಸ್ಥೆಗಳ (ಬ್ಯಾಂಕು, ಗ್ರಾಮ ಪಂಚಾಯಿತಿ, ಸಹಕಾರ ಸಂಸ್ಥೆ, ಪೋಲಿಸ್ ಸ್ಟೇಷನ್) ಇವುಗಳನ್ನು ವಿವರಿಸುತ್ತಾರೆ.



ವಿದ್ಯಾ ಮಾ ಹಕ್ಕು

ಸರ್ವಶಿಕ್ಷಾ ಅಭಿಯಾನ

ತೆಲಂಗಾಣ ವಿದ್ಯಾ ಶಾಖೆ
ತೆಲಂಗಾಣ ಸರಕಾರ

विद्यया ऽ मृतमश्नुते
एन सी ई आर टी NCERT

SCERT TELANGANA

# ಪರಿಸರ ವಿಜ್ಞಾನ

## ನಾಲ್ಕನೇ ತರಗತಿ

Environmental Science Class IV (Kannada Medium)


### ಸಂಪಾದಕರು

**ಡಾ|| ಎನ್. ಉಪೇಂದ್ರರೆಡ್ಡಿ,** ಪ್ರೊಫೆಸರ್, ವಿದ್ಯಾಪ್ರಣಾಳಿಕೆ, ಪಠ್ಯಪುಸ್ತಕ ವಿಭಾಗಾಧಿಪತಿ, ಎಸ್.ಸಿ.ಇ.ಆರ್.ಟಿ., ಹೈದರಾಬಾದು.

**ಶ್ರೀ ಎಸ್. ವಿಜಯಕುಮಾರ್,** ಪ್ರೊಫೆಸರ್, ವಿಜ್ಞಾನಶಾಸ್ತ್ರವಿಭಾಗಾಧಿಪತಿ, ಎಸ್.ಸಿ.ಇ.ಆರ್.ಟಿ., ಹೈದರಾಬಾದು.

**ಶ್ರೀ ಬಿ.ಆರ್. ಜಗದೀಶ್ವರ ಗೌಡ್,** ಪ್ರಧಾನೋಪಾಧ್ಯಾಯರು, ಜಿಲ್ಲಾ ವಿದ್ಯಾ, ಶಿಕ್ಷಣ ಸಂಸ್ಥೆ, ಆದಿಲಾಬಾದ್.

**ಶ್ರೀ ಕೆ. ಚಿಟ್ಟಿಬಾಬು,** ಸೀನಿಯರ್ ಉಪನ್ಯಾಸಕರು, ಜಿಲ್ಲಾ ವಿದ್ಯಾ, ಶಿಕ್ಷಣ ಸಂಸ್ಥೆ, ಕಾರ್ವೇಟಿನಗರ, ಚಿತ್ತೂರು.

### ವಿಷಯ ನಿಪುಣರು

**ಶ್ರೀ ಸುವರ್ಣ ವಿನಾಯಕ್**
ಕೋ-ಆರ್ಡಿನೇಟರ್, ಪಠ್ಯಪುಸ್ತಕ ವಿಭಾಗ,
ಎನ್.ಸಿ.ಇ.ಆರ್.ಟಿ., ಹೈದರಾಬಾದು

**ಶ್ರೀಮತಿ ಜ್ಯೋತ್ಸ್ನ ವಿಜಯಪುರ್ಕರ್**
ಹೋಮೀಬಾಬ ಸೈನ್ಸ್ ಸೆಂಟರ್,
ಮುಂಬಾಯಿ.

**ಶ್ರೀ ಅಲೆಕ್ಸ್ ಎಂ.ಜಾರ್ಜ್**
ಏಕಲವ್ಯ,
ಮಧ್ಯಪ್ರದೇಶ್

### ಸಮನ್ವಯಕರ್ತರು

**ಶ್ರೀಮತಿ ಡಿ. ವಿಜಯಲಕ್ಷ್ಮಿ**
ಉಪನ್ಯಾಸಕರು,
ರಾಜ್ಯ ವಿದ್ಯಾ, ಪರಿಶೋಧನಾ, ಶಿಕ್ಷಣ ಸಂಸ್ಥೆ,
ಹೈದರಾಬಾದು.

**ಡಾ|| ಟಿ.ವಿ.ಎಸ್. ರಮೇಶ್,**
ಕೋ-ಆರ್ಡಿನೇಟರ್,
ರಾಜ್ಯ ವಿದ್ಯಾ, ಪರಿಶೋಧನಾ, ಶಿಕ್ಷಣ ಸಂಸ್ಥೆ,
ಹೈದರಾಬಾದು.

**ಶ್ರೀ ಪಿ. ರಥಂಗಪಾಣಿ ರೆಡ್ಡಿ,**
ಸ್ಕೂಲ್ ಅಸಿಸ್ಟೆಂಟ್,
ಜಿ.ಪ.ಉ.ಪಾ. ಪೋಲ್ಕಂಪಲ್ಲಿ,
ಅಡ್ಡಾಕಲ್ (ಮಂ), ಮೆಹಬೂಬ್‌ನಗರ

### ಪಠ್ಯಪುಸ್ತಕ ಅಭಿವೃದ್ಧಿ, ಪ್ರಚುರಣೆ ಸಮಿತಿ

**ಶ್ರೀ ಎ. ಸತ್ಯನಾರಾಯಣ ರೆಡ್ಡಿ**
ಸಂಚಾಲಕರು,
ರಾಜ್ಯ ವಿದ್ಯಾ, ಪರಿಶೋಧನಾ, ಶಿಕ್ಷಣ ಸಂಸ್ಥೆ,
ಹೈದರಾಬಾದು.

**ಡಾ|| ಎನ್. ಉಪೇಂದ್ರರೆಡ್ಡಿ,**
ಪ್ರೊಫೆಸರ್, ವಿದ್ಯಾಪ್ರಣಾಳಿಕೆ, ಪಠ್ಯಪುಸ್ತಕ
ವಿಭಾಗಾಧಿಪತಿ, ರಾಜ್ಯ ವಿದ್ಯಾ, ಪರಿಶೋಧನಾ,
ಶಿಕ್ಷಣ ಸಂಸ್ಥೆ,
ಹೈದರಾಬಾದು.

**ಶ್ರೀ ಬಿ. ಸುಧಾಕರ್**
ಸಂಚಾಲಕರು,
ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ
ಹೈದರಾಬಾದು.



**ತೆಲಂಗಾಣ ಸರ್ಕಾರ ಪ್ರಚುರಣೆ, ಹೈದರಾಬಾದು.**


ಶಿಕ್ಷಣದಿಂದ ಬೆಳೆಯಿರಿ.
ವಿನಯಶೀಲರಾಗಿ ನಡೆದುಕೊಳ್ಳಿ.

ಕಾಲುಷ್ಯವನ್ನು ನಿವಾರಿಸಿರಿ.
ಪರಿಸರವನ್ನು ಕಾಪಾಡಿರಿ.




ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ 2020-21

SCERT TELANGANA

© Government of Telangana, Hyderabad

*New Edition*

*First Published 2013*
*New mpressions - 2014, 2015, 2017, 2018, 2019, 2020.*

**All rights reserved**

No part of this publication may be reproduced, stored in a retrieval system, or transmitted, in any form or by any means without the prior permission in writing of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purchaser.

The copy right holder of this book is the Director of School Education, Hyderabad, Telangana.

This Book has been printed on 70 G.S.M. Maplitho
Title Page 200 G.S.M. White Art Card

ತೆಲಂಗಾಣ ಸರ್ಕಾರದ ಉಚಿತ ವಿತರಣೆ 2020-21

*Printed in India*
at the Telangana Govt.Text Book Press,
Mint Compound, Hyderabad,
Telangana.

SCERT TELANGANA

# ಮುನ್ನುಡಿ

ಮಕ್ಕಳಿಗೆ ಅವರ ಸುತ್ತಲಿರುವ ಪರಿಸರದ ಕುರಿತು, ಸಮಾಜವನ್ನು ಕುರಿತು ತಿಳಿಯಪಡಿಸಬೇಕು. ಇದಕ್ಕಾಗಿ ಪರಿಸರವನ್ನು ವಿಮರ್ಶಾತ್ಮವಾಗಿ ಪರಿಶೀಲಿಸುವಂತಿರಬೇಕು. ಸಮಾಜದಲ್ಲಿ ನಡೆಯುವ ಘಟನೆಗಳನ್ನು ಅರ್ಥೈಸಿಕೊಂಡು ಪ್ರಶ್ನಿಸುವಂತಿರಬೇಕು. ಹತ್ತಿರದ ಪರಿಸರ, ದೂರವಿರುವ ಪರಿಸರಗಳನ್ನು ತಿಳಿದುಕೊಂಡು ಅನ್ವಯಿಸಿಕೊಳ್ಳುವಂತಿರಬೇಕು. ಪರಿಸರಕ್ಕಾಗಿ, ಪರಿಸರದ ಮೂಲಕ ಕಲಿಯುವುದರಿಂದ ಇದು ಸಾಧ್ಯವಾಗುತ್ತದೆ. ಪರಿಸರದಲ್ಲಿನ ಸಸ್ಯಗಳು, ಪಕ್ಷಿಗಳು, ಪ್ರಾಣಿಗಳು, ತಮ್ಮಷ್ಟೇ ಮುಖ್ಯವೆಂಬುದನ್ನು ತಿಳಿದು ಅವುಗಳನ್ನು ಕಾಪಾಡಲು ಬೇಕಾದ ಭಾವನೆಗಳನ್ನು ಬೆಳೆಸುವುದು ಪ್ರಸ್ತುತ ಪರಿಸ್ಥಿತಿಗೆ ಅತ್ಯಂತ ಮುಖ್ಯವಾಗಿದೆ. ಇದಕ್ಕನುಗುಣವಾಗಿ ನೈಪುಣ್ಯ / ಕೌಶಲ್ಯಗಳನ್ನು, ಸಾಮಾರ್ಥ್ಯಗಳನ್ನು, ಭಾವನೆಗಳನ್ನು ಹೊಂದಲು ಉದ್ದೇಶಿಸಿರುವುದೇ ಪರಿಸರ ವಿಜ್ಞಾನ. ಪ್ರಾಥಮಿಕ ಹಂತದಲ್ಲಿ **''ನಾವು - ನಮ್ಮ ಪರಿಸರಗಳು''** ಎಂಬ ಹೆಸರಿನಿಂದ ಪರಿಸರ ವಿಜ್ಞಾನ ಪಠ್ಯಪುಸ್ತಕವನ್ನು ಎಸ್.ಸಿ.ಇ.ಆರ್.ಟಿ ರೂಪಿಸುತ್ತಿದೆ. 2012-13 ಶೈಕ್ಷಣಿಕ ವರ್ಷದಿಂದ ಮೂರನೇ ತರಗತಿ ಪಠ್ಯಪುಸ್ತಕ ಜಾರಿಗೆ ಬಂದಿದೆ. 2013-14 ನೇ ಶೈಕ್ಷಣಿಕ ವರ್ಷದಿಂದ ನಾಲ್ಕು, ಐದನೇ ತರಗತಿಗಳ ಪಠ್ಯಪುಸ್ತಕಗಳು ಇದಕ್ಕೆ ಮುಂದುವರಿಕೆಯಾಗಿ ಜಾರಿಗೆ ಬರುತ್ತಿವೆ.

ರಾಜ್ಯಮಟ್ಟದಲ್ಲಿ ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಎಸ್.ಸಿ.ಇ.ಆರ್.ಟಿ) ಯವರು ಪಠ್ಯವಸ್ತು, ಪಠ್ಯಪುಸ್ತಕದ ಹಿನ್ನಲೆಯನ್ನು ಪರಿಗಣಿಸಿ, ನಮ್ಮ ರಾಜ್ಯದ ಅವಶ್ಯಕತೆಗನುಗುಣವಾಗಿ ಪಠ್ಯವಸ್ತು, ಪಠ್ಯಪುಸ್ತಕವನ್ನು ರೂಪಿಸಿದ್ದಾರೆ. ಕಡ್ಡಾಯ ಉಚಿತ ಶಿಕ್ಷಣ ಹಕ್ಕು ಕಾಯ್ದೆ – 2009 ಪ್ರಕಾರ ಪ್ರಾಥಮಿಕ ಹಂತದಲ್ಲಿ ಪರಿಸರ ವಿಜ್ಞಾನವನ್ನು ಅಭ್ಯಸಿಸುವುದರ ಮೂಲಕ ಸಾಧಿಸಬೇಕಾದ ಸಾಮರ್ಥ್ಯಗಳನ್ನು ನಿರ್ಧರಿಸಿರುವುದರಿಂದ ಅವುಗಳ ಸಾಧನೆಗೆ ಅನುಗುಣವಾಗಿ ನೂತನ ಪಠ್ಯಪುಸ್ತಕವನ್ನು ರೂಪಿಸಿದ್ದಾರೆ. ಜೀವನಾಧಾರ (ಪ್ರಾಣಿಗಳು, ನದಿಗಳು, ಆಹಾರ ಸಸ್ಯಗಳು) ಆರೋಗ್ಯ – ಸ್ವಚ್ಛತೆ, ವಾತಾವರಣ, ರಕ್ಷಣೆ, ಇತಿಹಾಸ, ಭೂಗೋಳ, ಮೌಲ್ಯಗಳು – ಹಕ್ಕುಗಳು ಎಂಬ ಅಂಶಗಳ ಆಧಾರದ ಮೇಲೆ ಪಠ್ಯಪುಸ್ತಕದಲ್ಲಿ ಪಾಠಗಳನ್ನು ಅಳವಡಿಸಿದ್ದಾರೆ. ಪ್ರತಿ ಪಾಠದಲ್ಲಿಯೂ ಕೂಡ ಆಸಕ್ತಿಕರವಾದ ಸನ್ನಿವೇಶಗಳು, ದೈನಂದಿನ ಜೀವನದಲ್ಲಿನ ಘಟನೆಗಳ ಮೂಲಕ ಮಕ್ಕಳನ್ನು ಆಲೋಚಿಸುವ, ಪ್ರತಿಸ್ಪಂದಿಸುವ, ಚರ್ಚಿಸುವಂತ ಆಲೋಚನಾತ್ಮಕ ಚಟುವಟಿಕೆಗಳು, ಅನ್ವೇಷಣೆಗಳು, ಪ್ರಯೋಗಗಳ ಮೂಲಕ ಸಾಮರ್ಥ್ಯಗಳ ನಿರ್ಮಾಣವಾಗುವಂತೆ ಪಾಠ್ಯಾಂಶಗಳಿವೆ. ಪಾಠದಲ್ಲಿನ ವಿಷಯಗಳನ್ನು ಮಕ್ಕಳಿಗೆ ನೇರವಾಗಿ ನೀಡದೆ, ಸಂಗ್ರಹಣೆ, ಚಟುವಟಿಕೆ, ಚಿತ್ರಗಳ ಪರಿಶೀಲನೆ ಮೂಲಕ, ಮಾಹಿತಿ ಸಂಗ್ರಹಿಸುವ ಮೂಲಕ, ವಿಷಯಗಳನ್ನು ತಿಳಿಯುವುದು, ಅರ್ಥಮಾಡಿಕೊಳ್ಳಲು ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾರೆ. ಸಂಬಂಧಿಸಿದ ಅಂಶಗಳಿಗೆ ಹೊಂದಿದ ಜ್ಞಾನವನ್ನು ವಿಸ್ತೃತವಾಗಿಸಲು ''ನಿಮಗೆ ತಿಳಿದಿದೆಯೇ ?'' ಹೆಸರಿನಿಂದ ಆಸಕ್ತಿಕರವಾದ ಮಾಹಿತಿಯನ್ನು ನೀಡಿದ್ದಾರೆ. ಮಕ್ಕಳು ವೈಯಕ್ತಿಕವಾಗಿ, ಜೊತೆಯಾಗಿ, ಪೂರ್ಣ ತರಗತಿಯೊಂದಿಗೆ ಪಾಲ್ಗೊಂಡು ಸಹವರ್ತಿಗಳೊಂದಿಗೆ ಕಲಿಯಲು ಅನುಕೂಲವಾಗುವಂತೆ ಚಟುವಟಿಕೆ, ಪ್ರಾಜೆಕ್ಟ್‌ಗಳು, ಪ್ರಯೋಗಗಳನ್ನು ಅಳವಡಿಸಿದ್ದಾರೆ. ಪ್ರತಿ ಪಾಠದಲ್ಲಿ ಮಕ್ಕಳು ತಮ್ಮ ಅಭ್ಯಾಸವನ್ನು ಅಳೆಯಲು ''ನಾವು ಎಲ್ಲಿಯವರೆಗೆ ಕಲಿತಿದ್ದೇವೆ'' ಎಂಬ ಶೀರ್ಷಿಕೆಯಲ್ಲಿ ಅಭ್ಯಾಸಗಳನ್ನು ಸೇರಿಸಿದ್ದಾರೆ. ಇವು ಸಾಮಾನ್ಯ ಸಾಧನೆಗನುಗುಣವಾಗಿವೆ. ಪಾಠದ ಕೊನೆಯಲ್ಲಿ ಮಕ್ಕಳು ಸ್ವ ಮೌಲ್ಯಮಾಪನ ಮಾಡಿಕೊಳ್ಳಲು ''ನಾನಿವನ್ನು ಮಾಡಬಲ್ಲೆನೇ ?'' ಎಂಬ ಅಭ್ಯಾಸ ಕೂಡ ಇದೆ. ಪ್ರತಿ ಪಾಠದಲ್ಲಿ ನೈಜವಾದ ಚಿತ್ರಗಳು, ರಚಿಸಿದ ಚಿತ್ರಗಳಿರುವುದರಿಂದ ಮಕ್ಕಳಿಗೆ ವಿಷಯದ ಪ್ರತ್ಯಕ್ಷಾನುಭವವಾದಂತಾಗುತ್ತದೆ.

ಈ ಪಠ್ಯಪುಸ್ತಕವು ಮಕ್ಕಳಿಗೆ ನೇರ ಜ್ಞಾನ ನೀಡುವ ಬದಲಾಗಿ ಜ್ಞಾನ ನಿರ್ಮಾಣಕ್ಕೆ ಪ್ರಾಶಸ್ತ್ಯ ನೀಡುತ್ತದೆ. ಇದನ್ನು ದೃಷ್ಟಿದಯಲ್ಲಿಟ್ಟುಕೊಂಡು ಶಿಕ್ಷಕರು ಮಾಹಿತಿ ನೀಡುವ ಬದಲಾಗಿ ಚಟುವಟಿಕೆ ನಡೆಸುವ ಮೂಲಕ ಮಕ್ಕಳ ಜ್ಞಾನ ನಿರ್ಮಾಣವಾಗುವಂತೆ ನೋಡಿಕೊಳ್ಳಬೇಕು. ಮಕ್ಕಳು ತಮ್ಮ ಸಹಪಾಠಿಗಳ ಮೂಲಕ, ಸಮಾಜದ ಮೂಲಕ, ಅಭ್ಯಾಸಗಳನ್ನು ಮಕ್ಕಳಿಂದ ಖಂಡಿತವಾಗಿ ಮಾಡಿಸಬೇಕು. ಇದಕ್ಕಾಗಿ ಉಪಾಧ್ಯಾಯರು ಬೇಕಾದ ಉಪಕರಣಗಳು ಬೋಧನಾ ತಂತ್ರಗಳನ್ನು ರೂಪಿಸಿಕೊಂಡಿರಬೇಕು. ಈ ದೃಷ್ಟಿಕೋನದಲ್ಲಿ ಪಠ್ಯಪುಸ್ತಕವನ್ನು ಒಂದು ಸಹಾಯಕಾರಿಯಾಗಿ ಮಾತ್ರವೇ ಪರಿಗಣಿಸಬೇಕು. ಮಕ್ಕಳ ಅನುಭವಗಳನ್ನು, ಸ್ಥಳೀಯ ಪರಿಸರವನ್ನು ಒಂದು ಉತ್ತಮ ಸಂಪನ್ಮೂಲವೆಂದು ಭಾವಿಸಿ, ಹೊಸ ತಂತ್ರಜ್ಞಾನವನ್ನು ಜೋಡಿಸಿ ಬೋಧನಾ ಕಲಿಕಾ ಪ್ರಕ್ರಿಯೆಗಳನ್ನು ಅರ್ಥವತ್ತಾಗಿ ನಿರ್ವಹಿಸಬೇಕು. ಮಕ್ಕಳಲ್ಲಿ ಪ್ರಕ್ರಿಯಾ ನೈಪುಣ್ಯಗಳು ಪೂರ್ಣಪ್ರಮಾಣದಲ್ಲಿ ವೃದ್ಧಿಯಾಗುವಂತೆ ಪ್ರಕೃತಿಯ ಬಗ್ಗೆ ಸರಿಯಾದ ಅಭಿಪ್ರಾಯ ಬೆಳೆಸುವಂತೆ ಕೃಷಿ ಮಾಡಬೇಕು.

ಇವುಗಳ ರೂಪಕಲ್ಪನೆಯಲ್ಲಿ ಪಾಲ್ಗೊಂಡ ಉಪಾಧ್ಯಾಯರು, ಉಪನ್ಯಾಸಕರು, ಚಿತ್ರಗಾರರು, ವಿಷಯತಜ್ಞರು, ಡಿ.ಟಿ.ಪಿ. ಡಿಸೈನಿಂಗ್ ಮಾಡಿದವರಿಗೆ, ಪಠ್ಯಕ್ರಮ ಆಕರ್ಷಣೀಯವಾಗಿ, ಮಕ್ಕಳಲ್ಲಿ ಪ್ರಕ್ರಿಯಾ ನೈಪುಣ್ಯಗಳು ವೃದ್ಧಿಯಾಗುವಂತೆ ರೂಪಿಸಲು ನಿರ್ದೇಶನ ನೀಡಿದ ವಿಷಯ ತಜ್ಞರಿಗೆ ಪ್ರತ್ಯೇಕ ಕೃತಜ್ಞತೆಗಳು, ಸಂಪಾದಕ ವರ್ಗಕ್ಕೆ ಧನ್ಯವಾದಗಳು. ಈ ಪಠ್ಯಪುಸ್ತಕವು ಮಕ್ಕಳಲ್ಲಿ ವಿಜ್ಞಾನಶಾಸ್ತ್ರ ಅಭ್ಯಾಸದ ಬಗ್ಗೆ ಉತ್ಸುಕತೆಯನ್ನು, ಆಸಕ್ತಿಯನ್ನು ಬೆಳೆಸಲು ಸಹಾಯಕವಾಗುತ್ತದೆಂದೂ, ಮಕ್ಕಳಲ್ಲಿ ಉತ್ತಮ ಅಭಿಪ್ರಾಯಗಳು, ಜೀವ ವೈವಿಧ್ಯದ ಬಗ್ಗೆ ಅರಿವು ಮೂಡಿಸಿಕೊಳ್ಳಲು ಪೂರ್ಣ ಪ್ರಮಾಣದಲ್ಲಿ ಉಪಯೋಗವಾಗುತ್ತವೆಂದು ಆಶಿಸುತ್ತೇವೆ.

ದಿನಾಂಕ : 30-11-2012 — ನಿರ್ದೇಶಕರು,

ಸ್ಥಳ : ಹೈದ್ರಾಬಾದ್. — ಎಸ್.ಸಿ.ಇ.ಆರ್.ಟಿ.,

ತೆಲಂಗಾಣ, ಹೈದ್ರಾಬಾದ್.

SCERT TELANGANA



ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ 2020-21

# ರಾಷ್ಟ್ರಗೀತೆ

– ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ |
ಭಾರತ ಭಾಗ್ಯ ವಿಧಾತಾ ||
ಪಂಜಾಬ ಸಿಂಧ್ ಗುಜರಾತ ಮರಾಠಾ |
ದ್ರಾವಿಡ ಉತ್ಕಲ ವಂಗಾ ||
ವಿಂಧ್ಯ ಹಿಮಾಚಲ ಯಮುನಾ ಗಂಗಾ |
ಉಚ್ಛಲ ಜಲಧಿ ತರಂಗಾ ||
ತವ ಶುಭ ನಾಮೇ ಜಾಗೇ |
ತವ ಶುಭ ಆಶಿಷ ಮಾಗೇ ||
ಗಾಹೇ ತವ ಜಯ ಗಾಥಾ |
ಜನಗಣ ಮಂಗಳದಾಯಕ ಜಯ ಹೇ ||
ಭಾರತ ಭಾಗ್ಯ ವಿಧಾತಾ |
ಜಯ ಹೇ ! ಜಯ ಹೇ ! ಜಯ ಹೇ ||
ಜಯ ಜಯ ಜಯ ಜಯ ಹೇ |

# ಪ್ರತಿಜ್ಞೆ

**– ಪೈಡಿಮರ್ರಿ ವೆಂಕಟ ಸುಬ್ಬಾರಾವು.**

"ಭಾರತ ದೇಶ ನನ್ನ ಮಾತೃಭೂಮಿ. ಭಾರತೀಯರೆಲ್ಲರೂ ನನ್ನ ಸಹೋದರರು. ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ ನನ್ನ ದೇಶವನ್ನೂ, ನನ್ನ ತಂದೆ ತಾಯಿಗಳನ್ನೂ, ಉಪಾಧ್ಯಾಯರನ್ನೂ ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ.

ನನ್ನ ದೇಶದ ಬಗ್ಗೆ ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡುತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ."

ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ 2020-21



SCERT TELANGANA

# ಶಿಕ್ಷಕರಿಗೆ ಸೂಚನೆಗಳು

- ❖ ಪಠ್ಯಪುಸ್ತಕವನ್ನು ಉಪಯೋಗಿಸುವ ಮೊದಲು ಪಠ್ಯಪುಸ್ತಕದ ಮೂಲಕ ಅಪೇಕ್ಷಿಸುವ ಸಾಮರ್ಥ್ಯಗಳು, ಮುನ್ನುಡಿ, ವಿಷಯ ಸೂಚಿಯನ್ನು ತಪ್ಪದೇ ಓದಬೇಕು.
- ❖ ಪರಿಸರ ವಿಜ್ಞಾನ ಬೋಧನೆಗೆ ವಾರಕ್ಕೆ ಆರು ಪೀರಿಯಡ್‌ಗಳಂತೆ ಒಂದು ವರ್ಷಕ್ಕೆ 220 ಪೀರಿಯಡ್‌ಗಳಿರುತ್ತವೆ.
- ❖ ಈ ಪಠ್ಯಪುಸ್ತಕದಲ್ಲಿ ಒಟ್ಟು 12 ಪಾಠಗಳಿವೆ. ಇವುಗಳನ್ನು 165 ಪೀರಿಯಡ್‌ಗಳಲ್ಲಿ ಬೋಧಿಸುವಂತೆ ರೂಪಿಸಲಾಗಿದೆ.
- ❖ ಒಂದೊಂದು ಪಾಠಕ್ಕೆ ಸರಾಸರಿ 14 ಪೀರಿಯಡ್‌ಗಳು ಅವಶ್ಯವಾಗುತ್ತವೆ, ಕನಿಷ್ಠ 10 ಪೀರಿಯಡ್‌ಗಳಿಂದ 18 ಪೀರಿಯಡ್‌ಗಳಾಗಿ ವಿಭಜಿಸಿಕೊಳ್ಳಬೇಕು.
- ❖ ಪಾಠಗಳಲ್ಲಿ ಚಟುವಟಿಕೆಗಳು, ಪ್ರಾಜೆಕ್ಟ್ ಕೆಲಸಗಳು, ಸಂಗ್ರಹಿಸುವಂತವುಗಳು ಅಂತರ್‌ಭಾಗವಾಗಿ ಇರುವುದರಿಂದ ವಿಷಯ ವಿವರಣೆಗೆ ಕಡಿಮೆ ಪ್ರಾಧಾನ್ಯತೆ ಕೊಟ್ಟು ಇವುಗಳನ್ನು ಪೂರ್ತಿ ಮಾಡಲು ಹೆಚ್ಚು ಸಮಯವನ್ನು ಹೊಂದಿಸಿಕೊಳ್ಳಬೇಕು. ಪೀರಿಯಡ್ ಸಮಯದಲ್ಲಿ ಮಕ್ಕಳಿಗೆ ಸೂಚನೆಗಳು ಕೊಡುವುದು, ಗುಂಪು ಚಟುವಟಿಕೆಗಳು ಮಾಡಿಸುವುದು, ಮಾಡಿದ ಕೆಲಸಗಳನ್ನು ಪ್ರದರ್ಶಿಸುವುದು, ತಪ್ಪುಗಳನ್ನು ಸರಿದಿದ್ದುವುದುವಂತಹವು ನಡೆಯಬೇಕು, ಪ್ರಾಜೆಕ್ಟ್ ಕೆಲಸಗಳು, ಸಂಗ್ರಹಿಸಿ, ಅನ್ವೇಷಣೆ ಚಟುವಟಿಕೆಗಳನ್ನು ಮಕ್ಕಳು ಪಾಠಶಾಲೆ ಸಮಯದ ನಂತರ ಮಾಡುವಂತೆ ಸೂಚನೆಕೊಡಬೇಕು.
- ❖ ಅಭ್ಯಾಸಗಳ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಸ್ಪಷ್ಟವಾದ ಅವಗಾಹನೆ ಉಂಟಾಗುವಂತೆ ವಿವರಿಸಬೇಕು. ಮಕ್ಕಳು ಸ್ವಂತವಾಗಿ ತಮ್ಮ ಜ್ಞಾನದಿಂದ ಬರೆಯುವಂತೆ ಪ್ರೋತ್ಸಾಹಿಸಬೇಕು. ಎಂಥ ಪರಿಸ್ಥಿತಿಯಲ್ಲೂ ಗೈಡುಗಳನ್ನು ನೋಡಿ ಬರೆಯುವುದಕ್ಕೆ ಅನುಮತಿಸಬಾರದು.
- ❖ ಪಾಠಗಳಲ್ಲಿನ ಸನ್ನಿವೇಶಗಳು, ದೈನಂದಿನ ಜೀವನ ಸಂಘಟನೆಗಳು, ಚಿತ್ರಗಳು ಇರುವಲ್ಲಿ ಮಕ್ಕಳನ್ನು ಆಲೋಚಿಸುವಂತೆ ಪ್ರಶ್ನೆಗಳು ಕೇಳಬೇಕು. ಇದಕೋಸ್ಕರ ಪಾಠದಲ್ಲಿ ಬರುವ ಪ್ರಶ್ನೆಗಳೊಂದಿಗೆ ಸಂದರ್ಭೋಚಿತವಾಗಿ ಹೆಚ್ಚು ಪ್ರಶ್ನೆಗಳಿರಬೇಕು. ಇದನ್ನು ಪೂರ್ತಿ ತರಗತಿ ಕೋಣೆ ಚಟುವಟಿಕೆಯಾಗಿ ನಿರ್ವಹಿಸಬೇಕು.
- ❖ ಪಾಠದ ಮಧ್ಯದಲ್ಲಿ " **ಗುಂಪಿನಲ್ಲಿ ಚರ್ಚಿಸಿರಿ** " ಎಂಬ ಗುಂಪು ಚಟುವಟಿಕೆಗಳಿವೆ. ಇವುಗಳನ್ನು ನಿರ್ವಹಿಸುವ ಮೊದಲು ಮಕ್ಕಳಿಗೆ ಸೂಚನೆಗಳು ಕೊಟ್ಟು ಗುಂಪುಗಳಾಗಿ ವಿಂಗಡಿಸಬೇಕು. ಅವುಗಳಲ್ಲಿನ ಪ್ರಶ್ನೆಗಳನ್ನು ಮಕ್ಕಳು ಚರ್ಚಿಸಿ ಬರೆಯುವಂತೆ ಮಾಡಬೇಕು. ಅವಶ್ಯಕವಾದರೆ ಅವರಿಗೆ ಸಲಹೆಗಳು ಸೂಚನೆಗಳು ಕೊಡುವುದು, ರಿಫರೆನ್ಸ್ ಪುಸ್ತಕಗಳನ್ನು ಕೊಡುವುದು ಮಾಡಬೇಕು. ಗುಂಪುಗಳಲ್ಲಿ ಬರೆದ ನಂತರ ಮಕ್ಕಳಿಂದ ಪ್ರದರ್ಶಿಸಬೇಕು. ತಪ್ಪುಗಳನ್ನು ಸರಿಪಡಿಸಬೇಕು.
- ❖ ಪಾಠಗಳಲ್ಲಿ "**ಹೀಗೆ ಮಾಡಿರಿ**" ಎಂಬ ಚಟುವಟಿಗಳು ಪ್ರಯೋಗಗಳಿಗೆ ಸಂಬಂಧಿಸಿದವು ಇವುಗಳನ್ನು ಮಕ್ಕಳು ಶಾಲೆಯಲ್ಲಾಗಲೀ ಅಥವಾ ಮನೆಯಲ್ಲಾಗ್ಲಲಿ ಹೇಗೆ ಮಾಡಬೇಕೋ, ಯಾವ ಯಾವ ಸಾಮಾಗ್ರಿಗಳು ಅವಶ್ಯಕವಾಗುತ್ತವೆಯೋ ತಿಳಿಸಬೇಕು. ಅವುಗಳನ್ನು ಮಕ್ಕಳು ಮಾಡಿದ ನಂತರ ಏನು ಮಾಡಿದ್ದಾರೋ, ಹೇಗೆ ಮಾಡಿದ್ದಾರೋ ವಿವರಿಸುವಂತೆ ಹೇಳಬೇಕು.
- ❖ ಪಾಠಗಳಲ್ಲಿ "**ಸಂಗ್ರಹಿಸಿರಿ**" ಎಂಬ ಚಟುವಟಿಕೆಗಳಿವೆ. ಇವುಗಳ ಮೂಲಕ ಮಕ್ಕಳು ಸಮಾಜದೊಳಗೆ, ಪರಿಸರದೊಳಕ್ಕೆ ಹೋಗಿ ವಿಷಯ ಸಂಗ್ರಹಿಸಿಬೇಕಾಗುತ್ತದೆ. ಇದಕೋಸ್ಕರ ಮಕ್ಕಳು ಹೇಗೆ ಸಮಾಚಾರವನ್ನು ಸಂಗ್ರಹಿಸಬೇಕೋ, ಯಾವ ಪ್ರಶ್ನೆಗಳನ್ನು ಕೇಳಬೇಕೋ ತಿಳುವಳಿಕೆ ಮೂಡಿಸಬೇಕು. ಅವಶ್ಯವಾದ ಸಮಾಚಾರ ಪಟ್ಟಿಗಳನ್ನು ತರಗತಿಯಲ್ಲಿಯೇ ಮಕ್ಕಳಿಂದ ತಯಾರಿಸಬೇಕು. ಸಮಾಚಾರವನ್ನು ಸಂಗ್ರಹಿಸಿದ ನಂತರ ಒಂದು ಪೀರಿಯಡ್‌ನಲ್ಲಿ ಮಕ್ಕಳಿಂದ ಪ್ರದರ್ಶನೆ ನಿರ್ವಹಿಸಬೇಕು.
- ❖ ಪ್ರತಿ ಪಾಠದಲ್ಲಿ "**ಮುಖ್ಯ ಪದಗಳು**" ಇವೆ. ಪಾಠ ಪೂರ್ತಿಯಾದ ನಂತರ ಮುಖ್ಯ ಪದಗಳ ಪಟ್ಟಿಯಲ್ಲಿನ ಪ್ರತಿ ಪದವನ್ನು ವ್ಯಕ್ತಿಗತವಾಗಿ ಕೇಳಬೇಕು. ಕೇಳಿ ಅವರ ತಿಳುವಳಿಕೆಯನ್ನು ತಿಳಿದುಕೊಳ್ಳಬೇಕು. ಇದಕೋಸ್ಕರ ಪ್ರತ್ಯೇಕವಾಗಿ ಒಂದು ಪೀರಿಯಡ್‌ನ್ನು ನಿಗದಿಪಡಿಸಬೇಕು.
- ❖ ಪಾಠ ಪೂರ್ತಿಯಾಗುತ್ತಲೇ ಕೊಟ್ಟ "**ನಾವು ಎಷ್ಟರವರೆಗೆ ಕಲಿತ್ತಿದ್ದೇವೆ**" ಎಂಬ ಶೀರ್ಷಿಕೆಯಲ್ಲಿ ಅಭ್ಯಾಸಗಳು ಇವೆ. ಇವುಗಳಲ್ಲಿನ ಸಾಮರ್ಥ ಆಧಾರಿತ ಪ್ರಶ್ನೆಗಳು ಚಟುವಟಿಕೆಗಳು ಮಕ್ಕಳನ್ನು ಸ್ವಂತವಾಗಿ ಆಲೋಚಿಸುವಂತೆ ಮಾಡಬೇಕು. ಇವುಗಳ ನಿರ್ವಹಣೆಗೆ ಒಂದೊಂದು ಸಾಮರ್ಥಕ್ಕೆ ಅಗತ್ಯವಿದ್ದಷ್ಟು ಪೀರಿಯಡ್‌ಗಳನ್ನು ನಿಗದಿಪಡಿಸಬೇಕು.
- ❖ ಪಾಠದ ಕೊನೆಯಲ್ಲಿರುವ "**ನಾನು ಇವುಗಳನ್ನು ಮಾಡಬಲ್ಲೆನಾ ?**" ಅಭ್ಯಾಸ ಸ್ವಯಂ ಮೌಲ್ಯಾಂಕನಕ್ಕೆ ಉದ್ದೇಶಿಸಲಾಗಿದೆ. ಇವುಗಳಲ್ಲಿನ ಪ್ರತಿ ಅಂಶ ಮಕ್ಕಳು ಮಾಡುತ್ತಿದ್ದಾರೆಯೇ ? ಇಲ್ಲವೇ ತಿಳಿದುಕೊಳ್ಳಬೇಕು. 80% ಮಕ್ಕಳು ಇವುಗಳನ್ನು ಮಾಡಿದ ನಂತರವೇ ಮುಂದಿನ ಪಾಠಕ್ಕೆ ಹೋಗಬೇಕು.

SCERT TELANGANA

## ರೂಪಕಲ್ಪನೆಯಲ್ಲಿ ಪಾಲ್ಗೊಂಡವರು

**ಶ್ರೀ ಸುವರ್ಣ ವಿನಾಯಕ್,** ಕೋ-ಆರ್ಡಿನೇಟರ್,
ವಿದ್ಯಾಪ್ರಣಾಳಿಕೆ, ಪಠ್ಯಪುಸ್ತಕ ವಿಭಾಗ,
ರಾಜ್ಯ ವಿದ್ಯಾ, ಪರಿಶೋಧನಾ, ಶಿಕ್ಷಣ ಸಂಸ್ಥೆ,
ಆಂ.ಪ್ರ., ಹೈದರಾಬಾದು.

**ಶ್ರೀ ಬಿ. ರಾಮಕೃಷ್ಣ** ಎಸ್.ಎ.,
ಜಿ.ಹೆಚ್ಚ್.ಎಸ್., ನಲ್ಲಗುಟ್ಟ, ಹೈದರಾಬಾದು ಜಿಲ್ಲೆ.

**ಶ್ರೀ ಕೆ. ಉಪೇಂದ್ರ ರಾವ್,** ಎಸ್,ಜಿ,ಟಿ.,
ಎಮ್.ಪಿ.ಪಿ.ಎಸ್.,ಪೀರ್ಯಾತಾಂಡ, ತುರ್ಕಪಲ್ಲಿ ಮಂ.
ನಲ್ಗೊಂಡ ಜಿಲ್ಲೆ.

**ಶ್ರೀ ಎ. ಮಹೇಂದರ್ ರೆಡ್ಡಿ** ಎಲ್.ಎಫ್.,
ಎಲ್.ಹೆಚ್.ಎಂ., ಪ್ರಾ.ಪಾ. ಸೋಮನ್‌ಗುರ್ತಿ,
ಪೂಡೂರು ಮಂ. ರಂಗಾರೆಡ್ಡಿ ಜಿಲ್ಲೆ.

**ಶ್ರೀ ಸಿ. ನಾಗೇಂದ್ರ ಪ್ರಸಾದ್,** ಉಪಾಧ್ಯಾಯರು
ಜಿ.ಸಿ. ಪಾಲೆಂ, ಬಂಡಿ ಆತ್ಮಕೂರು ಮಂ. ಕರ್ನೂಲ್ ಜಿಲ್ಲೆ

**ಶ್ರೀ ಗೋರಂಟ್ಲ ಶ್ರೀನಿವಾಸರಾವ್** ಎಸ್.ಎ.
ಎಂ.ಪಿ.ಯು.ಪಿ.ಎಸ್., ಬಿ.ಕೆ. ಪಾಲೆಂ,
ಕಾಕುಮಾನು ಮಂ., ಗುಂಟೂರು ಜಿಲ್ಲೆ.

**ಶ್ರೀ ಟಿ.ವಿ.ಎಸ್. ರಮೇಶ್,** ಕೋ-ಆರ್ಡಿನೇಟರ್,
ರಾಜ್ಯ ವಿದ್ಯಾ, ಪರಿಶೋಧನಾ, ಶಿಕ್ಷಣ ಸಂಸ್ಥೆ,
ಆಂ.ಪ್ರ., ಹೈದರಾಬಾದು.

**ಶ್ರೀ ಪಿ. ರಥಂಗಪಾಣಿ ರೆಡ್ಡಿ** ಎಸ್,ಎ.,ಜಿ.ಪ.ಉ.ಪಾ.,
ಪೋಲ್ಕಂಪಲ್ಲಿ, ಅಡ್ಡಾಕಲ್ ಮಂ., ಮಹಬೂಬ್‌ನಗರ ಜಿಲ್ಲೆ.

**ಶ್ರೀ ಇ.ಡಿ. ಮಧುಸೂದನ್ ರೆಡ್ಡಿ,** ಎಸ್,ಎ.,
ಜಿ.ಪ.ಉ.ಪಾ. ಕೋಸ್ಗಿ (ಬಾಲಕರ), ಮೆಹಬೂಬ್‌ನಗರ ಜಿಲ್ಲೆ

**ಶ್ರೀ ಕೆ.ವಿ. ಸತ್ಯನಾರಾಯಣ,** ಎಸ್. ಎ.,
ಜಿ.ಪ.ಉ.ಪಾ., ವೆಲಿದಂಡ, ಗರಿಡೇಪಲ್ಲಿ ಮಂ. ನಲ್ಗೊಂಡ ಜಿಲ್ಲೆ

**ಶ್ರೀ ನಲ್ಲಾನ್ ಚಕ್ರವರ್ತಿ ಜಗನ್ನಾಥ್,** ಎಸ್.ಜಿ.ಟಿ.,
ಜಿ.ಹೆಚ್.ಎಸ್., ಕುಲ್ಸುಂಪುರ, ಹೈದರಾಬಾದು ಜಿಲ್ಲೆ

**ಶ್ರೀ ಸಿ.ಹೆಚ್. ಶ್ರೀನಿವಾಸರಾವ್** ಹೆಚ್.ಎಂ.,
ಎಂ.ಪಿ.ಪಿ. 3-3, ಪಾಮುಲಮೆಟ್ಟ, ಜೇಗುರುಪಾಡು,
ಕಡಿಯಂ ಮಂ., ಪೂರ್ವ ಗೋದಾವರಿ ಜಿಲ್ಲೆ.

**ಶ್ರೀ ಮೇಡಾ ಹರಿಪ್ರಸಾದ್,** ಎಸ್.ಎ.,
ಜಿ.ಪ.ಉ.ಪಾ., ಕಾನಾಲ, ಕರ್ನೂಲ್ ಜಿಲ್ಲೆ

**ಶ್ರೀಮತಿ ಸಿ.ಹೆಚ್. ಉಷಾರಾಣಿ,** ಎಸ್.ಜಿ.ಟಿ.,
ಎಸ್.ವಿ.ಜಿ.ಎಂ.ಇ. ಸ್ಕೂಲ್, ಗೊಲ್ಲಪಲ್ಲಿ, ಬೊಬ್ಬಿಲಿ ಮಂ., ವಿಜಯನಗರ ಜಿಲ್ಲೆ.

## ಅನುವಾದಕರು

**ಶ್ರೀ ಹೆಚ್. ಶೇಷಾದ್ರಿ** ಎಸ್.ಜಿ.ಟಿ.,
ಎಂ.ಪಿ.ಯು.ಪಿ.ಎಸ್., ಚಿನ್ನಹ್ಯಾಟ, ಕರ್ನೂಲ್ ಜಿಲ್ಲೆ.

**ಶ್ರೀ ಟಿ. ಮೂಕಪ್ಪ** ಎಸ್.ಜಿ.ಟಿ.,
ಎಂ.ಪಿ.ಪಿ.ಎಸ್., ಮೇಲಿಗನೂರು, ಕರ್ನೂಲ್ ಜಿಲ್ಲೆ.

**ಶ್ರೀಮತಿ ಕೆ. ನಾಗಜ್ಯೋತಿ** ಎಸ್.ಜಿ.ಟಿ.,
ಎಂ.ಪಿ.ಪಿ.ಎಸ್., ಪೆದ್ದ ಹರಿವಾಣಂ, ಕರ್ನೂಲ್ ಜಿಲ್ಲೆ.

**ಶ್ರೀ ಯು.ಎಸ್. ಅಯ್ಯಪ್ಪ** ಎಸ್.ಎ.,
ಜಿ.ಪ.ಉ.ಪಾ., ಹೊಳಗುಂದ ಕರ್ನೂಲ್ ಜಿಲ್ಲೆ.

**ಶ್ರೀ ಓಂಕಾರ ರಘುರಾಮ,** ಸ.ಶಿ.,ನೃಪತುಂಗ ಪ್ರೌಢಶಾಲೆ,
ಹೈದರಾಬಾದ.

**ಶ್ರೀ ವೆಂಕಟೇಶ** ಎಸ್.ಜಿ.ಟಿ.,
ಎಂ.ಪಿ.ಪಿ.ಎಸ್., ವೀರುಪಾಪುರಂ, ಕರ್ನೂಲ್ ಜಿಲ್ಲೆ.

**ಶ್ರೀ ಗಂಜಿ ಪೊಂಪಾಪತಿ** ಎಸ್.ಜಿ.ಟಿ.,(ಡಿ.ಟಿ.ಪಿ.)
ಎಂ.ಪಿ.ಪಿ.ಎಸ್., ಮಲಪನಗುಡಿ, ಅನಂತಪುರಂ ಜಿಲ್ಲೆ.

**ಶ್ರೀ ನಾಗರಾಜ,** ಎಸ್.ಎ., ಎಂ.ಪಿ.ಯು.ಪಿ.ಎಸ್.,
ಚೆಗುಂಟ, ಮಹಬೂಬನಗರ್.

**ಶ್ರೀ ನಾಗಭೂಷಣ,** ಎಸ್.ಎ., ಜಿ.ಪ.ಉ.ಪಾ., ಕೃಷ್ಣಾ,
ಮಹಬೂಬನಗರ್.

## ಚಿತ್ರಗಾರರು

**ಶ್ರೀ ಬಿ. ಕಿಷೋರ್ ಕುಮಾರ್,**
ಮುಖ್ಯೋಪಾಧ್ಯಾಯರು,
ಪ್ರಾಥಮಿಕೋನ್ನತ ಪಾಠಶಾಲೆ, ಊಟ್ಕೂರು,
ನಿಡ್ಮನೂರು (ಮಂ), ನಲ್ಗೊಂಡ ಜಿಲ್ಲೆ

## ಲೇಔಟ್ ಮತ್ತು ಡಿಸೈನಿಂಗ್

**ಪ್ರತಿಮ ಪಾತೂರಿ,** ಹೈದರಾಬಾದ.

SCERT TELANGANA

# ವಿಷಯ ಪರಿವಿಡಿ


| ಕ್ರ.ಸಂ. | | ಪಾಠದ ಹೆಸರು | ಪೀರಿಯಡ್‌ಗಳು | ತಿಂಗಳು | ಪುಟ |
|---|---|---|---|---|---|
| 1. |  | ಕುಟುಂಬ ವ್ಯವಸ್ಥೆ - ಬದಲಾವಣೆಗಳು | 10 | ಜೂನ್ | 1 |
| 2. |  | ಆಟಗಳು - ನಿಯಮಗಳು | 10 | ಜುಲೈ | 10 |
| 3. |  | ವಿವಿಧ ಬಗೆಯ ಪ್ರಾಣಿಗಳು | 12 | ಜುಲೈ | 19 |
| 4. |  | ಪ್ರಾಣಿಗಳ ಜೀವನ ವಿಧಾನ - ಜೀವ ವೈವಿಧ್ಯತೆ | 15 | ಆಗಸ್ಟ್ | 30 |
| 5. |  | ನಮ್ಮ ಸುತ್ತಲೂ ಇರುವ ಸಸ್ಯಗಳು | 18 | ಸೆಪ್ಟೆಂಬರ್ | 44 |
| 6. |  | ದಾರಿಯನ್ನು ತಿಳಿದುಕೊಳ್ಳೋಣ | 15 | ಅಕ್ಟೋಬರ್ | 60 |
| 7. |  | ಸಾರ್ವಜನಿಕ ಸಂಸ್ಥೆಗಳು | 18 | ನವಂಬರ್ | 74 |
| 8. |  | ಮನೆಗಳು - ನಿರ್ಮಾಣ - ಪರಿಶುಭ್ರತೆ | 18 | ನವಂಬರ್ | 91 |
| 9. |  | ನಮ್ಮ ಊರು - ನಮ್ಮ ಕೆರೆ | 15 | ಡಿಸೆಂಬರ್ | 107 |
| 10. |  | ನಮ್ಮ ಆಹಾರ - ನಮ್ಮ ಆರೋಗ್ಯ | 15 | ಜನವರಿ | 121 |
| 11. |  | ಹಳ್ಳಿಯಿಂದ ಡಿಲ್ಲಿಗೆ | 10 | ಫೆಬ್ರವರಿ | 135 |
| 12. |  | ಭಾರತ ದೇಶದ ಚರಿತ್ರೆ - ಸಂಸ್ಕೃತಿ | 10 | ಫೆಬ್ರವರಿ | 145 |
| | | ಪುನರಾವರ್ತನೆ | | ಮಾರ್ಚ್ | |


SCERT TELANGANA



ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ 2020-21

# ಈ ಪಠ್ಯಪುಸ್ತಕದ ಮೂಲಕ ಮಕ್ಕಳು ಸಾಧಿಸಬೇಕಾದ ಸಾಮರ್ಥ್ಯಗಳು

## 1 (ವಿಷಯಾವಗಹನ) ತಿಳುವಳಿಕೆ :

- ಕುಟುಂಬ ವ್ಯವಸ್ಥೆಯಲ್ಲಿನ ಬದಲಾವಣೆಗೆ ಕಾರಣಗಳು, ಗೃಹೋಪಕರಣಗಳ ಉಪಯೋಗಿಸುವುದರಿಂದ ಉಂಟಾಗುವ ನಷ್ಟಗಳು, ನಿಯಮಗಳು ಅವುಗಳ ಅವಶ್ಯಕತೆ, ಕ್ರೀಡಾಸ್ಫೂರ್ತಿ, ಪ್ರಾಣಿಗಳ ಜೀವನ ವಿಧಾನ, ವರ್ಗೀಕರಣ ಆಹಾರ, ಆರೋಗ್ಯದ ಅಭ್ಯಾಸಗಳು, ಮನೆ ನಿರ್ಮಾಣ, ನಿರ್ಮಾಣಕ್ಕೆ ಅವಸರವಾದ ಸಾಮಾಗ್ರಿ, ಪರಿಶುಭ್ರತೆಯ ಅವಶ್ಯಕತೆ,ವಿವಿಧ ಸಾಮಾಜಿಕ ಸಂಸ್ಥೆಗಳು ಅವುಗಳಿಂದ ಉಂಟಾಗುವ ಉಪಯೋಗಗಳು, ಸಮಾಚಾರ ಹಕ್ಕು, ದೇಶ ಚರಿತ್ರೆ, ಸಂಸ್ಕೃತಿ ಮೊದಲಾದ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. ಕಾರಣಗಳು ಹೇಳಬಲ್ಲರು, ಉದಾಹರಣೆ ಕೊಡಬಲ್ಲರು, ಹೋಲಿಕೆ – ವ್ಯತ್ಯಾಸಗಳನ್ನು ಗುರ್ತಿಸಿ ವರ್ಗೀಕರಿಸುತ್ತಾರೆ.

## 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ಸಮಾಚಾರ ಸಂಗ್ರಹಣೆಗೆ ಅವಸರವಾದ ಪ್ರಶ್ನೆಗಳನ್ನು ಮಕ್ಕಳು ಕೇಳಬಲ್ಲರು. ಪ್ರಯೋಗಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಊಹಿಸಬಲ್ಲರು. ಉದಾಹರಣೆಗೆ ಕ್ರೀಡಾ ಪಟುಗಳನ್ನು ಪ್ರಶ್ನಿಸುವುದು, ಆಟಗಳಲ್ಲಿನ ಬದಲಾವಣೆಗಳನ್ನು ಊಹಿಸುವುದು, ಆಹಾರ ಪದಾರ್ಥಗಳು ಕೆಡುವುದಕ್ಕೆ ಕಾರಣಗಳನ್ನು ಹುಡುಕುವುದು, ಪ್ರಾಣಿಗಳ ವಿವರಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳು ಕೇಳುವುದು, ಸಮಸ್ಯೆಗಳು ಮತ್ತು ತಿಳಿಯದ ವಿಷಯಗಳಿಗೆ ಕಾರಣಗಳನ್ನು ಊಹಿಸಿ, ನಿಜಗಳನ್ನು ತಿಳಿದುಕೊಳ್ಳಬಲ್ಲರು.

## 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ಆಹಾರ ಪದಾರ್ಥಗಳಿಗೆ ಸಂಬಂಧಿಸಿದ ಸಸ್ಯಗಳು ಮೊದಲಾದವುಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ಮಾಡಬಲ್ಲರು. ಪ್ರಯೋಗಗಳ ನಿರ್ವಹಣೆಗೆ ಅವಶ್ಯವಾದ ಸಾಮಾಗ್ರಿಗಳನ್ನು ಸಂಗ್ರಹಿಸಿಕೊಳ್ಳುತ್ತಾರೆ. ಪ್ರಯೋಗಕ್ಕೆ ಮೊದಲು ಪರಿಕಲ್ಪನೆಗಳು ಮಾಡುತ್ತಾರೆ. ಪ್ರಯೋಗ ಮಾಡಿದ ನಂತರ ತಮ್ಮ ಪರಿಕಲ್ಪನೆಗಳನ್ನು ಹೋಲಿಸಿಕೊಳ್ಳುತ್ತಾರೆ. ಕಾರಣಗಳನ್ನು ವಿಶ್ಲೇಷಿಸುತ್ತಾರೆ.
- ಪ್ರಯೋಗ ಮಾಡಿದ ವಿಧಾನದ ಬಗ್ಗೆ ವಿವರಿಸಬಲ್ಲರು. ಆಟಗಳು, ವ್ಯವಸಾಯ ಕ್ಷೇತ್ರಗಳು ಮನೆಯಲ್ಲಿನ ಸೌಕರ್ಯಗಳು ಪಕ್ಷಿಗಳ ಆಹಾರದ ಅಭ್ಯಾಸಗಳಂಥವುಗಳನ್ನು ಕ್ಷೇತ್ರ ಪರಿಶೀಲನೆ ಮೂಲಕ ಅವಗಾಹನೆ ಮಾಡಿಕೊಳ್ಳುತ್ತಾರೆ. ತಾವು ಪರಿಶೀಲಿಸಿದ ಅಂಶಗಳನ್ನು ನಮೂದಿಸಿ ವಿವರಿಸುತ್ತಾರೆ.

## 4. ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :

- ಮನೆಯಲ್ಲಿನ ಗೃಹೋಪಕರಣಗಳು, ಕ್ರೀಡಾಪಟುಗಳ ವಿವರಗಳು, ಪ್ರಾಣಿಗಳ ವಿವರಗಳು, ಮನೆಯಲ್ಲಿನ ವ್ಯರ್ಥ ಪದಾರ್ಥದ ಬಗ್ಗೆ, ಸರ್ಕಾರಿ ಕಛೇರಿಗಳಲ್ಲಿನ ಅಧಿಕಾರಿಗಳ ಕೆಲಸ ಮೊದಲಾದ ಸಮಾಚಾರಗಳನ್ನು ಸಂಗ್ರಹಿಸುತ್ತಾರೆ.
- ಸಂಗ್ರಹಿಸಿದ ಸಮಾಚಾರವನ್ನು ಪಟ್ಟಿ ರೂಪದಲ್ಲಿ ನಮೂದು ಮಾಡುತ್ತಾರೆ. ಸಮಾಚಾರ ಪಟ್ಟಿಯಿಂದ ಸಮಾಚಾರವನ್ನು ಗ್ರಹಿಸಿ ವಿವರಿಸಬಲ್ಲರು. ಸಮಾಚಾರ ಪಟ್ಟಿಕೆಗಳನ್ನು ನೋಡಿ ವಿಶ್ಲೇಷ ನಿರ್ಧಾರಣೆ ಮಾಡುತ್ತಾರೆ.

## 5 ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :

- ಗ್ರಾಮ, ಮಂಡಲ, ಜಿಲ್ಲಾ, ರಾಜ್ಯ, ನಕ್ಷೆಗಳನ್ನು ಎಳೆಯಬಲ್ಲರು. ಜಿಲ್ಲಾ ನಕ್ಷೆಯಲ್ಲಿ ಮಂಡಲಗಳನ್ನು, ರಾಜ್ಯ ನಕ್ಷೆಯಲ್ಲಿ ಜಿಲ್ಲೆಗಳನ್ನು ಗುರ್ತಿಸುತ್ತಾರೆ.
- ನಕ್ಷೆಗಳಲ್ಲಿ ಬೇಕಾದ ಪ್ರಾಂತವನ್ನು ಗುರ್ತಿಸಿ, ಅವುಗಳ ಸರಿಹದ್ದುಗಳನ್ನು ಹೇಳಬಲ್ಲರು. ನಕ್ಷೆಯ ಆಧಾರವಾಗಿ ಪ್ರಯಾಣ ಮಾರ್ಗಗಳನ್ನು ಗುರ್ತಿಸುತ್ತಾರೆ.
- ಚಿತ್ರಗಳು ಹಾಕುವುದರ ಮೂಲಕ, ನಮೂನೆಗಳು ತಯಾರುಮಾಡುವುದರ ಮೂಲಕ ಭಾವನೆಗಳ ಮೇಲೆ ತಮ್ಮ ಅವಗಾಹನೆ ವಿವರಿಸಬಲ್ಲರು. ಉದಾಹರಣೆಗೆ ಮನೆ, ರೈಲು, ಬಸ್ಸು ನಮೂನೆಗಳ ತಯಾರಿ.

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ನಿತ್ಯಜೀವನದಲ್ಲಿ ಬಳಸುವುದು :

- ಪಕ್ಷಿಗಳು, ಪ್ರಾಣಿಗಳ ಬಗ್ಗೆ ಕರುಣೆ ಹೊಂದಿರುತ್ತಾರೆ. ಪರಿಸರದ ಬಗ್ಗೆ ಜೀವ ವೈವಿಧ್ಯದ ಬಗ್ಗೆ ಅರಿವು ಬೆಳೆಸಿಕೊಳ್ಳುತ್ತಾರೆ. ಸಸ್ಯಗಳು, ಮರಗಳು, ನೀರು ಮುಂತಾದವುಗಳನ್ನು ಕಾಪಾಡಿಕೊಳ್ಳಲು ಮಾಡಬೇಕಾದ ಕ್ರಮಗಳನ್ನು ಕಾರ್ಯಗಳನ್ನು ಅವಗಾಹನೆ ಮಾಡಿಕೊಳ್ಳುತ್ತಾರೆ. ಇವುಗಳಿಗೆ ಸಂಬಂಧಿಸಿದ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು.
- ಮಾಲಿನ್ಯ ನಿರ್ಮೂಲನೆಗೆ ಕೈಗೊಳ್ಳಬೇಕಾದ ಕಾರ್ಯಗಳನ್ನು ಅರ್ಥಮಾಡಿಕೊಂಡು ಆಚಾರ ಶಾಸ್ತ್ರೀಯ ಮೌಲ್ಯಗಳನ್ನು ಜೀವಜಗತ್ತಿನ ಬಗ್ಗೆ ಧನಾತ್ಮಕ ದೃಷ್ಟಿಕೋನ ಹೊಂದಿರುತ್ತಾರೆ.
- ಕ್ರೀಡಾ ಸ್ಫೂರ್ತಿಯಿಂದ ವ್ಯವಹರಿಸುತ್ತಾರೆ, ಜೊತೆಗಾರರೊಂದಿಗೆ ಸೇರಿ ಕೆಲಸ ಮಾಡುವುದು, ಇತರರ ಅಭಿಪ್ರಾಯಗಳನ್ನು ಗೌರವಿಸುವುದು, ಸ್ವೇಚ್ಛೆಯಾಗಿ ಪ್ರಶ್ನಿಸುವುದು, ಅವಸರವಾದವರಿಗೆ ಸಹಾಯ ಮಾಡುವಂತಹ ಪ್ರಶಂಸಾಪೂರ್ವಕವಾದ ವೈಖರಿಗಳನ್ನು ಬೆಳೆಸಿಕೊಳ್ಳುತ್ತಾರೆ.
- ಇತರರಲ್ಲಿರುವ ಉತ್ತಮ ಗುಣಗಳನ್ನು ಅಭಿನಂದಿಸುತ್ತಾರೆ.



SCERT TELANGANA

# 1 ಕುಟುಂಬ ವ್ಯವಸ್ಥೆ - ಬದಲಾವಣೆಗಳು

ಸಾಮಾನ್ಯವಾಗಿ ಕೆಲವು ಕುಟುಂಬಗಳಲ್ಲಿ ತಾಯಿ, ತಂದೆ, ತಾತ, ಅಜ್ಜಿ, ಮಕ್ಕಳು ಇರುತ್ತಾರೆ. ಕೆಲವು ಕುಟುಂಬಗಳಲ್ಲಿ ತಾಯಿ, ತಂದೆ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ, ಅಜ್ಜಿ, ಅಜ್ಜ ಮತ್ತು ಮುತ್ತಾತ, ಮುತ್ತಜ್ಜಿಯರು ಮಕ್ಕಳು ಸಹ ಇರುತ್ತಾರೆ. ಇತ್ತೀಚಿನ ಕುಟುಂಬಗಳಲ್ಲಿ ಅನೇಕ ಬದಲಾವಣೆಗಳು ಕಂಡು ಬರುತ್ತವೆ. ನಿಮ್ಮ ಅಜ್ಜ, ಅಜ್ಜಿ ಮೊದಲಾದವರು ಇರುವ ಕುಟುಂಬಗಳು ಹೇಗೆ ಇದ್ದವು ಊಹಿಸಿರಿ. ಈಗ ಕುಟುಂಬಗಳು ಹೇಗೆ ಇವೆ ? ಒಂದು ಕುಟುಂಬದಲ್ಲಿ ಇರುವ ಸದಸ್ಯರೆಲ್ಲರೂ ಯಾವಾಗಲೂ ಕುಟುಂಬದ ಸದಸ್ಯರೊಂದಿಗೆ ಇರುತ್ತಾರೆಯೇ ? ಕುಟುಂಬದಲ್ಲಿ ಹೊಸ ಸದಸ್ಯರು ಸೇರುತ್ತಾರೆಯೇ? ಕುಟುಂಬದಲ್ಲಿ ಯಾವ ಯಾವಾಗ, ಏಕೆ ಬದಲಾವಣೆಗಳು ಕಂಡು ಬರುತ್ತವೆ. ಆಲೋಚಿಸಿರಿ.

## 1.1. ಕುಟುಂಬದಲ್ಲಿ ಹೊಸ ಸದಸ್ಯರು ಸೇರ್ಪಡುವಿಕೆ:

ವಂದನಾಗೆ ಬಹಳ ಸಂತೋಷವಾಗಿದೆ. ವಂದನಾಳ ಅಮ್ಮನಿಗೆ ಮಗು ಜನ್ಮಿಸಿದೆ. ವಂದನಗಳಿಗೆ ತಂಗಿ ಬಂದಿದ್ದಾಳೆ.



SCERT TELANGANA



### ಚಿತ್ರವನ್ನು ನೋಡಿರಿ. ಹೇಳಿರಿ.

- ಕುಟುಂಬದಲ್ಲಿ ಚಿಕ್ಕಮಗು ಹುಟ್ಟುವ ಮುನ್ನ ಯಾರು ಯಾರು ಇರುತ್ತಿದ್ದರು?
- ವಂದನ ಮನೆಯಲ್ಲಿ ಈಗ ಚಿಕ್ಕ ಮಗು ಜನಿಸಿದೆ! ಈ ಮಗು ಹುಟ್ಟಿದ ನಂತರ ಅವರ ಮನೆಯಲ್ಲಿ ಯಾವ ಯಾವ ಬದಲಾವಣೆಗಳು ಕಂಡು ಬಂದಿವೆ ? ಹೀಗೆ ಹೊಸ ಸದಸ್ಯರು ಕುಟುಂಬ ದೊಳಗೆ ಬರುವುದರಿಂದ ಎಷ್ಟೋ ಬದಲಾವಣೆಗಳು ಉಂಟು ಕಂಡು ಬರುತ್ತದೆ ಅಲ್ಲವೇ! ಅವುಗಳ ಕುರಿತು ನಿಮ್ಮ ಗೆಳೆಯರ ಜೊತೆಗೆ ಚರ್ಚಿಸಿ ಬರೆಯಿರಿ.

### ಗುಂಪಿನಲ್ಲಿ ಚರ್ಚಿಸಿರಿ



- ವಂದನ ಈಗ ವಿರಾಮ ಸಮಯವನ್ನು ಹೇಗೆ ಕಳೆಯುತ್ತಾಳೆ ?
- ಅವರ ತಾಯಿ ಇದಕ್ಕೂ ಮುಂಚೆ ಯಾವ ಯಾವ ಕೆಲಸಗಳು ಮಾಡುತ್ತಿದ್ದಳು?
- ಚಿಕ್ಕ ಮಗು ಹುಟ್ಟಿರುವುದರಿಂದ ಅವರ ತಾಯಿ ಹೊಸದಾಗಿ ಮಾಡುತ್ತಿರುವ ಕೆಲಸಗಳೇನು?
- ಹೊಸ ಮಗು ಹುಟ್ಟಿರುವುದರಿಂದ ವಂದನ ಮನೆಯಲ್ಲಿ ಇನ್ನೂ ಯಾರ್‍ಯಾರ ಕೆಲಸಗಳಲ್ಲಿ ಯಾವ ಯಾವ ಬದಲಾವಣೆಗಳು ಕಂಡು ಬರುತ್ತಿವೆ ?

ಕುಟುಂಬದಲ್ಲಿ ಚಿಕ್ಕಮಕ್ಕಳು ಹುಟ್ಟಿರುವುದರಿಂದ ಆ ಕುಟುಂಬದಲ್ಲಿನ ಸದಸ್ಯರ ಕೆಲಸಗಳಲ್ಲಿ ಯಾವ ಬದಲಾವಣೆಗಳು ಉಂಟಾಗುತ್ತವೆ? ಹಸುಗೂಸಿಗೆ ಸ್ನಾನ ಮಾಡಿಸುವುದು, ಆಹಾರ ತಯಾರಿಸುವುದು, ಆಹಾರ ತಿನ್ನಿಸುವುದು, ಹಸು ಮಗುವನ್ನು ಜಾಗ್ರತೆಯಿಂದ ನೋಡಿಕೊಳ್ಳುವುದು, ಎತ್ತಿಕೊಳ್ಳುವುದು, ಏಕೆ ಅಳುತ್ತಿದೆ ಎಂಬುವುದನ್ನು ತಿಳಿದುಕೊಳ್ಳುವುದು, ತಿಳಿದುಕೊಂಡು ಅಳದಂತೆ ಮಾಡುವುದು ಹೀಗೆ ಎಷ್ಟು ಕೆಲಸಗಳು ಹೊಸದಾಗಿ ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ ಅಮ್ಮನ ಜೊತೆಗೆ ಮನೆಯಲ್ಲಿ ಎಲ್ಲರೂ ಸಹ ಸಹಾಯ ಮಾಡಬೇಕಾಗುತ್ತದೆ. ಹಸುಗೂಸು ಬರುವ ಮುನ್ನ ಈ ರೀತಿ ಕೆಲಸಗಳು ಇರುವುದಿಲ್ಲ.

## 1.2. ಮದುವೆ - ಕುಟುಂಬದಲ್ಲಿ ಬರುವ ಬದಲಾವಣೆಗಳು

ನೀವು ಯಾವಾಗಲಾದರೂ ಮದುವೆಗೆ ಹೋಗಿದ್ದೀರಾ ? ಏನು ನೋಡಿದ್ದೀರಿ ತಿಳಿಸಿರಿ.

ರಾಣಿಯ ಅಣ್ಣ ಶ್ರೀನಿವಾಸನ ಮದುವೆ ನಡೆಯುತ್ತಿದೆ. ಮನೆಯನ್ನು ಚೆನ್ನಾಗಿ ಅಲಂಕರಿಸಿದ್ದಾರೆ. ಬಂಧುಗಳು ಬಂದಿದ್ದಾರೆ. ಮನೆಯಲ್ಲಾ ಸಡಗರದಿಂದಿವೆ.



SCERT TELANGANA

ಮದುವೆ ನಂತರ ರಾಣಿಯವರ ಮನೆಗೆ ಮದುಮಗಳು ಬಂದಳು. ರಾಣಿಯವರ ಮನೆಯಲ್ಲೂ ಸಹ ಹೊಸ ಸದಸ್ಯರು ಸೇರಿದ್ದಾರೆ ಎಂದರ್ಥ! ಮದುವೆಗೆ ಮುಂದೆ ರಾಣಿಯವರ ಅತ್ತಿಗೆ ಎಲ್ಲಿ ಇದ್ದಳು ? ಮದುವೆ ನಂತರ ಆಕೆ ಎಲ್ಲಿ ಇರುತ್ತಾಳೆ ಹೇಳಿರಿ. ನೀವು ನಿಮ್ಮ ಗೆಳೆಯರೊಂದಿಗೆ ಕೂಡಿ ಗುಂಪಿನಲ್ಲಿ ಕೆಳಗಿನ ಪ್ರಶ್ನೆಗಳನ್ನು ಕುರಿತು ಚರ್ಚಿಸಿ ಬರೆಯಿರಿ.

**ಗುಂಪಿನಲ್ಲಿ ಚರ್ಚಿಸಿರಿ**



- ಮದುವೆಯಿಂದ ಮದುವೆ ಮನೆಯಲ್ಲಿ ಯಾವ ಯಾವ ಬದಲಾವಣೆಗಳು ಕಂಡು ಬರುತ್ತವೆ?
- ರಾಣಿಯವರ ಮನೆಯಲ್ಲಿ ಮದುವೆ ನಂತರ ಯಾವ ಬದಲಾವಣೆಗಳು ಕಂಡು ಬಂದಿವೆ ?
- ಭವಿಷ್ಯತ್ತಿನಲ್ಲಿ ರಾಣಿಯವರ ಮನೆಯಲ್ಲಿ ಯಾವ ಯಾವ ಬದಲಾವಣೆಗಳು ಬರಬಹುದು?
- ಅಜ್ಜಿ, ಮುತ್ತಜ್ಜಿ, ತಾತ, ಇರುವ ಕುಟುಂಬದಲ್ಲಿ ಎಲ್ಲರೂ ಕೂಡಿ ಬಾಳಿದರೆ ಚೆನ್ನಾಗಿರುತ್ತದೆ. ಏಕೆ ? ತಿಳಿಸಿರಿ.

ಯಾವ ಕುಟುಂಬದಲ್ಲಾದರೂ, ಯಾರಿಗಾದರೂ ಮದುವೆಯಾದರೆ, ಮಕ್ಕಳು ಹುಟ್ಟಿದಾಗ, ಹೊಸ ಸದಸ್ಯರು ಸೇರುತ್ತಾರೆ. ಹೀಗೆ ಮನೆಯಲ್ಲಿ ಇರುವ ಸದಸ್ಯರಲ್ಲಿ ಯಾರಾದರೂ ಉದ್ಯೋಗಬಂದು ಅಥವಾ ಬೇರೆ ಕಾರಣಗಳಿಂದ ಕುಟುಂಬ ಬಿಟ್ಟು ಹೋದರೆ, ಸತ್ತುಹೋಗುವಂತಹ ಘಟನೆ ನಡೆದರೆ ಕುಟುಂಬಗಳಲ್ಲಿ ಬದಲಾವಣೆಗಳು ಕಂಡು ಬರುತ್ತವೆ. ಅಂದರೆ ಕುಟುಂಬದಲ್ಲಿ ಸದಸ್ಯರು ಸೇರಿದರೂ ಅಥವಾ ಹೋದರೂ ಬದಲಾಣೆಗಳು ಉಂಟಾಗುತ್ತವೆ.



**ಆಲೋಚಿಸಿರಿ ...**

**ಇವಲ್ಲದೇ ಇನ್ನೂ ಯಾವ ಕಾರಣಗಳಿಂದ ಕುಟುಂಬಗಳಲ್ಲಿ ಬದಲಾವಣೆಗಳು ಉಂಟಾಗುತ್ತವೆ ತಿಳಿಸಿರಿ.**

## 1.3. ಹೊಸ ಪ್ರದೇಶಗಳಿಗೆ ಹೋಗುವುದು

ಆದಿತ್ಯನ ಕುಟುಂಬದವರು ಮೆದಕ್‌ನಲ್ಲಿ ಇದ್ದಾರೆ. ಆದಿತ್ಯರವರ ತಂದೆಗೆ ಕಛೇರಿಯಿಂದ ಒಂದು ಪತ್ರ ಬಂದಿತು. ಅವರಿಗೆ ಬಡ್ತಿ ಮೇಲೆ ನಿಜಾಮಾಬಾದ್‌ಗೆ ವರ್ಗಾವಣೆ ಮಾಡಿದ್ದಾರೆಂದು ಪತ್ರದಲ್ಲಿ ಬರೆದಿದೆ.

ಆದಿತ್ಯರವರದು ಅವಿಭಕ್ತ ಕುಟುಂಬ. ಅವರ ಮನೆಯಲ್ಲಿ ತಾಯಿ, ತಂದೆ, ತಂಗಿಯೊಂದಿಗೆ ತಾತ, ಅಜ್ಜಿ, ಚಿಕ್ಕಪ್ಪ ಚಿಕ್ಕಮ್ಮ ರವರು ಮಕ್ಕಳು ಕೂಡಿ ಹೊಂದಾಣಿಕೆಯಿಂದ ಇರುತ್ತಾರೆ.



SCERT TELANGANA



**ಆಲೋಚಿಸಿರಿ ...**

**ಆದಿತ್ಯರವರ ತಂದೆ ಪತ್ರವನ್ನು ತನ್ನ ಕುಟುಂಬ ಸದಸ್ಯರಿಗೆ ತೋರಿಸಿದ ತಕ್ಷಣ ಅವರು ಏನು ಅಂದುಕೊಂಡಿರುತ್ತಾರೆ ?**

ಆದಿತ್ಯರವರ ತಂದೆ ಮನೆ ಖಾಲಿ ಮಾಡಿ ಕುಟುಂಬದೊಂದಿಗೆ ಕೂಡಿ ಹೊಸ ಊರಿಗೆ ಹೋದರು. ಅದೇ ರೀತಿಯಲ್ಲಿ ಆದಿತ್ಯರವರ ಗೆಳೆಯ ರಮೇಶ್‌ರವರ ತಂದೆಗೂ ಸಹ ಬಡ್ತಿ ಬಂದಿತು. ಸಿದ್ದಿಪೇಟೆಗೆ ವರ್ಗಾವಣೆ ಮಾಡಿದ್ದಾರೆ. ಆದರೆ ರಮೇಶ್‌ರವರ ತಂದೆಯವರು ಕುಟುಂಬವನ್ನು ಊರಿಗೆ ತೆಗೆದುಕೊಂಡು ಹೋಗಲಿಲ್ಲಾ. ತಾನೇ ಪ್ರತಿದಿನ ಹೋಗಿ ಬರುತ್ತಿರುತ್ತಾನೆ. ಹೀಗೆ ಉದ್ಯೋಗ ಮಾಡುವವರ ಕುಟುಂಬದಲ್ಲಿ ಎಂತಹ ಬದಲಾವಣೆಗಳು ಉಂಟಾಗುತ್ತವೆಯೋ ಗುಂಪಿನಲ್ಲಿ ಚರ್ಚಿಸಿ ಬರೆಯಿರಿ.

| ಆದಿತ್ಯರವರ ಕುಟುಂಬ | ರಮೇಶ್‌ರವರ ಕುಟುಂಬ |
|---|---|
| • ಬಡ್ತಿ ಪಡೆಯುವ ಮುನ್ನ ಎಲ್ಲಿ ಇರುತ್ತಿದ್ದರು ? | • ಬಡ್ತಿ ಪಡೆಯುವ ಮುನ್ನ ಎಲ್ಲಿ ಇರುತ್ತಿದ್ದರು ? |
| • ಬಡ್ತಿ ಪಡೆದ ನಂತರ ಕುಟುಂಬ ಎಲ್ಲಿ ಇದೆ ? | • ಬಡ್ತಿ ಪಡೆದ ನಂತರ ಕುಟುಂಬ ಎಲ್ಲಿ ಇದೆ ? |
| • ಹೊಸ ಪ್ರದೇಶಕ್ಕೆ ಹೋಗಿರುವುದರಿಂದ ಆದಿತ್ಯರವರ ಕುಟುಂಬದಲ್ಲಿ ಯಾವ ಯಾವ ಬದಲಾವಣೆಗಳು ಬಂದಿವೆ. | • ರಮೇಶ್‌ರವರ ತಂದೆ ಮತ್ತೊಂದು ಊರಿಗೆ ದಿನವೂ ಹೋಗಿ ಬರುವುದರಿಂದ ಅವರ ಕುಟುಂಬದಲ್ಲಿ ಯಾವ ಯಾವ ಬದಲಾವಣೆಗಳು ಬಂದಿವೆ ? |
| • ಆದಿತ್ಯನು ಈ ಮುಂಚೆ ಮತ್ತು ಈಗ ಮಾಡುತ್ತಿರುವ ಕೆಲಸಗಳಲ್ಲಿ ಏನಾದರೂ ಬದಲಾವಣೆಗಳು ಕಂಡು ಬರುತ್ತೀವೆಯೇ ? | • ರಮೇಶ್ ಕೆಲಸಗಳಲ್ಲಿ ಸಹ ಯಾವಾದರೂ ಬದಲಾವಣೆಗಳು ಕಂಡು ಬರುತ್ತೀವೆಯೇ ? |

- ನಿಮ್ಮ ತರಗತಿಯಲ್ಲಿಯಾಗಲೀ, ಪಾಠಶಾಲೆಯಲ್ಲಿಯಾಗಲೀ, ಯಾರಾದರೂ ಬೇರೆ ಪ್ರದೇಶಗಳಿಂದ ಹೊಸದಾಗಿ ಬಂದು ಸೇರಿದ್ದಾರೆಯೇ ? ಅವರ ಜೊತೆಗೆ ಮಾತನಾಡಿರಿ. ಅವರ ಕುಟುಂಬದಲ್ಲಿಯಾಗಲೀ, ಆ ಮಕ್ಕಳ ಕೆಲಸಗಳಲ್ಲಿಯಾಗಲೀ, ಏನಾದರೂ ಬದಲಾವಣೆಗಳು ಉಂಟಾಗಿರುವುದೇ ? ತಿಳಿಸಿರಿ.
- ಅವನು / ಅವಳು ಎಲ್ಲಿಂದ ಬಂದಿದ್ದಾರೆ ?
- ಅವನು / ಅವಳು ಹಿಂದೆ ಓದಿದ ಹಳೆಯ ಪಾಠಶಾಲೆ ಹೇಗಿತ್ತು ?
- ಅವನು / ಅವಳು ಇಲ್ಲಿ ಗಮನಿಸದ ಹೊಸ ವಿಷಯಗಳೇನು ?
- ಇಲ್ಲಿಯ ವಾತಾವರಣ ಅವರಿಗೆ ಇಷ್ಟವಾಗಿದೆಯೇ ? ಏಕೆ ?



SCERT TELANGANA

ಕುಟುಂಬಗಳು ಯಾವಾಗಲೂ ಒಂದೇ ರೀತಿಯಾಗಿ ಇರುವುದಿಲ್ಲ. ಕುಟುಂಬಗಳಲ್ಲಿ ವಿವಿಧ ಕಾರಣಗಳಿಂದ ಬದಲಾವಣೆಗಳು ಉಂಟಾಗುತ್ತಿರುವ ಕುಟುಂಬಗಳಲ್ಲಿ ಮದುವೆ, ಮಕ್ಕಳು ಜನಿಸುವುದು, ಹೊಸ ಪ್ರದೇಶಗಳಿಗೆ ವರ್ಗಾವಣೆ ಆಗುವುದು ಮುಂತಾದ ಕಾರಣಗಳಿಂದ ಬದಲಾವಣೆ ಕಂಡು ಬರುತ್ತವೆ. ಎಂದು ತಿಳಿದು ಕೊಂಡಿದ್ದೀರಿ ! ಅಷ್ಟೇ ಅಲ್ಲದೇ ವ್ಯಾಪಾರಗೋಸ್ಕರ, ಓದುವುದಕ್ಕೋಸ್ಕರ, ಜೀವನ ಮಾಡುವುದಕ್ಕೋಸ್ಕರ ವಲಸೆ ಹೋಗುವುದು, ಭೂಕಂಪಗಳು ಸಂಭವಿಸಿದಾಗ, ನೆರೆಹಾವಳಿ ಬಂದಾಗ, ಕುಟುಂಬದಲ್ಲಿ ಪ್ರಮುಖರಾದವರು ಮರಣ ಹೊಂದಿದಾಗ, ಸಹ ಕುಟುಂಬಗಳಲ್ಲಿ ಅನೇಕ ಬದಲಾವಣೆಗಳು ಕಂಡು ಬರುತ್ತವೆ.ಇವುಗಳನ್ನು ಹಿಂದಿನ ದಿನಗಳಿಗೆ ಹೋಲಿಸಿದಾಗ ಇತ್ತೀಚಿನ ಕುಟುಂಬಗಳಲ್ಲಿ ಬಹಳ ಬದಲಾವಣೆಗಳು ಕಂಡು ಬರುತ್ತವೆ. ಈ ವಿವರಗಳು ನಮಗೆ ಹೇಗೆ ತಿಳಿಯುತ್ತವೆ ?

**ಹೀಗೆ ಮಾಡಿರಿ :**

ಇದಕ್ಕಾಗಿ ನೀವು ಮೂವರು ಕೂಡಿ ಒಂದು ಗುಂಪಾಗಿ ಸೇರಿರಿ. ಒಬ್ಬೊಬ್ಬರು ನಿಮ್ಮ ಸಮೀಪದಲ್ಲಿಯ ಮೂವರು ಮುದುಕರನ್ನು ಅಥವಾ ನಿಮ್ಮ ಕುಟುಂಬದಲ್ಲಿರುವ ಮುದಕರನ್ನು ಅಂದರೆ ಮುತ್ತವ್ವ, ಮುತ್ತಾತ, ಅಜ್ಜ, ಅಜ್ಜಿ ಹೀಗೆ ಇವರಲ್ಲಿ ಯಾರನ್ನಾದರೂ ಭೇಟಿ ಮಾಡಿ, ಅವರೊಂದಿಗೆ ಮಾತನಾಡಿ ಕೆಳಗಿನ ವಿವರಗಳನ್ನು ಸಂಗ್ರಹಿಸಿ ಪಟ್ಟಿಯಲ್ಲಿ ಬರೆಯಿರಿ.

| ಸಂಗ್ರಹಿಸುವ ಸಮಾಚಾರ | ವಿವರಗಳು |
|---|---|
| • ನಿಮ್ಮ ಕುಟುಂಬವು ಎಷ್ಟು ವರ್ಷಗಳಿಂದ ಇಲ್ಲಿ ವಾಸವಾಗಿದೆ ? | |
| • ಹಿಂದೆ ಎಲ್ಲಿ ವಾಸಿಸುತ್ತಿದ್ದೀರಿ ? | |
| • ಇಲ್ಲಿಗೆ ಏಕೆ ಬಂದಿದ್ದೀರಿ ? | |
| • ಇಲ್ಲಿಗೆ ಬರುವ ಮುಂಚೆ, ಬಂದ ನಂತರ ನಿಮ್ಮ ಕುಟುಂಬದಲ್ಲಿ ಉಂಟಾದ ಬದಲಾವಣೆಗಳೇನು ? | |
| • ಹತ್ತು ವರ್ಷಗಳ ಹಿಂದೆ ಕುಟುಂಬದಲ್ಲಿ ಎಷ್ಟು ಜನ ಸದಸ್ಯರಿದ್ದರು ? | |
| • ಈಗ ಎಷ್ಟು ಜನ ಸದಸ್ಯರಿದ್ದಾರೆ ? | |
| • ಈ ರೀತಿ ಕುಟುಂಬ ಸದಸ್ಯರ ಸಂಖ್ಯೆಯಲ್ಲಿ ಬದಲಾವಣೆಗಳು ಉಂಟಾಗಲು ಕಾರಣಗಳೇನು ? | |
| • ಕುಟುಂಬದಲ್ಲಿನ ಬದಲಾವಣೆಗಳನ್ನು ಕುರಿತು ನೀವೇನು ಹೇಳುವಿರಿ ? | |

SCERT TELANGANA

## 1.4. ಕುಟುಂಬಗಳು ಅಂದು, ಇಂದು, ನಾಳೆ :

ಹಿಂದಿನ ಕುಟುಂಬದೊಂದಿಗೆ ಹೋಲಿಸಿದಾಗ ಇಂದಿನ ಕುಟುಂಬಗಳಲ್ಲಿ ಬಹಳ ಬದಲಾವಣೆಗಳು ಸಂಭವಿಸಿವೆ. ಎಂದು ತಿಳಿದುಕೊಂಡಿದ್ದಾರೆ ? ಅದರಂತೆ ನಿಮ್ಮ ಕುಟುಂಬದಲ್ಲಿ ಸಹ ಬದಲಾವಣೆಗಳು ಬಂದಿವೆಯೇ ?

ಅಂದಿನ ಕಾಲದಲ್ಲಿ ಹೆಚ್ಚಾಗಿ ಅವಿಭಕ್ತ ಕುಟುಂಬಗಳು ಇದ್ದವು. ಅವಿಭಕ್ತ ಕುಟುಂಬದಲ್ಲಿ ತಾತ, ಅಜ್ಜಿ, ಚಿಕ್ಕ ಅಜ್ಜಿ, ಚಿಕ್ಕ ಅಜ್ಜ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಪ್ಪ, ದೊಡ್ಡಮ್ಮ, ಅತ್ತೆ, ಮಕ್ಕಳು ಹೀಗೆ ಒಬ್ಬರಿಗಿಂತ ಹೆಚ್ಚು ಕುಟುಂಬಗಳು ಕೂಡಿ ಇರುತ್ತಿದ್ದವು. ಅದಕ್ಕಾಗಿ ಕುಟುಂಬದ ಕೆಲಸಗಳನ್ನು ಎಲ್ಲರೂ ಕೂಡಿ ಮಾಡಿಕೊಳ್ಳುತ್ತಿದ್ದರು. ಎಂತಹ ಕಷ್ಟಸುಖಗಳು ಬಂದರೂ ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದರು. ಈಗಿನ ಕಾಲದಲ್ಲಿ ಕುಟುಂಬದಲ್ಲಿಯ ಸದಸ್ಯರ ಸಂಖ್ಯೆ ಬರುಬರುತ್ತಾ ಕಡಿಮೆಯಾಗುತ್ತದೆ.

ಈಗ ಹೆಚ್ಚಾಗಿ ಕುಟುಂಬದಲ್ಲಿ ಅಮ್ಮ, ಅಪ್ಪ ಮತ್ತು ಅವರ ಮಕ್ಕಳು, ಮಾತ್ರವೇ ಕಾಣಿಸಿಕೊಳ್ಳುತ್ತಾರೆ. ಇದನ್ನೇ 'ಚಿಕ್ಕ ಕುಟುಂಬ' ಎನ್ನುತ್ತಾರೆ. ಮದುವೆಯಾದ ಕೂಡಲೆ ಬೇರೆ ಮನೆ ಮಾಡುವುದೂ ಒಂದು ಕಾರಣ. ಈ ರೀತಿ ಚಿಕ್ಕ ಕುಟುಂಬಗಳಿಗೆ ಅಭ್ಯಾಸವಾಗಿ ತಂದೆ-ತಾಯಿಯರನ್ನು, ತಾತ, ಅಜ್ಜಿಯರನ್ನು ಸಹ ಸರಿಯಾಗಿ ನೋಡಿಕೊಳ್ಳುವುದಿಲ್ಲ. ಕೆಲವು ತಂದೆ ತಾಯಿರನ್ನು ವೃದ್ಧಾಶ್ರಮಗಳಲ್ಲಿ ಸಹ ಬಿಡುತ್ತಾರೆ. ತಮ್ಮ ಮಕ್ಕಳನ್ನು ಸಹ ವಿದ್ಯಾಭ್ಯಾಸದ ಹೆಸರಿನ ಮೇಲೆ ವಸತಿ ನಿಲಯಗಳಲ್ಲಿ ಬಿಡುತ್ತಾರೆ. ಇದನ್ನು ಕುರಿತು ನಿಮ್ಮ ಗೆಳೆಯರೊಂದಿಗೆ, ಗುಂಪಿನಲ್ಲಿ ಚರ್ಚಿಸಿ ಬರೆಯಿರಿ.

### ಗುಂಪಿನಲ್ಲಿ ಚರ್ಚಿಸಿರಿ



- ಹಿಂದೆ ಕುಟುಂಬಗಳು ಹೇಗೆ ಇರುತ್ತಿದ್ದವು ?
- ಅವಿಭಕ್ತ ಕುಟುಂಬ ಅಥವಾ ಸಮಿಷ್ಟಿ ಕುಟುಂಬದಿಂದ ಎಂತಹ ಲಾಭಗಳು ಆಗುತ್ತವೆ ?
- ಈಗ ಕುಟುಂದಲ್ಲಿನ ಸದಸ್ಯರ ಸಂಖ್ಯೆ ಕಡಿಮೆಯಾಗಿ ವಿಭಕ್ತ ಕುಟುಂಬ ಉಂಟಾಗುತ್ತಿವೆ ಯಲ್ಲವೇ? ಇದಕ್ಕೆ ಕಾರಣಗಳು ಏನಾಗಿರುತ್ತವೆ ?
- ವೃದ್ಧಾಶ್ರಮ ಸಂಖ್ಯೆ ಬರುಬರುತ್ತಾ ಹೆಚ್ಚಾಗುತ್ತವೆ. ಏಕೆ ?
- ಇದು ಒಳ್ಳೆಯ ಬದಲಾವಣೆ ಎಂದು ನೀವು ತಿಳಿದುಕೊಳ್ಳುತ್ತಿರಾ ? ಚರ್ಚಿಸಿರಿ.
- ಭವಿಷ್ಯದಲ್ಲಿ, ಕುಟುಂಬದ ಇನ್ನೂ ಏನು ಬದಲಾವಣೆಗಳು ಕಂಡು ಬರಬಹುದು ?
- ಕೂಡಿ ಬಾಳಿದರೆ ಇರುವುದು ಸುಖ, ಇಲ್ಲದಿದ್ದರೆ ದುಃಖ – ಏಕೆ ?

ಅವಿಭಕ್ತ ಕುಟುಂಬಗಳು ಇದ್ದಾಗ ಕುಟುಂಬದಲ್ಲಿಯ ಸದಸ್ಯರೆಲ್ಲರೂ ಕೂಡಿ ಬಾಳುತ್ತಿದ್ದರೆಂದು ತಿಳಿದುಕೊಂಡಿದ್ದೀರಿ ಅಲ್ಲವೇ ? ಅವಿಭಕ್ತ ಕುಟುಂಬಗಳಿಂದ ಇನ್ನೂ ಏನು ಪ್ರಯೋಜನಗಳು ಇವೆ ಎಂದು ತಿಳಿದುಕೊಳ್ಳೋಣವೇ? ಮಕ್ಕಳಿಗೆ ವೃದ್ಧರು ಜೊತೆಯಾಗಿ ಇರುತ್ತಿದ್ದರು. ಮಕ್ಕಳಿಗೆ ಕಥೆಗಳು ಹೇಳುವುದು, ತಿಳಿಯದ ವಿಷಯಗಳನ್ನು ತಿಳಿಯಪಡಿಸುವುದು. ಎಲ್ಲರು ಕೂಡಿ ಊಟ ಮಾಡುತ್ತಿದ್ದರು. ಹೀಗೆ ಕುಟುಂಬದಲ್ಲಿಯ ಎಲ್ಲರು ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಮನೆಗೆಲಸಗಳನ್ನು ಕೂಡಿ ಮಾಡುತ್ತಾ ಸಹ ಜೀವನವನ್ನು ಮಾಡುತ್ತಿದ್ದರು. ಬರುಬರುತ್ತಾ ಕುಟುಂಬಗಳಲ್ಲಿ ಬಹಳ ಬದಲಾವಣೆಗಳು ಬಂದವು. ಉದ್ಯೋಗಕ್ಕಾಗಿ ಬೇರೆ ಪ್ರಾಂತಗಳಿಗೆ ಹೋಗುವುದು, ಆಸ್ತಿಗಳನ್ನು ಹಂಚಿಕೊಳ್ಳುವುದು, ವಾಸಿಸುವುದಕ್ಕೆ ಮನೆ ಸರಿ ಹೊಂದಲಾರದಂತಹ ಎಷ್ಟೋ ಕಾರಣಗಳಿಂದ ಅವಿಭಕ್ತ ಕುಟುಂಬಗಳು ಬೇರ್ಪಟ್ಟು ಚಿಕ್ಕ ಕುಟುಂಬಗಳಾಗಿ ಬದಲಾಗಿವೆ. ನಿಮ್ಮ ಕುಟುಂಬವು ಹಿಂದೆ ಹೇಗೆ ಇತ್ತು ? ಈಗ ಹೇಗೆ ಇದೆ? ನಿಮ್ಮ ಕುಟುಂಬವು ಅವಿಭಕ್ತ ಕುಟುಂಬ ಅಥವಾ ವಿಭಕ್ತ ಕುಟುಂಬವೇ ? ಯಾವ ರೀತಿಯಾದಾದರೆ ಚೆನ್ನಾಗಿರುತ್ತದೆಂದು ನೀವು ಭಾವಿಸುತ್ತೀರಿ ? ಏಕೆ ?

SCERT TELANGANA

## 1.5. ಕುಟುಂಬ ಜೀವನ - ಗೃಹೋಪಯೋಗಿ ಸಾಮಾಗ್ರಿಗಳ ಬಳಕೆ :

ಹಿಂದೆ ಹೋಲಿಸಿದಾಗ ಕುಟುಂಬ ಜೀವನದಲ್ಲಿ ಬದಲಾವಣೆಗಳು ಬಂದಂತೆ ಮಾಡುವ ಕೆಲಸದಲ್ಲಿ ಸಹ ಬಹಳ ಬದಲಾವಣೆಗಳು ಉಂಟಾಗುತ್ತೀವೆ. ಒಂದಾನೊಂದು ಕಾಲದಲ್ಲಿ ಅವರ ಕೆಲಸಗಳನ್ನು ಅವರೇ ಮಾಡಿಕೊಳ್ಳುತ್ತಿದ್ದರು. ಇಲ್ಲವೇ ಕೂಡಿ ಮಾಡುತ್ತಿದ್ದರು. ಈಗ ಕುಟುಂಬದಲ್ಲಿಯ ಕೆಲಸಗಳನ್ನು ಯಾರು ಮಾಡುತ್ತಾರೆ ? ಕೆಲವು ಕುಟುಂಬಗಳು ಕೆಲಸಗಳನ್ನು ಮಾಡುವುದಕ್ಕೆ ಕೂಲಿ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಾರೆ. ಹೀಗೆ ದಿನನಿತ್ಯದ ಕೆಲಸಗಳನ್ನು ಮಾಡಿಕೊಳ್ಳುವುದಕ್ಕೆ ವಿದ್ಯುತ್ ಗೃಹೋಪಯೋಗಿ ಸಾಮಾಗ್ರಿಗಳ ಬಳಕೆ ಹೆಚ್ಚಾಗಿದೆ.

**ಕೆಳಗಿನ ಚಿತ್ರಗಳನ್ನು ನೋಡಿರಿ. ಇವು ನಿಮಗೆ ಗೊತ್ತೇ ?**










- ಈ ವಸ್ತುಗಳನ್ನು ಏಕೆ ಉಪಯೋಗಿಸುತ್ತಾರೆ ?
- ಇವು ಇಲ್ಲದಿರುವಾಗ ಕುಟುಂಬದಲ್ಲಿ ಆ ಕೆಲಸಗಳನ್ನು ಹೇಗೆ ಮಾಡಿಕೊಳ್ಳುತ್ತಿದ್ದರು. ಆಲೋಚಿಸಿರಿ.
- ಈ ವಿಧವಾಗಿ ಕುಟುಂಬಗಳು ವಿವಿಧ ವಿದ್ಯುತ್ ಗೃಹೋಪಯೋಗಿ ಸಾಮಾಗ್ರಿಗಳನ್ನು ಬಳಸುವುದರಿಂದ ಲಾಭವೇ ? ನಷ್ಟವೇ ?
- ವಿದ್ಯುತ್ ಉಪಯೋಗವು ದಿನ ದಿನಕ್ಕೂ ಹೆಚ್ಚಾಗುತ್ತಿದೇ ಏಕೆ ?

SCERT TELANGANA

**ಸಂಗ್ರಹಿಸಿರಿ :**



ನಿಮ್ಮ ಅಜ್ಜ, ಅಜ್ಜಿಯರ ಬಳಿಗೆ ಹೋಗಿರಿ. ಅವರ ಚಿಕ್ಕಂದಿನಲ್ಲಿ ಅವರು ಮನೆಯಲ್ಲಿ ಇಂತಹ ಗೃಹೋಪಯೋಗಿ ಸಾಮಾಗ್ರಿಗಳು ಇದ್ದವೇ ? ಅವುಗಳನ್ನು ಅವರು ಬಳಸುತ್ತಿದ್ದರೇ ? ಈ ಗೃಹೋಪಯೋಗಿ ಸಾಮಾಗ್ರಿಗಳು ಇಲ್ಲದೇ ಇದ್ದಾಗ ಅವರು ಅವರ ಕೆಲಸಗಳನ್ನು ಹೇಗೆ ಮಾಡಿಕೊಳ್ಳುತ್ತಿದ್ದರು ? ಈಗ ನಾವು ಬಳಸುವ ಗೃಹೋಪಯೋಗಿ ಸಾಮಾಗ್ರಿಗಳನ್ನು ಕುರಿತು ಅವರು ಏನು ಹೇಳುತ್ತಾರೆ ? ತಿಳಿದುಕೊಳ್ಳಿರಿ.

ಗೃಹೋಪಯೋಗಿ ಸಾಮಾಗ್ರಿಗಳಿಂದ ಸಹ ಕುಟುಂಬ ಸದಸ್ಯರು ಮಾಡುವ ಕೆಲಸಗಳಲ್ಲಿ ಬದಲಾವಣೆಗಳು ಬರುತ್ತಿವೆ. ಮನೆಯಲ್ಲಿ ಹೆಚ್ಚಾಗಿ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಿಲ್ಲ. ಯಾವುದೋ ಒಂದು ಉಪಕರಣದ ಮೇಲೆ ಆಧಾರಪಡುತ್ತಿದ್ದಾರೆ. ಮನೆಯಲ್ಲಿ ದಿನನಿತ್ಯ ಮಾಡಿಕೊಳ್ಳುವ ಕೆಲಸಗಳನ್ನು ಬಟ್ಟೆ ಒಗೆಯುವುದು, ಹಿಟ್ಟನ್ನು ರುಬ್ಬುವುದು, ಮನೆ ಶುಭ್ರಗೊಳಿಸುವುದು, ಅಡುಗೆ ಮಾಡುವುದುವಂತಹ ಅನೇಕ ಕೆಲಸಗಳನ್ನು ಗೃಹೋಪಯೋಗಿ ಸಾಮಾಗ್ರಿ ಸಹಾಯದಿಂದ ಮಾಡಿಕೊಳ್ಳುತ್ತಾರೆ. ಕೆಲವು ಕೆಲಸಗಳಿಗಾಗಿ ಇತರರ ಮೇಲೆ ಸಹ ಆಧಾರಪಡುತ್ತಾರೆ. ಹಾಗಲ್ಲದೇ ಮನೆಯಲ್ಲಿ ಅವರ ಕೆಲಸಗಳನ್ನು ಅವರೇ ಮಾಡಿಕೊಳ್ಳಬೇಕು. ಗೃಹೋಪಯೋಗಿ ಸಾಮಾಗ್ರಿಗಳ ಬಳಕೆಯನ್ನು ಕಡಿಮೆ ಮಾಡಬೇಕು. ವಾಷಿಂಗ್ ಮಿಷನ್, ಮಿಕ್ಸಿ, ಗ್ರೈಂಡರ್ ಮುಂತಾದ ವಿದ್ಯುತ್ ಉಪಕರಣಗಳನ್ನು ಹೆಚ್ಚಾಗಿ ಬಳಸಬೇಕಾಗುತ್ತದೆ. ಅವು ಮಾಡುವ ಕೆಲಸಗಳನ್ನು ನಾವೇ ಮಾಡಿಕೊಂಡರೇ ವಿದ್ಯುತ್ ಬಳಸುವುದನ್ನು ಕಡಿಮೆ ಮಾಡುವುದಲ್ಲದೇ ಹೆಚ್ಚಾಗಿ ಆರೋಗ್ಯವಾಗಿ ಶಾರೀರಿಕ ವ್ಯಾಯಾಮ ಇರುತ್ತಾರೆ. ಸಾಧ್ಯವಾದಷ್ಟು ತಮ್ಮ ಕೆಲಸಗಳನ್ನು ಅವರ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದರಿಂದ ಕುಟುಂಬದಲ್ಲಿರುವ ಕೆಲಸದ ಮಹತ್ವ ತಿಳಿಯುತ್ತದೆ.

**ಮುಖ್ಯ ಪದಗಳು :**

| | | |
|---|---|---|
| 1 ಕುಟುಂಬ ಸದಸ್ಯರು | 3 ಬಡ್ತಿ | 5. ವಿಭಕ್ತ ಕುಟುಂಬ |
| 2 ಕುಟುಂಬದಲ್ಲಿನ ಬದಲಾವಣೆ | 4 ಅವಿಭಕ್ತಕುಟುಂಬ | 6. ಗೃಹೋಪಯೋಗಿ ಸಾಮಾಗ್ರಿ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

1 **(ವಿಷಯಾವಗಹನ) ತಿಳುವಳಿಕೆ :**

ಅ) ಕುಟುಂಬಗಳೆಲ್ಲವು ಒಂದೇ ವಿಧವಾಗಿ ಇರುತ್ತವೆಯೇ ? ಏಕೆ ?

ಆ) ಕುಟುಂಬದಲ್ಲಾಗುವ ಬದಲಾವಣೆಗಳಿಗೆ ಕಾರಣಗಳನ್ನು ಬರೆಯಿರಿ ?

ಇ) ಮನೆಯಲ್ಲಿ ಯಾವ ಯಾವ ಗೃಹೋಪಯೋಗಿ ಸಾಮಾಗ್ರಿಗಳನ್ನು ಬಳಸುತ್ತಾರೆ ? ಏಕೆ ?

ಈ) ''ಮದುವೆಗಳಿಂದ ಕುಟುಂಬದಲ್ಲಿ ಬದಲಾವಣೆಗಳು ಉಂಟಾಗುತ್ತವೆ'' ಏಕೆ ?

ಉ) ಮಕ್ಕಳನ್ನು ಕೆಲಸದಲ್ಲಿಟ್ಟುಕೊಳ್ಳುವುದು ಅಪರಾಧ ಏಕೆ ?

2 **ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :**

- ಹೊಸದಾಗಿ ನಿಮ್ಮ ಗ್ರಾಮದೊಳಗೆ / ಓಣಿಯೊಳಗೆ ಒಂದು ಕುಟುಂಬವು ಹೊಸದಾಗಿ ಬಂದಿದೆ. ಅವರು ಇಲ್ಲಿಗೆ ಬಂದಿರುವುದರಿಂದ ಅವರ ಕುಟುಂಬದಲ್ಲಿ ಯಾವ ಬದಲಾವಣೆಗಳು ಉಂಟಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ನೀವು ಯಾವ ಯಾವ ಪ್ರಶ್ನೆಗಳು ಕೇಳುತ್ತಿರಿ ?

SCERT TELANGANA

## 3. ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ಮನೆಯಲ್ಲಿ ಹುಡುಗ / ಹುಡಿಗಿಯರು ಮಾಡುವ ಕೆಲಸಗಳು ಬೇರೆ ಬೇರೆಯಾಗಿ ಇರುವುದಿಲ್ಲ. ಅಲ್ಲವೇ ! ಎಲ್ಲಾ ಕೆಲಸಗಳನ್ನು ಎಲ್ಲರು ಸೇರಿ ಮಾಡಬೇಕು. ನಿಮ್ಮ ಸುತ್ತಮುತ್ತಲಿನ ಕುಟುಂಬಗಳನ್ನು ಪರಿಶೀಲಿಸಿರಿ. ಹುಡುಗ ಹುಡುಗಿಯರು ಮಾಡುವ ಕೆಲಸಗಳಲ್ಲಿ ವ್ಯತ್ಯಾಸಗಳಿವೆಯೇ ? ಬರೆಯಿರಿ.

## 4 ಸಮಾಚಾರ ಕೌಶಲ್ಯಗಳು ಪ್ರಾಜೆಕ್ಟ್‌ಗಳು :

ಅ) ನಿಮ್ಮ ತರಗತಿಯಲ್ಲಿ ಅಥವಾ ನಿಮಗೆ ತಿಳಿದ ಐದು ಜನ ಸ್ನೇಹಿತರ ಮನೆಗೆ ಹೋಗಿ, ಅವರ ಮನೆಯಲ್ಲಿ ಯಾವ ಯಾವ ಗೃಹೋಪಯೋಗಿ ಸಾಮಾಗ್ರಿಗಳನ್ನು ಬಳಸುತ್ತಾರೆ ಎಂಬುದನ್ನು ಪಟ್ಟಿಯಲ್ಲಿ ಬರೆಯಿರಿ.

| ಕ್ರಮ ಸಂಖ್ಯೆ | ಸ್ನೇಹಿತರ ಹೆಸರು | ಅವರ ಮನೆಯಲ್ಲಿ ಉಪಯೋಗಿಸುವ ಗೃಹೋಪಯೋಗಿ ಸಾಮಾಗ್ರಿಗಳ ಹೆಸರು |
|---|---|---|
| 1 | | |
| 2 | | |
| 3 | | |
| 4 | | |
| 5 | | |

ಆ) ನೀವು ಹುಟ್ಟುವ ಮುನ್ನ ಚಿತ್ರಿಸಿದ ನಿಮ್ಮ ಕುಟುಂಬದ (ಫೋಟೋ) ಭಾವಚಿತ್ರ ಇಂದು ನಿಮ್ಮ ಕುಟುಂಬ ಭಾವಚಿತ್ರಗಳನ್ನುಚಾರ್ಟಿನಲ್ಲಿ ಅಂಟಿಸಿರಿ. ಕುಟುಂಬ ಸದಸ್ಯರಲ್ಲಿ ಯಾವ ಬದಲಾವಣೆಗಳು ಬಂದಿವೆಯೋ ಬರೆಯಿರಿ.

## 5. ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :

- ನಿಮ್ಮ ಕುಟುಂಬದಲ್ಲಿರುವವರ ಚಿತ್ರಗಳನ್ನು ಒಂದು ಚಾರ್ಟ್ ಮೇಲೆ ಎಳೆಯಿರಿ. ಅಥವಾ ಚಿತ್ರಗಳನ್ನು ಅಂಟಿಸಿರಿ. ಯಾರ್‍ಯಾರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೋ, ಬರೆಯಿರಿ. ಹೇಳಿರಿ.

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ನಿತ್ಯಜೀವನದಲ್ಲಿ ಉಪಯೋಗಿಸುವುದು :

- ನಿಮ್ಮ ನೆರೆಹೊರೆಯಲ್ಲಿ ಯಾವಾದಾದರೂ ಹೊಸ ಕುಟುಂಬ ಬಂದು ಸೇರಿದರೆ ಅವರಿಗೆ ನಾವು ಹೇಗೆ ಸಹಾಯ ಮಾಡುಬಹುದೋ ತಿಳಿಸಿರಿ.
- ಕುಟುಂಬ ಸದಸ್ಯರೆಲ್ಲರೂ ಒಬ್ಬರಿಗೊಬ್ಬರು ಸಹಕರಿಸುತ್ತಾ ಇರುವ ಕುಟುಂಬವನ್ನು ಬೇಟಿಯಾದಾಗ ನಿಮ್ಮಲ್ಲಿ ಉಂಟಾಗುವ ಭಾವಗಳನ್ನು ತಿಳಿಸಿರಿ.
- ಕೆಲಸಗಳನ್ನು ನಾವೇ ಮಾಡಿಕೊಳ್ಳುವುದರಿಂದ ಇತರರಿಗೆ ಶ್ರಮ ಕಡಿಮೆ ಮಾಡಿದಂತಾಗುತ್ತದೆ. ಇದನ್ನು ಕುರಿತು ಬರೆಯಿರಿ.

### ನಾನು ಇವುಗಳನ್ನು ಮಾಡಬಲ್ಲೆನಾ ?

1 ಕುಟುಂಬದಲ್ಲಿ ಉಂಟಾಗುವ ಬದಲಾವಣೆಗಳನ್ನು, ಅವುಗಳಿಗೆ ಇರುವ ಕಾರಣಗಳನ್ನು ವಿವರಿಸಬಲ್ಲೆನು. ಹೌದು / ಇಲ್ಲ

2 ಕುಟುಂಬದಲ್ಲಿ ಉಂಟಾಗುವ ಬದಲಾವಣೆಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳು ಕೇಳಬಲ್ಲೆನು. ಹೌದು / ಇಲ್ಲ

3 ಗೃಹೋಪಕರಣಗಳ ಉಪಯೋಗಗಳನ್ನು ಕುರಿತು ವಿವರಗಳನ್ನು ಶೇಕರಿಸಿ. ಪಟ್ಟಿ ತಯಾರು ಮಾಡಬಲ್ಲೆನು. ಅವುಗಳ ಬಗ್ಗೆ ಹೇಳಬಲ್ಲೆನು. ಹೌದು / ಇಲ್ಲ

4 ಕುಟುಂಬದಲ್ಲಿಯ ಸದಸ್ಯರ ಚಿತ್ರಗಳು ರಚಿಸಿ, ಮಾಡುವ ಕೆಲಸಗಳನ್ನು ವಿವರಿಸಬಲ್ಲೆನು. ಹೌದು / ಇಲ್ಲ

5 ಅಕ್ಕಪಕ್ಕದಲ್ಲಿ ಹೊಸದಾಗಿ ಬಂದ ಕುಟುಂಬಗಳಿಗೆ ಬೇಕಾದ ಸಹಾಯ ಮಾಡಬಲ್ಲೆನು. ಹೌದು / ಇಲ್ಲ

SCERT TELANGANA

# 2  ಆಟಗಳು - ನಿಯಮಗಳು

ಆಟಗಳೆಂದರೆ ನಮ್ಮೆಲ್ಲರಿಗೂ ಬಹಳ ಇಷ್ಟ ಅಲ್ಲವೇ ! ಮನೆಯ ಒಳಗೆ, ಹೊರಗೆ ಸ್ನೇಹಿತರೊಂದಿಗೆ ಎಲ್ಲಿಯಾದರು ಆಟಗಳನ್ನು ಆಡಿಕೊಳ್ಳುತ್ತೇವೆ. ಈ ಆಟಗಳು ಪೂರ್ವಕಾಲದಿಂದಲೂ ಇವೆ. ಆದರೆ ಆಡುವ ವಿಧಾನದಲ್ಲಿ ಬದಲಾವಣೆ ಬಂದಿವೆ. ಕೆಲವು ಹೊಸ ಆಟಗಳು ಬೇರೆ ದೇಶಗಳಿಂದ ಬಂದಂತಹವುಗಳನ್ನು ನಾವು ಕಾಣುತ್ತೇವೆ. ಈ ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ.



SCERT TELANGANA

**ಗುಂಪಿನಲ್ಲಿ ಚರ್ಚಿಸಿರಿ :**



- ಮೇಲಿನ ಚಿತ್ರಗಳಲ್ಲಿ ಮಕ್ಕಳು ಯಾವ ಯಾವ ಆಟಗಳು ಆಡುತ್ತಿದ್ದಾರೆ ? ತಿಳಿಸಿರಿ.
- ನೀವು ಯಾವ ಯಾವ ಆಟಗಳನ್ನು ಆಡುವಿರಿ ?
- ಯಾರೊಂದಿಗೆ, ಯಾವಾಗ ಆಡುತ್ತೀರಿ ?
- ಆಟಗಳನ್ನು ಏಕೆ ಆಡುವಿರಿ ?
- ಆಟಗಳನ್ನು ಯಾರು ಯಾರು ಆಡಬಹುದು ?
- ಆಟಗಳನ್ನು ಆಡುವುದರಿಂದ ನಿಮಗೆ ಹೇಗೆ ಅನಿಸುತ್ತದೆ ?

## 2.1. ಆಟಗಳು - ನಿಯಮಗಳು :

ನೀವು ವಿವಿಧ ಆಟಗಳನ್ನು ಆಡುತ್ತೀರಲ್ಲವೇ ! ಆಟಗಳನ್ನು ಆಡುವುದಕ್ಕೆ ಮುಂಚೆ ಗುಂಪುಗಳಾಗಿ ಏರ್ಪಡುವುದು, ಹೇಗೆ ಆಡಬೇಕೆಂದು ಮಾತನಾಡಿಕೊಳ್ಳುವುದು, ಅವಶ್ಯಕವಾದ ಸಾಮಾಗ್ರಿಯನ್ನು ತೆಗೆದುಕೊಂಡು, ಆಟಕ್ಕೆ ಏರ್ಪಾಟುಗಳನ್ನು ಮಾಡಿಕೊಳ್ಳುವುದನ್ನು ಸಹ ಮಾಡುತ್ತೀರಲ್ಲವೇ ?

ನಿಮಗೆ ಕಬಡ್ಡಿ ಆಟ ತಿಳಿದಿದೆಯೇ ? ಹೇಗೆ ಆಡುತ್ತಾರೆ ನೋಡೋಣ.

ರಹೀಮ್ ಸಾರ್ ಮಕ್ಕಳೆಲ್ಲರನ್ನು ಕಬಡ್ಡಿ ಆಟ ಆಡುವುದಕ್ಕೆ ಆಟದ ಮೈದಾನಕ್ಕೆ ಕರೆದೊಯ್ದರು. ಒಂದೊಂದು ಗುಂಪಿನಲ್ಲಿ 7 ಜನ ಸದಸ್ಯರು ಇರುವಂತೆ ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿದನು. ಅವರಿಗೆ ಕಬಡ್ಡಿ ಮೈದಾನದ ಗೆರೆಗಳನ್ನು ಕುರಿತು ವಿವರಿಸುತ್ತಾ ಕಬಡ್ಡಿ ಆಡುವುದಕ್ಕೆ ಇರುವ ನಿಯಮಗಳನ್ನು ವಿವರಿಸಿದರು. ರೈಡರ್ ಆಗಿ ಹೋದವರು ಹಿಂದುರಿಗಿ ಬರುವುದರ ಒಳಗೆ ತುಳಿಯುವ ಗೆರೆ (ಡೆಡ್ ಲೈನ್) ತಪ್ಪದೇ ತಾಕಬೇಕು. ಹಾಗೇ ತಾಕದಿದ್ದರೇ ಔಟ್ ಆದಂತಯೇ. ಮಕ್ಕಳು, ರಹೀಮ್ ಸರ್ ಎಲ್ಲರೂ ಸೇರಿ ಕಬಡ್ಡಿ ಮೈದಾನದ (ಕೋರ್ಟ್) ಗೆರೆಗಳನ್ನು ಹಾಕಿದರು . ಈಚಿತ್ರವನ್ನು ನೋಡಿರಿ.




ಸುಪ್ರಜ, ಪಿಂಕಿಯ ತಂಡಗಳು ಕಬಡ್ಡಿ ಆಡುತ್ತವೆ. ಸುಪ್ರಜ ರೈಡರ್‌ಯಾಗಿ ಒಳಗೆ ಕಬಡ್ಡಿ ಕಬಡ್ಡಿ ಎಂದು ಉಚ್ಚರಿಸುತ್ತಾ ಹೋಗಿದ್ದಾಳೆ. ಆಕೆಯನ್ನು ನಾಲ್ಕು ಜನ ಸುತ್ತುವರೆದು ಹಿಡಿದುಕೊಂಡಿದ್ದಾರೆ. ಆದರೆ ಸುಪ್ರಜ ಅವರೆಲ್ಲರನ್ನು ತಪ್ಪಿಸಿಕೊಂಡು ಮಧ್ಯಗೆರೆಯನ್ನು ಮುಟ್ಟಿದಳು. ಇದರಿಂದ ಸುಪ್ರಜ ತಂಡಕ್ಕೆ ನಾಲ್ಕು ಪಾಯಿಂಟ್ಸ್ ಪಡೆದಳು ಎಂದು ಕೇಕೆ ಹಾಕಿದರು. ಇಷ್ಟರಲ್ಲಿ ಪಿಂಕಿ ಗುಂಪಿನಲ್ಲಿರುವ ಒಂದು ಹುಡುಗಿ ಸುಪ್ರಜ ಕಬಡ್ಡಿ ಕಬಡ್ಡಿ ಎಂದು ಕೂಗುವುದನ್ನು ಮಧ್ಯದಲ್ಲಿಯೇ ನಿಲ್ಲಿಸಿದ್ದಾಳೆ ಎಂದು ವಾದಿಸಿದಳು. ಸುಪ್ರಜ ತಾನು ಕೂಗುವುದನ್ನು ನಿಲ್ಲಿಸಲಿಲ್ಲ ಎಂದಳು. ಎರಡು ಗುಂಪಿನವರು ಜಗಳಮಾಡಿಕೊಂಡರು. ಕೊನೆಯಲ್ಲಿ ಪಿಂಕಿ ಗುಂಪಿನ ಪರ್ವಿನ್ ಮುಂದೆ ಬಂದು ಸುಪ್ರಜ ನಿಜವಾಗಿ ಉಚ್ಚರಿಸುವುದನ್ನು ನಿಲ್ಲಸಲಿಲ್ಲ ಎಂದು ತನ್ನ ತಂಡದವರನ್ನು ಒಪ್ಪಿಸಿದಳು. ಆಟ ಮತ್ತೇ ಪ್ರಾರಂಭವಾಯಿತು.




ತೆಲಂಗಾಣ ಸರ್ಕಾರದಿಂದ ಉಚಿತ ವಿತರಣೆ 2020-21
SCERT TELANGANA

ಕಬಡ್ಡಿ ಆಟವನ್ನು ಸುಪ್ರಜ, ಪಿಂಕಿ ಗುಂಪಿನವರು ಹೇಗೆ ಆಡುತ್ತಿದ್ದಾರೋ ನೋಡಿದಿರಲ್ಲವೇ ! ಈ ಆಟವನ್ನು ಕುರಿತು ನಿಮ್ಮ ಸ್ನೇಹಿತರೊಂದಿಗೆ ಗುಂಪಿನೊಂದಿಗೆ ಚರ್ಚಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಸಾಮಾನ್ಯವಾಗಿ ಆಟಗಳಲ್ಲಿ ವಾದ-ವಿವಾದಗಳು ಏಕೆ ಬರುತ್ತವೆ ?
- ಆಟಗಳಲ್ಲಿ ವಾದ-ವಿವಾದಗಳು ಬಾರದಂತೆ ಏನು ಮಾಡಬೇಕು ?
- ಕಬಡ್ಡಿ ಆಟವನ್ನು ಆಡುವುದಕ್ಕೆ ನಿಯಮಗಳು ಯಾವುವು ?
- ಆಟಗಳಲ್ಲಿ ಯಾರನ್ನು ಅಭಿನಂದಿಸಬೇಕು ? ಏಕೆ ?

**ಕಬಡ್ಡಿ ಆಟದ ನಿಯಮಗಳು :**

- ಕಬಡ್ಡಿ ಕಬಡ್ಡಿ ಎನ್ನುವುದನ್ನು ಮಧ್ಯೆಗೆರೆಯ ಹತ್ತಿರ ಪ್ರಾರಂಭಿಸಿ, ಮತ್ತೇ ಅಲ್ಲಿಯವರೆಗೆ ಬರುವತನಕ ಮುಂದುವರಿಸಬೇಕು. ಹಾಗಲ್ಲದೇ ಉಚ್ಚರಿಸುವುದು ನಿಲ್ಲಿಸಿದರೆ ಔಟ್ ಆದಂತೆ.
- ಆಟಗಳಲ್ಲಿ ಯಾವ ವ್ಯಕ್ತಿಯಾದರೂ ಆಟದ ಗೆರೆಗಳನ್ನು ದಾಟಿದರೆ ಔಟ್ ಆದಂತೆ.
- ಔಟಾದವರು ಕೋರ್ಟ್‌ನ ಹೊರಗೆ ಕುಳಿತುಕೊಳ್ಳವ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಬೇಕು.
- ಗುಂಪಿಗೆ ಔಟಾದ ಅಂಕ (ಪಾಯಿಂಟ್) ಬಂದಾಗ ನಿರ್ಗಮಿಸಿದ ಕ್ರಮದಲ್ಲೇ ಮತ್ತೇ ಸದಸ್ಯರು ಗುಂಪಿನಲ್ಲಿ ಸೇರಬೇಕು.
- ಆಟಗಾರರು ಉಗುರುಗಳನ್ನು ಬೆಳೆಸಿಕೊಳ್ಳಬಾರದು.
- ಶರೀರಕ್ಕೆ ಎಣ್ಣೆಯಂತಹ ಪದಾರ್ಥಗಳನ್ನು ಹಚ್ಚಿಕೊಂಡು ಆಡಬಾರದು.
- ಹೆಣ್ಣು ಹುಡುಗಿಯರು ಆಡುತ್ತಿರುವಾಗ ಕೂದಲು ಹಿಡಿದು ಎಳೆಯುವುದು ಮಾಡಬಾರದು.

## 2.2. ಇತರ ಆಟಗಳು - ನಿಯಮಗಳು :

ಕಬಡ್ಡಿ ಆಟವನ್ನು ಹೇಗೆ ಆಡಬೇಕು ತಿಳಿದಿದ್ದೀರಿ ಅಲ್ಲವೇ! ಯಾವ ಆಟಕ್ಕಾದರು ನಿಯಮಗಳು ಇರುತ್ತವೆ. ಆಟಗಳು ಆಡುತ್ತಿರುವಾಗ ನಿಯಮಗಳನ್ನು ಅನುಸರಿಸಿ ಆಡುತ್ತಾರೆ. ನೀವು ಸಹ ಆಟಗಳು ಆಡುತ್ತಿರುವಾಗ ಇದೇ ರೀತಿ ನಿಯಮಗಳನ್ನು ಅನುಸರಿಸಿ ಆಟಗಳು ಆಡುತ್ತೀರಿಲ್ಲವೇ! ನೀವು ಆಡುವ ಆಟಗಳ ಹೆಸರುಗಳನ್ನು ಬರೆಯಿರಿ. ಅವುಗಳಿಗೆ ಯಾವ ನಿಯಮಗಳು ಇರುತ್ತವೆಯೋ ಬರೆಯಿರಿ. ಗುಂಪಿನಲ್ಲಿ ಚರ್ಚಿಸಿರಿ.

SCERT TELANGANA

## ಗುಂಪಿನಲ್ಲಿ ಚರ್ಚಿಸಿರಿ :



- ನಿಮಗೆ ಇಷ್ಟವಾದ ಆಟಗಳ ಹೆಸರನ್ನು ಬರೆಯಿರಿ.
- ಆ ಆಟವನ್ನು ಹೇಗೆ ಆಡುತ್ತೀರಿ ಬರೆಯಿರಿ.
- ಆ ಆಟಕ್ಕೆ ಯಾವ್ಯಾವ ನಿಯಮಗಳು ಇರುತ್ತವೆ ?

| ಆಟದ ಹೆಸರು | ಆಡುವ ವಿಧಾನ | ಆಟಕ್ಕಿರುವ ನಿಯಮಗಳು |
|---|---|---|
| | | |

## 2.3. ನಿಯಮಗಳು ಏಕೆ ?

ಆಟಗಳಿಗೆ ಇರುವ ನಿಯಮಗಳನ್ನು ಕುರಿತು ತಿಳಿದುಕೊಂಡಿದ್ದಿರಿಲ್ಲವೇ ?

### ಆಲೋಚಿಸಿರಿ ...

- ನಿಯಮಗಳು ಆಟಗಳಿಗೆ ಇರುತ್ತವೆಯೇ ? ಇನ್ನೂ ಯಾವ ಸಂದರ್ಭಗಳಲ್ಲಿ ನಿಯಮಗಳನ್ನು ಪಾಲಿಸಬೇಕು ಹೇಳಿರಿ?
- ಪಾಠಶಾಲೆಯಲ್ಲಿ ಯಾವ ನಿಯಮಗಳನ್ನು ಪಾಲಿಸಬೇಕು ಹೇಳಿರಿ.



ಆಟಗಳಲ್ಲಿ ಇರುವ ನಿಯಮಗಳು, ಆಟಗಳನ್ನು ಸಕ್ರಮವಾಗಿ ಆಡುವುದಕ್ಕೆ ಸಹಕರಿಸುತ್ತವೆ. ಆಟಗಳಲ್ಲದೇ ನಮ್ಮ ಮನೆಯಲ್ಲಿ, ಶಾಲೆಗಳಲ್ಲಿ ಹೀಗೆ ಬಹಳ ಕಡೆ ಯಾವುದೋ ವಿಧವಾದ ನಿಯಮಗಳು, ಆಚಾರಗಳು ಇರುತ್ತವೆ.

**ಉದಾಹರಣೆ :** ರಸ್ತೆಗಳ ಮೇಲೆ ಅಪಘಾತಗಳನ್ನು ನಿವಾರಿಸುವುದಕ್ಕೆ ರಸ್ತೆ ನಿಯಮಗಳು (Traffic Rules) ಇರುತ್ತವೆ. ಅಂದರೆ ಕೆಂಪು ದೀಪ ಬೆಳಗಿದಾಗ ನಿಲ್ಲುವುದು, ಹಳದಿ ಬಣ್ಣದ ದೀಪ ಬೆಳಗಿದಾಗ ಹೊರಡಲು ಸಿದ್ಧರಾಗಿರುವುದು, ಹಸಿರು ದೀಪ ಬೆಳಗಿದಾಗ ಮುಂದಕ್ಕೆ ಹೋಗುವುದು. ಇದನ್ನು ಸಿಗ್ನಲಿಂಗ್ ಸಿಸ್ಟಮ್ ಎನ್ನುತ್ತಾರೆ. ಇದನ್ನು ನಾಲ್ಕು ರಸ್ತೆಗಳು ಸೇರುವ ವೃತ್ತದಲ್ಲಿ ಏರ್ಪಾಟು ಮಾಡುತ್ತಾರೆ. ಜನಸಂದಣಿ ಹೆಚ್ಚಿರುವ ಸಮಯದಲ್ಲಿ ವಾಹನಗಳೆಲ್ಲವು ಎಲ್ಲಿಂದಲ್ಲೆ ನಿಂತು ಹೋಗದ ಹಾಗೇ, ನಿಯಂತ್ರಿಸಲು, ಕ್ರಮಬದ್ದೀಕರಿಸಲು, ಸಿಗ್ನಲಿಂಗ್ ಸಿಸ್ಟಮ್ ಉಪಯೋಗಿಸಿರುತ್ತಾರೆ. ಇವುಗಳಿಂದ ಅಪಘಾತಗಳನ್ನು ನಿವಾರಿಸ ಬಹುದು. ರಸ್ತೆಯ ಮೇಲೆ ವಾಹನಗಳನ್ನು ಎಡ ಭಾಗದಲ್ಲೆ ನಡೆಸಬೇಕುಎನ್ನುವುದು ರಸ್ತೆಗೆ ಸಂಬಂಧಿಸಿದ ನಿಯಮ.

SCERT TELANGANA



ಮೇಲಿನ ಚಿತ್ರದಲ್ಲಿ ಗೆರೆ ಎಳೆದಿರುವ ಭಾಗದಲ್ಲಿ ರಸ್ತೆ ದಾಟುವುದನ್ನು ನೋಡಬಹುದು. ಇದನ್ನೆ 'ಜೀಬ್ರಾ ಕ್ರಾಸಿಂಗ್' ಎನ್ನುತ್ತಾರೆ. ಇವು ಅಪಘಾತಗಳು ನಡೆಯದಂತೆ ಉಪಯೋಗವಾಗುತ್ತವೆ. ಜೀಬ್ರಾ ಕ್ರಾಸಿಂಗ್‌ನಲ್ಲಿ ವಾಹನಗಳು ಕಡಿಮೆ ವೇಗದಲ್ಲಿ ಹೋಗುತ್ತವೆ.

ರಸ್ತೆ ದಾಟಲು ಕೆಲವು ನಿಯಮಗಳಿದಂತೆ ಪಾಠಶಾಲೆಗಳಿಗೂ ಸಹ ಕೆಲವು ನಿಯಮಗಳು ಇರುತ್ತವೆ. ಉದಾಹರಣೆಗೆ ಪ್ರಾರ್ಥನಾ ಸಮಯಕ್ಕೆ ಮುಖ್ಯೋಪಾಧ್ಯಾಯರು, ಉಪಾಧ್ಯಾಯರು, ಮಕ್ಕಳು ಹಾಜರಾಗುವುದು. ಕಾಲ ನಿರ್ಣಯ ಪಟ್ಟಿಯ (ಟೈಮ್ ಟೇಬಲ್) ಪ್ರಕಾರ ತರಗತಿಗಳನ್ನು ನಡೆಸುವುದು. ಆಟದ ಪಿರಿಯಡ್‌ನಲ್ಲಿ ಆಟಗಳನ್ನು ಆಡಿಸುವುದು, ಮಧ್ಯಾಹ್ನ ಭೋಜನವನ್ನು ಸಕ್ರಮವಾಗಿ ನಿರ್ವಹಿಸುವುದು, ತಿಂಗಳಿಗೊಮ್ಮೆ ತಂದೆತಾಯಿಯರ ಸಮಾವೇಶ ನಿರ್ವಹಿಸುವಂತಹವುದು



ಪಾಠಶಾಲೆ ಅಭಿವೃದ್ಧಿ ಹೊಂದಲು ಸಹಾಯ ಪಡುತ್ತವೆ. ಇತರರೊಂದಿಗೆ ಕಲಿಸಿ ಇರುವ ಸಮಯದಲ್ಲಿ ವಯುಕ್ತಿಕ ಶರೀರ ಭದ್ರತಾ ನಿಯಮಗಳನ್ನು ಪಾಲಿಸುವುದರ ಮುಖಾಂತರ ನಾವು ಸುರಕ್ಷಿತವಾಗಿ ಇರಬಹುದು. ಶರೀರದ ಭಾಗಗಳನ್ನು ಕಾಣಿಸದಂತೆ ಬಟ್ಟೆಗಳನ್ನು ಧರಿಸಬೇಕು. ಪರಿಚಯ ಇಲ್ಲದವರ ಜೊತೆ ಶರೀರ ಭಾಗಗಳ ಕುರಿತು ಪ್ರಶ್ನಿಸುವುದು, ಮಾತನಾಡುವುದು ಇಲ್ಲವೆ ಅವರು ತಗಲುವುದಕ್ಕೆ ಪ್ರಯತ್ನಿಸಿದರೆ ನಿಶಬ್ಧವಾಗಿ ಇರುವಂತಹುದನ್ನು ಮಾಡಬಾರದು. ಇವುಗಳೆಲ್ಲವುಗಳ ಕುರಿತು ನಂಬಿಕೆ ಇರುವ ವ್ಯಕ್ತಿಗಳ ಜೊತೆ ಮಾತ್ರವೇ ಮಾತಾಡಬೇಕು. ಹಾಗೆಯೇ ನಮ್ಮನ್ನು ನಾವು ಪರಿಪಾಲಿಸಿಕೊಳ್ಳಲು ಸಹ ಕೆಲವು ನಿಯಮಗಳನ್ನು ರಾಜ್ಯಾಂಗದಲ್ಲಿ ಬರೆದುಕೊಂಡಿದ್ದೇವೆ. ರಾಜ್ಯಾಂಗದ ಕುರಿತು ಐದನೇ ತರಗತಿಯಲ್ಲಿ ವಿವರವಾಗಿ ತಿಳಿದುಕೊಳ್ಳುತ್ತೀರಿ.

## 2.4. ಆಟಗಳನ್ನು ಯಾರಾದರೂ ಆಡಬಹುದೇ ?

ಆಟಗಳೆಂದರೆ ಎಲ್ಲರಿಗೂ ಇಷ್ಟವೇ! ಆಟಗಳನ್ನು ಎಲ್ಲರೂ ಆಡುತ್ತಾರೆಯೇ? ರಂಗಾಪುರದಲ್ಲಿ ಕೆಲವು ಹೆಣ್ಣುಮಕ್ಕಳು

**ಆಲೋಚಿಸಿರಿ ...**

- **ಬಾಲಕಿಯರು, ಬಾಲಕರು ಬೇರೆ ಬೇರೆಯಾಗಿ ಆಟಗಳನ್ನು ಆಡಿಕೊಳ್ಳುವುದು ಸರಿಯೇ ?**
- **ಯಾವ ಆಟವಾದರೂ ಯಾರಾದರೂ ಆಡಬಹುದೆ ? ಇದರ ಮೇಲೆ ನಿಮ್ಮ ಅಬಿಪ್ರಾಯಗಳೇನು ? ಕೆಲವು ಉದಾಹರಣೆಗಳನ್ನು ತಿಳಿಸಿರಿ.**



SCERT TELANGANA

ಕೇವಲ ಕುಂಟೆ ಬಿಲ್ಲೆ, ಚೌಕಾಬಾರ, ರಿಂಗ್‌ನ ಆಟ, ಕಣ್ಣಾಮುಚ್ಚಾಲೆ ಆಟಗಳು ಮಾತ್ರವೇ ಆಡುತ್ತಿರುತ್ತಾರೆ. ಹಾಗೆಯೇ ಗಂಡು ಮಕ್ಕಳು ಕ್ರಿಕೆಟ್, ವಾಲಿಬಾಲ್, ಫುಟ್‌ಬಾಲ್ ಗಳಂತಹ ಆಟಗಳನ್ನು ಆಡುತ್ತಿರುತ್ತಾರೆ.


ಸೈನಾನೆಹ್ವಾಲ್


ವಿಶ್ವನಾಥ್ ಆನಂದ


ಮಿಥಾಲೀ ರಾಜ್


ಮೇರಿಕೋಮ್


ಕೋನೇರು ಹಂಪಿ


ಕರಣಂ ಮಲ್ಲೇಶ್ವರಿ


ಗಗನ್ ನಾರಾಂಗ್


ಸಾನಿಯಾ ಮಿರ್ಜಾ

ಮೇಲಿನ ಕೆಳಗಿನ ಚಿತ್ರಗಳನ್ನು ನೋಡಿರಿ. ಅವರ್‍ಯಾರು ಗೊತ್ತೆ ? ಇವರಲ್ಲಿ ಯಾರ್‍ಯಾರು ಯಾವ ಆಟಗಳನ್ನು ಆಡುತ್ತಾರೆ? ಅವರ ಹಿರಿಮೆಯ ಬಗ್ಗೆ ತಿಳಿಸಿರಿ.

ಈ ಕ್ರೀಡಾಪಟುಗಳು ಭಾರತ ದೇಶವು ಗರ್ವಪಡುವಂತಹ ಸಾಧನೆಗಳನ್ನು ಸಾಧಿಸಿದ್ದಾರೆಲ್ಲವೇ ! ಅವರು ಹೇಗೆ ಸಾಧಿಸಿದರು ? ಅವರು ಪ್ರತಿ ದಿನ ಆಟ ಆಡದೇ ಹೋಗಿದ್ದರೇ ಅಂತಹ ಉತ್ತಮ ಆಟಗಾರರು ಆಗುತ್ತಿದ್ದರೆ ? ಆಲೋಚಿಸಿರಿ.

ಆಟಗಳನ್ನು ಯಾರಾದರೂ ಆಡಬಹುದು. ಹೆಣ್ಣು, ಗಂಡು ಎಂಬ ಭೇದ ಭಾವ ಇಲ್ಲದೇ ಆಟಗಳಲ್ಲಿ ಪುರಷರಿಗೆ ಸಮಾನವಾಗಿ ನಮ್ಮ ದೇಶಕ್ಕೆ ಹೆಸರು ತಂದ ಮಹಿಳಾ ಕ್ರೀಡಾ ಕಾರಣಿಯರು ಎಷ್ಟೋ ಮಂದಿ ಇದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲುವುದರ ಜೊತೆಗೆ ಏಷಿಯನ್ ಕ್ರೀಡೆಗಳು, ಕಾಮನ್‌ವೆಲ್ತ್ ಕ್ರೀಡೆಗಳು, ಒಲಂಪಿಕ್ಸ್ ಕ್ರೀಡೆಗಳಲ್ಲಿ ಸಹ ಪದಕಗಳನ್ನು ಸಾಧಿಸಿದ್ದಾರೆ. ಮಹಿಳೆಯರು ಆಟಗಳ ಜೊತೆಗೆ ಎಲ್ಲಾ ರಂಗಗಳಲ್ಲೂ ಮಿಂಚುತ್ತಿದ್ದಾರೆ.

## 2.5. ಆಟಗಳಲ್ಲಿ ಸೋಲು - ಗೆಲುವುಗಳು :

ಆಟಗಳಲ್ಲಿ ಸೋಲುವುದು, ಗೆಲ್ಲುವುದು ಇರುತ್ತದೆ. ಯಾವುದೋ ಒಂದು ತಂಡ ಮಾತ್ರವೇ ಗೆಲ್ಲುತ್ತಿರುತ್ತಾರೆ. ಹೀಗೆ ಜಯ ಗಳಿಸಿದ ತಂಡವನ್ನು 'ವಿಜೇತ 'ಎನ್ನುತ್ತಾರೆ. ಸಾಮಾನ್ಯವಾಗಿ ಆಟಗಳಲ್ಲಿ ಸೋತಾಗ ಕೆಲವು ಜನರು ದುಃಖಪಡುತ್ತಾರೆ. ಸೋಲು ಗೆಲುವುಗಳು ಅಲ್ಲದೇ ಆಟಗಳಲ್ಲಿ ಒಳ್ಳೆಯ ಕೌಶಲ್ಯವನ್ನು ಪ್ರದರ್ಶನ ಮಾಡಿದ್ದೇವೆಯೇ ಇಲ್ಲವೇ ಎನ್ನುವುದು ಪ್ರಧಾನ. ಒಬ್ಬರಿಂದ ಮತ್ತೊಬ್ಬರು ಆಟ ಕೌಶಲ್ಯಗಳನ್ನು, ಧೃಢ ನಿರ್ಧಾರ, ತಾಳ್ಮೆ, ನಿಯಮಗಳನ್ನು ಅನುಸರಿಸುವುದುದಂತಹವುಗಳನ್ನು ಅಭ್ಯಾಸ ಮಾಡಿಕೊಳ್ಳಬೇಕು. ಕ್ರೀಡಾ ಸ್ಪರ್ಧೆಗಳು ನಡೆದಾಗ ಆಟ ಆಡಿದ ನಂತರ ಒಬ್ಬರಿಗೊಬ್ಬರು ಅಭಿನಂದಿಸಿಕೊಳ್ಳಬೇಕು. ಹೀಗೆ ಆಟಗಳಲ್ಲಿ ಸೋಲು – ಗೆಲುವು ಗಳನ್ನು ಸಮಾನವಾಗಿ ತೆಗೆದುಕೊಂಡು ಅಭಿನಂದಿಸಿಕೊಳ್ಳುವುದನ್ನು 'ಕ್ರೀಡಾಸ್ಫೂರ್ತಿ' ಎನ್ನುತ್ತಾರೆ. ಶಾಲೆಯಿಂದ ಮನೆಗೆ ಹೋದ ನಂತರ, ರಜಾ ದಿನಗಳಲ್ಲಿ ನೀವು ನಿಮ್ಮ ಸ್ನೇಹಿತರೊಂದಿಗೆ ಕೂಡಿ ಆಟಗಳು ಆಡುವುದಕ್ಕೆ ಹೋಗುತ್ತಿರುತ್ತೀರಲ್ಲವೇ ! ನೀವೆಲ್ಲ ಕೂಡಿ ಎಲ್ಲಿ ಆಡುತ್ತಿರುತ್ತೀರಿ ? ಆದರೆ ಹೆಣ್ಣು ಮಕ್ಕಳು ಸಹ ಆಟದ ಮೈದಾನಕ್ಕೆ ಹೋಗಿ ಆಡುತ್ತಿರುತ್ತಾರೆಯೇ ? ಹೆಣ್ಣುಮಕ್ಕಳು, ಗಂಡು ಮಕ್ಕಳು ಇಬ್ಬರೂ ಸಮಾನವೇ ! ಹೆಣ್ಣು ಮಕ್ಕಳು ಸಹ ಆಟದ ಮೈದಾನಗಳಿಗೆ

SCERT TELANGANA

**ಆಲೋಚಿಸಿರಿ ...**

- ನೀವು ಯಾವಾಗಲಾದರೂ ಆಟಗಳಲ್ಲಿ ಜಯಗಳಿಸಿದ್ದಿರಾ ? ಅದು ಹೇಗೆ ಸಾಧ್ಯವಾಯಿತು ?
- ಜಯ ಗಳಿಸಿದವರನ್ನು ಹೇಗೆ ಅಭಿನಂದಿಸುತ್ತೀರಿ ?
- ಪರಾಜಯ ಹೊಂದಿದವರ ಜೊತೆಗೆ ನಾವು ಹೇಗೆ ನಡೆದುಕೊಳ್ಳಬೇಕು ?

### ಆಟಗಳನ್ನು ಆಡುವುದು ಮಕ್ಕಳ ಹಕ್ಕು :

ದಿನನಿತ್ಯ ಮಕ್ಕಳೆಲ್ಲರೂ ಗಂಡು, ಹೆಣ್ಣು ಎಂಬ ಭೇದಭಾವವಿಲ್ಲದೇ ತಪ್ಪದೇ ಆಟವಾಡಬೇಕು. ಇದು ಮಕ್ಕಳ ಹಕ್ಕು. ಸಾಯಂಕಾಲ 4 ಗಂಟೆಯಿಂದ 6 ಗಂಟೆಯವರೆಗೆ ಇರುವ ಸಮಯ ಮಕ್ಕಳ ಆಟದ ಸಮಯ. ಈ ಸಮಯದಲ್ಲಿ ವೈಯಕ್ತಿಕ ಶಾಲೆಗೆ (ಟ್ಯೂಷನ್‌ಗೆ) ಹೋಗುವುದು, ಮನೆಗೆಲಸ ಮಾಡುವುದು ಮುಂತಾದವು ಮಾಡಬಾರದು. ಆಟಗಳು ಆಡುವುದರಿಂದ ಶರೀರವು ಉಲ್ಲಾಸವಾಗಿರುತ್ತದೆ. ರಕ್ತ ಪ್ರಸರಣ ಚೆನ್ನಾಗಿ ನಡೆಯುತ್ತದೆ. ಬೆವರಿನಿಂದ ಶರೀರದಲ್ಲಿ ಇರುವ ಮಲೀನಗಳು ಹೊರಗೆ ಹೋಗುತ್ತವೆ. ಆಟಗಳು ಆಡುವ ಸಮಯದಲ್ಲಿ ಸ್ನೇಹಿತರೊಂದಿಗೆ ಮಾತನಾಡುವುದು, ನಗುವುದು, ಚಿಕ್ಕ ಚಿಕ್ಕ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುವುದು, ಚರ್ಚಿಸುವುದು, ನಿಯಮಗಳನ್ನು ಅನುಸರಿಸುವುದು ಮುಂತಾದವುಗಳಿಂದ ನಮಗೆ ಸಂತೋಷವಾಗುತ್ತದೆ. ಅದರಂತೆ ಸಮಷ್ಟಿ ತತ್ವವು ಅಭ್ಯಾಸವಾಗುತ್ತದೆ. ಮಾನಸಿಕ ದಣಿವು, ಬೇಸರ ಎನ್ನುವವು ದೂರವಾಗುತ್ತವೆ. ದಿನನಿತ್ಯ ಆಟಗಳ ಆಡುವುದರಿಂದ ಶರೀರವು ಧೃಢವಾಗಿ (ಗಟ್ಟಿಯಾಗಿ) ಆರೋಗ್ಯವಾಗಿ ಇರುತ್ತದೆ.

ಪಾಠಶಾಲೆ ಕಾಲ ನಿರ್ಣಯ ಪಟ್ಟಿಯಲ್ಲಿ ಇರುವ ಆಟಗಳ ಕಾಲ ಅವಧಿಯಲ್ಲಿ ಕಡ್ಡಾಯವಾಗಿ ಆಟಗಳನ್ನು ಆಡಿಕೊಳ್ಳಬೇಕು. ನಿಮ್ಮ ಶಿಕ್ಷಕರೊಂದಿಗೆ ಸೇರಿ ಆಟವಾಡಬೇಕು. ಪಾಠಶಾಲೆಯಲ್ಲಿ ಇರುವ ಆಟದ ಉಪಕರಣಗಳನ್ನು ಉಪಯೋಗಿಸಬೇಕು. ಪ್ರತಿ ಮೂರು ತಿಂಗಳಗೊಮ್ಮೆ ಪಾಠಶಾಲೆಯಲ್ಲಿ ನಡೆಯುವ ಆಟಗಳ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕು. ಆಟಗಳಲ್ಲಿ ಪ್ರಾವಿಣ್ಯತೆಯನ್ನು ಪಡೆಯಬೇಕು. ಸಾಯಂಕಾಲ ಆಟಗಳು ಆಡಿದ ನಂತರ ಶುಭ್ರವಾಗಿ ತಲೆಸ್ನಾನ ಮಾಡಬೇಕು ನಂತರ ಓದಿಕೊಳ್ಳವುದು, ಮನೆಗೆಲಸ ಮಾಡಿಕೊಳ್ಳುವುದು ಮಾಡಬೇಕು. ಹೀಗೆ ಮಾಡುವುದರಿಂದ ಚುರುಕುತನದಿಂದ, ಓದಿದ ಪಾಠಗಳು ಸಹ ಬೇಗ ಅರ್ಥವಾಗುತ್ತದೆ.

**ಆಲೋಚಿಸಿರಿ ...**

- ಆಟಗಳು ಆಡಿದರೆ ಓದು ಬರುವುದಿಲ್ಲ ಎನ್ನುತ್ತಾರೆ. ಕೆಲವು ಕುಟುಂಬಗಳಲ್ಲಿ, ಹಾಗೆಯೇ ಕೆಲವು ಶಾಲೆಗಳಲ್ಲಿ ಸಹ ಆಟವಾಡಿಸದಂತೆ ಯಾವಾಗಲೂ ಓದಿಕೊಳ್ಳಿ ಎಂದು ಹೇಳುತ್ತಿರುತ್ತಾರೆ. ಇದು ಸರಿಯೇ? ಇದರ ಮೇಲೆ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.

ಹೋಗಿ ಆಟವಾಡಬೇಕು. ಅದರಿಂದ ಆರೋಗ್ಯವಂತರಾಗಿ ಚುರುಕಾಗಿರುತ್ತಾರೆ.

### 2.6. ಆಟಗಳು - ಫಲಿತಾಂಶಗಳು :



ಆಟಗಳು ಚೆನ್ನಾಗಿ ಆಡುವುದರಿಂದ ನಮಗೆ ಉತ್ತಮ ಹೆಸರು ಮತ್ತು ಗೌರವ ಬರುತ್ತದೆ. ನಮಗಲ್ಲದೇ ನಮ್ಮ ಕುಟುಂಬಕ್ಕೆ, ಶಾಲೆಗೆ, ಊರಿಗೆ..., ನಮ್ಮ ಜಿಲ್ಲೆ, ರಾಜ್ಯಕ್ಕೆ, ದೇಶಕ್ಕೆ ಒಳ್ಳೆಯ ಹೆಸರು ಮತ್ತು ಗೌರವ ತಂದವರಾಗುತ್ತೇವೆ. ನಮ್ಮ ದೇಶದ ಕಬಡ್ಡಿ ತಂಡ ಕಬಡ್ಡಿ ಆಟಗಳಲ್ಲಿ ಚಿನ್ನದ ಪದಕ ಸಾಧಿಸಿದೆ. ಹಾಗೆಯೇ





2011ರಲ್ಲಿ ನಮ್ಮ ದೇಶದ ಕ್ರಿಕೇಟ್ ತಂಡವು ಪ್ರಪಂಚ ಕಪ್‌ನ್ನು ಸಾಧಿಸಿತು. ಕರಣಂ ಮಲ್ಲೇಶ್ವರಿ, ಸೈನಾ ನೆಹ್ವಾಲ್, ಮೇರಿಕೋಮ್, ಲಿಯಾಂಡರ್ ಪೇಸ್, ಗಗನ್ ನಾರಂಗ್, ವಿಜೇಂದರ್ ಸಿಂಗ್‌ರಂತವರು ನಮ್ಮ ದೇಶದ ಪರವಾಗಿ ಒಲಂಪಿಕ್ ಕ್ರೀಡೆಗಳಲ್ಲಿ ಪಾಲ್ಗೊಂಡು ಪದಕಗಳನ್ನು ಸಾಧಿಸಿದ್ದಾರೆ. ಇವರಿಂದ ನಮ್ಮ ದೇಶಕ್ಕೆ ಕೀರ್ತಿ ಪ್ರತಿಷ್ಟೆಗಳು ಬಂದಿವೆ. ನಿತ್ಯ ಆಟವಾಡವುದರಿಂದ ನಿತ್ಯ ಜೀವನದಲ್ಲಿ ನಡೆಯುವ ಸಂಘಟನೆಗಳನ್ನು ಎದುರಿಸುವುದಕ್ಕೆ, ಪರಿಷ್ಕಾರ ಮಾಡಿಕೊಳ್ಳುವುದಕ್ಕೆ ಸಂಸಿದ್ಧತೆರಾಗುತ್ತಾರೆ. ವಿವಿಧ ಸಂದರ್ಭಗಳಲ್ಲಿ ಇತರರಿಗೆ ಸಹಾಯ ಮಾಡುವ ಹವ್ಯಾಸ ಸಹ ಬೆಳೆಸಿಕೊಳ್ಳುತ್ತೀರಿ. ನಂತರ ಜೊತೆಗೂಡಿ ಕೆಲಸ ಮಾಡುವುದು ಅಭ್ಯಾಸವಾಗುತ್ತದೆ. ಆಟಗಳಿಂದ ಉಂಟಾಗುವ ಪ್ರಯೋಜನೆಗಳೇನು, ತಿಳಿದುಕೊಂಡಿರಲ್ಲವೇ? ಆದರೆ ನೀವು ಇಂದಿನಿಂದ ಯಾವ ಯಾವ ಆಟಗಳು ಆಡುತ್ತೀರಿ?



**ಮುಖ್ಯ ಪದಗಳು :**

| | | | | | |
|---|---|---|---|---|---|
| 1 | ನಿಯಮಗಳು | 4 | ರಸ್ತೆ ನಿಯಮಗಳು | 7 | ರಾಷ್ಟ್ರೀಯ ಮಟ್ಟ |
| 2 | ಸೋಲು – ಗೆಲುವು | 5 | ಸಂವಿಧಾನ | 8 | ಒಲಂಪಿಕ್ ಕ್ರೀಡೆಗಳು |
| 3 | ಕ್ರೀಡಾಸ್ಫೂರ್ತಿ | 6 | ಕ್ರೀಡಾಪಟುಗಳು | 9 | ಗಣರಾಜ್ಯೋತ್ಸವ ದಿನ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

1 **(ವಿಷಯಾವಗಹನ) ತಿಳುವಳಿಕೆ :**

ಅ) ಆಟಗಳನ್ನು ಏಕೆ ಆಡಬೇಕು ? ನಿಯಮಗಳು ಇಲ್ಲದಂತೆ ಆಟಗಳು ಆಡಿದರೆ ಏನಾಗುತ್ತದೆ ?

ಆ) ನಿಯಮಗಳು ಎಲ್ಲೆಲ್ಲಿ ಇರುತ್ತವೆ ? ಏಕೆ ಇವುಗಳನ್ನು ಪಾಲಿಸಬೇಕು ?

ಇ) 'ಆಟವಾಡುವುದು ಮಕ್ಕಳ ಹಕ್ಕು' ಏಕೆ ?

ಈ) ಕಬಡ್ಡಿ ಆಟಕ್ಕೆ ಮುಖ್ಯವಾದ 5 ನಿಯಮಗಳನ್ನು ಬರೆಯಿರಿ ? ಅವುಗಳನ್ನು ಯಾರು ಕಲಿಸುತ್ತಾರೆ ?

2 **ಪ್ರಶ್ನಿಸುವುದು – ಪರಿಕಲ್ಪನೆ ಮಾಡುವುದು :**

ಆ) ಲತಾ ವಾರ್ತೆ ಪತ್ರಿಕೆಯಲ್ಲಿ 'ಮೇರಿಕೋಮ್' ಚಿತ್ರ ನೋಡಿದ್ದಾಳೆ. ಮೇರಿಕೋಮ್ ಪದಕ ಹೇಗೆ ಸಾಧಿಸಿದ್ದಾಳೆ ತಿಳಿದುಕೊಳ್ಳಬೇಕೆಂಬ ಬಯಕೆ ಇದೆ. ಇದಕ್ಕಾಗಿ ಯಾವ ಪ್ರಶ್ನೆಗಳು ಕೇಳಿರಬಹುದು ?

ಆ) ಹಿಂದಿನ ಆಟಗಳಿಗೆ ಹೋಲಿಸಿದರೆ ಈಗಿನ ಆಟಗಳಲ್ಲಿ ಮುಂಬರುವ ದಿನಗಳಲ್ಲಿ ಯಾವ ಬದಲಾವಣೆಗಳು ಕಂಡು ಬರಬಹುದು ಎಂದು ಕೊಳ್ಳುತ್ತೀರಿ ? ಏಕೆ ?

3 **ಪ್ರಯೋಗಗಳು – ಕ್ಷೇತ್ರ ಪರಿಶೀಲನೆ :**

- ನಿಮ್ಮ ಬೀದಿಯಲ್ಲಿ ಅಥವಾ ನಿಮಗೆ ತಿಳಿಯದ ಆಟ ಯಾವಾದಾದರೂ ಆಟ ಇದ್ದರೆ ಆ ಆಟವನ್ನು ಹೇಗೆ ಆಡುತ್ತಾರೋ ನೋಡಿರಿ. ಆ ಆಟಗಳನ್ನು ಆಡುವ ವಿಧಾನವನ್ನು ಕ್ರಮ ಸಂಖ್ಯೆಯಲ್ಲಿ ಬರೆಯಿರಿ.

SCERT TELANGANA

## 4 . ಸಮಾಚಾರ ಕೌಶಲ್ಯ ಪ್ರಾಜೆಕ್ಟ್‌ಗಳು :

- ನಮ್ಮ ರಾಜ್ಯಕ್ಕೆ ಅಥವಾ ದೇಶಕ್ಕೆ ಹೆಸರು ತಂದ ಐದು ಜನ ಕ್ರೀಡಾಪಟುಗಳ ವಿವರಗಳನ್ನು ಸಂಗ್ರಹಿಸಿ ಪಟ್ಟಿಯಲ್ಲಿ ಬರೆಯಿರಿ.

| ಕ್ರ.ಸಂ. | ಆಟಗಾರರ ಹೆಸರುಗಳು | ಆಡುವ ಆಟ | ಪಾಲ್ಗೊಂಡ ಆಟಗಳು | ಸಾಧಿಸಿದ ವಿಜಯಗಳು |
|---|---|---|---|---|
| | | | | |

- ಮೇಲಿನವರಲ್ಲಿ ಯಾವ ಆಟಗಳವನ್ನು ಆಡುವವರು ಹೆಚ್ಚಾಗಿ ಇದ್ದಾರೆ ? ಇವರಲ್ಲಿ ಮಹಿಳೆಯರು ಸಹ ಇದ್ದಾರೆ ?

## 5 ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :

ಅ) ನೀವು ಬಯಲು ಪ್ರದೇಶದಲ್ಲಿ ಆಡುವ ಯಾವುದಾದರೂ ಒಂದು ಆಟಕ್ಕೆ ಸಂಬಂಧಿಸಿದ ಸ್ಥಳವನ್ನು (ಕೋರ್ಟ್) ಚಾರ್ಟ್ ಮೇಲೆ ಬರೆಯಿರಿ. ಅಳತೆಗಳನ್ನು ಗುರ್ತಿಸಿರಿ. ಹೆಸರು ಬರೆಯಿರಿ ವಿವರಿಸಿರಿ.

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :

ಅ) ಆಟಗಳಲ್ಲಿ ವಿಜೇತರಾದವರಿಂದ ನಾವು ಏನು ಗ್ರಹಿಸಬೇಕು ? ಪರಾಜಯ ಹೊಂದಿದವರ ಜೊತೆಗೆ ಹೇಗೆ ವರ್ತಿಸಬೇಕು ?

ಆ) ಆಟಗಳು ಆಡುವುದು ಮಕ್ಕಳ ಹಕ್ಕು ಅಲ್ಲವೇ! ಇಂದಿನಿಂದ ಪ್ರತಿನಿತ್ಯ ತಪ್ಪದೇ ಆಟಗಳು ಆಡಿರಿ. ವಾರ ದಿನಗಳ ನಂತರ ನಿಮಗೆ ಹೇಗೆ ಅನಿಸುತ್ತದೆ ತಿಳಿಸಿರಿ.

### ನಾನು ಇವುಗಳನ್ನು ಮಾಡಬಲ್ಲೆನಾ ?

1. ನಿಯಮಗಳು, ಅವುಗಳ ಅವಸರ, ಆಟಗಳಿಗೆ ಇರುವ ನಿಯಮಗಳನ್ನು ಕುರಿತು ವಿವರಿಸಬಲ್ಲೆನು. ಹೌದು/ ಇಲ್ಲ
2. ಕ್ರೀಡಾಪಟುಗಳು ಪದಕಗಳು ಹೇಗೆ ಸಾಧಿಸುತ್ತಾರೆಯೋ ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳುತ್ತೇವೆ. ಹೌದು/ ಇಲ್ಲ
3. ಆಟವನ್ನು ಪರಿಶೀಲಿಸಿ ಆಟವನ್ನು ಆಡುವ ವಿಧಾನವನ್ನು ಕ್ರಮ ಸಂಖ್ಯೆಯಲ್ಲಿ ಬರೆಯಬಲ್ಲೆನು. ಹೌದು/ ಇಲ್ಲ
4. ರಾಜ್ಯಕ್ಕೆ, ದೇಶಕ್ಕೆ ಹೆಸರು ತಂದ ಕ್ರೀಡಾ ಪಟುಗಳ ಸಮಾಚಾರವನ್ನು ಶೇಕರಿಸಿ ಪಟ್ಟಿಯನ್ನು ತಯಾರಿಸಬಲ್ಲೆನು. ಹೌದು/ ಇಲ್ಲ
5. ಆಟಗಳಲ್ಲಿ ವಿಜೇತ ಹೊಂದಿದವರನ್ನು ಪ್ರಶಂಸಿಸುವುದು, ಪರಾಜಯ ಹೊಂದಿದವರೊಂದಿಗೆ ಪ್ರವರ್ತಿಸುವ ವಿಧಾನವನ್ನು ಅರ್ಥ ಮಾಡಿಕೊಂಡಿದ್ದೇನೆ. ಹೌದು/ ಇಲ್ಲ
6. ಪ್ರತಿದಿನ ನಾನು ಆಟವಾಡುತ್ತೇನೆ. ಹೌದು/ ಇಲ್ಲ



SCERT TELANGANA

# 3 ವಿವಿಧ ಬಗೆಯ ಪ್ರಾಣಿಗಳು

ನಮ್ಮ ಸುತ್ತಲೂ ಅನೇಕ ಬಗೆಯ ಪ್ರಾಣಿಗಳು ಇವೆ. ಕೆಲವು ಪ್ರಾಣಿಗಳು ಕಾಡಿನಲ್ಲಿ ವಾಸಿಸುತ್ತಿದ್ದರೆ ಇನ್ನೂ ಕೆಲವು ಪ್ರಾಣಿಗಳು ಮನೆಯಲ್ಲಿ ನಮ್ಮೊಂದಿಗೆ ವಾಸಿಸುತ್ತವೆ. ಪ್ರಾಣಿಗಳೆಲ್ಲವು ಒಂದೇ ರೀತಿ ಇರುತ್ತವೆಯೇ ?

ಕೆಲವು ಪ್ರಾಣಿಗಳು ನಮಗಿಂತಲೂ ದೊಡ್ಡದಾಗಿ, ಇನ್ನೂ ಕೆಲವು ಪ್ರಾಣಿಗಳು ನಮಗಿಂತಲೂ ಚಿಕ್ಕದಾಗಿಯೂ ಇರುತ್ತವೆ. ಕಣ್ಣು, ಕಿವಿ, ಮೂಗು, ಬಾಲ, ಕಾಲುಗಳಂತಹ ಅಂಗಾಂಗಳ ರಚನೆಯಲ್ಲೂ ಅನೇಕ ವ್ಯತ್ಯಾಸ ಕಂಡು ಬರುತ್ತವೆ. ಕೆಲವು ಪ್ರಾಣಿಗಳನ್ನು ಅವುಗಳ ಶರೀರದ ಅಂಗಾಂಗಗಳ ರಚನೆಯ ಆಧಾರವಾಗಿ ಹೇಳಬಲ್ಲೆವು. ಉದಾಹರಣೆಗೆ, ಆನೆಯನ್ನು ಇನ್ನೂ ಉಳಿದ ಪ್ರಾಣಿಗಳಿಂದ ಬೇರೆಯಾಗಿ ಹೇಗೆ ಗುರ್ತಿಸಬಲ್ಲೆವು ? ಇದರ ಪ್ರತ್ಯೇಕತೆ ಏನು ? ಯಾವ ಅಂಗಾಂಗಗಳು ಯಾವ ರೀತಿಯಲ್ಲಿ ಇರುತ್ತದೆ.

## 3.1. ಯಾರಿಗೆ ನನ್ನ ಕಿವಿಗಳು ಬಂದಿವೆ :

ಶರೀರ ಅಂಗಾಂಗಳ ರಚನೆಯ ಆಧಾರವಾಗಿ ಪ್ರಾಣಿಗಳನ್ನು ನಾವು ಗುರ್ತಿಸಬಲ್ಲೆವು. ಕೆಳಗಿನ ಚಿತ್ರವನ್ನು ನೋಡಿರಿ.



ಮೇಲಿನ ಚಿತ್ರದಲ್ಲಿ ಇರುವ ಪ್ರಾಣಿಗಳು ವಿಚಿತ್ರವಾಗಿ ಇವೆಯಲ್ಲವೇ ? ಚಿತ್ರದಲ್ಲಿರುವ ಪ್ರಾಣಿಗಳ ಕಿವಿಗಳು ಒಂದರ ಕಿವಿಗಳು ಇನ್ನೊಂದು ಪ್ರಾಣಿಗೆ ಇವೆಯಲ್ಲವೇ ! ಎಚ್ಚರಿಕೆಯಿಂದ ನೋಡಿರಿ. ಯಾವ ಪ್ರಾಣಿಯ ಕಿವಿಗಳು ಯಾವುದಕ್ಕೆ ಇವೆಯೆಂದು ಹೇಳಬಲ್ಲಿರಾ ? ಪಟ್ಟಿಯಲ್ಲಿ ಬರೆಯಿರಿ.

SCERT TELANGANA

ಕೆಳಗೆ ಕೊಟ್ಟಿರುವ ಖಾಲಿ ಪ್ರದೇಶದಲ್ಲಿ ಯಾವ ಪ್ರಾಣಿಯ ಕಿವಿಗಳು ಯಾವುದಕ್ಕೆ ಇರಬೇಕೋ ಬರೆಯಿರಿ.

| | ಪ್ರಾಣಿಗಳು | ಕಿವಿಗಳು |
|---|---|---|
| 1 | ಆನೆ | ಇಲಿಯ ಕಿವಿಗಳು |
| 2 | ಮೊಲ | ________________ |
| 3 | ಇಲಿ | ________________ |
| 4 | ಜಿರಾಫೆ | ________________ |
| 5 | ನಾಯಿ | ________________ |
| 6 | ಎಮ್ಮೆ | ________________ |
| 7 | ಜಿಂಕೆ | ________________ |

## 3.2. ಯಾವ ಯಾವ ಪ್ರಾಣಿಗಳ ಕಿವಿಗಳು ಬಹಿರಂಗವಾಗಿ ಕಾಣಿಸುತ್ತವೆ ?

ಕೆಲವು ಪ್ರಾಣಿಗಳ ಕಿವಿಗಳು ಹೊರಗಡೆಗೆ ಕಾಣಿಸುತ್ತವೆ. ಇನ್ನೂ ಕೆಲವು ಪ್ರಾಣಿಗಳ ಕಿವಿಗಳು ಹೊರಗೆ ಕಾಣಿಸಲಾರವು. ನೀವು ಈ ಕೆಳಗಿನ ಚಿತ್ರಗಳನ್ನು ನೋಡಿರಿ. ನಿಮ್ಮ ಸ್ನೇಹಿತರೊಂದಿಗೆ ಗುಂಪಾಗಿ ಚರ್ಚಿಸಿ ಬರೆಯಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಪ್ರಾಣಿಗಳೆಲ್ಲವೂಗಳಿಗೆ ಕಿವಿಗಳು ಇರುತ್ತವೆಯೇ ? ಎಲ್ಲಾ ಪ್ರಾಣಿಗಳ ಕಿವಿಗಳು ಹೊರಗಡೆ ಕಾಣಿಸುತ್ತವೆಯೇ ? ಯಾವ ಕಿವಿಗಳು ಹೊರಗಡೆ ಕಾಣಿಸುತ್ತವೆ ? ಯಾವುವು ಕಾಣಿಸುವುದಿಲ್ಲ.



SCERT TELANGANA

| ಕಿವಿಗಳು ಬಹಿರಂಗವಾಗಿ ಕಾಣಿಸುವ ಪ್ರಾಣಿಗಳು | ಕಿವಿಗಳು ಬಹಿರಂಗವಾಗಿ ಕಾಣದ ಪ್ರಾಣಿಗಳು |
| --- | --- |
| | |

ಈ ಮೇಲಿನ ಪಟ್ಟಿಯ ಮೂಲಕ ನೀವು ಏನನ್ನು ತಿಳಿದುಕೊಂಡಿದ್ದೀರಿ ?

## 3.2. ಕಿವಿಗಳು ಇದ್ದರೂ ಅವು ಬಹಿರಂಗವಾಗಿ ಕಾಣಿಸಲಾರದ ಪ್ರಾಣಿಗಳು :

ಕೆಲವು ಪ್ರಾಣಿಗಳಿಗೆ ಕಿವಿಗಳಿದ್ದರೂ ಹೊರಗಡೆಗೆ ಕಾಣಿಸಲಾರವು. ಪ್ರಾಣಿಗಳ ಕಿವಿಗಳು ಕಾಣಿಸದೇ ಇದ್ದರೇ ನಿಜವಾಗಿಯೂ ಕಿವಿಗಳಿರುತ್ತವೆಯೇ ? ಆಲೋಚಿಸಿರಿ. ಕೆಳಗಿನ ಚಿತ್ರಗಳನ್ನು ನೋಡಿರಿ. ನಿಮ್ಮ ಸ್ನೇಹಿತರೊಂದಿಗೆ ಗುಂಪಾಗಿ ಚರ್ಚಿಸಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ಚಿತ್ರದಲ್ಲಿನ ಪ್ರಾಣಿಗಳ ಹೆಸರುಗಳನ್ನು ಬರೆಯಿರಿ.
- ಅವುಗಳ ಕಿವಿಗಳು ನಿಮಗೆ ಕಾಣಿಸುತ್ತಿವೆಯೇ ?
- ಕಿವಿಗಳು ಇದ್ದೂ, ನಮಗೆ ಕಾಣಿಸಲಾರದ ಇನ್ನೂ ಕೆಲವು ಪ್ರಾಣಿಗಳ ಹೆಸರುಗಳನ್ನು ಬರೆಯಿರಿ.

ನಮಗೆ ಕಿವಿಗಳಿರುವಂತೆಯೇ ಕೆಲವು ಪ್ರಾಣಿಗಳಿಗೆ ಕೂಡ ಕಿವಿಗಳಿರುತ್ತವೆ. ಇನ್ನೂ ಕೆಲವು ಪ್ರಾಣಿಗಳಿಗೆ ಕಿವಿಗಳಿದ್ದರೂ ಹೊರಗಡೆ ಕಾಣಿಸಲಾರವು.

SCERT TELANGANA


ಹಾವು


ಗಿಳಿ


ಮೊಸಳೆ

ಕಿವಿಗಳು ಕೇಳಲು ಸಹಾಯವಾಗುತ್ತವೆ ಎಂದು ನಿಮಗೆ ಗೊತ್ತಲ್ಲವೇ! ಪಕ್ಷಿಗಳ ಕಿವಿಗಳು ಹೊರಗಡೆಗೆ ಕಾಣಿಸಲಾರವು. ಪಕ್ಷಿಗಳ ತಲೆ ಇಕ್ಕೆಲಗಳಲ್ಲಿ ಎರಡು ರಂಧ್ರಗಳು ಇರುತ್ತವೆ. ಸಾಧಾರಣವಾಗಿ ಈ ರಂಧ್ರಗಳು ಗರಿಗಳಿಂದ ಸುತ್ತವರಿದಿರುತ್ತವೆ. ಇವು ಕೇಳುವುದಕ್ಕೆ ಸಹಾಯವಾಗುತ್ತವೆ. ನೀವು ಜಾಗ್ರತೆಯಾಗಿ ಪರಿಶೀಲಿಸಿದರೆ ಹಲ್ಲಿ ತಲೆಯ ಮೇಲೆ ಎರಡು ಚಿಕ್ಕ ರಂಧ್ರಗಳು ಕಾಣಿಸುತ್ತವೆ. ಇವೇ ಹಲ್ಲಿಯ ಕಿವಿಗಳು. ಹಲ್ಲಿಗೆ ಇರುವಂತೆಯೇ ಮೊಸಳೆಗೆ ಕೂಡ ತಲೆಯ ಮೇಲೆ ಕಿವಿಗಳಂತಯೇ ಕೆಲಸ ಮಾಡುವ ಚಿಕ್ಕ ರಂಧ್ರಗಳು ಇರುತ್ತವೆ. ಆದರೆ ಅವುಗಳನ್ನು ನಾವು ಸುಲಭವಾಗಿ ಗುರ್ತಿಸಲಾರೆವು. ಕಿವಿಗಳು ಮಾಡುವ ಕೆಲಸವನ್ನು ಹಾವಿನ ಚರ್ಮ ಮಾಡುತ್ತದೆ. ಹಾವು ಚರ್ಮದ ಮೂಲಕ ಶಬ್ದವನ್ನು ಗುರ್ತಿಸುತ್ತದೆ.

## 3.4 ಯಾವ ಚರ್ಮ ಯಾವ ಪ್ರಾಣಿಯದ್ದು :

ಯಾವ ಯಾವ ಪ್ರಾಣಿಗಳಿಗೆ ಕಿವಿಗಳು ಹೇಗೆ ಇರುತ್ತವೆಯೇ ತಿಳಿದುಕೊಂಡಿದ್ದೀರಲ್ಲವೇ! ಕಿವಿಗಳ ಆಧಾರದ ಮೇಲೆ ಪ್ರಾಣಿಗಳನ್ನು ಗುರ್ತಿಸಬಹುದು. ಹಾಗೆಯೇ ಚರ್ಮವನ್ನು ಆಧರಿಸಿ ಅದು ಯಾವ ಪ್ರಾಣಿ ಎಂದು ಗುರ್ತಿಸಬಲ್ಲಿರಾ ? ಚಿತ್ರವನ್ನು ಪರಿಶೀಲಿಸಿರಿ. ಇಲ್ಲಿನ ವಿವಿಧ ರೀತಿಯ ಪ್ರಾಣಿಗಳು, ಅವುಗಳ ಚರ್ಮಗಳು ಬೇರೆ ಬೇರೆಯಾಗಿ ಇವೆ.



**ಆಲೋಚಿಸಿರಿ ...**

**ಯಾವ ಚರ್ಮ ಯಾವ ಪ್ರಾಣಿಯ ಚರ್ಮವೆಂದು ಗುರ್ತಿಸಿರಿ ಜೊತೆಗೂಡಿಸಿರಿ.**

ಚರ್ಮವು ಶರೀರದಲ್ಲಿನ ಅಂಗಾಂಗಗಳೆಲ್ಲವುಗಳಿಗೆ ರಕ್ಷಣೆಯನ್ನು ನೀಡುತ್ತದೆ. ಶರೀರದ ಮೇಲೆ ಇರುವ ಕೂದಲಿನ ಬಣ್ಣ, ಅವುಗಳ ಜೋಡಣೆಯ ಆಧಾರದ ಮೇಲೆ ಪ್ರಾಣಿಗಳನ್ನು ಸುಲಭವಾಗಿ ಗುರ್ತಿಸಬಲ್ಲೆವು.

ಚರ್ಮದ ಮೇಲೆ ಕೂದಲು ಇಲ್ಲದ ಪ್ರಾಣಿಗಳನ್ನು ನೀವು ಯಾವಾಗಲಾದರೂ ನೋಡಿದ್ದೀರಾ? ಅವು ಯಾವ ವಿಧವಾಗಿ ಇರುತ್ತವೆ ? ಊಹಿಸಿರಿ. ಕೂದಲುಗಳು ಇರುವುದರಿಂದ ಪ್ರಯೋಜನ ಏನು ?



SCERT TELANGANA

### 3.5. ಪ್ರಾಣಿಗಳ ಕಿವಿಗಳು, ಚರ್ಮದ ಆಧಾರವಾಗಿ ವರ್ಗೀಕರಿಸುವುದು :

ಕೆಳಗಿನ ಪಟ್ಟಿಯಲ್ಲಿನ ಪ್ರಾಣಿಗಳ ಚಿತ್ರಗಳನ್ನು ನೋಡಿರಿ. ಅವುಗಳ ಹೆಸರುಗಳನ್ನು ತಿಳಿಸಿರಿ.



SCERT TELANGANA

ಎಲ್ಲಾ ಪ್ರಾಣಿಗಳ ಕಿವಿಗಳು, ಚರ್ಮವು ಒಂದೇ ರೀತಿಯಾಗಿ ಇರುವುದಿಲ್ಲ. ಕೆಲವು ಪ್ರಾಣಿಗಳ ಚರ್ಮದ ಮೇಲೆ ಕೂದಲುಗಳಿದ್ದರೇ, ಇನ್ನೂ ಕೆಲವು ಪ್ರಾಣಿಗಳ ಚರ್ಮದ ಮೇಲೆ ಗರಿಗಳು ಇರುತ್ತವೆ. ಕೆಲವು ಪ್ರಾಣಿಗಳ ಕಿವಿಗಳು ಬಹಿರಂಗವಾಗಿ ಕಾಣಿಸಿದರೆ ಇನ್ನೂ ಕೆಲವು ಪ್ರಾಣಿಗಳ ಕಿವಿಗಳು ಬಹಿರಂಗವಾಗಿ ಕಾಣಿಸಲಾರವು. ಹಿಂದಿನ ಪುಟದಲ್ಲಿರುವ ಚಿತ್ರಗಳನ್ನು ನೋಡಿದ್ದೀರಲ್ಲವೇ! ಇವುಗಳಲ್ಲಿ ಯಾವ ಪ್ರಾಣಿಗಳ ಕಿವಿಗಳು ಹೇಗೆ ಇವೆ? ಯಾವುದರ ಚರ್ಮ ಹೇಗೆ ಇದೆಯೋ ಗುಂಪಾಗಿ ಚರ್ಚಿಸಿ ಪಟ್ಟಿಯಲ್ಲಿ ಬರೆಯಿರಿ.

| **ಕಿವಿಗಳು ಕಾಣಲಾರದಂತಹವುಗಳು** | **ಚರ್ಮದ ಮೇಲೆ ಗರಿ ಹೊಂದಿರುವಂತಹವುಗಳು** |
|---|---|
| ................................ | ................................ |
| ................................ | ................................ |
| ................................ | ................................ |
| ................................ | ................................ |
| ................................ | ................................ |
| **ಕಿವಿಗಳು ಕಾಣಿಸುವಂತಹವುಗಳು** | **ಚರ್ಮದ ಮೇಲೆ ಕೂದಲುಗಳು ಇರುವಂತಹವುಗಳು** |
| ................................ | ................................ |
| ................................ | ................................ |
| ................................ | ................................ |
| ................................ | ................................ |
| ................................ | ................................ |

**ಗುಂಪಿನಲ್ಲಿ ಚರ್ಚಿಸಿರಿ :**



- ಕಿವಿಗಳ ಕಾಣಲಾರದಂತೆಯೇ ರೆಕ್ಕೆಯ ಗರಿಗಳನ್ನು ಹೊಂದಿರುವ ಪ್ರಾಣಿಗಳಾವುವು ?
- ಕಿವಿಗಳು ಬಹಿರಂಗವಾಗಿ ಕಾಣಿಸಿ ಚರ್ಮದ ಮೇಲೆ ಕೂದಲುಗಳು ಇರುವ ಪ್ರಾಣಿಗಳಾವುವು?
- ಚರ್ಮದ ಮೇಲೆ ಹುರುಪೆಗಳನ್ನು ಹೊಂದಿರುವ ಪ್ರಾಣಿಗಳು ಯಾವುವು ?

ಯಾವ ಪ್ರಾಣಿಗಳಿಗೆ ಕಿವಿಗಳು ಕಾಣಿಸುತ್ತಾ, ಅವುಗಳ ಚರ್ಮದ ಮೇಲೆ ಕೂದಲುಗಳು ಇರುತ್ತವೆಯೋ ಅಂತಹ ಪ್ರಾಣಿಗಳು ಮರಿಗಳನ್ನು ಹಾಕುತ್ತವೆ. ಯಾವ ಪ್ರಾಣಿಗಳಿಗೆ ಕಿವಿಗಳು ಕಾಣಿಸಲಾರದೇ, ಅದರ ಚರ್ಮದ ಮೇಲೆ ಕೂದಲುಗಳು ಇರುವುದಿಲ್ಲವೋ ಅಂತಹ ಪ್ರಾಣಿಗಳು ಮೊಟ್ಟೆಗಳನ್ನು ಇಡುತ್ತವೆ. ಹೀಗೆ ಪ್ರಾಣಿಗಳ ಚರ್ಮ ಅವುಗಳ ಕಿವಗಳ ರಚನೆ ಆಧಾರವಾಗಿ ಅವು ಮರಿಗಳನ್ನು ಹಾಕುತ್ತವೆಯೋ ಮೊಟ್ಟೆಗಳನ್ನು ಇಡುವ ಪ್ರಾಣಿಗಳು ಹೇಳಬಲ್ಲವು. ಮೊಟ್ಟೆಯಿಟ್ಟು ಕಾವು ಕೊಟ್ಟು ಮರಿಗಳನ್ನು ಪೋಷಿಸುವ ಪ್ರಾಣಿಗಳನ್ನು '**ಅಂಡೋತ್ಪಾದಕಗಳು**' ಎಂದೂ, ಮರಿಗಳನ್ನು ನೇರವಾಗಿ ಹಾಕುವವುಗಳನ್ನು '**ಶಿಶೋತ್ಪಾದಕಗಳು**' ಎನ್ನುವರು.

SCERT TELANGANA

## ಸಂಗ್ರಹಿಸಿರಿ :



ನಿಮ್ಮ ಮನೆಯಲ್ಲಾಗಲಿ, ನಿಮ್ಮ ಸ್ನೇಹಿತರ ಮನೆಯಲ್ಲಾಗಲಿ ಸಾಕುಪ್ರಾಣಿಗಳನ್ನು ದೂರದಿಂದ ಪರಿಶೀಲಿಸಿ ನೋಡಿರಿ. ಪ್ರಾಣಿಯ ಹತ್ತಿರ ಹೋಗಿ ಕೂದಲುಗಳು ಇವೆಯೇ ? ಇಲ್ಲವೇ, ನೋಡಿರಿ. ನಿಮ್ಮ ಪಟ್ಟಣದಲ್ಲಿ ಪ್ರಾಣಿ ಸಂಗ್ರಾಹಾಲಯಗಳು ಇದ್ದರೇ ಅಲ್ಲಿಗೆ ಹೋಗಿ, ಅಲ್ಲಿ ಇರುವ ಪ್ರಾಣಿಗಳ ಚರ್ಮದ ಮೇಲೆ ಕೂದಲುಗಳಿವೆಯೋ ಇಲ್ಲವೋ ನೋಡಿರಿ.

### 3.6 ಪ್ರಾಣಿಗಳಿಂದ ಉಪಯೋಗಗಳು :



ಪ್ರಾಣಿಗಳ ಕೂದಲುಗಳು, ಚರ್ಮವು ಪ್ರಾಣಿಗಳನ್ನು ಚಳಿ, ಬಿಸಿಲಿನಿಂದ ಕಾಪಾಡುತ್ತವೆ. ರಕ್ಷಣೆಯನ್ನು ನೀಡುತ್ತವೆ. ಇವು ನಮಗೆ ಸಹ ಉಪಯೋಗವಾಗುತ್ತವೆ. ಪ್ರಾಣಿಗಳ ಕೂದಲುಗಳನ್ನು ನಾವೂ ಸಹ ಉಪಯೋಗಿಸಿಕೊಳ್ಳತ್ತಿದ್ದೇವೆ.

ಈ ಪಕ್ಕದಲ್ಲಿರುವ ಪ್ರಾಣಿಯನ್ನು ನೋಡಿರಿ. ಇದರ ಕೂದಲುಗಳು ನಮಗೆ ಹೇಗೆ ಉಪಯೋಗವಾಗುತ್ತವೆಯೋ ಹೇಳಬಲ್ಲಿರಾ ?

ಪ್ರಾಣಿಗಳ ಚರ್ಮವು ಸಹ ನಮಗೆ ಉಪಯೋಗವಾಗುತ್ತವೆ. ಪ್ರಾಣಿಗಳ ಚರ್ಮದಿಂದ ಪಾದರಕ್ಷೆ, ಡೋಲು, ತಮಟೆ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಪ್ರಾಣಿಗಳು ನಮಗೆ ಆಹಾರ ಪದಾರ್ಥಗಳನ್ನು ಸಹ ಕೊಡುತ್ತವೆ. ಪ್ರಾಣಿಗಳು ನಮಗೆ ವ್ಯವಸಾಯದಲ್ಲಿ, ಸರಕು ಸಾಗಾಣಿಕೆಯಲ್ಲಿ ಉಪಯೋಗವಾಗುತ್ತವೆ. ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿ, ಪ್ರಾಣಿಯ ಹೆಸರು, ಆದರಿಂದ ಉಂಟಾಗುವ ಪ್ರಯೋಜನಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಬರೆಯಿರಿ.

## ಗುಂಪಿನಲ್ಲಿ ಚರ್ಚಿಸಿರಿ :



- ಯಾವ ಯಾವ ಪ್ರಾಣಿಗಳು ಆಹಾರವನ್ನು ಕೊಡುತ್ತವೆ ?
- ಯಾವ ಯಾವ ಪ್ರಾಣಿಗಳು ವ್ಯವಸಾಯದಲ್ಲಿ ಉಪಯೋಗವಾಗುತ್ತವೆ ?
- ಯಾವ ಪ್ರಾಣಿಗಳಿಂದ ನಮಗೆ ಇನ್ನಿತರೆ ಉಪಯೋಗಗಳು ಇವೆ ?

| ಆಹಾರವನ್ನು ಕೊಡುವಂತಹವುಗಳು | ವ್ಯವಸಾಯಕ್ಕೆ ಉಪಯೋಗವಾಗುವಂತಹವುಗಳು | ಇತರೆ ಉಪಯೋಗ ಮಾಡುವಂತಹವು |
|---|---|---|
| | | |

SCERT TELANGANA

## ಸಂಗ್ರಹಿಸಿರಿ :



ನೀವು ಯಾವಾಗಲಾದರೂ ಯಾವುದಾದರೂ ಪ್ರಾಣಿಗಳನ್ನು ಸಾಕಿರುವಿರಾ? ನಿಮಗೆ ತಿಳಿದವರು ಯಾರಾದರೂ, ಯಾವುದಾದರೂ ಪ್ರಾಣಿಯನ್ನು ಸಾಕಿದ್ದಾರೆಯೇ? ಅವರ ಮನೆಗೆ ಹೋಗಿ ಕೆಳಗಿನ ವಿವರಗಳನ್ನು ಸಂಗ್ರಹಿಸಿರಿ.



| ಪರಿಶೀಲಿಸಿದ ಅಂಶಗಳು | ಅವುಗಳ ವಿವರಗಳು |
|---|---|
| • ಮನೆಯಲ್ಲಿ ಸಾಕುವ ಪ್ರಾಣಿ ? | |
| • ಅದಕ್ಕೆ ಹೆಸರು ಇಟ್ಟಿದ್ದಾರೆಯೇ ? | |
| • ಏನು ಹೆಸರು | |
| • ಯಾವ ಪ್ರಾಣಿಯು ಮೊಟ್ಟೆಯನ್ನಿಡುತ್ತದೆ ? | |
| • ಮರಿಗಳನ್ನು ಹಾಕುತ್ತದೆಯೇ ? | |
| • ಅವುಗಳಿಗೆ ಮರಿಗಳು ಇವೆಯೇ ? | |
| • ಏನನ್ನು ತಿನ್ನುತ್ತದೆ ? ಎಷ್ಟು ಸಾರಿ ತಿನ್ನುತ್ತದೆ ? | |
| • ಅವುಗಳ ಚರ್ಮದ ಮೇಲೆ ಕೂದಲುಗಳಿವೆಯೇ ಅಥವಾ ಗರಿಗಳಿವೆಯೇ ? | |
| • ಅವುಗಳ ಕಿವಿಗಳು ಹೊರಗಡೆಗೆ ಕಾಣುತ್ತವೆಯೇ ? | |
| • ಆ ಪ್ರಾಣಿಗಳನ್ನು ಏಕೆ ಸಾಕುತ್ತಾರೆ ? | |
| • ಆ ಪ್ರಾಣಿಯ ಬಗ್ಗೆ ಅವರು ತೆಗೆದುಕೊಳ್ಳುವ ಎಚ್ಚರಿಕೆಗಳು ಏನು ? | |
| • ಅವುಗಳಿಗೆ ಕೋಪ ಬರುತ್ತದೆಯೇ ? | |
| • ಆಗ ಅದು ಏನು ಮಾಡುತ್ತದೆ ? | |
| • ಅವರ ಮನೆಯಲ್ಲಿ ಆ ಪ್ರಾಣಿಯೆಂದರೆ ಯಾರಿಗೆ ಇಷ್ಟ | |
| • ಏಕೆ ಇಷ್ಟವಾಗುತ್ತದೆ ? | |

SCERT TELANGANA

## ನಿಮಗೆ ಗೊತ್ತೇ ?

ಜಿಂಕೆಯು ನಮ್ಮ ತೆಲಂಗಾಣ ರಾಜ್ಯದ ರಾಜ್ಯ ಪ್ರಾಣಿ. ನಮ್ಮ ರಾಜ್ಯದ ನಲ್ಲಮಲ್ಲ ಅಡವಿಗಳಲ್ಲಿ ಜಿಂಕೆಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇದು ಅಂದವಾದ ಕೊಂಬುಗಳನ್ನು ಹೊಂದಿದೆ. ಹಾಗೆ ಸುಂದರವಾದ ದೊಡ್ಡ ದೊಡ್ಡ ಕಣ್ಣುಗಳನ್ನು ಹೊಂದಿದ್ದರಿಂದ ಇದು ನೋಡಲು ತುಂಬಾ ಆಕರ್ಷಣೀಯವಾಗಿದೆ.

ಇದನ್ನು ನೋಡಿದರೆ ಮಕ್ಕಳಿಗೆ ಮತ್ತು ದೊಡ್ಡವರಿಗೆ ಸಂತೋಷವನ್ನುಂಟು ಮಾಡುತ್ತದೆ.





ಚಿತ್ರದಲ್ಲಿನ ಪ್ರಾಣಿಯನ್ನು ನೋಡಿರಿ. ಇದರ ಹೆಸರು ಗೊತ್ತೇ? ಇದು ಹುಲಿ. ಇದು ನಮ್ಮ ದೇಶದ ರಾಷ್ಟ್ರೀಯ ಪ್ರಾಣಿ. ಭಾರತದೇಶದಲ್ಲಿ ಈ ಪ್ರಾಣಿಗಳು ನಶಿಸಿಹೋಗುತ್ತಾ ಇವೆ? ಏಕೆ ಈ ರೀತಿಯಾಗಿ ನಶಿಸಿ ಹೋಗುತ್ತವೆ ? ಚರ್ಚಿಸಿರಿ.

## 3.7. ಸ್ವತಃ ಪಕ್ಷಿಯನ್ನು ತಯಾರು ಮಾಡೋಣ ! :

ಪಕ್ಷಿಗಳಾದರೂ, ಪ್ರಾಣಿಗಳಾದರೂ ನಮ್ಮೆಲ್ಲರಿಗೂ ಇಷ್ಟವಲ್ಲವೇ ! ಅವುಗಳನ್ನು ತಯಾರು ಮಾಡೋಣವೇ ? ಇದಕೋಸ್ಕರವಾಗಿ ನೀವು ಕೆಲವು ಕಾಗದಗಳನ್ನು ಅಥವಾ ರಟ್ಟಿನ ತುಂಡುಗಳನ್ನು ತೆಗೆದುಕೊಳ್ಳಿರಿ. ಚಿತ್ರದಲ್ಲಿ ತೋರಿಸಿರುವ ವಿಧದಂತೆ ಆಕಾರಗಳನ್ನು ತಯಾರು ಮಾಡಿರಿ. ನಿಮ್ಮ ತರಗತಿಯಲ್ಲಿ ಪ್ರದರ್ಶಿಸಿರಿ.



**ಮುಖ್ಯ ಪದಗಳು :**

1. ಚರ್ಮ
2. ಕಿವಿಗಳು ಹೊರಗಡೆಗೆ ಕಾಣಿಸುವಂತಹವು
3. ಕಿವಿಗಳು ಹೊರಗಡೆಗೆ ಕಾಣಿಸಲಾರದಂತಹವು
4. ಮೊಟ್ಟೆಗಳನ್ನು ಇಡುವ ಪ್ರಾಣಿಗಳು
5. ಮರಿ ಹಾಕುವ ಪ್ರಾಣಿಗಳು
6. ಅಂಡೋತ್ಪಾದಕಗಳು
7. ಶಿಶೋತ್ಪಾದಕಗಳು
8. ಪ್ರಾಣಿ ಸಂಗ್ರಹಾಲಯಗಳು

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನ) ತಿಳುವಳಿಕೆ :

ಅ) ಕಿವಿಗಳು ಹೊರಗಡೆಗೆ ಕಾಣಿಸುವಂತಹ 10 ಪ್ರಾಣಿಗಳನ್ನು ಬರೆಯಿರಿ ?

ಆ) ಮೊಟೆಗಳನ್ನು ಇಡುವ ಪ್ರಾಣಿಗಳು, ಮರಿಗಳನ್ನು ಹಾಕುವ ಪ್ರಾಣಿಗಳಿಗೂ ಇರುವ ಎರಡು ಹೋಲಿಕೆಗಳನ್ನು, ವ್ಯತ್ಯಾಸಗಳನ್ನು ಬರೆಯಿರಿ.

ಇ) ಕೆಲವು ಪ್ರಾಣಿಗಳು ಮೊಟ್ಟೆಗಳನ್ನು ಇಡುತ್ತವೆ? ಆದರೆ ಅವುಗಳಿಗೆ ಗರಿಗಳು ಇರುವುದಿಲ್ಲ ಅವುಗಳ ಹೆಸರುಗಳನ್ನು ಬರೆಯಿರಿ.

ಈ) ಪ್ರಾಣಿಗಳು, ಪಕ್ಷಿಗಳಿಂದ ಉಂಟಾಗುವ ಪ್ರಯೋಜನಗಳನ್ನು ಬರೆಯಿರಿ.

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ರಹೀಮ್, ರಜಿನಿ, ಮನೋಜ್ಞ, ಸಂಹಿತ ಸ್ನೇಹಿತರೆಲ್ಲರೂ ಸೇರಿ ರವಿವಾರದಂದು ಪ್ರಾಣಿ ಸಂಗ್ರಾಹಾಲಯಕ್ಕೆ ಹೋದರು. ಅಲ್ಲಿ ಕೆಲವು ಪ್ರಾಣಿಗಳನ್ನು ನೋಡಿದ್ದಾರೆ. ಅವುಗಳ ಕುರಿತು ತಿಳಿಯಲು ವಿವಿಧ ಪ್ರಶ್ನೆಗಳನ್ನು ಕೇಳಿದರು. ಆ ಪ್ರಶ್ನೆಗಳು ಏನಾಗಿರುತ್ತವೆಯೋ ? ನೀವು ಬರೆಯಿರಿ.







### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

ಅ) ನಿಮ್ಮ ಪ್ರಾಂತದಲ್ಲಿ ಮರಿಗಳನ್ನು ಹಾಕುವ ಪ್ರಾಣಿಗಳು ಹೆಚ್ಚಾಗಿ ಇವೆಯೇ ? ಅಥವಾ ಮೊಟ್ಟೆ ಇಡುವಂತಹವುಗಳು ಹೆಚ್ಚಾಗಿ ಇವೆಯೇ ?

ಆ) ಮೊಟ್ಟೆ ಇಡುವ ಪ್ರಾಣಿಗಳು ಅಥವಾ ಮರಿ ಹಾಕುವ ಪ್ರಾಣಿಗಳ ಅದರ ಮರಿಗಳೊಂದಿಗೆ ಇರುವಾಗ ಆಹಾರವನ್ನು ಹೇಗೆ ತೆಗೆದುಕೊಳ್ಳುತ್ತವೆ ? ಏನು ಮಾಡುತ್ತಿವೆ ? ಪರಿಶೀಲಿಸಿ ಬರೆಯಿರಿ.

SCERT TELANGANA

4 **ಸಮಾಚಾರ ಕೌಶಲ್ಯ, ಪ್ರಾಜೆಕ್ಟ್‌ಗಳು :**

- ಯಾವುದಾದರೂ ಎರಡು ಪ್ರಾಣಿಗಳನ್ನು ಕುರಿತು, ಕೆಳಗಿನಂತೆ ಸಮಾಚಾರ ಪಟ್ಟಿಯನ್ನು ತಯಾರಿಸಿ.

| ಪ್ರಾಣಿ ಹೆಸರು | ಕೂದಲುಗಳಿವೆಯೇ | ಮೊಟ್ಟೆ ಇಡುವುದೇ? ಮರಿ ಹಾಕುವುದೇ? | ಏನನ್ನು ತಿನ್ನುತ್ತದೆ? | ಎಲ್ಲಿ ವಾಸಿಸುತ್ತದೆ ? |
|---|---|---|---|---|
| | | | | |

- ಮೇಲಿನ ಪಟ್ಟಿಯ ಮೂಲಕ ನೀವು ಏನನ್ನು ತಿಳಿದುಕೊಂಡಿದ್ದೀರಿ ?
- ಮೊಟ್ಟೆಗಳನ್ನು ಹಾಕುವ ಪ್ರಾಣಿಯ ಬಗ್ಗೆ ಎರಡು ವಾಕ್ಯಗಳನ್ನು ಬರೆಯಿರಿ.

5 **ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :**

- ನಿಮಗೆ ಇಷ್ಟವಾದ ಮರಿಗಳನ್ನು ಹಾಕುವ ಪ್ರಾಣಿಯ ಬಗ್ಗೆ ಎರಡು ವಾಕ್ಯಗಳನ್ನು ಬರೆಯಿರಿ.

6 **ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ನಾವು ಜೀವಿಸಲು ಆಹಾರ, ನೀರು, ಆವಾಸ ಅವಸರವಲ್ಲವೇ ? ಹಾಗಾದರೇ, ನಿಮ್ಮ ಸುತ್ತಮುತ್ತಲಿನ ಪ್ರಾಣಿಗಳು, ಪಕ್ಷಿಗಳು ಜೀವಿಸಲು ನೀವೇನು ಮಾಡುವಿರಿ ?

ಆ) ಪಕ್ಷಿಗಳು, ಪ್ರಾಣಿಗಳು ಕೂಡ ನಮ್ಮ ಹಾಗೆಯೇ ಜೀವಿಸುವ ಹಕ್ಕನ್ನು ಹೊಂದಿವೆ. ಇವುಗಳಿಗೆ ಹಾನಿ ಮಾಡಬಾರದೆಂದು, ಅವುಗಳ ರಕ್ಷಣೆಗೆ ಸಹಾಯ ಮಾಡಬೇಕೆಂದು ತಿಳಿಸುವ ಕೆಲವು ಘೋಷಣೆಗಳನ್ನು ಬರೆಯಿರಿ.

ಇ) ಪಕ್ಷಿಗಳು, ಪ್ರಾಣಿಗಳು ಅವುಗಳ ಮರಿಗಳನ್ನು ನೋಡಿದಾಗ ನಿಮಗೆ ಏನು ಅನಿಸುತ್ತದೆಂದು ಬರೆಯಿರಿ.

**ನಾನು ಇವುಗಳನ್ನು ಮಾಡಬಲ್ಲೆನಾ ?**

| | | |
|---|---|---|
| 1 | ಪ್ರಾಣಿಗಳ ನಡುವಿನ ಹೋಲಿಕೆ ವ್ಯತ್ಯಾಸಗಳನ್ನು ಬರೆಯಬಲ್ಲೆನು. | ಹೌದು / ಇಲ್ಲ |
| 2 | ಪ್ರಾಣಿಗಳ ಬಗ್ಗೆ ಪ್ರಶ್ನಿಸುವೆನು. | ಹೌದು / ಇಲ್ಲ |
| 3 | ಪ್ರಾಣಿಗಳನ್ನು ಕುರಿತು ಸಮಾಚಾರವನ್ನು ಸಂಗ್ರಹಿಸಿ. ಪಟ್ಟಿಯಲ್ಲಿ ನಮೂದಿಸುವೆನು. | ಹೌದು / ಇಲ್ಲ |
| 4 | ಪ್ರಾಣಿಗಳ ಚಿತ್ರವನ್ನು ಬಿಡಿಸುವುದು, ಬಣ್ಣಗಳನ್ನು ಹಾಕಿ ಅವುಗಳನ್ನು ಕುರಿತು ಹೇಳಬಲ್ಲೆನು. | ಹೌದು / ಇಲ್ಲ |
| 5 | ಪ್ರಾಣಿಗಳು ನಮಗೆ ಹೇಗೆ ಉಪಯೋಗವಾಗುತ್ತವೆಯೇ ವಿವರಿಸಬಲ್ಲೆನು. | ಹೌದು / ಇಲ್ಲ |

SCERT TELANGANA

# 4 ಪ್ರಾಣಿಗಳ ಜೀವನ ವಿಧಾನ - ಜೀವ ವೈವಿಧ್ಯತೆ



ಮನುಷ್ಯರೆಲ್ಲರು ಗ್ರಾಮಗಳಲ್ಲಿ ಅಥವಾ ಊರಿನಲ್ಲಿ ಅಥವಾ ಪಟ್ಟಣಗಳಲ್ಲಿ ಕುಟುಂಬಗಳೊಂದಿಗೆ ವಾಸಿಸುವವರು. ಆದ್ದರಿಂದ ಮಾನವರನ್ನು ಸಂಘಜೀವಿಗಳೆಂದು ಕರೆಯುವರು. ನಾವೆಲ್ಲರೂ ಒಬ್ಬರಿಗೊಬ್ಬರು ಸಹಕರಿಸಿಕೊಳ್ಳುತ್ತಾ, ಒಬ್ಬರಮೇಲೊಬ್ಬರು ಆಧಾರಪಟ್ಟು, ಜೀವನವನ್ನು ಸಾಗಿಸುತ್ತೇವೆ. ಜೀವಿಸಲು ಅವಶ್ಯಕವಾದ ಆಹಾರ, ಬಟ್ಟೆ, ನಿವಾಸ, ಸಾರಿಗೆ ವ್ಯವಸ್ಥೆ(ರವಾಣಾ ಸೌಕರ್ಯ)ಗಳು ಮುಂತಾದವುಗಳನ್ನು ಪಡೆದುಕೊಳ್ಳುತ್ತೇವೆ. ಹಾಗಾದರೆ ಪ್ರಾಣಿಗಳು ಹೇಗೆ ಜೀವಿಸುತ್ತವೆ? ಏನು ಮಾಡುತ್ತವೆ ? ಅವುಗಳ ಜೀವನ ವಿಧಾನ ಹೇಗಿರುತ್ತದೆಯೋ ನಿಮಗೆ ಗೊತ್ತೇ ? ಕೆಳಗಿನ ಚಿತ್ರವನ್ನು ನೋಡಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ಚಿತ್ರದಲ್ಲಿರುವ ಪ್ರಾಣಿಗಳನ್ನು ನೀವು ಯಾವಾಗಲಾದರೂ ನೋಡಿದ್ದೀರಾ ?
- ಗುಂಪಿನಲ್ಲಿ ಎಷ್ಟು ಆನೆಗಳಿವೆ ? ಅವು ಏನು ಮಾಡುತ್ತಿವೆ ?
- ಆನೆಗಳು ಗುಂಪಾಗಿ ಏಕೆ ತಿರುಗಾಡುತ್ತವೆ ? ಗುಂಪಿನಲ್ಲಿ ಇರುವುದರಿಂದ ಅವುಗಳಿಗೆ ಉಂಟಾಗುವ ಉಪಯೋಗವೇನು ?

## 4.1. ಪ್ರಾಣಿಗಳ ಜೀವನ ವಿಧಾನ

ಕಾಡಿನಲ್ಲಿ ವಾಸವಾಗಿರುವ ಆನೆಗಳು ಗುಂಪಿನಲ್ಲಿ ಇರುತ್ತವೆ. ಒಂದೊಂದು ಗುಂಪಿನಲ್ಲಿ 10-12 ಆನೆಗಳು, ಅವುಗಳ ಮರಿಗಳು ಇರುತ್ತವೆ. ಇವುಗಳಲ್ಲಿ ಹೆಚ್ಚಾಗಿ ಹೆಣ್ಣು ಆನೆಗಳೇ ಇರುತ್ತವೆ. ಗಂಡು ಆನೆಗಳು ಮರಿಗಳಿದ್ದಾಗ ಗುಂಪಿನಲ್ಲಿಯೇ ಇದ್ದು 15 ವರ್ಷದ ವಯಸ್ಸಿಗೆ ಬಂದಾಗ ಗುಂಪಿನಿಂದ ಬೇರ್ಪಡುತ್ತವೆ. ಸಾಧಾರಣವಾಗಿ ಆನೆಗಳ ಗುಂಪಿಗೆ ಹೆಚ್ಚು ವಯಸ್ಸಿನ

ಹೆಣ್ಣು ಆನೆಯು ಮುಂದಾಳತ್ವ (ನಾಯಕತ್ವ) ವಹಿಸುತ್ತದೆ. ಇದು ಮುಂಜಾನೆಯೇ ಘೀಳಿಡುತ್ತಾ ಕಾಡಿನಲ್ಲಿ ಪ್ರವೇಶಿಸುತ್ತದೆ. ಗುಂಪಿನಲ್ಲಿಯ ಆನೆಗಳೆಲ್ಲ ಇದನ್ನು ಹಿಂಬಾಲಿಸುತ್ತವೆ. ಹೆಚ್ಚು ಮೇವು ಉಳ್ಳ ಪ್ರಾಂತಗಳಲ್ಲಿ, ಆನೆಗಳೆಲ್ಲ ಬಿಡಿಬಿಡಿಯಾಗಿ ಬೇಕಾದಷ್ಟು ಎಲೆಗಳು, ಸಣ್ಣ ಕೊಂಬೆಗಳನ್ನು ತಿನ್ನುತ್ತವೆ. ಮಧ್ಯಾಹ್ನಕ್ಕೆ ಹತ್ತಿರದಲ್ಲಿರುವ ನೀರಿರುವ ಪ್ರದೇಶಕ್ಕೆ ಸೇರಿಕೊಂಡು ನೀರಿನಲ್ಲಿ ಸಂತೋಷದಿಂದ ಈಜುತ್ತವೆ. ತಮ್ಮ ಮಕ್ಕಳಿಗೆ ಈಜುವುದನ್ನು ಕಲಿಸುತ್ತವೆ. ಜೊತೆಯಾಗಿ ಆಟವನ್ನು ಆಡಿಕೊಳ್ಳುತ್ತವೆ. ಹೀಗೆ ಆನೆಗಳು ಗುಂಪುಗುಂಪಾಗಿ ವಾಸಿಸುವುದರಿಂದ ಅವುಗಳ ಮರಿಗಳನ್ನು ರಕ್ಷಿಸಿಕೊಳ್ಳುವುದು, ಆಹಾರವನ್ನು ಹುಡುಕಿಕೊಳ್ಳುವುದು, ವೈರಿಗಳನ್ನು ಭಯಪಡಿಸುವುದರ ಮೂಲಕ ರಕ್ಷಣೆ ಹೊಂದುವಂತಹ ಪ್ರಯೋಜನೆಗಳನ್ನು ಹೊಂದುತ್ತವೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಈ ರೀತಿಯಾಗಿ ಇನ್ನೂ ಯಾವ ಯಾವ ಪ್ರಾಣಿಗಳು ಗುಂಪಿನಲ್ಲಿ ವಾಸಿಸುತ್ತವೆ ?
- ಮಂಗ (ಕೋತಿ) ಗಳ ಗುಂಪುಗಳನ್ನು ನೀವು ಯಾವಾಗಾದರೂ ನೋಡಿದ್ದೀರಾ ? ಅವು ಏಕೆ ಗುಂಪಾಗಿರುತ್ತವೆ ?
- ಯಾವ ಯಾವ ಪ್ರಾಣಿಗಳ ಜೀವನ ವಿಧಾನ ಹೇಗೆ ಇರುತ್ತದೆ ?
- ಪ್ರಾಣಿಗಳು ಕೂಡಿ ಜೀವಿಸಲು ಕಾರಣಗಳು ಏನಾಗಿರಬಹುದು ?

ಆನೆಗಳ ಜೀವನ ವಿಧಾನದ ಬಗ್ಗೆ ತಿಳಿದುಕೊಂಡಿದ್ದೀರಲ್ಲವೇ ! ಸಾಮಾನ್ಯವಾಗಿ ನಮ್ಮ ಮನೆಗಳಲ್ಲಿ ಸಾಕುವ ಪ್ರಾಣಿಗಳ ಬಗ್ಗೆ ನಮ್ಮೆಲ್ಲರಿಗೆ ಗೊತ್ತು. ಆದರೆ ಕಾಡಿನಲ್ಲಿ ಅಥವಾ ಬೀದಿಗಳಲ್ಲಿ ಇರುವ ಪ್ರಾಣಿಗಳ ಬಗ್ಗೆ, ಅವುಗಳ ಜೀವನ ಶೈಲಿಯ ಬಗ್ಗೆ ನಿಮಗೆ ಗೊತ್ತೇ? ಅವು ಏನನ್ನು ತಿನ್ನುತ್ತವೆ ? ಎಲ್ಲಿರುತ್ತವೆ ? ಏನು ಮಾಡುತ್ತವೆ ? ಮೊದಲಾದವುಗಳ ಬಗ್ಗೆ ಕುರಿತು ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ. ನಿಮ್ಮ ಹಿರಿಯರನ್ನಾಗಲೀ ಕೇಳಿ ಪಾಠಶಾಲೆಯ ಗ್ರಂಥಾಲಯದಲ್ಲಿ ಪ್ರಾಣಿಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ನೋಡಿರಿ ನಿಮ್ಮ ಮನೆಯಲ್ಲಿ ಟಿ.ವಿ. ಇದ್ದರೆ ನ್ಯಾಷನಲ್ ಜಿಯೋಗ್ರಫಿಕ್ ಛಾನೆಲ್‌ನಲ್ಲಿ ಅಥವಾ ಡಿಸ್ಕವರೀ ಛಾನೆಲ್‌ನಲ್ಲಿ ನೋಡಿರಿ. ನಿಮ್ಮ ಸ್ನೇಹಿತರೊಂದಿಗೆ ಸೇರಿ ಗುಂಪಿನಲ್ಲಿ ಇವುಗಳನ್ನು ಕುರಿತು ಮಾತಾನಾಡಿರಿ. ನೀವು ತಿಳಿದುಕೊಂಡ ಪ್ರಾಣಿಗಳ ಜೀವನ ವಿಧಾನದ ಬಗ್ಗೆ ಚರ್ಚಿಸಿ ಬರೆಯಿರಿ. ಕೆಲವು ಪ್ರಾಣಿಗಳು ಒಂಟಿ ಜೀವಿಸುತ್ತವೆ. ಅವುಗಳನ್ನು ಕುರಿತು ನಿಮ್ಮ ಶಿಕ್ಷಕರನ್ನು ಕೇಳಿ ತಿಳಿಯಿರಿ.

**ನಿಮಗೆ ಗೊತ್ತೇ ?**



ದೊಡ್ಡ ಹುಲಿಗಳು ಚೆನ್ನಾಗಿ ಬೇಟೆ ಆಡಬಲ್ಲವು. ಅವುಗಳ ಮರಿಗಳಿಗೆ ಹುಟ್ಟಿದಾಗ ಬೇಟೆ ಆಡುವ ವಿಧಾನ ತಿಳಿದಿರುವುದಿಲ್ಲ. ಹುಲಿಗಳ ಗುಂಪು ಬೇಟೆ ಆಡುವ ವಿಧಾನವನ್ನು ಮರಿಗಳು ಪರಿಶೀಲಿಸಿ, ಬೇಟೆ ಆಡುವುದನ್ನು ಕಲಿತುಕೊಳ್ಳುತ್ತವೆ. ಹುಲಿಗಳ ಗುಂಪಿನೊಂದಿಗೆ ಅವುಗಳ ಮರಿಗಳು ಆಟವಾಡಿ ಕೊಳ್ಳುತ್ತಾ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವವು.

ಕೆಲವು ಪ್ರಾಣಿಗಳ ಬಗ್ಗೆ ಕುರಿತು ತಿಳಿದುಕೊಂಡಿರಲ್ಲವೇ ! ಹಾಗಾದರೆ ಪಕ್ಷಿಗಳು ಸಹ ಎಲ್ಲಿ ವಾಸಿವಾಗಿರುತ್ತವೆ ? ಏನು ಮಾಡುತ್ತವೆ? ಇವುಗಳ ಬಗ್ಗೆ ನಿಮಗೆ ಗೊತ್ತೇ ? ಪಕ್ಷಿಗಳು ಸಹ ಗುಂಪಾಗಿ ಜೀವಿಸುತ್ತವೆಯೇ ? ಪಕ್ಷಿಗಳು ಗುಂಪಾಗಿ ಆಕಾಶದಲ್ಲಿ ಹಾರುವುದನ್ನು ನೀವು ಯಾವಾಗಲಾದರೂ (ಎಂದಾದರು) ನೋಡಿದ್ದಿರಾ ? ಯಾವ ಕಾಲದಲ್ಲಿ ಕಾಣಿಸುತ್ತವೆ? ಮುಂದಿನ ಪುಟದಲ್ಲಿಯ ಚಿತ್ರವನ್ನು ನೋಡಿರಿ.

SCERT TELANGANA



## ಗುಂಪಿನಲ್ಲಿ ಚರ್ಚಿಸಿರಿ :



- ಯಾವ ಸಮಯದಲ್ಲಿ ಪಕ್ಷಿಗಳು ಸಾಮೂಹಿಕ (ಗುಂಪಾಗಿ)ವಾಗಿ ಪ್ರಯಾಣಿಸುತ್ತಿರುತ್ತವೆ?
- ಯಾವ ಯಾವ ಆಕಾರದಲ್ಲಿ ಪ್ರಯಾಣ ಮಾಡುತ್ತಿರುತ್ತವೋ ಗಮನಿಸಿದ್ದೀರಾ ?
- ಆಕಾಶದಲ್ಲಿ ಹಾರಾಡುವ ಪಕ್ಷಿಗಳ ಗುಂಪನ್ನು ನೋಡಿದರೆ ನಿಮಗೇನನಿಸುತ್ತದೆ ?
- ಕಾಗೆಗಳು ಗುಂಪಾಗಿರುತ್ತವೆ ಅಲ್ಲವೇ ! ಹೀಗೆ ಏಕೆ ಗುಂಪಾಗಿ ಇರುತ್ತವೆಯೋ ಆಲೋಚಿಸಿರಿ?
- ಒಂದು ಕಾಗೆ ಸತ್ತುಹೋದರೆ ಉಳಿದ ಕಾಗೆಗಳು ಏನು ಮಾಡುತ್ತವೆ ?

## ಹೀಗೆ ಮಾಡಿರಿ :



ವ್ಯರ್ಥವಾಗಿರುವ ಹಾಳೆಗಳನ್ನು ಉಪಯೋಗಿಸಿ ಪಕ್ಷಿಯನ್ನು ತಯಾರಿಸಿ ಹಾರಿಸಿರಿ.

ಪ್ರಾಣಿಗಳು, ಪಕ್ಷಿಗಳು ಸಮೂಹದಲ್ಲಿ ಗುಂಪಾಗಿ ಜೀವಿಸುತ್ತಿರುತ್ತವೆ. ಸಂಘದಲ್ಲಿ ಇರುವುದರಿಂದ ಇವುಗಳಿಗೆ ವೈರಿಗಳಿಂದ ರಕ್ಷಣೆ ದೊರಕಿದಂತಾಗುತ್ತದೆ. ಚಿಕ್ಕ ಪ್ರಾಣಿಗಳು ದೊಡ್ಡ ಪ್ರಾಣಿಗಳ ಚಲನವಲನಗಳನ್ನು ಗಮನಿಸುತ್ತಾ ಬೇಟೆಯಾಡುವುದನ್ನು,

SCERT TELANGANA

ಶತ್ರುಗಳಿಂದ ತಪ್ಪಿಸಿಕೊಳ್ಳುವುದು, ಆಹಾರವನ್ನು ಗುರ್ತಿಸಿ, ನೀರಿರುವ ಪ್ರದೇಶಗಳನ್ನು ಗುರ್ತಿಸುವಂತಹ ತಿಳುವಳಿಕೆ ಹೊಂದುತ್ತವೆ.

ಪಕ್ಷಿಗಳು ಸಹ ಸಮೂಹದಲ್ಲೆ ಆಹಾರಕ್ಕಾಗಿ ಹುಡುಕುತ್ತಾ, ಹಾರಾಡುತ್ತಾ, ಹೋಗುತ್ತವೆ. ಕಟಾವಿಗೆ ಬಂದ ಬೆಳೆಗಳು ಕಂಡಾಗ ಅವುಗಳನ್ನು ಬಹಳ ಎತ್ತರದಿಂದ ಕೂಡ ಗುರ್ತಿಸಬಲ್ಲವು. ಆಹಾರಕ್ಕಾಗಿ ಆಶ್ರಯಕ್ಕಾಗಿ ಕೆಲವು ಸಾವಿರ ಮೈಲು ಪ್ರಯಾಣ ಮಾಡುವ ಶಕ್ತಿ ಪಕ್ಷಿಗಳಿಗೆ ಇವೆ. ಅವುಗಳ ಆಹಾರಕ್ಕಾಗಿ ಕೊಯ್ಲು ಹೊಲಗಳು, ತೋಟಗಳು, ವ್ಯವಸಾಯ ಕ್ಷೇತ್ರಗಳು ಮುಂತಾದವುಗಳಿಗೆ ಹೋಗುತ್ತವೆ. ಕೆಲವು ಪಕ್ಷಿಗಳು ಕೀಟಗಳನ್ನು, ನೀರಿನಲ್ಲಿನ ಚಿಕ್ಕ ಚಿಕ್ಕ ಪ್ರಾಣಿಗಳನ್ನು, ಮೀನುಗಳನ್ನು ಮುಂತಾದವುಗಳನ್ನು ತಿನ್ನುತ್ತವೆ. ಇದಕ್ಕಾಗಿ ಹತ್ತಿರದಲ್ಲಿರುವ ಹಳ್ಳಗಳು, ನದಿಗಳು, ಕೆರೆಗಳು, ಹೊಂಡಗಳು,ಜಲಾಶಯಗಳು ಮುಂತಾದವುಗಳಿಗೆ ಸೇರಿಕೊಳ್ಳುತ್ತವೆ. ಹೀಗೆ ಹೊರಡುವಾಗ ಪಕ್ಷಿಗಳು ಗುಂಪು ಗುಂಪಾಗಿ ಹೋಗುತ್ತಿರುವವು.

**ನಿಮಗೆ ಗೊತ್ತೇ ?**



**ಡಾಕ್ಟರ್ ಎ.ಪಿ.ಜೆ. ಅಬ್ದುಲ್ ಕಲಾಂ**

ಭಾರತದೇಶದ ಮಾಜಿ ರಾಷ್ಟ್ರಪತಿ ಡಾಕ್ಟರ್ ಎ.ಪಿ.ಜೆ. ಅಬ್ದುಲ್ ಕಲಾಂ ತನ್ನ ಚಿಕ್ಕಂದಿನಲ್ಲಿ ಸಮುದ್ರ ತೀರದಲ್ಲಿ ಹಾರುವ ಪಕ್ಷಿಗಳ ಗುಂಪನ್ನು ಪ್ರತಿ ದಿನ ವೀಕ್ಷಿಸುತ್ತಿದ್ದರು. ಅವು ಹೇಗೆ ಹಾರಾಡುವವೋ ಎಂದು ಆಲೋಚಿಸುತ್ತಿದ್ದರು. ಆ ಆಲೋಚನೆಯೇ ಅವರ ಪರಿಶೋಧನೆಗೆ ನಾಂದಿಯಾಯಿತು. ಅವೇ ರಾಕೆಟ್ ಉಡಾವಣೆಗೆ ಕಾರಣವಾಯಿತು. ಪರಿಶೀಲಿಸುವುದು, ಅವುಗಳ ಕುರಿತು ತಿಳಿದುಕೊಳ್ಳುವುದು, ಒಂದು ಗುರಿಯನ್ನು ಏರ್ಪಡಿಸಿಕೊಳ್ಳುವುದು, ಅದಕ್ಕಾಗಿ ಕೃಷಿ ಮಾಡುವಂತಹ ಚಟುವಟಿಕೆ ಅವರನ್ನು ಒಬ್ಬ ದೊಡ್ಡ ವ್ಯಕ್ತಿಯನ್ನಾಗಿಸಿತು. ನಾವು ಸಹ ಪಕ್ಷಿಗಳನ್ನು, ಪ್ರಾಣಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದರೆ ಅನೇಕ ಹೊಸ ವಿಷಯಗಳು ತಿಳಿಯುತ್ತವೆ.

## 4.2 ಪಕ್ಷಿಗಳು - ಗೂಡುಗಳು :

ಈ ಪ್ರಾಣಿಗಳೆಲ್ಲವು ವಾಸಿಸುವುದಕ್ಕೆ ನಿವಾಸಗಳು ಅವಶ್ಯಕ ಬಿಸಿಲು, ಮಳೆ, ಚಳಿಯಿಂದ ರಕ್ಷಣೆ ಹೊಂದುವುದಕ್ಕೆ ನಿವಾಸಗಳು ಅವಶ್ಯಕತೆ ಎಂದು 3ನೇ ತರಗತಿಯಲ್ಲಿ ಓದಿಕೊಂಡಿರಲ್ಲವೇ ! ನಮ್ಮ ಸುತ್ತಲು ಅನೇಕ ವಿಧದ ಪಕ್ಷಿಗಳು ಇವೆ. ಹಾಗಾದರೆ ಎಲ್ಲಿ ವಾಸಿಸುತ್ತವೆ ? ಕೆಳಗಿನ ಚಿತ್ರಗಳನ್ನು ನೋಡಿರಿ. ಅವು ಯಾವ ಯಾವ ಪಕ್ಷಿಗಳ ಗೂಡುಗಳೋ ಹೇಳಿರಿ.



ಪಕ್ಷಿಗಳು ಎಷ್ಟು ಸುಂದವಾಗಿ ಗೂಡಗಳನ್ನು ಕಟ್ಟಿಕೊಂಡಿವೆ ಅಲ್ಲವೇ! ಇವುಗಳಲ್ಲಿ ನೀವು ಯಾವ ಯಾವ ಗೂಡುಗಳನ್ನು ನೋಡಿದ್ದೀರಿ ? ಎಲ್ಲಿ ನೋಡಿದ್ದೀರಿ ? ಹೇಳಿರಿ. ನಾವು ನಿವಾಸಗಳನ್ನು ಏರ್ಪಡಿಸಿಕೊಂಡಂತೆಯೇ ಪಕ್ಷಿಗಳು ಸಹ ನಿವಾಸಗಳನ್ನು ನಿರ್ಮಿಸಿಕೊಳ್ಳುತ್ತವೆ. ಆದರೆ ಅವು ಯಾವುದರಿಂದ ತಮ್ಮ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ ? ಹೇಗೆ ನಿರ್ಮಾಣ ಮಾಡಿಕೊಳ್ಳುತ್ತವೆ ? ಮುಂತಾದವುಗಳ ಬಗ್ಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಪಕ್ಷಿಗಳ ಗೂಡುಗಳು ನಿಮಗೆ ಮೆಚ್ಚಿಗೆಯಾಗಿವೆಯೇ ? ಏಕೆ ?
- ಗೂಡುಗಳನ್ನು ಕಟ್ಟಿಕೊಳ್ಳುವುದಕ್ಕೆ ಆ ಪಕ್ಷಿಗಳು ಏನನ್ನು ಬಳಸಿವೆ ?
- ಗಿಜಗನ ಪಕ್ಷಿಯನ್ನು ನೋಡಿದ್ದಿರಾ ? ಚಿಕ್ಕ ಪಕ್ಷಿ ಆದರೂ ಅಷ್ಟು ದೊಡ್ಡ ಗೂಡನ್ನು ಹೇಗೆ ನಿರ್ಮಿಸಿಕೊಂಡಿದೆ.
- ಕೆಲವು ಪಕ್ಷಿಗಳು ಗಿಡಗಳಿಗೆ ರಂಧ್ರಗಳನ್ನು ಮಾಡಿ ಅವುಗಳಲ್ಲಿ ವಾಸಿಸುತ್ತವೆ ಅಲ್ಲವೇ! ಹೀಗೆ ಇನ್ನೂ ಯಾವ ಯಾವ ಪಕ್ಷಿಗಳು ಗಿಡಗಳ ಪೊದೆಗಳಲ್ಲಿ ವಾಸಿಸುತ್ತವೆ ?

ಈ ಗೂಡನ್ನು ನೋಡಿ. ಎಲೆಗಳಿಂದ ಎಷ್ಟು ಸುಂದರವಾಗಿ ನಿರ್ಮಿಸಿಕೊಂಡಿದೆ ಅಲ್ಲವೇ ! ಗಿಜಗ ಹಕ್ಕಿ ದಾರಗಳಿಂದ ಎಲೆಗಳನ್ನು ಹಣೆದು ಗೂಡು ತಯಾರಿಸಿಕೊಳ್ಳುತ್ತದೆ.



**ಹೀಗೆ ಮಾಡಿರಿ :**

1. ನಿಮ್ಮ ಪರಿಸರಗಳಲ್ಲಿರುವ ಯಾವುದಾದರೂ ಪಕ್ಷಿಯ ಗೂಡನ್ನು ಪರಿಶೀಲಿಸಿರಿ. ಗೂಡನ್ನು ಕದಿಲಿಸಬೇಡ. ಕಣಜದ ಹುಳ ಇಲ್ಲದಂತಹ ಗೂಡು ನೋಡಿರಿ. ಅವು ಹೇಗೆ ಕಟ್ಟಿಕೊಂಡಿವೆ ? ಹೇಗೆ ಬಳಸಿವೆಯೋ ಪರಿಶೀಲಿಸಿರಿ. ಗಮನಿಸಿದ ಅಂಶಗಳನ್ನು ನೋಟ್‌ಪುಸ್ತಕದಲ್ಲಿ ಬರೆಯಿರಿ.
2. ಸಣ್ಣ ಸಣ್ಣ ರೆಂಬೆಗಳು, ದಾರಗಳು, ಹುಲ್ಲಿನ ಕಡ್ಡಿಗಳು, ಬಟ್ಟೆತುಂಡುಗಳು, ತೆಂಗಿನಚಿಪ್ಪು, ಎಲೆಗಳಂತಹವುಗಳನ್ನು ಸಂಗ್ರಹಿಸಿ, ಅವುಗಳ ಸಹಾಯದಿಂದ ನಿಮಗಿಷ್ಟವಾದ ಪಕ್ಷಿಗೂಡನ್ನು ತಯಾರಿಸಿ ಪ್ರದರ್ಶಿಸಿರಿ.

ನೋಡಿದಿರಾ ! ಗೂಡು ಕಟ್ಟುವುದು ಎಷ್ಟು ಕಷ್ಟವಾದ ಕೆಲಸವೋ ? ಆ ಪಕ್ಷಿಗಳು ಅವುಗಳ ಗೂಡುಗಳನ್ನು ತಯಾರಿಸಿಕೊಳ್ಳಲಿಕ್ಕೆ ಬಹಳ ಕಷ್ಟಪಡುವವು. ಎಷ್ಟೋ ಚತುರತೆಯಿಂದ ತಮ್ಮ ತಮ್ಮ ಗೂಡುಗಳನ್ನು ನಿರ್ಮಿಸಿಕೊಂಡಿವೆ ಅಲ್ಲವೇ!

ಪಕ್ಷಿಗಳು ಸಾಮಾನ್ಯವಾಗಿ ಹುಲ್ಲಿನ ಕಡ್ಡಿಗಳು, ಸಣ್ಣ ಸಣ್ಣ ರೆಂಬೆಗಳು, ದಾರ, ವೈರುಗಳು, ಕಾಗದದ ತುಂಡು, ಪೀಚು, ಬಟ್ಟೆ ತುಂಡುಗಳು, ಮೆತ್ತನೆ ಉಣ್ಣೆ , ಗಿಡಗಳ ಎಲೆಗಳನ್ನು ಬಳಸಿಕೊಳ್ಳುತ್ತಾ ಗೂಡುಗಳನ್ನು ತಯಾರಿಸಿಕೊಳ್ಳುವವು.

SCERT TELANGANA

ವಿಧವಿಧವಾದ ಪಕ್ಷಿಗಳು ವಿಧವಿಧವಾದ ಗೂಡುಗಳನ್ನು ನಿರ್ಮಿಸಿಕೊಳ್ಳುವವೆಂದು ನೀವು ತಿಳಿದುಕೊಂಡಿರಲ್ಲವೇ! ಗೀಜಗ ಪಕ್ಷಿಗಳಲ್ಲಿ ಗಂಡು ಪಕ್ಷಿಗಳು ಮಾತ್ರ ಗೂಡುಗಳನ್ನು ನಿರ್ಮಿಸುತ್ತವೆ. ಹೆಣ್ಣು ಪಕ್ಷಿಗಳಿಗೆ ಇಷ್ಟವಾದ ಗೂಡಿನಲ್ಲಿ ಮೊಟ್ಟೆಗಳನ್ನು ಇಡುತ್ತವೆ. ಪಕ್ಷಿಗಳು ಮೊಟ್ಟೆಗಳನ್ನು ಇಡುವ ಸಮಯದಲ್ಲಿ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ. ಪಕ್ಷಿ ಮರಿಗಳಿಗೆ ರೆಕ್ಕೆಗಳು ಬಂದು ಗಾಳಿಯಲ್ಲಿ ಹಾರಾಡುವಾಗಲೇ ಪಕ್ಷಿಗಳು ಆ ಗೂಡನ್ನು ಬಿಡುತ್ತವೆ. ಮತ್ತೊಮ್ಮೆ ಮೊಟ್ಟೆ ಇಡುವ ಸಮಯದಲ್ಲಿ ಹೊಸ ಗೂಡನ್ನು ನಿರ್ಮಿಸಿಕೊಳ್ಳುತ್ತವೆ. ಅವು ಗೂಡುಗಳಿಗಾಗಿ ಯಾವಾಗಲೂ ಕಷ್ಟಪಡುತ್ತಿರುತ್ತವೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಪಕ್ಷಿಗಳು ಅವುಗಳ ಮರಿಗಳಿಗೆ ಏನೇನು ತಿನಿಸುತ್ತವೆ? ಹೇಗೆ ತಿನಿಸುತ್ತವೆ?
- ಪಕ್ಷಿಯು ಮರಿಗಳಿಗೆ ಆಹಾರವನ್ನು ತಿನಿಸುತ್ತಿರುವಾಗ ನೀವು ನೋಡಿದ್ದಿರಾ? ಆಗ ನಿಮಗೆ ಏನು ಅನಿಸುತ್ತದೆ?

ಕೆಲವು ಮಕ್ಕಳು ಗಿಡಗಳ ಮೇಲಿರುವ ಪಕ್ಷಿಗಳ ಗೂಡುಗಳನ್ನು, ಮೊಟ್ಟೆಗಳನ್ನು ಒಡೆದು ಬಿಡುವಂತಹ ಕೆಟ್ಟ ಕೆಲಸಗಳನ್ನು ಮಾಡುತ್ತಿರುತ್ತಾರೆ. ನಮ್ಮ ಮನೆಯನ್ನು ಯಾರಾದರೂ ಹೊಡೆದು ಬೀಳಿಸಿ ಬಿಟ್ಟರೆ ನಮಗೇಷ್ಟು ದುಃಖವಾಗುವುದೊ, ಪಕ್ಷಿಗಳಿಗೂ ಕೂಡಾ ಅಷ್ಟೇ ದುಃಖವಾಗುತ್ತವೆ. ಆದ್ದರಿಂದಲೆ ಪಕ್ಷಿಗೂಡಿಗೆ ಮೊಟ್ಟೆಗಳಿಗೆ ಯಾವುದೇ ಹಾನಿ ಮಾಡಬಾರದು.

**ಆಲೋಚಿಸಿರಿ ...**

- ಎಲ್ಲಾ ಪಕ್ಷಿಗಳು ಗೂಡಿನಲ್ಲೇ ಮೊಟ್ಟೆಗಳನ್ನು ಇಡುವವಾ?
- ಕೋಳಿ ಎಲ್ಲಿ ಮೊಟ್ಟೆ ಇಡುತ್ತದೆ?

**ನಿಮಗೆ ಗೊತ್ತೇ ?**

ಸಲೀಂ ಅಲೀ, ಇವರು ಪ್ರಸಿದ್ದ ಪಕ್ಷಿ ಶಾಸ್ತ್ರಜ್ಞರು. ಇವರು ಪಕ್ಷಿಗಳ ಮೇಲೆ ಅನೇಕ ಸಂಶೋಧನೆಗಳನ್ನು ಮಾಡಿ, ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಪಂಚದಾದ್ಯಂತ ಪಕ್ಷಿಗಳ ಬಗ್ಗೆ ಇವರು ಮಾಡಿದ ಪರಿಶೋಧನೆಗಾಗಿ ಬಹಳಷ್ಟು ಅಂತರ್‌ರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಇವರು ನಮ್ಮ ಭಾರತೀಯರೇ.



**ಪಾಲಪಿಟ್ಟ**

ನಮ್ಮ ಹಿರಿಯರು ಪಾಲಪಿಟ್ಟವನ್ನು ನೋಡುವುದು ಶುಭ ಸೂಚಕವೆಂದು ಭಾವಿಸುತ್ತಾರೆ. ದಸರಾ ಉತ್ಸವಗಳಲ್ಲಿ ಪಾಲಪಿಟ್ಟವನ್ನು ನೋಡುವುದು ಒಂದು ಭಾಗ. ಪಾಲಪಿಟ್ಟ ಕಾಣಿಸಿದರೆ ಒಳ್ಳೆಯದು ಸಂಭವಿಸುತ್ತದೆ ಎಂದು ಭಾವಿಸುತ್ತಾರೆ. ಇದು ಒಂದು ಅಪರೂಪದ ಪಕ್ಷಿ. ಅದಕ್ಕೆ ನಮ್ಮ ರಾಜ್ಯ ಸರಕಾರ ಪಾಲಪಿಟ್ಟವನ್ನು ರಾಜ್ಯಪಕ್ಷಿಯೆಂದು ಪ್ರಕಟಿಸಿದ್ದಾರೆ.



ಪಕ್ಷಿಗಳನ್ನು ರಕ್ಷಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರಿಗಿದೆ. ಗಿಡಮರಗಳನ್ನು ಕಡಿಯುವುದರಿಂದ, ಹೊಲಗದ್ದೆಗಳಿಗೆ ಔಷಧ ಹಾಕುವುದರಿಂದ ಬಹಳ ವಿಧವಾದ ಪಕ್ಷಿಗಳು ಕಣ್ಮರೆಯಾಗುತ್ತಿವೆ. ಇತ್ತೀಚೆಗೆ ಮಾಡಿದ ಪರಿಶೋಧನೆಗಳ ಮೂಲಕ ಸೆಲ್‌ಫೋನ್ ಟವರ್‌ನಿಂದ ಬರುವ ರೇಡಿಯೇಷನ್‌ನಿಂದ ಸಹ ಗುಬ್ಬಿಗಳು ಪೂರ್ತಿಯಾಗಿ ಕಣ್ಮರೆಯಾಗಿ ಹೋಗುವ ಹಂತದಲ್ಲಿದೆ ಎಂದು ತಿಳಿದಿದೆ. ಪಕ್ಷಿಗಳು ಕಣ್ಮರೆಯಾದರೆ ಉಂಟಾಗುವ ನಷ್ಟಗಳೇನು?

## 4.3 ಕ್ರಿಮಿಕೀಟಗಳು - ಸಾಮೂಹಿಕ ಜೀವನ :

# ಹೊಸ ಮ್ಯಾಟರ್



ವಿಜಯ ಅವರ ಮನೆಯ ಪಡಸಾಲೆ (ವರಾಂಡ) ಯಲ್ಲಿಯ ಒಂದು ಮೂಲೆಯ ಮೇಲಿನ ಭಾಗದಲ್ಲಿ ಒಂದು ಮಣ್ಣಿನ ಮುದ್ದೆಯಂತಹ ಪದಾರ್ಥವನ್ನು ಗಮನಿಸಿದಳು. ಆಗಲೇ ಒಂದು ಕೀಟ (ಹುಳ) "ಜ್...ಜ್..." ಎನ್ನುವ ಶಬ್ದ ಮಾಡುತ್ತಾ ಅದರ ಒಳಗೆ ಹೋಯಿತು. ಸ್ವಲ್ಪ ಹೊತ್ತಿಗೆ ಅದು ಹೊರಗಡೆಗೆ ಹೋಯಿತು. ಆ ಮಣ್ಣಿನ ಮುದ್ದೆಯಲ್ಲಿ ಏನಿದಿಯೋ ನೋಡಬೇಕೆಂಬ ಆಸೆ ವಿಜಯಳಿಗೆ ಉಂಟಾಯಿತು. ಮಣ್ಣಿನ ಮುದ್ದೆ ಒಳಗೆ ನೋಡಿದಾಗ ಅದರಲ್ಲಿ ಯಾವುದೋ ಹುಳಗಳು ಇದ್ದಂತೆ ಗಮನಿಸಿದಳು.

ಮನೆಯನ್ನು ಅವರ ತಂದೆ ಶುಭ್ರಗೊಳಿಸುವಾಗ ಕೋಲಿನಿಂದ ಅದನ್ನು ತೆಗೆದನು. ಆಗ ಅದನ್ನು ನೋಡಿದರೆ ಮಣ್ಣಿನ ಮುದ್ದೆಯಲ್ಲಿ ಪದರುಪದರಾಗಿದೆ. ಅವು ಏನಾಗಿರಬಹುದೋ ಹೇಳಬಲ್ಲಿರ? ಅದರಲ್ಲಿ ಅವುಗಳ ಮರಿಗಳಿವೆ. ಅದು ಕಡೆತರು ಕಣಜದ ಹುಳುವಿನ (ಕಂದಿರೀಗ) ಗೂಡು. ಇಂತಹ ಗೂಡನ್ನು ನೀವು ಎಂದಾದರೂ ನೋಡಿದ್ದೀರ ? ಎಲ್ಲಿ ನೋಡಿದ್ದಿರಿ ? ಕಡೆತರು ಹುಳು ಅನೇಕ ವಿಧವಾಗಿವೆ. ಕಡೆತರು ಹುಳುಗಳು ತಾವು ಇರುವ ಪರಿಸರಕ್ಕೆ ತಕ್ಕಂತೆ ಅದರ ಗೂಡನ್ನು ನಿರ್ಮಿಸಿಕೊಳ್ಳುವವು. ಹೆಣ್ಣು ಹುಳುಗಳು ಮಾತ್ರ ಗೂಡನ್ನು ನಿರ್ಮಿಸುವವು.



ರಾಮು ಅವರ ಮನೆಯ ಅಂಗಳದಲ್ಲಿ ದೊಡ್ಡಗಿಡವಿದೆ. ಆ ಗಿಡದ (ಮರದ) ಮೇಲೆ ಜೇನಿನ ತಟ್ಟು ಇದೆ. ನೀವು ಯಾವಾಗಾದರೂ ಜೇನಿನ ತಟ್ಟು ಗಮನಿಸಿದ್ದೀರಾ? ಅವುಗಳ ಕೋಣೆಗಳು ಹೇಗಿವೆ ? ಜೇನು ಹುಳಗಳ ಉದರ ಭಾಗದಲ್ಲಿ ಮೇಣವನ್ನು ಸ್ರವಿಸುವ ಗ್ರಂಥಿಗಳಿವೆ. ಇವುಗಳಿಂದ ಸ್ರವಿಸುವ ಮೇಣದಿಂದ ಅನೇಕ ಕೋಣೆಗಳಿರುವ ಜೇನುಗೂಡನ್ನು ಕಟ್ಟುತ್ತವೆ. ಒಂದೊಂದು ಜೇನುಹುಳು ಒಂದೊಂದು ಕೋಣೆಯಲ್ಲಿರುವುದು.

**ಆಲೋಚಿಸಿರಿ ...**

- **ರಾಮು ತುಂಟಾಟದ ಹುಡುಗ, ಕಲ್ಲಿನಿಂದ ಜೇನಿನ ಗೂಡನ್ನು ಹೊಡೆದ, ಆನಂತರ ಏನು ನಡೆದಿರಬಹುದೋ ಯೋಚಿಸಿ,ಹೇಳಿರಿ. ಹೀಗೆ ಮಾಡಬಹುದಾ ? ಏಕೆ ಮಾಡಬಾರದು ?**

ಜೇನುಗೂಡು, ಕಡೆತದಹುಳುವಿನ ಗೂಡುಗಳಂತಹ ಕೀಟಗಳ ಗೂಡುಗಳಿಗೆ ಹಾನಿ ಉಂಟುಮಾಡಿದರೆ ಅವುಗಳಿಗಿರುವ ಕುಣಿಕೆ (ಕೊಂಡಿ) ಯಿಂದ ಕಡಿದು ವಿಷದಂತಹ ಪದಾರ್ಥಗಳನ್ನು ಶರೀರದಲ್ಲಿ ಕಳುಹಿಸುತ್ತವೆ. ಇದರಿಂದ ಒಂದೊಂದು ಸಲ ಮರಣಿಸುವ ಸಾಧ್ಯತೆವಿದೆ. ಆದ್ದರಿಂದಲೇ ಅವುಗಳ ಜೊತೆ ಆಡಲು ಹೋಗಬಾರದು.

ಜೇನು ಹುಳುಗಳಂತೆಯೇ ಇರುವೆಗಳು ಸಹ ಗುಂಪುಗುಂಪಾಗಿ ವಾಸಿಸುತ್ತವೆ. ಇರುವೆಗಳು ಚಿಕ್ಕದಾದರೂ ನಾವು ಅವುಗಳಿಂದ ಬಹಳಷ್ಟು ವಿಷಯಗಳನ್ನು ಕಲಿತುಕೊಳ್ಳಬಹುದು. ನೀವು ಕೆಳಗೆ ತಿಳಿಸಿದಂತೆ ಇರುವೆಗಳ ಬಗ್ಗೆ ಪರಿಶೀಲಿಸಿರಿ.

**ಹೀಗೆ ಮಾಡಿರಿ :**

- ನಿಮ್ಮ ಮನೆಯಲ್ಲಾಗಲೀ ಅಥವಾ ಪಾಠಶಾಲೆಯಲ್ಲಾಗಲೀ ಒಂದು ಮೂಲೆಯಲ್ಲಿ ಬೆಲ್ಲ, ಸಕ್ಕರೆಯಂತಹವು ಇಡಬೇಕು. ಸ್ವಲ್ಪ ಸಮಯವಾದ ನಂತರ ಪರಿಶೀಲಿಸಿರಿ. ಇರುವೆಗಳು ಆ ಪದಾರ್ಥಗಳನ್ನು ಹೊತ್ತುಕೊಂಡು ಹೋಗುವ ಸಮಯದಲ್ಲಿ ಭೂತಕನ್ನಡಿಯಿಂದ ಕೆಳಗಿನ ವಿಷಯಗಳನ್ನು ಪರಿಶೀಲಿಸಿ ಬರೆಯಿರಿ. ಪರಿಶೀಲಿಸುವ ವೇಳೆಯಲ್ಲಿ ಇರುವೆಗಳಿಗೆ ಹಾನಿಉಂಟಾಗದಂತೆ ನೋಡಿರಿ.
- ಇರುವೆಯ ಶರೀರ ಭಾಗಗಳನ್ನು ಗಮನಿಸಿರಿ. ಇರುವೆಯ ಕದಲಿಕೆ ಯಾವ ರೀತಿಯಾಗಿದೆ ?
- ಇರುವೆಗಳು ಆಹಾರ ಪದಾರ್ಥಗಳನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿವೆ ?

SCERT TELANGANA

ಇರುವೆಗಳು ಸಂಘಜೀವನದಲ್ಲಿ ಆದರ್ಶ ಪ್ರಾಯವಾಗಿವೆ. ಅವು ಕೆಲಸಗಳನ್ನು ಹಂಚಿಕೊಂಡು ಶಿಸ್ತಿನಿಂದ ಕೆಲಸ ಮಾಡುತ್ತವೆ. ಇರುವೆಗಳಲ್ಲಿ ಕೂಲಿ ಇರುವೆಗಳು, ಗಂಡು ಇರುವೆಗಳು, ರಾಣಿ ಇರುವೆಗಳು ಇರುತ್ತವೆ. ರಾಜ್ ಇರುವೆಗಳು ಮೊಟ್ಟೆ ಇಡುತ್ತವೆ. ಅವುಗಳನ್ನು ರಕ್ಷಿಸುವುದು, ಇರುವೆ ಮರಿಗಳಿಗೆ ಆಹಾರವನ್ನು ತಲುಪಿಸುವುದು, ಗೂಡನ್ನು ನಿರ್ಮಿಸುವುದು, ಸರಿಪಡಿಸುವಂತಹ ಕೆಲಸಗಳನ್ನು ಕೂಲಿ ಇರುವೆಗಳು ಮಾಡುತ್ತವೆ. ಇರುವೆಗಳು ಅವುಗಳ ಗೂಡನ್ನು ಮಣ್ಣಿನಿಂದ ಚಿಕ್ಕ ಚಿಕ್ಕ ಹುತ್ತಗಳನ್ನಾಗಿ ಕಟ್ಟಿಕೊಳುತ್ತವೆ. ಗೂಡಿನಲ್ಲಿ ಒಂದೊಂದು ಪ್ರದೇಶವನ್ನು ಒಂದೊಂದು ವಿಧವಾದ ಕೆಲಸಗಳಿಗೆ ಬಳಸಿಕೊಳ್ಳುತ್ತವೆ. ಇರುವೆಗಳು ಆಹಾರ ಪದಾರ್ಥಗಳನ್ನು ದವಡೆಗಳಿಂದ ತುಂಡು ತುಂಡಾಗಿ ಮಾಡುತ್ತವೆ.





ಕೆಲವು ವಿಧದ ಇರುವೆಗಳು ಅವುಗಳ ಗೂಡಿನಿಂದ ದೂರ ಹೋಗುವ ಸಮಯದಲ್ಲಿ ಒಂದು ವಿಧವಾದ ವಾಸನೆ ಕೊಡುವ ಪದಾರ್ಥವನ್ನು ಬಿಡುತ್ತಾ ಹೋಗುತ್ತವೆ. ಆ ವಾಸನೆ ಮೂಲಕ ಅವು ಅವುಗಳ ದಾರಿಯನ್ನು (ಮಾರ್ಗ) ಕಂಡು ಹಿಡಿಯಬಲ್ಲವು. ಅದೇ ದಾರಿ ಮೂಲಕ ಮತ್ತೆ ಗೂಡನ್ನು ಸೇರಿಕೊಳ್ಳಲು ಉಪಯೋಗವಾಗುತ್ತದೆ. ಇರುವೆಗಳು ಒಂದಕ್ಕೊಂದು ಎದುರುಬಿದ್ದಾಗ ತಲೆಗಳು ಸ್ಪರ್ಶಿಸಿಕೊಂಡು ಹೋಗುವುದನ್ನು ನೀವು ನೋಡಿರುವಿರಲ್ಲವೇ. ಅವು ಏಕೆ ಹೀಗೆ ಮಾಡುವವು?

ಇರುವೆಗಳು ಆಹಾರ ಸಿಗುವ ಸ್ಥಳದ ಬಗ್ಗೆ, ಹೋಗುವ ಸ್ಥಳದ ಬಗ್ಗೆ ಮುಂತಾದ ಸಮಾಚಾರವನ್ನು ತಲುಪಿಸಿಕೊಳ್ಳುತ್ತವೆ.

**ನಿಮಗೆ ಗೊತ್ತೆ ?**

ಒಂದು ಇರುವೆ ತನ್ನ ಭಾರಕ್ಕಿಂತ ಅಂದಾಜು 50 ಪಟ್ಟು ಹೆಚ್ಚು ಭಾರವುಳ್ಳ ಪದಾರ್ಥವನ್ನು ಹೊತ್ತುಕೊಂಡು ಹೋಗಬಲ್ಲವು (ಹೊರಬಲ್ಲವು) ಇರುವೆಗಳಂತೆಯೇ ಇತರ ಕೀಟ (ಹುಳು) ಗಳಿಗೆ ಆರು ಕಾಲುಗಳಿರುತ್ತವೆ. ಇರುವೆಗಳಿಗೆ ಅವುಗಳ ತಲೆ ಮುಂದಿನ ಭಾಗದಲ್ಲಿ ಎರಡು ಫೀಲರ್ಸ್ (ಏಂಟೆನಾನವಂತಹವು) ಇರುತ್ತವೆ. ಇವು ಆಹಾರ ಎಲ್ಲಿವೆಯೋ ತಿಳಿದುಕೊಳ್ಳಲಿಕ್ಕೆ ಇತರ ಇರುವೆಗಳಿಗೆ ಸಮಾಚಾರವನ್ನು ತಲುಪಿಸುವ ವೇಳೆಯಲ್ಲಿ ಉಪಯೋಗವಾಗುತ್ತವೆ.



ಇರುವೆಗಳಂತೆಯೇ, ಜೇನುಹುಳುಗಳು ಸಹ ಗುಂಪಿನಲ್ಲಿ (ಸಂಘದಲ್ಲಿ) ಜೀವಿಸುತ್ತವೆ. ಕೆಲಸದ ಹಂಚಿಕೆ ಸಹ ಇರುತ್ತದೆ.

ಆನೆಗಳು, ಹುಲಿಗಳು, ಮಂಗಗಳಂತಹ ಪ್ರಾಣಿಗಳು, ಪಕ್ಷಿಗಳ ಸಹ ಸಮೂಹದಲ್ಲಿ ಜೀವಿಸುತ್ತವೆಂದು ತಿಳಿದುಕೊಂಡೆವು ಅಲ್ಲವೇ ! ಇದೇ ರೀತಿಯಾಗಿ ಮನುಷ್ಯರು ಸಹ ಒಟ್ಟಾಗಿ ಬಾಳುವುದು ಅವಶ್ಯ. ಒಬ್ಬರಿಗೊಬ್ಬರು ಕೆಲಸದಲ್ಲಿ ಸಹಾಯ ಮಾಡಿಕೊಳ್ಳುತ್ತಾ, ಸಮಸ್ಯೆಗಳು ಬಂದಾಗ ಒಂದುಗೂಡಿ ಚರ್ಚಿಸಿಕೊಳ್ಳುವುದರಿಂದ ಒಬ್ಬರಮೇಲೊಬ್ಬರಿಗೆ ಗೌರವಾಭಿಮಾನಗಳು ಬೆಳೆಯುತ್ತವೆ.

SCERT TELANGANA

## 4.4 ಪ್ರಾಣಿ, ಪಕ್ಷಿಗಳ ಮೇಲೆ ಕರುಣೆ, ಪ್ರೀತಿ :






**ಆಲೋಚಿಸಿರಿ ...**

- ಮೇಲಿನ ಚಿತ್ರದಲ್ಲಿ ನೀವು ಏನು ಗಮನಿಸಿದ್ದೀರಿ ?
- ಮೇಲಿನ ರೀತಿಯಲ್ಲಿ ನೀವು ಯಾವಾಗಾದರೂ ಪ್ರಾಣಿ ಪಕ್ಷಿಗಳಿಗೆ ಆಹಾರವನ್ನು ತಿನಿಸಿದ್ದೀರಾ ?
- ಪ್ರಾಣಿಗಳಿಗೆ, ಪಕ್ಷಿಗಳಿಗೆ ಆಹಾರವನ್ನು ಕೊಡುವಾಗ, ಅವುಗಳಿಗೆ ರಕ್ಷಣೆಯನ್ನು ಕಲ್ಪಿಸಿದಾಗ ನಿಮಗೇನನಿಸಿತು?

ನೀವು ಯಾವಾಗಲಾದರೂ ಪ್ರಾಣಿಗಳಿಗೆ (ಬೆಕ್ಕು, ನಾಯಿ, ಎತ್ತು, ಆಕಳು) ಗಾಯಾಗಳಾದಾಗ ಚಿಕಿತ್ಸೆ ಮಾಡಿಸಿರುವಿರಾ? ನಿಮಗೇನನಿಸಿತು ?



ಪ್ರಾಣಿಗಳಿಗೆ ಸಹ ಜೀವ ಉಂಟು. ಅವುಗಳಿಗೆ ಹಿಂಸೆ ಕೊಡಬಾರದು. ಕಲ್ಲುಗಳನ್ನು ಎಸೆಯ ಬಾರದು. ಅವುಗಳಿಗೆ ಆಹಾರ, ನೀರನ್ನು ಕೊಡಬೇಕು. ಪ್ರತಿ ದಿನವು ಅವುಗಳ ಅವಶ್ಯಕತೆ ಗುರ್ತಿಸಿ, ಅವುಗಳಿಗೆ ಬೇಕಾದ ಆಹಾರ ಕೊಡಬೇಕು.

ಹಸಿವಿನಿಂದ ಬಳಲುವ ನಾಯಿಗಳು, ಬೆಕ್ಕುಗಳು ಇತರ ಪ್ರಾಣಿಗಳನ್ನು ಕಂಡಾಗ ನಿಮಗೇನುನಿಸುತ್ತದೆ. ಪ್ರಾಣಿಗಳನ್ನು ಬಂಧಿಸ ಬಾರದು. ಪಕ್ಷಿಗಳಿಗೆ ಕಾಳನ್ನು ಹಾಕಬೇಕು. ಪ್ರಾಣಿಗಳನ್ನು ಅವುಗಳ ಮರಿಗಳನ್ನು ಪ್ರೀತಿಯಿಂದ, ದಯೆಯಿಂದ ನೋಡಿಕೊಳ್ಳಬೇಕು.

SCERT TELANGANA

## 4.5 ಜೀವ ವೈವಿಧ್ಯತೆ :

ಒಂದು ಪ್ರದೇಶದಲ್ಲಿರುವ ವಿವಿಧ ರೀತಿಯ ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಸಸ್ಯಗಳು, ಮರಗಳನ್ನು ಜೀವವೈವಿಧ್ಯತೆ ಎನ್ನುತ್ತೇವೆ. ಪ್ರಕೃತಿಯಲ್ಲಿ ಕೆಲಸಕ್ಕೆಬಾರದ, ಅಪಾಯಕಾರಿಯಾದುದು ಯಾವುದೂ ಇಲ್ಲ. ಕಾಡಿನಲ್ಲಿ ಅಧಿಕವಾಗಿ ಜೀವವೈವಿಧ್ಯತೆ ಇರುತ್ತದೆ. ಪ್ರತಿ ಜೀವಿಯು ಇತರ ಜೀವಿಗಳೊಂದಿಗೆ ಸಂಬಂಧವನ್ನು ಹೊಂದಿರುತ್ತವೆ. ಭೂಮಿಯ ಮೇಲೆ ವಾಸಿಸುವ ಪ್ರತಿ ಜೀವಿಗಳಿಗೂ ಜೀವಿಸುವ ಹಕ್ಕು ಇದೆ. ಜೀವಿಗಳೆಲ್ಲವೂ ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ ಪರಸ್ಪರ ಒಂದರ ಮೇಲೊಂದು ಅವಲಂಬಿಸಿರುತ್ತವೆ. ಅದಕ್ಕಾಗಿ ಪ್ರತಿ ಜೀವಿಯನ್ನು ರಕ್ಷಸುವುದು ನಮ್ಮ ಕರ್ತವ್ಯ. ಸಸ್ಯಗಳ ಮೇಲೆ, ಪ್ರಾಣಿಗಳ ಮೇಲೆ ಮ[illegible] ಹೇಗೆ





**ಆಲೋಚಿಸಿರಿ ...**

- ಚಿತ್ರದಲ್ಲಿ ಯಾವ ಯಾವ ಪ್ರಾಣಿಗಳು, ಪಕ್ಷಿಗಳು ಕಾಣಿಸುತ್ತಿವೆ.
- ಕೆರೆಯಲ್ಲಿ ಯಾವ ಯಾವ ಪ್ರಾಣಿಗಳನ್ನು ಕಂಡಿರಿ ?
- ಇಷ್ಟೊಂದು ಬಗೆಯ ಪ್ರಾಣಿಗಳನ್ನು, ಪಕ್ಷಿಗಳನ್ನು ನೀವು ಎಂದಾದರು ನೋಡಿರುವಿರಾ? ಎಲ್ಲಿ?
- ಇಂತಹ ಪ್ರಾಣಿಗಳ ನಿಮ್ಮ ಪರಿಸರದಲ್ಲಿ ಕಂಡ ಸಂದರ್ಭಗಳನ್ನು ಬರೆಯಿರಿ ?
- ಇಷ್ಟು ವಿಧವಿಧದ ಪ್ರಾಣಿಗಳು ಈಗಲೂ ಇವೆಯಾ ? ಏನಾಗಿವೆ ?

ಆಧಾರಪಟ್ಟಿದ್ದಾರೆಂಬುದನ್ನು ತರಗತಿಯಲ್ಲಿ ಚರ್ಚಿಸಿರಿ. ಮಾನವರು ಆಲೋಚನೆ ಇಲ್ಲದೆ ಕಾಡನ್ನು ಕಡಿಯುವುದು, ಪ್ರಾಣಿಗಳನ್ನು ಬೇಟೆಯಾಡುವುದರಿಂದ ಪ್ರಕೃತಿಯಲ್ಲಿ ಸಮತೋಲನೆ ನಶಿಸಿ ಜೀವವೈವಿಧ್ಯತೆಗೆ ಭಂಗ ಉಂಟಾಗುತ್ತದೆ.

ಭೂಮಿಯ ಮೇಲರುವ ವಿವಿಧ ರೀತಿಯ ಸಸ್ಯಗಳು, ಪ್ರಾಣಿಗಳು ಒಂದರಮೇಲೊಂದು ಅವಲಂಭಿಸಿ ಜೀವಿಸಿತ್ತಿರುತ್ತವೆ. ನಮ್ಮಸುತ್ತಲೂ ಇರುವ ಸಸ್ಯಗಳು, ಪ್ರಾಣಿಗಳು, ಪಕ್ಷಿಗಳು, ಬೆಟ್ಟಗಳು, ಹಳ್ಳಗಳು, ನದಿಗಳು, ಪರ್ವತಗಳು, ಸಮುದ್ರಗಳು ಜೀವಾವರಣದಲ್ಲಿ ಭಾಗಗಳಾಗಿವೆ. ಇವುಗಳು ತಮ್ಮದೇ ಆದ ಪ್ರಾಧಾನ್ಯತೆಯನ್ನು ಪಡೆದುಕೊಂಡಿವೆ.

ಈ ಭೂಮಿಯ ಮೇಲೆ ಎಲ್ಲಾ ತರಹದ ಪ್ರಾಣಿಗಳು, ಗಿಡಗಳು ಇದ್ದಂತೆಯೇ ಮಾನವನು ಸಹ ಜೀವ ವೈವಿಧ್ಯತೆಯಲ್ಲಿನ ಒಂದು ಭಾಗ. ಸಸ್ಯಗಳು, ಪ್ರಾಣಿಗಳು ಅವುಗಳ ಆವಾಸಗಳ ಜೊತೆಗೆ ಆಹಾರ ಅಭ್ಯಾಸದಲ್ಲಿ, ಶರೀರ ನಿರ್ಮಾಣದಲ್ಲಿಯು ಒಂದು ವಿಧವಾದ ವಿಶಿಷ್ಟತೆಯನ್ನು ಹೊಂದಿರುತ್ತವೆ. ಆ ವಿಶಿಷ್ಟತೆ ವೈವಿಧ್ಯತೆಯನ್ನು ತಿಳಿಸುವುದು.

**ಹೀಗೆ ಮಾಡಿರಿ :**



- ನಿಮ್ಮ ಗ್ರಾಮದಲ್ಲಿ ಯಾವುದಾದರೂ ಒಂದು ಪ್ರದೇಶವನ್ನು ಆಯ್ಕೆಮಾಡಿಕೊಳ್ಳಿರಿ. ಅಲ್ಲಿರುವ ಸಸ್ಯಗಳು, ಪ್ರಾಣಿಗಳು, ನೀರಿರುವ ಪ್ರದೇಶಗಳು, ಗುಡ್ಡಗಳಂತಹವು ಏನೇನಿವೆಯೋ ಪರಿಶೀಲಿಸಿ ಬರೆಯಿರಿ.
- ಜೀವ ವೈವಿಧ್ಯತೆ ಅಂದರೆ ನೀವು ಏನೆಂದು ಕೊಂಡಿರುವಿರೋ ಬರೆಯಿರಿ.
- ನಿಮ್ಮ ಪ್ರಾಂತದಲ್ಲಿ, ಒಂದು (ಹಿಂದಿನ) ಕಾಲದಲ್ಲಿ ಇದ್ದು, ಈಗ ಇಲ್ಲದಂತಹ ಸಸ್ಯಗಳು, ಪ್ರಾಣಿಗಳಾವುವು ? ದೊಡ್ಡವರನ್ನು ಕೇಳಿ ಬರೆಯಿರಿ.

ಜೀವ ವೈವಿಧ್ಯತೆಯ ಭಾಗವಾದ ವಿವಿಧ ಜೀವರಾಶಿಗಳು ಒಂದರಮೇಲೊಂದು ಪ್ರಭಾವ ಬೀರುತ್ತವೆ. ಜೀವ ವೈವಿಧ್ಯತೆ ನೀರು, ಗಾಳಿ, ಆಹಾರ, ನಿವಾಸ ಈ ರೀತಿಯಾಗಿ ಪ್ರತಿ ವಿಷಯದಲ್ಲೂ ಜೀವಿಗಳು ಒಂದರಮೇಲೊಂದು ಆಧಾರಪಟ್ಟಿರುತ್ತವೆ. ಕಲುಷಿತ ವಾಯುಗಳಾದ ಕಾರ್ಬನ್ ಡೈ ಆಕ್ಸೈಡ್, ಕಾರ್ಬನ್ ಮೋನಾಕ್ಸೈಡ್ ಮೊದಲಾದವುಗಳು ವಾತಾವರಣದಲ್ಲಿನ ಬದಲಾವಣೆಗೆ ಕಾರಣವಾಗುತ್ತಿವೆ. ಇವು ಜೀವ ವೈವಿಧ್ಯತೆಗೆ ಹಾನಿ ಉಂಟುಮಾಡುತ್ತಿವೆ. ಗಾಳಿ, ನೀರು, ಉಷ್ಣೋಗ್ರತೆ, ಸಮುದ್ರ ಜೀವಿಗಳು, ಸಮುದ್ರ ನೀರಿನ ಮಟ್ಟ ಮೊದಲಾದವುಗಳು ಪ್ರಭಾವಿತಗೊಳ್ಳುತ್ತಿವೆ. ಬಹಳ ಜೀವರಾಶಿಗಳು ವಾತಾವರಣದಲ್ಲಿ ಉಂಟಾಗುವ ಆಕಸ್ಮಿಕ ಬದಲಾವಣೆಯ ಪರಿಣಾಮವಾಗಿ ಕಣ್ಮರೆಯಾಗುತ್ತಿವೆ.

ನಾಗರೀಕತೆ, ನಗರೀಕರಣ, ಕೈಗಾರಿಕೆಗಳ ಸ್ಥಾಪನೆಯಿಂದ ಬಹಳಷ್ಟು ಗಿಡ, ಸಸಿ, ಪ್ರಾಣಿ, ವನ್ಯ ಪ್ರಾಣಿಗಳು ಕಣ್ಮರೆಯಾಗುತ್ತಿವೆ. ಜೀವ ರಾಶಿಗಳು ಕಣ್ಮರೆಯಾಗುತ್ತಿವೆ. ಜೀವವೈವಿಧ್ಯತೆಯಲ್ಲಿ ಅಸಮತೋಲನೆ ಉಂಟಾಗುತ್ತಿದೆ.

**ಗುಂಪಿನಲ್ಲಿ ಚರ್ಚಿಸಿರಿ :**



- ವಿಧ ವಿಧದ ಸಸ್ಯಗಳು ನಾಶವಾಗುತ್ತಿದ್ದರೆ ಉಂಟಾಗುವ ನಷ್ಟಗಳೇನು ? ಜಲವಾಸಿಗಳು ಯಾವ ರೀತಿಯಲ್ಲಿ ಕಣ್ಮರೆಯಾಗುತ್ತಿವೆ ?
- ಜೀವ ವೈವಿಧ್ಯತೆಯನ್ನು ರಕ್ಷಿಸಲು ನೀವೇನು ಮಾಡಬಲ್ಲಿರಿ ಬರೆಯಿರಿ ?
- ಅರಣ್ಯಗಳು ಕಡಿಮೆಯಾಗುತ್ತಿರುವುದರಿಂದ ಜೀವ ವೈವಿಧ್ಯತೆಗೆ ಉಂಟಾಗುವ ನಷ್ಟಗಳೇನು?
- ಅರಣ್ಯಗಳನ್ನು ಬೆಳೆಸಲು ನೀವೇನು ಮಾಡುವಿರಿ ?

ಈ ಭೂಮಿ ಎಲ್ಲಾ ಪ್ರಾಣಿಗಳಿಗೆ ಸಂಬಂಧಿಸಲ್ಪಟ್ಟಿದೆ. ಈ ಪ್ರಾಣಿಗಳೆಲ್ಲ ಅವುಗಳ ಸುತ್ತಲಿರುವ ಪರಿಸರದ ಮೇಲೆ ಆಧಾರಪಡುತ್ತವೆ. ಗುಡ್ಡಗಳು, ಕೆರೆಗಳು, ಹಳ್ಳಗಳು, ಸಮುದ್ರಗಳು ಮೊದಲಾದವುಗಳ ಅವುಗಳ ಸಹಜ ಸ್ಥಿತಿಯಲ್ಲಿ ಬದಲಾವಣೆ

SCERT TELANGANA

ಉಂಟಾಗುವಂತೆ ಮಾನವನು ಪ್ರವರ್ತಿಸುತ್ತಿದ್ದಾನೆ. ಹೀಗೆ ಮಾಡುವುದರಿಂದ ಭೂಮಿಯ ಮೇಲಿರುವ ಎಲ್ಲಾ ಪ್ರಾಣಿಗಳು ಕಣ್ಮರೆಯಾಗುತ್ತಿವೆ.

ಎಲ್ಲಾ ಜೀವಿಗಳಿಗೆ ಜೀವಿಸುವ ಹಕ್ಕು ಇದೆ. ಇದನ್ನು ರಕ್ಷಿಸಬೇಕು. ಜೀವ ವೈವಿಧ್ಯತೆಯನ್ನು ರಕ್ಷಿಸಲು ಸಸ್ಯಗಳನ್ನು ಬೆಳೆಸುವುದು, ಪ್ರಾಣಿಗಳ ಬಗ್ಗೆ ಕರುಣೆ ತೋರುವುದು, ಪ್ರಕೃತಿ ಸಂಪತ್ತನ್ನು ನಾಶ ಮಾಡದಂತೆ ನೋಡಿಕೊಳ್ಳಬೇಕು. ಜೀವ ವೈವಿಧ್ಯತೆಯನ್ನು ರಕ್ಷಿಸಿದಾಗಲೇ ಮನುಷ್ಯನ ಏಳಿಗೆ (ಅಭಿವೃದ್ಧಿ) . ಇಲ್ಲದಿದ್ದರೆ ಬದುಕು ಕಷ್ಟವಾಗುತ್ತದೆ.

### 4.5.1. ಕಣ್ಮರೆಯಾಗುತ್ತಿರುವ ಸಂಪತ್ತು :



ನಿಮಗೆ ಡೈನೋಸಾರ್‌ಗಳ ಬಗ್ಗೆ ಗೊತ್ತೆ ? ಅವು ಪ್ರಸ್ತುತ ಭೂಮಿಯ ಮೇಲೆ ನೋಡಲು ಸಾಧ್ಯವಿಲ್ಲ, ಹಾಗೆಯೇ ಎಷ್ಟೋ ಸಾವಿರ ಪ್ರಾಣಿಗಳು, ಪಕ್ಷಿಗಳು, ಕೀಟಗಳು ಸಹ ಕಣ್ಮರೆಯಾಗುತ್ತಿವೆ. ಒಂದಾನೊಂದು ಕಾಲದಲ್ಲಿ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಹುಲಿಗಳು, ಸಿಂಹಗಳಂತಹ ಪ್ರಾಣಿಗಳು ಅರಣ್ಯಗಳಲ್ಲಿ ಕೆಲವು ಸಾವಿರ ಸಂಖ್ಯೆಯಲ್ಲಿ ಇರುತ್ತಿದ್ದವು. ಬರಬರುತ್ತಾ ಅರಣ್ಯಗಳು ನಶಿಸುತ್ತಿರುವುದರಿಂದ ಅವುಗಳ ಇರುವಿಕೆಗೆ ಧಕ್ಕೆ ಉಂಟಾಗಿದೆ. ಇವುಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಅಡಿವಿಗಳನ್ನು ಕಡಿಯುವು

**ಹೀಗೆ ಮಾಡಿರಿ :**

ನಿಮ್ಮ ಗ್ರಾಮದಲ್ಲಿಯ ದೊಡ್ಡವರನ್ನು ವಿಚಾರಿಸಿ, ಹಿಂದಿನ ಕಾಲದಲ್ಲಿ ಇದ್ದು, ಪ್ರಸ್ತುತ ನಿಮ್ಮ ಗ್ರಾಮದಲ್ಲಿ ಕಾಣಿಸದಂತಹ ಪ್ರಾಣಿಗಳು, ಪಕ್ಷಿಗಳು, ಕೀಟಗಳ ವಿವರಗಳನ್ನು ಸಂಗ್ರಹಿಸಿರಿ.

| ಕಣ್ಮರೆಯಾಗುತ್ತಿರುವ ಪ್ರಾಣಿಗಳು | ಪಕ್ಷಿಗಳು | ಕೀಟಕಗಳು |
|---|---|---|
| | | |

ದರಿಂದ ಏನಾಗುತ್ತದೆ ಇದರ ಪ್ರಭಾವ ಯಾವ ಅಂಶಗಳ ಮೇಲೆ ಆಗುತ್ತದೆ.



ಈ ಚಿತ್ರದಲ್ಲಿರುವ ಪ್ರಾಣಿಗಳು ಶಾಶ್ವತವಾಗಿ ಕಣ್ಮರೆಯಾಗಿ ಹೋಗಲು ಸಿದ್ದವಾಗಿವೆ. ಮಾನವನ ವಿಚಕ್ಷಣಾರಹಿತ ಕ್ರಿಯೆಗೆ ಸಸ್ಯಗಳು, ಪ್ರಾಣಿಗಳು ಕಣ್ಮರೆಯಾಗಲು ಕಾರಣ. ಇಂತಹ ವಿನಾಶದ ಅಂಚಿನಲ್ಲಿರುವ ಪ್ರಾಣಿಗಳನ್ನು ಪಕ್ಷಿಗಳನ್ನು ಸಂರಕ್ಷಿಸಲು ಸರ್ಕಾರ ಅಭಯಾರಣ್ಯಗಳು, ನಿವಾರಣಾ ಕ್ರಮವನ್ನು ಕೈಗೊಂಡಿದೆ. ಇವುಗಳನ್ನು ನಮ್ಮ ಸಂಪತ್ತನ್ನಾಗಿ ರಕ್ಷಿಸಿಕೊಳ್ಳಬೇಕು.



SCERT TELANGANA

**ಕಠಿಣ ಪದಗಳು :**

| | | |
|---|---|---|
| 1 ಜೀವನ ವಿಧಾನ | 5 ವೈರಿಗಳಿಂದ ರಕ್ಷಣೆ | 9 ಕೀಟಗಳು |
| 2 ಜೀವ ವೈವಿಧ್ಯತೆ | 6 ಪಕ್ಷಿಗಳ ಗೂಡುಗಳು | 10 ಸೂಕ್ಷ್ಮ ಜೀವಿಗಳು |
| 3 ಪ್ರಾಣಿಗಳ ಗುಂಪು | 7 ಪಕ್ಷಿಗಳ ನಿವಾಸಗಳು | 11 ಪರಿಶೋಧನೆ |
| 4 ರಕ್ಷಣೆ ಹೊಂದುವುದು | 8 ಸಾಮೂಹಿಕ ಜೀವನ | 12 ವಿನಾಶದ ಹಂಚು |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನ) ತಿಳುವಳಿಕೆ :



ಅ) ಯಾವುದಾದರೂ ಎರಡು ಪ್ರಾಣಿಗಳ ಜೀವನ ವಿಧಾನವನ್ನು ಬರೆಯಿರಿ.

ಆ) ಜೇಡರಹುಳ ಗೂಡಿಗೆ, ಪಕ್ಷಿ ಗೂಡಿಗೆ ನಡುವೆ ಇರುವ ವ್ಯತ್ಯಾಸಗಳನ್ನು ಬರೆಯಿರಿ.

ಇ) ಪಕ್ಷಿ ಗೂಡನ್ನು ತಯಾರಿಸಲು ಬೇಕಾದ ವಿವಿಧ ವಿಧಗಳ ಸಾಮಾಗ್ರಿಗಳನ್ನು ಬರೆಯಿರಿ.



ಈ) ಪಕ್ಷಿಗಳು, ಗೂಡುಗಳನ್ನು ಏಕೆ ನಿರ್ಮಿಸಿಕೊಳ್ಳುತ್ತವೆ ?

ಉ) ಪಕ್ಷಿಗಳ, ಪ್ರಾಣಿಗಳ ಜೀವನ ವಿಧಾನಕ್ಕೆ ಇರುವ ಹೋಲಿಕೆಗಳನ್ನು, ವ್ಯತ್ಯಾಸಗಳನ್ನು ಬರೆಯಿರಿ ?

ಊ) ಜೀವ ವೈವಿಧ್ಯತೆ ಅಂದರೇನು ? ಪ್ರಾಣಿಗಳಿಗೆ, ಪಕ್ಷಿಗಳಿಗೆ ಸಹ ಜೀವಿಸುವ ಹಕ್ಕು ಇದೆ ಎಂದು ನೀವು ಹೇಗೆ ಸಮರ್ಥಿಸುವಿರಿ ?

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ರಾಮು ಹೊಲದಲ್ಲಿನ ಗಿಡದಲ್ಲಿ ಜೇನು ಗೂಡು ಕಂಡನು. ಇನ್ನೂ ಅದರ ಬಗ್ಗೆ ತಿಳಿದುಕೊಳ್ಳಬೇಕೆಂಬ ಕೂತೂಹಲದಿಂದ ರಾಮು ಅವರ ತಂದೆಗೆ ಯಾವ ಯಾವ ಪ್ರಶ್ನೆಗಳನ್ನು ಹಾಕಿರಬಹುದು ?



### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

ಅ) ಪಕ್ಷಿ ಗೂಡಿನ ನಿರ್ಮಾಣವನ್ನು ಪರಿಶೀಲಿಸಿರಿ. ಕ್ರಮವಾಗಿ ಬರೆಯಿರಿ.

ಆ) ಪಕ್ಷಿಗಳು ಆಹಾರವನ್ನು ತೆಗೆದುಕೊಳ್ಳುವಾಗ ಪರಿಶೀಲಿಸಿರಿ. ನಿಮ್ಮ ಪರಿಶೀಲನೆಗಳನ್ನು ಬರೆಯಿರಿ.

### 4 ಸಮಾಚಾರ ಕೌಶಲ್ಯ ಪ್ರಾಜೆಕ್ಟ್‌ಗಳು :

ಅ) ವಿವಿಧ ರೀತಿಯ ಪಕ್ಷಿಗಳ ಗೂಡಿನ ಚಿತ್ರಗಳನ್ನು ಸಂಗ್ರಹಿಸಿ ಕಚ್ಚಾ ಪುಸ್ತಕವನ್ನು (Scrap Book) ತಯಾರಿಸಿರಿ.

ಆ) ನಿಮ್ಮ ಪರಿಸರದಲ್ಲಿನ ವಿವಿಧ ಪ್ರಾಣಿಗಳ / ಪಕ್ಷಿಗಳ ನಿವಾಸಗಳು, ಅವುಗಳ ನಿರ್ಮಾಣಕ್ಕೆ ಬಳಸುವ ಸಾಮಾಗ್ರಿಯ ಹೆಸರುಗಳಿಂದ ಪಟ್ಟಿಯನ್ನು ತಯಾರಿಸಿ.

SCERT TELANGANA

| ಕ್ರ.ಸಂ. | ಪಕ್ಷಿ, ಪ್ರಾಣಿಗಳ ಹೆಸರು | ನಿವಾಸದ ಹೆಸರು | ಗೂಡು ಕಟ್ಟುವುದಕ್ಕೆ ಬಳಸುವ ವಸ್ತುಗಳು |
|---|---|---|---|
| | | | |
| | | | |
| | | | |
| | | | |
| | | | |
| | | | |

**5. ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :**

ಅ) ನೀನು ಮೆಚ್ಚಿದ ಪಕ್ಷಿಗೂಡಿನ ಮಾದರಿಯನ್ನು ತಯಾರಿಸಿ, ಅದನ್ನು ಕುರಿತು ಹೇಳಿರಿ.

ಆ) ಯಾವುದಾದರೂ ಒಂದು ಪಕ್ಷಿ ಚಿತ್ರವನ್ನು ಬಿಡಿಸಿ, ಬಣ್ಣ ಹಾಕಿ, ಅದರ ಬಗ್ಗೆ ಹೇಳಿರಿ.

**6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ನವ್ಯ ಪಂಜರದಲ್ಲಿ ಗಿಳಿಯನ್ನಿಟ್ಟು ಪ್ರತಿ ದಿನವು ಹಣ್ಣುಗಳನ್ನು ತಿನಿಸುವಳು. ಈ ರೀತಿಯಾಗಿ ಪಂಜರದಲ್ಲಿಡುವುದು ಸರಿಯಾಗಿದೆಯಾ ? ಏಕೆ ? ನೀವಾಗಿದ್ದರೆ ಏನು ಮಾಡುತ್ತೀರಿ ?



ಆ) ಎಲ್ಲಾ ಜೀವಿಗಳಿಗೆ ಜೀವಿಸುವ ಹಕ್ಕು ಇದೇ ಅಲ್ಲವೇ ! ಇವನ್ನು ರಕ್ಷಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿದು ಬರುವ ಘೋಷಣೆಗಳನ್ನು ಬರೆಯಿರಿ. ಅವುಗಳನ್ನು ನಾವು ರಕ್ಷಿಸಿಕೊಳ್ಳಲು ಏನೇನು ಮಾಡಬಹುದು ಸೂಚಿಸಿರಿ.

## ನಾನು ಇವುಗಳನ್ನು ಮಾಡಬಲ್ಲೆನಾ ?

1 ಪಕ್ಷಿಗಳು, ಪ್ರಾಣಿಗಳ ಜೀವನ ವಿಧಾನವನ್ನು ವಿವರಿಸಬಲ್ಲೆ. ಹೌದು / ಇಲ್ಲ

2 ಪಕ್ಷಿಗಳ, ಪ್ರಾಣಿಗಳ ಜೀವನ ವಿಧಾನಗಳ ಬಗ್ಗೆ ಹೇಳಬಲ್ಲೆ. ಹೌದು / ಇಲ್ಲ

3 ಪ್ರಾಣಿಗಳ ನಿವಾಸಗಳ ಚಿತ್ರಗಳನ್ನು ಬಿಡಿಸಿ ಅಥವಾ ಪಕ್ಷಿಗಳ ನಿವಾಸಗಳ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಬಲ್ಲೆ ಹೌದು / ಇಲ್ಲ

4 ಪಕ್ಷಿಗಳ ಗೂಡುಗಳ ಚಿತ್ರಗಳಿಂದ ಕಚ್ಚಾ ಪುಸ್ತಕವನ್ನು (Scrap Book) ತಯಾರಿಸಿ ಪ್ರದರ್ಶಿಸಬಲ್ಲೆ. ಹೌದು / ಇಲ್ಲ

5 ಪಕ್ಷಿಗಳ, ಪ್ರಾಣಿಗಳ ಬಗ್ಗೆ ಕರುಣೆಯಿಂದ ವ್ಯವಹಿಸಬಲ್ಲೆ. ಹೌದು / ಇಲ್ಲ

SCERT TELANGANA

# 5  ನಮ್ಮ ಸುತ್ತಲೂ ಇರುವ ಸಸ್ಯಗಳು

ನಮ್ಮ ಸುತ್ತಮುತ್ತಲೂ ಹಲವಾರು ಸಸ್ಯಗಳು, ಮರಗಳು ಇವೆ. ಅವುಗಳನ್ನು ನೋಡಲು ಬಹಳ ಆಹ್ಲಾದಕರವಾಗಿರುತ್ತದೆ. ಭೂಮಿಯ ಮೇಲೆ ಮಾನವರು, ಪ್ರಾಣಿಗಳಂತೆಯೇ ಗಿಡಮರಗಳೂ ಸಹ ಇವೆ. ಇವುಗಳಲ್ಲಿ ಕೆಲವು ಚಿಕ್ಕವು, ಕೆಲವು ದೊಡ್ಡವು. ಇನ್ನೂ ಕೆಲವು ಬಹಳ ದೊಡ್ಡದಾಗಿರುವುವು. ಗಿಡಮರಗಳಲ್ಲಿ ಅನೇಕ ವಿಧಗಳಿವೆ.

**ಕೆಳಗಿನ ಚಿತ್ರಗಳನ್ನು ನೋಡಿರಿ. ಯಾವ ಯಾವ ಮರಗಳಿವೆಯೋ ಹೇಳಿರಿ.**



SCERT TELANGANA

ಮೊದಲಿನ ಪುಟದಲ್ಲಿ ಕೊಟ್ಟಿರುವ ಚಿತ್ರಗಳನ್ನು ನೋಡಿದ್ದೀರಲ್ಲವೆ ! ಅವುಗಳಲ್ಲಿ ಕೆಲವು ಎತ್ತರವಾಗಿ ಬೆಳೆಯುವ ಮರಗಳಿವೆ. ಇನ್ನೂ ಕೆಲವು ಚಿಕ್ಕ ಚಿಕ್ಕ ಪೊದೆಗಳಾಗಿ, ಗುಂಪಾಗಿ ಬೆಳೆಯುವವೂ ಇವೆ. ಇನ್ನೂ ಕೆಲವು ಬಳ್ಳಿಗಳಾಗಿ ಬೆಳೆಯುತ್ತವೆ. ಇದರಂತೆಯೇ ಇನ್ನೂ ಕೆಲವನ್ನು ನಿಮ್ಮ ಸುತ್ತಮುತ್ತಲಲ್ಲಿ ನೋಡಿರುವಂತಹವುಗಳನ್ನು ಬರೆಯಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಯಾವ ಯಾವ ಸಸ್ಯಗಳು / ಮರಗಳು ಇವೆ. ಎಲ್ಲವೂ ಒಂದೇ ರೀತಿಯಾಗಿ ಇವೆಯೇ ? ಯಾವ ಯಾವ ವ್ಯತ್ಯಾಸಗಳಿವೆ ?
- ಬಳ್ಳಿಯಾಗಿ ಬೆಳೆಯುವವು ಯಾವುವು ? ಗುಂಪಾಗಿ ಬೆಳೆಯುವವು ಯಾವುವು ? ಎತ್ತರವಾಗಿ ಬೆಳೆಯುವವು ಯಾವುವು ? ಇವುಗಳನ್ನು ಏನೆಂದು ಕರೆಯುವರು ಗೊತ್ತೆ?

## 5.1. ಬಳ್ಳಿಗಳು, ಪೊದೆಗಳು, ಮರಗಳು :



ಹೀರೇಕಾಯಿ, ಹಾಗಲಕಾಯಿ, ಮಲ್ಲಿಗೆ ಸಸ್ಯಗಳ ಕಾಂಡಗಳು ಬಲಹೀನವಾಗಿಯೂ, ಚಪ್ಪರದ ಅಥವಾ ಮರಗಳನ್ನು ಆಧಾರವಾಗಿಟ್ಟುಕೊಂಡು ಬೆಳೆಯುತ್ತವೆ. ಇವುಗಳನ್ನು ಬಳ್ಳಿಗಳು ಎಂದು ಕರೆಯುತ್ತಾರೆ. ಸೇವಂತಿಗೆ, ಮೆಣಸಿನಕಾಯಿ, ಗುಲಾಬಿಗಳು ಪೊದೆಗಳಾಗಿ ಬೆಳೆಯುವವು. ಇವುಗಳ ಬುಡದ ಭಾಗದಿಂದ ಹೆಚ್ಚಿನ ಕೊಂಬೆಗಳು ಗುಂಪಾಗಿ ಬೆಳೆಯುತ್ತವೆ. ಇವುಗಳನ್ನು ಪೊದೆಗಳು ಎನ್ನುವರು. ಹುಣಿಸೆ, ಆಲದಮರ, ಮಾವಿನ ಮರಗಳು ದೊಡ್ಡದಾಗಿಯೂ, ವಿಶಾಲವಾಗಿಯೂ ಬೆಳೆಯುತ್ತವೆ. ಇವುಗಳ ಕಾಂಡವು ದೃಢವಾಗಿ, ಉದ್ದವಾಗಿ ಇರುವುದರಿಂದ ನಮಗೆ ಬೇಕಾದ ಸೌದೆಗಳ ಇವುಗಳಿಂದ ಲಭಿಸುತ್ತವೆ. ಇವುಗಳು ನೆರಳನ್ನು ಕೊಡುತ್ತವೆ. ಇವುಗಳನ್ನು ಮರಗಳು ಎನ್ನುತ್ತಾರೆ.





ಪೊದೆಗಳು, ಬಳ್ಳಿಗಳು, ಮರಗಳ ಬಗ್ಗೆ ತಿಳಿದಿದ್ದೀರಿ. ಅಲ್ಲವೇ! ಇವುಗಳಿಗೆ ಎರಡು ಅಥವಾ ಮೂರು ಉದಾಹರಣೆಗಳನ್ನು ಪಟ್ಟಿಯಲ್ಲಿ ಬರೆಯಿರಿ.

| ಬಳ್ಳಿಗಳು | ಪೊದೆಗಳು | ಮರಗಳು |
|---|---|---|
| | | |

## 5.2 ಸಸ್ಯಗಳು - ಅವುಗಳ ಭಾಗಗಳು :

ನಮ್ಮ ಸುತ್ತಲೂ ಪೊದೆಗಳು, ಬಳ್ಳಿಗಳು, ಮರಗಳೂ ಇವೆ. ಅವುಗಳಲ್ಲಿ ಹೂಗಳನ್ನು ಒದಗಿಸುವ, ಸೌದೆಯನ್ನು ನೀಡುವ, ಇನ್ನೂ ಕೆಲವು ಹಣ್ಣು ಕಾಯಿಗಳನ್ನು ನೀಡುವಂತಹವುಗಳು ಆಗಿವೆ.

ಹಾಗಾದರೇ, ಅವುಗಳಲ್ಲಿ ಯಾವ ಯಾವ ಭಾಗಗಳು ಇರುತ್ತವೆಯೋ ? ಗೊತ್ತೇ ?

SCERT TELANGANA

ಕೆಳಗಿನ ಸಸ್ಯವನ್ನು ಗಮನಿಸಿರಿ.



ಸಸ್ಯಗಳಲ್ಲಿ ಸಾಧಾರಣವಾಗಿ, ಬೇರುಗಳು, ಕಾಂಡ, ಎಲೆಗಳು, ಹೂಗಳು, ಹಣ್ಣು ಕಾಯಿಗಳು ಇರುತ್ತವೆ. ಇವುಗಳಲ್ಲಿ ಬೇರುಗಳು ಭೂಮಿಯ ಕೆಳಗೆ ಇರುತ್ತವೆ.

ಸಸ್ಯಗಳ ಭಾಗಗಳನ್ನು ಗಮನಿಸಿದ್ದೀರಲ್ಲವೇ ? ಸಸ್ಯದ ಯಾವ ಭಾಗವು, ಯಾವ ವಿಧವಾಗಿ ಉಪಯೋಗವಾಗುತ್ತವೆಯೋ ತಿಳಿಯೋಣ.

ಪಕ್ಕದಲ್ಲಿರುವ ಸಸ್ಯವನ್ನು ನೋಡಿದ್ದೀರಲ್ಲವೇ ? ಈ ಸಸ್ಯದಲ್ಲಿ ಏನೇನು ಕಂಡು ಬರುತ್ತವೆ ? ಇದರಲ್ಲಿ ಯಾವ ಯಾವ ಭಾಗಗಳು ಇರುತ್ತವೆ. ನೀವು ಗಮನಿಸುವ ಭಾಗಗಳಲ್ಲಿ ಭೂಮಿಯ ಮೇಲೆ ಇರುವ ಭಾಗಗಳು ಯಾವುವು ? ಭೂಮಿಯ ಕೆಳಗಡೆ ಇರುವ ಭಾಗಗಳು ಯಾವುವು ? ಬರೆಯಿರಿ.

**ಹೀಗೆ ಮಾಡಿರಿ :**

ನಿಮ್ಮ ಪಾಠಶಾಲೆ ಆವರಣದಲ್ಲಿ ಹೂ ಇರುವ ಒಂದು ಸಸ್ಯವನ್ನು ಸಂಗ್ರಹಿಸಿ ಪರಿಶೀಲಿಸಿರಿ.

ನೀವು ನೋಡಿದ ಸಸ್ಯವನ್ನು, ಚಿತ್ರದಲ್ಲಿರುವ ಸಸ್ಯದೊಂದಿಗೆ ಹೋಲಿಕೆ ಮಾಡಿರಿ. ಈ ಸಸ್ಯದಲ್ಲಿಯೂ ಸಹ ಚಿತ್ರದಲ್ಲಿರುವ ಸಸ್ಯದಲ್ಲಿ ಇರುವ ಭಾಗಗಳೇ ಇರುತ್ತವೆಯೇ ? ಬೇರೆ ಯಾವ ಸಸ್ಯಕ್ಕಾದರೂ ಇಂತಹ ಭಾಗಗಳೇ ಇರುತ್ತವೆಯೇ ? ನಿಮ್ಮ ಸ್ನೇಹಿತರು ಸಹ ನಿಮ್ಮಂತೆ ಗಮನಿಸಿದ್ದಾರೆ ಅಲ್ಲವೇ! ಅವರೊಂದಿಗೆ ಮಾತನಾಡಿರಿ. ಸಸ್ಯಗಳಲ್ಲಿ ಯಾವ ಯಾವ ಭಾಗಗಳಿರುತ್ತವೆಯೋ ಹೇಳಿರಿ.

### 5.2.1. ಬೇರುಗಳು :

ಸಸ್ಯಗಳಿಗೆ ಬೇರುಗಳಿರುತ್ತವೆ ಎಂದು ತಿಳಿದಿದ್ದೀರಲ್ಲವೇ ! ನೀವು ಒಬ್ಬೊಬ್ಬರೂ ಭತ್ತ, ಜೋಳ, ಮೆಣಸಿನಕಾಯಿ, ಹತ್ತಿ ಸಸ್ಯಗಳನ್ನು ಬೇರಿನೊಂದಿಗೆ ಸಂಗ್ರಹಿಸಿರಿ. ಅವುಗಳ ಬೇರುಗಳನ್ನು ಪರಿಶೀಲಿಸಿ ಚಿತ್ರಗಳನ್ನು ಬರೆಯಿರಿ. ಈ ಸಸ್ಯಗಳ ಬೇರುಗಳಲ್ಲಿನ ವ್ಯತ್ಯಾಸವನ್ನು ಗಮನಿಸಿದಿರಾ? ಯಾವ ರೀತಿಯ ವ್ಯತ್ಯಾಸಗಳು ಕಂಡು ಬರುತ್ತವೆ.

| | | | |
|---|---|---|---|
| ಭತ್ತದ ಸಸ್ಯದ ಬೇರು | ಜೋಳದ ಸಸ್ಯದ ಬೇರು | ಮೆಣಸಿನ ಸಸ್ಯದ ಬೇರು | ಹತ್ತಿಗಿಡದ ಸಸ್ಯದ ಬೇರು |

SCERT TELANGANA

ಹೇಮಂತ್, ಅವರ ಮನೆಯ ಹಿತ್ತಲಿನಲ್ಲಿ ಇರುವ ಬೇವಿನ ಮರದ ಬೇರುಗಳು ಮನೆಯ ಗೋಡೆಯವರೆಗೂ ಇರುವುದನ್ನು ಗಮನಿಸಿ ಆಶ್ಚರ್ಯ ಗೊಂಡನು. ಹೇಮಂತನಿಗೆ ಕೆಲವು ಸಂದೇಹಗಳು ಬಂದವು. ನಿಮಗೂ ಸಂದೇಹ ಉಂಟಾಗಿದಯೇ ಹಾಗದರೇ, ನಿಮ್ಮ ಮಿತ್ರರೊಂದಿಗೆ ಜೊತೆಗೂಡಿ ಚರ್ಚಿಸಿರಿ.



**ಗುಂಪಿನಲ್ಲಿ ಚರ್ಚಿಸಿರಿ.**



- ಅಷ್ಟು ಆಳದವರೆಗೂ ಬೇರುಗಳು ಹೇಗೆ ಹೋಗಿರುತ್ತವೆ ?
- ಮರಕ್ಕೆ ಹೇಗೆ ನೀರು ಲಭಿಸುತ್ತದೆ ?
- ರಸ್ತೆ ಪಕ್ಕದಲ್ಲಿರುವ ಮರಗಳಿಗೆ, ಕಾಡಿನಲ್ಲಿ ರುವ ಮರಗಳಿಗೆ ನೀರು ಹೇಗೆ ಲಭಿಸುತ್ತದೆ?

ಬೇರುಗಳು ಯಾವುದಕ್ಕೆ ಉಪಯೋಗವಾಗುತ್ತವೆ ಎಂದು ನಿಮಗೆ ಗೊತ್ತೇ ? ಭೂಮಿಯ ಒಳಗೆ ಇರುವ ಭಾಗವನ್ನು ಬೇರುಗಳು ಎನ್ನುವರು. ಮನೆಗೆ ಬುನಾದಿಯು ಹೇಗೆ ರಕ್ಷಣೆಯನ್ನು ಕೊಡುತ್ತದೆಯೋ, ಬೇರುಗಳು ಕೂಡ ಭೂಮಿಯ ಒಳಗೆ ಇದ್ದು ಸಸ್ಯಗಳು ನೇರವಾಗಿ ಇರಲು ಸಹಕರಿಸುತ್ತದೆ. ಬೇರುಗಳ ಮೂಲಕ ಸಸ್ಯಗಳು ನೀರು, ಪೋಷಕಾಂಶಗಳನ್ನು ಗ್ರಹಿಸುತ್ತವೆ.

### 5.2.2 ಕಾಂಡ :

ಭೂಮಿಯ ಮೇಲೆ ಇರುವ ಸಸ್ಯದ ಭಾಗವನ್ನು ಕಾಂಡ ಎನ್ನುತ್ತಾರೆ. ಈ ಕಾಂಡದ ಮೇಲೆ ಕೊಂಬೆಗಳು, ರೆಂಬೆಗಳು, ಎಲೆಗಳು, ಹೂಗಳು, ಕಾಯಿಗಳು ಹಾಗೂ ಇನ್ನಿತರ ಭಾಗಗಳು ಏರ್ಪಡುತ್ತವೆ. ಎಲ್ಲಾ ಸಸ್ಯಗಳಲ್ಲಿ ಕಾಂಡವು ಒಂದೇ ರೀತಿಯಾಗಿರುತ್ತದೆಯೇ ?

**ಹೀಗೆ ಮಾಡಿರಿ :**

ನಿಮ್ಮ ಸುತ್ತಮುತ್ತಲೂ ಇರುವ ಸಸ್ಯಗಳನ್ನು ಪರಿಶೀಲಿಸಿರಿ. ಅವುಗಳ ಕಾಂಡಗಳು ಹೇಗೆ ಇರುತ್ತವೆ ? ನೀವು ಪರಿಶೀಲಿಸಿರುವ ಅಂಶಗಳನ್ನು ಪಟ್ಟಿಯಲ್ಲಿ ಬರೆಯಿರಿ. ಸರಿಯಾದ ಜಾಗದಲ್ಲಿ "✓" ಗುರುತನ್ನು ಹಾಕಿರಿ.

| ಕ್ರ.ಸಂ. | ಸಸ್ಯದ ಹೆಸರು | ಚಿಕ್ಕದಾಗಿ | ಮೃದುವಾಗಿ | ದೃಢವಾಗಿ | ಟೊಳ್ಳಾಗಿ | ಬಳ್ಳಿಯಾಗಿ | ಮುಳ್ಳು ಇರುವ | ಕಾಂಡದ ಬಣ್ಣ |
|---|---|---|---|---|---|---|---|---|
| 1. | | | | | | | | |
| 2. | | | | | | | | |
| 3. | | | | | | | | |

ನೀವು ನಿಮ್ಮ ಪರಿಸರದಲ್ಲಿರುವ ನಾಲ್ಕೈದು ಸಸ್ಯಗಳನ್ನು ಪರಿಶೀಲಿಸಿದ್ದೀರಲ್ಲವೇ ? ಇವುಗಳ ವಿವರಗಳ ಮೂಲಕ ನೀವೇನು ತಿಳಿದುಕೊಂಡಿದ್ದೀರಿ. ನಿಮ್ಮ ಹಾಗೆಯೇ ನಿಮ್ಮ ಸ್ನೇಹಿತರು ಸಹ ವಿವರಗಳನ್ನು ಸಂಗ್ರಹಿಸಿರುತ್ತಾರೆ. ನಿಮ್ಮ ಸ್ನೇಹಿತರ ಜೊತೆಗೆ ಗುಂಪಾಗಿ ಚರ್ಚಿಸಿರಿ.

SCERT TELANGANA

## ಗುಂಪಿನಲ್ಲಿ ಚರ್ಚಿಸಿರಿ.



- ಮೇಲಿನವುಗಳಲ್ಲಿ ತೊಗಟೆಯನ್ನು ಹೊಂದಿರುವ ಸಸ್ಯಗಳು ಯಾವು ? ಅವುಗಳ ತೊಗಟೆಯ ಬಣ್ಣ ಯಾವುದು ?
- ಮೃದು ಕಾಂಡ ಹೊಂದಿರುವ ಬಳ್ಳಿಗಳು ಯಾವುವು ?
- ಧೃಢ ಕಾಂಡವನ್ನು ಹೊಂದಿ, ಮುಳ್ಳನ್ನು ಹೊಂದಿರುವ ಸಸ್ಯಗಳು ಯಾವುವು ?
- ಮೃದುವಾದ ಕಾಂಡ ಹೊಂದಿ , ಮುಳ್ಳು ಇರುವ ಸಸ್ಯಗಳು ಯಾವುವು ?
- ಕಾಂಡ ಚಿಕ್ಕದಾಗಿ ಬಳ್ಳಿಯಂತೆ ಇರುವ ಸಸ್ಯಗಳು ಯಾವುವು ?
- ಕಾಂಡದಿಂದ ಸಸ್ಯಗಳಿಗೆ ಏನು ಲಾಭ ?

ಎಲ್ಲಾ ಸಸ್ಯಗಳ ಕಾಂಡಗಳು ಒಂದೇ ರೀತಿಯಾಗಿ ಇರುವುದಿಲ್ಲ. ಇನ್ನೂ ಕೆಲವು ಸಸ್ಯಗಳ ಕಾಂಡಗಳಿಗೆ ಮುಳ್ಳುಗಳು ಇರುತ್ತವೆ. ಇನ್ನೂ ಕೆಲವು ಸಸ್ಯಗಳ ಕಾಂಡಗಳು ಮೃದುವಾಗಿ ಇರುತ್ತವೆ. ಇನ್ನೂ ಕೆಲವು ಸಸ್ಯಗಳ ಕಾಂಡಗಳು ಗಡುಸಾಗಿ ಇರುತ್ತವೆ. ಕೆಲವು ಸಸ್ಯಗಳ ಕಾಂಡಗಳಿಗೆ ತೊಗಟೆ ಸಹ ಇರುತ್ತದೆ. ಸಸ್ಯಗಳ ಕಾಂಡಗಳು ಅವು ನಿಲ್ಲುವುದಕ್ಕೆ ಬಲವನ್ನು ಕೊಡುತ್ತವೆ. ಬೇರು ಹೀರಿಕೊಂಡ ನೀರು, ಪೋಷಕ ಪದಾರ್ಥಗಳನ್ನು ಸಸ್ಯದ ಎಲ್ಲಾ ಭಾಗಗಳಿಗೆ ಕಾಂಡವೇ ಸರಬರಾಜು ಮಾಡುತ್ತದೆ. ಇದನ್ನು ಕುರಿತು ಇನ್ನೂ ವಿವರವಾಗಿ ಮುಂದಿನ ತರಗತಿಯಲ್ಲಿ ತಿಳಿದುಕೊಳ್ಳೋಣ.

### 5.2.3. ಎಲೆಗಳು-ಹೂಗಳು-ಕಾಯಿಗಳು

ಸಸ್ಯಗಳಿಗೆ ಬೇರುಗಳು, ಕಾಂಡದ ಜೊತೆಗೆ ಎಲೆಗಳು, ಹೂವುಗಳು ಸಹ ಇರುತ್ತವೆ ಎಂದು ಗೊತ್ತಲ್ಲವೇ ? ಎಲೆಗಳೆಲ್ಲವೂ ಒಂದೇ ಆಕಾರ, ಬಣ್ಣ, ಗಾತ್ರವನ್ನು ಹೊಂದಿವೆಯೇ ? ಅವುಗಳು ಸಸ್ಯಗಳಿಗೆ ಯಾವ ವಿಧವಾಗಿ ಉಪಯೋಗವಾಗುತ್ತವೆಯೋ ಆಲೋಚಿಸಿರಿ.

**ಸಂಗ್ರಹಿಸಿರಿ :**

- ನಿಮ್ಮ ಸುತ್ತಲಿನ ಪರಿಸರವನ್ನು ಪರಿಶೀಲಿಸಿರಿ. ನಾಲ್ಕೈದು ವಿಧದ ಸಸ್ಯಗಳ ಎಲೆಗಳನ್ನು ಸಂಗ್ರಹಿಸಿರಿ. ಅವುಗಳ ಚಿತ್ರಗಳನ್ನು ಬರೆಯಿರಿ. ಆ ಎಲೆಗಳು ಎಲ್ಲವೂ ಒಂದೇ ವಿಧವಾಗಿವೆಯೇ? ನೋಡಿರಿ. ಏನೇನು ವ್ಯತ್ಯಾಸಗಳಿವೆಯೇ

ಸಸ್ಯಗಳಲ್ಲಿ ಆಹಾರವನ್ನು ತಯಾರು ಮಾಡುವ ಭಾಗವೇ ಎಲೆಗಳು. ಎಲೆಗಳು ಹಸಿರಾಗಿರಲು ಕಾರಣ ಅದರಲ್ಲಿರುವ ಪತ್ರಹರಿತ್ತು ಎನ್ನುವ ಪದಾರ್ಥ. ಪತ್ರಹರಿತ್ತು ಎಂಬುದು ಬಣ್ಣವನ್ನು ನೀಡುವ ಪದಾರ್ಥ. ಇದು ಎಲೆಗಳಲ್ಲಿ ಇರುವುದರಿಂದಲೇ ಎಲೆಗಳು ಹಸಿರಾಗಿರುತ್ತವೆ. ಸಸ್ಯಗಳಿಗೆ ಎಷ್ಟು ಎಲೆಗಳಿರುತ್ತವೆಯೋ ಅಷ್ಟು ಹೆಚ್ಚಿನ ಆಹಾರವನ್ನು ತಯಾರುಮಾಡಿಕೊಳ್ಳುತ್ತದೆ. ಆದುದರಿಂದ ಸಸ್ಯಗಳಿಂದ ಎಲೆಗಳನ್ನು ಕೀಳಬಾರದು. ಎಲೆಗಳನ್ನು ಕೀಳುವುದರಿಂದ ಸಸ್ಯ ಸರಿಯಾಗಿ ಬೆಳೆಯುವುದಿಲ್ಲ.

ಸೂರ್ಯನಿಂದ ಬರುವ ಬೆಳಕು ಒಂದು ವಿಧದ ಶಕ್ತಿ. ಈ ಶಕ್ತಿಯನ್ನು ಎಲೆಗಳು ಗ್ರಹಿಸಿ, ಆಹಾರವನ್ನು ತಯಾರಿಸಿಕೊಳ್ಳುತ್ತವೆ. ಈ ಸಸ್ಯಗಳು ಉತ್ಪತ್ತಿ ಮಾಡುವ ಗಡ್ಡೆ, ಬೀಜ, ಕಾಯಿ, ಮುಂತಾದವುಗಳಲ್ಲಿರುವ ಶಕ್ತಿ ಸೂರ್ಯನಿಂದ ಪಡೆದದ್ದೇ. ಈ ಗಿಡಗಳು ಉತ್ಪಾದಿಸುವ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುವುದರಿಂದ ನಮಗೆ, ಇತರೆ ಪ್ರಾಣಿಗಳಿಗೆ ಶಕ್ತಿ ದೊರೆಯುತ್ತದೆ.

**ಆಲೋಚಿಸಿರಿ...**

- **ಮಾನವರಿಗೆ, ಇತರೆ ಪ್ರಾಣಿಗಳಿಗೆ ಬರುವ ಶಕ್ತಿ ಪ್ರಾಥಮಿಕವಾಗಿ ಎಲ್ಲಿಂದ ಬಂದಿದೆ ?**
- **ಸೂರ್ಯನು ಶಕ್ತಿಯ ಒಂದು ಮೂಲ ಈ ಶಕ್ತಿಯನ್ನು ಉಪಯೋಗಿಸಕೊಳ್ಳಬೇಕಾದರೆ ನಾವು ಏನು ಮಾಡಬೇಕು?**

SCERT TELANGANA

ಸಸ್ಯಗಳ ಎಲೆಗಳ ಬಗ್ಗೆ ತಿಳಿದುಕೊಂಡಿದ್ದೀರಲ್ಲವೇ ? ಎಲೆಗಳಂತೆಯೇ? ಹಣ್ಣುಗಳು, ಕಾಯಿಗಳು, ಹೂಗಳನ್ನು ಹೊಂದಿರುತ್ತವೆ. ಕೆಳಗಿನ ಚಿತ್ರವನ್ನು ನೋಡಿರಿ. ನಿಮ್ಮ ಸ್ನೇಹಿತರೊಂದಿಗೆ ಈ ಚಿತ್ರದ ಆಧಾರವಾಗಿ ಗುಂಪಾಗಿ ಚರ್ಚಿಸಿರಿ. ಬರೆಯಿರಿ.



**ಗುಂಪಿನಲ್ಲಿ ಚರ್ಚಿಸಿರಿ.**



- ಮೇಲಿನ ಚಿತ್ರದಲ್ಲಿ ಯಾವ ಯಾವ ತರಕಾರಿಗಳು, ಹಣ್ಣುಗಳಿವೆ ?
- ಹಣ್ಣು, ತರಕಾರಿಗಳು ನಮಗೆ ಎಲ್ಲಿಂದ ಲಭಿಸುತ್ತವೆ ?
- ಸಸ್ಯಗಳು ಎಲ್ಲಿಂದ ಬರುತ್ತವೆ ?
- ಸಸ್ಯಗಳೆಲ್ಲವೂ ಬೀಜಗಳಿಂದಲೇ ಬರುತ್ತವೆಯೇ ?
- ಬೀಜಗಳು ಎಲ್ಲಿಂದ ಬರುತ್ತವೆ ?

ನಮಗೆ ಬೇಕಾಗಿರುವ ಹಣ್ಣು, ತರಕಾರಿಗಳೆಲ್ಲವು ಮರಗಳಿಂದ ಬರುತ್ತವೆ. ಇವುಗಳನ್ನು ಕೊಡುವ ಸಸ್ಯಗಳು ಬೀಜಗಳಿಂದ ಬರುತ್ತವೆ. ಬೀಜಗಳಿಗೆ ಮೂಲ ಹೂವು. ವಿವಿಧ ಬಗೆಯ 'ಹೂವುಗಳು' ಯಾವ ಯಾವ ಸಂಧರ್ಭಗಳಲ್ಲಿ ಉಪಯೋಗಿಸುತ್ತಾರೆಂದು ತಿಳಿದುಕೊಳ್ಳೋಣ.







ಹೂಗಳನ್ನು ನೋಡಿದ್ದೀರಲ್ಲವೇ ! ಈ ಹೂವುಗಳು ಅರಳುವ ಮುಂಚಿತವಾಗಿ ಹೇಗೆ ಇರುತ್ತವೆ ? ಈ ಹೂವುಗಳಿಂದ ಏನು ಮಾಡುತ್ತೇವೆ. 'ಹೂವು' ಮತ್ತು ಮೊಗ್ಗುಗಳಿಗೂ ಇರುವ ಸಂಬಂಧ ಏನು ? ಮೊಗ್ಗು ಹೂವಾಗಿ ಮಾರ್ಪಡಲು ಎಷ್ಟು ದಿನಗಳು ಬೇಕಾಗುತ್ತದೆಯೋ ನಿಮಗೆ ಗೊತ್ತೇ ? ಅದಕ್ಕಾಗಿ ಈ ಕೆಳಗಿನಂತೆ ಮಾಡಿರಿ.

**ಹೀಗೆ ಮಾಡಿರಿ :**

- ನಿಮ್ಮ ಮನೆ, ಶಾಲೆ, ಅಕ್ಕ ಪಕ್ಕದಲ್ಲಿ ಅರಳುವ 'ಹೂ'ಗಳನ್ನು ನೋಡಿರಿ.
- ಈ ಮೊಗ್ಗುಗಳು 'ಹೂ'ವಾಗಿ ಮಾರ್ಪಾಡಲು ಎಷ್ಟು ದಿನಗಳು ಬೇಕಾಗುವುದು ? ನೋಡಿರಿ.
- ನೀವು ಪರಿಶೀಲಿಸಿದ ಹೂ ಬಿಡುವ ಸಸ್ಯಗಳ ಹೆಸರುಗಳೇನು ? ಅವುಗಳ 'ಹೂ'ಗಳ ಯಾವ ಯಾವ ಬಣ್ಣದಲ್ಲಿ ಇರುತ್ತವೆ.
- ಹೂಗಳಲ್ಲಿ ಕೆಲವು ಒಂದೇ ಹೂವಾಗಿ ಅರಳುತ್ತವೆ. ಇನ್ನೂ ಕೆಲವು ಗೊಂಚಲ ಗೊಂಚಲಾಗಿ ಅರಳುತ್ತವೆ. ನೀವು ನೋಡಿದವುಗಳಲ್ಲಿ ಇಂತಹವುಗಳು ಇರುತ್ತವೆಯೇ ?
- ನೀವು ನೋಡಿದ ಹೂಗಳಲ್ಲಿ ಅಗಲವಾದ ದಳ (ಎಲೆ) ಇರುವ ಹೂವುಗಳು ಯಾವುವು ?
- 'ಹೂ' ಗಳೆಲ್ಲವು ಮಂಜಾನೆಯೇ ಅರಳುತ್ತವೆಯೇ ?
- ನೀವು ನೋಡಿದ ಸಸ್ಯಗಳಲ್ಲಿ ಕೆಲವು ಬಳ್ಳಿಯಂತೆ ಹಬ್ಬಿಕೊಂಡು, ಹೂವು ಬಿಡುವ ಸಸ್ಯಗಳು ಇವೆ. ಅವು ಯಾವುವು
- ಯಾವ ಯಾವ ಹೂವು ಯಾವ ಯಾವ ಕಾಲದಲ್ಲಿ ಅರಳುತ್ತವೆ ?
- ಮುಳ್ಳುಗಳಿರುವ ಹೂ ಸಸ್ಯಗಳು ಯಾವುವು ?

ಹೂವುಗಳನ್ನು ಕುರಿತು ನೀವು ಬಹಳ ವಿಷಯವನ್ನು ತಿಳಿದುಕೊಂಡಿದ್ದೀರಿ ಅಲ್ಲವೇ ! ಸಾಧಾರಣವಾಗಿ ಹೂವುಗಳು ಯಾವ ಕಾಲದಲ್ಲಿ ಹೆಚ್ಚಾಗಿ ಅರಳುತ್ತವೆ. ವಿವಿಧ ಬಣ್ಣಗಳಲ್ಲಿ, ವಿವಿಧ ಸುವಾಸನೆಯಿಂದ ಇರುತ್ತವೆ ಅಲ್ಲವೇ ! ಕೆಲವು ಹೂಗಳು ಚಿಕ್ಕದಾಗಿದ್ದರೇ, ಇನ್ನೂ ಕೆಲವು ಹೂಗಳು ದೊಡ್ಡದಾಗಿ ಇರುತ್ತವೆ ಅಲ್ಲವೇ ! ಕೆಲವು ಹೂಗಳು ಕಾಯಿಯಾಗಿ ಬದಲಾಗಿ ನಮಗೆ ಬೇಕಾದ ಹಣ್ಣು ತರಕಾರಿಗಳನ್ನು ಕೊಡುತ್ತವೆ. ಹೂಗಳು ತಮ್ಮ ಸೌಂದರ್ಯದಿಂದ, ಸಂತೋಷವನ್ನು ಉಂಟುಮಾಡುತ್ತವೆ. ನಮ್ಮ ಮನೆಯ ಆವರಣದಲ್ಲಿ ಇಲ್ಲವೇ ಶಾಲೆ ಆವರಣದಲ್ಲಿ, ರಸ್ತೆ ಬದಿಗಳಲ್ಲಿ ಒಳ್ಳೆ 'ಹೂ' ಮರಗಳು ಇದ್ದರೇ ನೋಡುವುದಕ್ಕೆ ಸೊಗಸಾಗಿರುತ್ತದೆ. ಈ ಹೂ ಮರಗಳ ನಡುವೆ ತಿರುಗಾಡುತ್ತಿದ್ದರೇ ನಮಗೆ ಉಲ್ಲಾಸವಾಗುತ್ತದೆ. ಹೂಗಳನ್ನು ಅಲಂಕಾರಗಳಿಗೆ, ಪೂಜೆಗಳಿಗೆ ಸಹ ಉಪಯೋಗಿಸುತ್ತಾರೆ

**ನಿಮಗೆ ಗೊತ್ತೇ ?**

ಪ್ರಪಂಚದಲ್ಲಿ ಅತಿ ದೊಡ್ಡ ಹೂವು ರಫ್ಲೀಷಿಯಾ. ಇದು 1 ಮೀ. ವ್ಯಾಸ. 4 ಕೆ.ಜಿ. ತೂಕವನ್ನು ಹೊಂದಿರುತ್ತದೆ. ಈ ಹೂ ಕೊಳೆತ ಮಾಂಸದಂತಹ ವಾಸನೆಯನ್ನು ಪಸರಿಸುತ್ತದೆ. (ಹರಡುತ್ತದೆ) ಈ ವಾಸನೆಯು 2 ಕಿ.ಮೀ. ದೂರದವರೆಗೆ ಹಬ್ಬಬಲ್ಲದು.





SCERT TELANGANA

### 5.3 ಹೂವುಗಳು - ಜೀವನಾಧಾರ



'ಹೂ'ಗಳ ಮೇಲೆ ಆಧಾರವಾಗಿ ಜೀವಿಸುವವರು ಇದ್ದಾರೆ. ಹೂಗಳಿಂದ ವ್ಯಾಪಾರವನ್ನು ಸಹ ಮಾಡುತ್ತಾರೆ. ಎಲ್ಲರ ಮನೆಗಳಲ್ಲಿ ಹೂ-ಗಿಡಗಳು ಇರುವುದಿಲ್ಲ. ಇಂತವರು ಹೂಗಳನ್ನು ಕೊಂಡುಕೊಳ್ಳುತ್ತಾರೆ. ನೀವು ಸಹ ಕೊಳ್ಳುವಿರಾ? ಹೂಗಳನ್ನು ಎಲ್ಲೆಲ್ಲಿ ಮಾರುತ್ತಾರೆ ? ಅವರಿಗೆ ಆ ಹೂಗಳು ಎಲ್ಲಿಂದ ಲಭಿಸುತ್ತವೆ ? ಮತ್ತು ಈ ವಿವರಗಳನ್ನು ತಿಳಿದುಕೊಳ್ಳಲು ಹೂಗಳನ್ನು ಮಾರುವವರ ಹತ್ತಿರ ಹೋಗಿರಿ. ಈ ಕೆಳಗಿನ ವಿವರಗಳನ್ನು ಸಂಗ್ರಹಿಸಿರಿ.

**ಸಂಗ್ರಹಿಸಿರಿ :**



- ನಿಮ್ಮ ಹೆಸರೇನು ?
- ಈ ವ್ಯಾಪಾರವನ್ನು ಎಷ್ಟು ಕಾಲದಿಂದ ಮಾಡುತ್ತಿದ್ದೀರಿ ?
- ಯಾವ ಯಾವ ಹೂಗಳನ್ನು ಮಾರುತ್ತಿರುವಿರಿ ?
- ಯಾರು, ಯಾವಾಗ ಹೂಗಳನ್ನು ಕೊಳ್ಳುತ್ತಾರೆ ? ಇವುಗಳನ್ನು ಏಕೆ ಕೊಳ್ಳುತ್ತಾರೆ?
- ಇದರಿಂದ ನಿಮಗೆ ಆದಾಯ ಎಷ್ಟು ಬರುತ್ತದೆ ?
- ಯಾವ ವೇಳೆ ಅಧಿಕ ಆದಾಯ ಬರುತ್ತದೆ ?
- ನೀವು ಮಾರುತ್ತಿರುವ ಹೂಗಳೆಲ್ಲವು ಈ ಪ್ರದೇಶದಲ್ಲಿ ದೊರೆಯುತ್ತದೆಯೇ ಇಲ್ಲವೇ ಹೊರ ರಾಜ್ಯಗಳಿಂದ ಬರುತ್ತವೆಯೇ ?
- ಆ ಹೂಗಳು ಹಾಳಾಗದಂತೆ / ಬಾಡಿ ಹೋಗದಂತೆ ಯಾವ ವಿಧವಾಗಿ ಸಂರಕ್ಷಿಸುವಿರಿ?
- ನಿಮ್ಮ ಕುಟುಂಬದಲ್ಲಿ ಯಾರು ನಿಮಗೆ ಸಹಾಯ ಮಾಡುತ್ತಾರೆ ?

ಈ ರೀತಿಯ ಪ್ರಶ್ನೆಗಳನ್ನು ನೀವು ಕೇಳಿರಿ.

**ನಿಮಗೆ ಗೊತ್ತೇ ? ಇವು ಕೂಡ ಹೂಗಳೇ :**



ಫ್ಯಾಸಿಫ್ಲೋರಾ



ಬಾಟಲ್ ಬ್ರಷ್



Bird of Paradise

SCERT TELANGANA

## 5.4 ಹೂವಿನಿಂದ ಕಾಯಿಗಳವರೆಗೆ :

ಹೂಗಳು ಕಾಯಿಯಾಗಿ ಬದಲಾಗುತ್ತವೆ. ಹೀಗೆ ಬದಲಾಗುವುದನ್ನು ನೀವು ಯಾವಾಗಾಲಾದರೂ ನೋಡಿದ್ದೀರಾ? ಹೂಗಳು ಕಾಯಿಗಳಾಗಿ ಬದಲಾಗುವ ಪದ್ಧತಿಯನ್ನು ಕುರಿತು ಕೆಳಗಿನ ಚಿತ್ರಗಳಲ್ಲಿ ಇವೆ. ಅವುಗಳನ್ನು ನೋಡಿರಿ. ಕ್ರಮಪದ್ಧತಿಯಲ್ಲಿ ಹೇಳರಿ.




ಚಿತ್ರದಲ್ಲಿ ದಾಳಿಂಬೆ ಹೂವಿನಿಂದ ಹಣ್ಣು ಏರ್ಪಡುವ ಕ್ರಮವನ್ನು ಗಮನಿಸಿದ್ದೀರಿ ಅಲ್ಲವೇ ? ನಿಮ್ಮ ಹಿತ್ತಲಲ್ಲಿ ಇರುವ ಸೀಬೆ, ಹೀರೇಕಾಯಿ, ಹಾಗಲಕಾಯಿ, ಅವರೇಕಾಯಿ ಮೊದಲಾದ ತರಕಾರಿ ಸಸ್ಯಗಳ, ಹೂವುಗಳಿಂದ ಕಾಯಿಗಳು ಏರ್ಪಡುವವರೆಗೂ ಪರಿಶೀಲಿಸಿರಿ. ಅವುಗಳ ಚಿತ್ರಗಳನ್ನು ಬರೆಯಿರಿ. ನಿಮ್ಮ ತರಗತಿಯಲ್ಲಿ ಎಲ್ಲರಿಗೂ ತೋರಿಸಿರಿ.

‘ಹೂ’ಗಳು ನಮಗೆ ಮಾತ್ರ ಉಪಯೋಗುತ್ತವೆಯೇ ? ತೋಟದಲ್ಲಿನ ‘ಹೂ’ಗಳನ್ನು ನೋಡಿದ್ದೀರಾ ? ತೋಟದಲ್ಲಿನ ಹೂವಿನ ಮೇಲೆ ಚಿಟ್ಟೆ, ಜೇನುನೊಣ ದುಂಬಿಗಳಂತಹವು ಹೂವಿನ ಮೇಲೆ ಕೂಡುತ್ತವೆ. ಅವುಗಳನ್ನು ನೀವು ಎಂದಾದರೂ ನೋಡಿದ್ದೀರಾ ? ಅವು ಹೂವುಗಳ ಮೇಲೆ ಏಕೆ ಕುಳಿತುಕೊಳ್ಳುತ್ತವೆ.

ಕೆಳಗಿನ ಚಿತ್ರವನ್ನು ನೋಡಿರಿ. ಏನೇನು ಇವೆ ? ಏನು ನಡೆಯುವುದೋ ಹೇಳಿರಿ.



ಚಿತ್ರಗಳನ್ನು ಪರಿಶೀಲಿಸಿದ್ದೀರಲ್ಲವೇ ! ಚಿಟ್ಟೆ, ಜೇನುನೊಣಗಳು, ದುಂಬಿ (ಪತಂಗೆ) ಮುಂತಾದವುಗಳು ಹೂವಿನ ಮೇಲೆ ಕುಳಿತು ಮಕರಂದವನ್ನು ಹೀರಿಕೊಳ್ಳುತ್ತವೆ. ಹೂವಿನಿಂದ ಅವು ಆಹಾರವನ್ನು ತೆಗೆದುಕೊಳ್ಳುತ್ತವೆ. ಹಾಗೆಯೇ ಇದರಿಂದ ಸಸ್ಯಗಳಿಗೂ ಸಹ ಅನುಕೂಲವಾಗುತ್ತದೆ. ಹೂಗಳು – ಹಣ್ಣುಗಳಾಗಿ ಬದಲಾಗಲು ಚಿಟ್ಟೆ ದುಂಬಿ (ಪತಂಗೆ) ಯಂತಹ ಕೀಟಗಳು ಸಹಕರಿಸುತ್ತವೆ. ಇವುಗಳನ್ನು ಕುರಿತು ನಿಮಗೆ ಮುಂದಿನ ತರಗತಿಗಳಲ್ಲಿ ತಿಳಿಯುತ್ತಿರಿ.

## 5.5. ಹಣ್ಣುಗಳು - ಬೀಜಗಳು :

ಸಸ್ಯಗಳು ಮೊಳಕೆಯೊಡೆಯಬೇಕೆಂದರೆ ಬೀಜಗಳು ಬೇಕು. ಈ ಬೀಜಗಳು ಎಲ್ಲಿಂದ ಬರುತ್ತವೆಯೋ ಗೊತ್ತೇ ? ಬೀಜಗಳು ಹೇಗೆ ಮೊಳಕೆಯೊಡುಯತ್ತವೆ ? ಬೀಜಗಳು ಹೇಗೆ ಇರುತ್ತವೆಯೋ ಗೊತ್ತೇ ? ಕೆಳಗಿನ ಚಿತ್ರಗಳನ್ನು ನೋಡಿರಿ. ನಿಮ್ಮ ಸ್ನೇಹಿತರೊಂದಿಗೆ ಗುಂಪಾಗಿ ಚರ್ಚಿಸಿರಿ.



SCERT TELANGANA

### ಗುಂಪಿನಲ್ಲಿ ಚರ್ಚಿಸಿರಿ.



- ನೀವು ತಿನ್ನುವಂತಹ ಯಾವ ಯಾವ ಹಣ್ಣುಗಳಲ್ಲಿ ಬೀಜಗಳಿರುತ್ತವೆ ? ಏಕೆ ?
- ಎಲ್ಲಾ ಹಣ್ಣುಗಳಲ್ಲಿನ ಬೀಜಗಳೆಲ್ಲವು ಒಂದೇ ವಿಧವಾಗಿ ಇರುತ್ತವೆಯೇ ?
- ಯಾವ ಹಣ್ಣುಗಳಲ್ಲಿ ಎಷ್ಟು ಬೀಜಗಳಿರುತ್ತವೆ ಗೊತ್ತೇ ?
- ಎಲ್ಲಾ ಹಣ್ಣಿನಲ್ಲಿಯೂ ಬೀಜಗಳು ಸಮಾನವಾಗಿ ಇರುತ್ತವೆಯೇ ?
- ಒಂದೇ ಬೀಜವಿರುವ ಹಣ್ಣು, ತರಕಾರಿಗಳ ಹೆಸರುಗಳನ್ನು ಬರೆಯಿರಿ ?
- ಬಹು ಬೀಜಗಳಿರುವ ಹಣ್ಣು, ತರಕಾರಿಗಳ ಹೆಸರುಗಳನ್ನು ಬರೆಯಿರಿ ?
- ಬೀಜಗಳು ಇಲ್ಲದ ಹಣ್ಣುಗಳು, ತರಕಾರಿಗಳ ಹೆಸರುಗಳನ್ನು ಬರೆಯಿರಿ ?

## 5.6. ಬೀಜಗಳೆಲ್ಲವು ಒಂದೇ ವಿಧವಾಗಿರುತ್ತವೆಯೇ ? :

ಎಲ್ಲಾ ಬೀಜಗಳು ಒಂದೇ ವಿಧವಾಗಿ ಇವೆಯೇ ? ಹಾಗೂ ಬೀಜಗಳ ಪರಿಮಾಣಕ್ಕೆ, ಸಸ್ಯಗಳ ಪರಿಮಾಣಕ್ಕೆ ಏನಾದರೂ ಸಂಬಂಧ ಇದೆಯೇ ? ಸಸ್ಯಗಳೆಲ್ಲವು ಬೀಜಗಳಿಂದಲೇ ಬರುತ್ತವೆಯೇ ? ಬೀಜವಿಲ್ಲದೇ ಬೆಳೆಯುವ ಸಸ್ಯಗಳು ನಿಮಗೆ ಗೊತ್ತೇ ? ದೊಡ್ಡ ಮರಗಳ ಬೀಜಗಳು ದೊಡ್ಡದಾಗಿವೆಯೇ ? ಆಲೋಚಿಸಿರಿ.



ಆಲದ ಮರ



ತೆಂಗಿನ ಮರ

ಮರಗಳು ಆಕಾರಕ್ಕೆ ಸಂಬಂಧವಿಲ್ಲದೆ ಬೀಜಗಳು ಕೆಲವು ಚಿಕ್ಕವಾಗಿಯೂ (ತೊಗರಿ, ಜೋಳ), ಕೆಲವು ದೊಡ್ಡದಾಗಿಯೂ ಇರುತ್ತವೆ. ಕೆಲವು ಬೀಜಗಳು ಸಿಪ್ಪೆಯನ್ನು ಹೊಂದಿವೆ. ಕೆಲವು ಮೃದುವಾಗಿ ಇರುತ್ತವೆ. ಜೋಳ, ಗೋವಿನ ಜೋಳ (ಮೆಕ್ಕೆ ಜೋಳ), ದಾಳಿಂಬೆಯಂತಹ ಸಸ್ಯಗಳು ಬಹಳ ಬೀಜಗಳನ್ನು ಕೊಡುತ್ತವೆ. ಸೇಬು, ಅವರೆಯಂತಹ ಸಸ್ಯಗಳು ಎರಡು, ನಾಲ್ಕು ಇಲ್ಲವೇ ಆರು ಬೀಜಗಳು ಹೊಂದಿರುತ್ತವೆ.

## 5.7. ಬೀಜಗಳು ಮೊಳಕೆಯೊಡೆಯುವಿಕೆ :

ಬೀಜಗಳನ್ನು ಕುರಿತು ತಿಳಿದಿದ್ದೀರಲ್ಲವೇ ? ಬೀಜಗಳು ಹೇಗೆ ಮೊಳಕೆಯೊಡೆಯುತ್ತವೆ ? ಇವುಗಳನ್ನು ಕುರಿತು ನಿಮಗೆ ಗೊತ್ತೇ ? ನೀವು ಯಾವಾಗಲಾದರೂ ಯಾವುದಾದರೂ ಬೀಜವನ್ನು ಭೂಮಿಯಲ್ಲಿ ನೆಟ್ಟಿದ್ದೀರಾ ? ಏನಾಗುತ್ತದೆ ? ಎಷ್ಟು ದಿನದಲ್ಲಿ ಮೊಳಕೆಯೊಡೆಯುತ್ತದೆ ? ನೆಟ್ಟಿರುವ ಬೀಜಗಳೆಲ್ಲವು ಮೊಳಕೆಯೊಡೆಯುತ್ತವೆಯೇ ? ಈ ವಿಷಯಗಳ ಕುರಿತು ತಿಳಿಯಲು ಈ ಕೆಳಗಿನಂತೆ ಮಾಡಿರಿ.

**ಹೀಗೆ ಮಾಡಿರಿ :**

ನೀವೆಲ್ಲರೂ ಗುಂಪಾಗಿ ಏರ್ಪಟ್ಟು ಹತ್ತು ಹೆಸರು ಕಾಳಗಳನ್ನು ನೀರಿನಿಂದ ತುಂಬಿದ ಡಬ್ಬಿಯಲ್ಲಿ, ಹತ್ತು ಹೆಸರುಕಾಳು ತೇವ ಮಣ್ಣು ಇರುವ ಡಬ್ಬಿಯಲ್ಲಿ, ಹತ್ತು ಹೆಸರುಕಾಳಗಳನ್ನು ಖಾಲಿ ಡಬ್ಬಿಯಲ್ಲಿ ಹಾಕಿರಿ. ಮಣ್ಣಿಗೆ ನೀರನ್ನು ಹಾಕುತ್ತಾ ಇರಿ. ಎರಡು ದಿನಗಳು ಪರಿಶೀಲಿಸಿ, ಪರಿಶೀಲನೆಯನ್ನು ಪಟ್ಟಿಯಲ್ಲಿ ಬರೆಯಿರಿ. ಹೀಗೆ ಪ್ರತಿಯೊಂದು ಗುಂಪಿನವರು ಕಡಲೆ, ಬಠಾಣಿ ಕಾಳುಗಳೊಂದಿಗೆ ಮಾಡಿರಿ.

| | ಡಬ್ಬಿ -1 | ಡಬ್ಬಿ -2 | ಡಬ್ಬಿ -3 |
|---|---|---|---|
| ಹೆಸರು ಬೀಜಗಳಿಗೆ ಗಾಳಿ ತಾಕುವುದು | | | |
| ಈ ಬೀಜಗಳಿಗೆ ನೀರು ಹಾಕಿದ್ದೀರಾ ? | | | |
| ನೀವು ಗಮನಿಸಿದ ಬದಲಾವಣೆ | | | |
| ಬೀಜ ಮೊಳಕೆಯೊಡೆಯುವುದು | | | |

- ಯಾವ ಡಬ್ಬಿಯಲ್ಲಿರುವ ಬೀಜಗಳು ಮೊಳಕೆಯೊಡೆದಿವೆ ? ಮೊಳಕೆಯೊಡೆದ ಬೀಜಗಳು ಇರುವ ಡಬ್ಬಿಗೂ, ಉಳಿದ ಬೀಜಗಳು ಇರುವ ಡಬ್ಬಿಗೂ ಯಾವ ಯಾವ ವಿಷಯಗಳೊಂದಿಗೆ ವ್ಯತ್ಯಾಸಗಳನ್ನು ಗಮನಿಸಿದ್ದೀರಿ ?

**ಬೀಜಗಳು / ಕಾಳುಗಳು ಮೊಳಕೆಯೊಡೆಯಲು ಗಾಳಿ, ನೀರು, ಬೆಳಕು ಅವಶ್ಯಕ**

ಬೀಜಗಳ ಹೇಗೆ ಮೊಳಕೆಯೊಡೆಯುತ್ತವೆಯೆಂದು ತಿಳಿದುಕೊಂಡಿದ್ದೀರಲ್ಲವೇ ! ನಾವು ತಿನ್ನುವ ಆಹಾರದಲ್ಲಿ ಭತ್ತ ಮುಖ್ಯವಾದುದು. ಭತ್ತದಿಂದ ಅಕ್ಕಿ ಬರುತ್ತದೆ. ಅಕ್ಕಿಯನ್ನು ಬೇಯಿಸಿ ಅನ್ನವನ್ನು ತಯಾರಿಸುತ್ತೇವೆ. ಹಾಗಾದರೇ, ಭತ್ತ ಹೇಗೆ ಮೊಳಕೆಯೊಡೆಯುತ್ತದೆ ನಿಮಗೆ ಗೊತ್ತೇ ? ಇದಕ್ಕಾಗಿ ನಿಮಗೆ ತಿಳಿದಿರುವ ಹಿರಿಯರನ್ನು / ರೈತರನ್ನು ಕೇಳಿ ಪಡೆಯಿರಿ.

**ಶೇಖರಿಸಿರಿ :**



- ಭತ್ತ ಮೊಳಕೆಯೊಡೆಯಲು ಏನೇನು ಮಾಡುತ್ತಾರೆ ?
- ಎಷ್ಟು ದಿನಗಳಲ್ಲಿ ಮೊಳಕೆಯೊಡೆಯುತ್ತವೆ ?
- ಮೊಳಕೆಯೊಡೆದ ನಂತರ ಏನು ಮಾಡುತ್ತಾರೆ ?

## 5.8. ಎಲ್ಲಾ ಬೀಜಗಳ ಮೊಳಕೆಯೊಡೆಯುತ್ತವೆಯೇ ? :

ರಹೀಮ್ ಒಂದು ದಿನ ಕೆಲವು ಹುಣಿಸೆ ಬೀಜಗಳನ್ನು ತೆಗೆದುಕೊಂಡು ಇನ್ನೂ ಕೆಲವು ಕೊತ್ತಂಬಿರಿ (ಧನಿಯಾ) ಬೀಜಗಳನ್ನು ತೆಗೆದುಕೊಂಡು ಅವರ ಹಿತ್ತಲಲ್ಲಿ ನೆಟ್ಟನು. ಹುಣ್ಣಿಸೆ ಬೀಜದ ಹೊದಿಕೆ ಗಟ್ಟಿಯಾಗಿರುತ್ತದೆ. ಮಸಾಲೆ ಬೀಜಗಳ ಮೇಲೆ ಹೊದಿಕೆ ಮೃದುವಾಗಿ ಇರುತ್ತದೆ. ಇವುಗಳನ್ನು ನಾಟಿ ಮಾಡಿದಾಗಿನಿಂದ ಪ್ರತಿ ದಿನವು ನೀರನ್ನು ಹಾಕಿದ್ದಾನೆ. ಬೀಜಗಳು ನಾಟಿ ಮಾಡಿದಾಗಿನಿಂದ ಎಷ್ಟು ದಿನದಲ್ಲಿ ಮೊಳಕೆಯೊಡೆಯುತ್ತವೆ ? ಎಂದು ಕೂತುಹಲದಿಂದ ಪ್ರತಿ ದಿನವು ನೋಡುತ್ತಿದ್ದಾನೆ. ಒಂದೊಂದು ದಿನದಲ್ಲಿಯೂ ಏನು ನಡೆಯುತ್ತದೆಯೆಂದು ನೋಟ್ ಪುಸ್ತಕದಲ್ಲಿ ಬರೆದುಕೊಂಡಿದ್ದಾನೆ. ಕೆಲವು ದಿನಗಳ ನಂತರ ಮೊಳಕೆಗಳು ಬಂದಿವೆ. ಆದರೆ ನಾಟಿರುವ ಬೀಜಗಳು ಎಲ್ಲವೂ ಮೊಳಕೆಯೊಡೆದಿರುವುದಿಲ್ಲ. ಕೆಲವು ಬೀಜಗಳೇನೋ ಮೊಳಕೆಯೊಡೆದು ಎಲೆಗಳು ಸಹ ಬಂದಿವೆ. ಇನ್ನೂ ಕೆಲವು ಮೊಳಕೆಯೊಡೆಯದಂತೆ ಇವೆ. ಹೀಗೆ ಮೊಳಕೆಯೊಡೆಯದಂತೆ ಇರಲು ಕಾರಣಗಳು ಏನು ಆಗಿರಬಹದು? ಆಲೋಚಿಸಿರಿ. ಮೊಳಕೆಯೊಡೆಯಲು ಬೀಜಗಳ ಒಳಗಡೆ ಏನು ಇದೆಯೆಂದು ಆಲೋಚಿಸಿರಿ. ನೀವು ಸಹ ಇದನ್ನು ತಿಳಿದುಕೊಳ್ಳಲು ಮಾಡಿ ನೋಡಿರಿ. ನಿಮ್ಮ ತರಗತಿಯಲ್ಲಿ ವಿವರಿಸಿರಿ.

SCERT TELANGANA




ಒಳ್ಳೆಯ ಫಲವತ್ತಾದ ಭೂಮಿಯಲ್ಲಿ ನಾಟಿ ಮಾಡಿದಾಗ ಬೀಜಗಳು ಮೊಳಕೆಯೊಡೆಯುತ್ತವೆ ಮತ್ತು ಭೂಮಿ ಹೇಗೆ ಫಲವತ್ತಾಗಿ ಇರುತ್ತದೆ ಗೊತ್ತೇ ? ಸತ್ತ ಪ್ರಾಣಿ, ಸಸ್ಯಗಳು ಬಿದ್ದ ಎಲೆಗಳು, ಪ್ರಾಣಿ ಗಳಿಂದ ವಿಸರ್ಜಿಸಲ್ಪಟ್ಟ ಪದಾರ್ಥಗಳು ಭೂಮಿಯಲ್ಲಿರುವ ಸೂಕ್ಷ್ಮಾಣು ಜೀವಿಗಳಿಂದ ಕೊಳೆತು ಭೂಮಿವನ್ನು ಫಲವತ್ತಾಗಿಸುತ್ತವೆ. ಕೆಲವು ಪ್ರಾಣಿಗಳು ಭೂಮಿಯಲ್ಲಿ ಬಿಲಗಳನ್ನು ಮಾಡಿಕೊಂಡು ಇರುತ್ತವೆ. ಇವು ಭೂಮಿವನ್ನು ಫಲವತ್ತಾಗಿಸುತ್ತವೆ. ಎರೆಹುಳುವನ್ನು 'ರೈತನಮಿತ್ರ' ಎನ್ನುತ್ತಾರೆ ಏಕೆ ಗೊತ್ತೇ ?

### ನಿಮಗೆ ಗೊತ್ತೇ ?

ಪಾರ್ಥೀನಿಯಂ ಸಸ್ಯ Congress weed ಎನ್ನುತ್ತಾರೆ. ಆಸ್ಟ್ರೇಲಿಯಾದಿಂದ ಗೋಧಿಯನ್ನು ಆಮದು ಮಾಡಿಕೊಂಡಾಗ ಅವುಗಳೊಂದಿಗೆ ಕಳೆ ಸಸ್ಯ (ಬೀಜ)ವಾಗಿ ಬಂದು ಸೇರಿದೆಯೆಂದು, ಪ್ರಸ್ತುತ ನಮ್ಮ ದೇಶವನ್ನು ಪೀಡಿಸುತ್ತಿರುವ ಕಳೆ ಸಸ್ಯವಾಗಿ ತಯಾರಾಗಿದೆ. ಅದರ ಹೂವಿನಿಂದ ಶ್ವಾಸಕೋಶಗಳ ರೋಗಗಳು ಕಣ್ಣಿನ ರೋಗಗಳು, ಚರ್ಮ ರೋಗಗಳು ಬರುತ್ತವೆ.





### 5.9. ಬೀಜ ವ್ಯಾಪ್ತಿ (ಬೀಜ ಪ್ರಸಾರ) :

ಒಂದು ಸಾರಿ ನಾಟಿರುವ ಸಸ್ಯವು ಎಲ್ಲಿಗೂ ಚಲಿಸುವುದಿಲ್ಲ ಅಲ್ಲವೇ! ಆದರೆ ಅವುಗಳ ಬೀಜಗಳು ಎಲ್ಲಿಗಾದರೂ ಚಲಿಸಬಲ್ಲವು. ಇದು ಹೇಗೆ ಸಾಧ್ಯವಾಗುತ್ತದೆ ಗೊತ್ತೇ ? ಯಾವಾಗಾಲಾದರೂ ಬೀಜಗಳು ಹಾರಿ ಹೋಗುವುದು ನೋಡಿದ್ದೀರಾ ? ನೀವು ಸಂಗ್ರಹಿಸಿದ ಯಾವುದಾದರೂ ವಸ್ತು ಗಾಳಿಯಲ್ಲಿ ಹಾರುತ್ತವೆಯೇ? ಕೆಲವು ಸಸ್ಯಗಳು ತಾವು ಇರುವಂತಹ ಸ್ಥಳವಲ್ಲದೇ ಬಹಳ ದೂರದ

SCERT TELANGANA

ಪ್ರದೇಶದಲ್ಲಿ ಅವುಗಳ ಸಸ್ಯಗಳು ಬೆಳೆಯುತ್ತವೆ. ಗಾಳಿಯೊಂದಿಗೆ ಬೀಜಗಳು ಕೊಚ್ಚಿಕೊಂಡು ಹೋಗುವುದರ ಮೂಲಕ ಅವು ಮರದಿಂದ ದೂರವಾಗಿ ಚದುರಿ ಬೇರೆ ಕಡೆ ಬೆಳೆಯುತ್ತವೆ. ಉದಾಹರಣೆ : ಎಕ್ಕೆ ಗಿಡ.

ನೀವು ಯಾವಾಗಲಾದರೂ ಪ್ರಾಣಿಗಳ ಕೂದಲುಗಳಿಗೆ ಬೀಜಗಳು / ಕಾಯಿಗಳು ಅಂಟಿಕೊಳ್ಳುವುದನ್ನು ನೋಡಿದ್ದೀರಾ? ದನಗಳು, ಮೇಕೆಗಳು, ಕುರಿಗಳು ಹೊಲದಲ್ಲಿ ಮೇಯಲು ಹೋದಾಗ ಅವುಗಳ ಕೂದಲಿಗೆ ಕೆಲವು ಬೀಜಗಳು ಅಂಟಿಕೊಂಡು ಅವು ಹಾದು ಹೋಗುವ ದಾರಿ (ಪ್ರಾಂತ) ಯಲ್ಲಿ, ಅಲ್ಲಲ್ಲಿ ಬೀಳುವುದರಿಂದ ಹೊಸ ಸಸ್ಯಗಳು ಬರುತ್ತವೆ. ಉದಾ. ನೆಗ್ಗಿನಮುಳ್ಳು, ಕೊಕ್ಕೀ ಬೀಜದ ಕಾಯಿಗಳನ್ನು ಪರಿಶೀಲಿಸಿರಿ. ನಾವು ಯಾವಾಗಲಾದರೂ ಹುಲ್ಲಿನ ಮೇಲೆ ಕುಳಿತುಕೊಂಡು ಏಳುವಾಗ ನಮ್ಮ ಬಟ್ಟೆಗಳಿಗೆ ಕೆಲವು ಹುಲ್ಲಿನ ಬೀಜಗಳು ಅಂಟಿಕೊಳ್ಳುತ್ತವೆ. ಬಟ್ಟೆಗಳಿಂದ ಬೇರ್ಪಟ್ಟ ಬೀಜಗಳು ಸೂಕ್ತ ಪ್ರದೇಶಗಳು ದೊರೆತಾಗ ಮೊಳೆಕೆಯೊಡೆಯುತ್ತವೆ. ಕೆಲವು ಸಸ್ಯಗಳ ಕಾಯಿಗಳು ಬಹಳ ಒಣಗಿ ಒಡೆಯುವುದರಿಂದ ಅವುಗಳ ಬೀಜಗಳ ಹರಡುತ್ತವೆ. ಬೀಜಗಳು ಹೀಗೆ ಪ್ರಸಾರ ಹೊಂದದೇ ಒಂದೇ ಸ್ಥಳದಲ್ಲಿ ಇದ್ದರೇ ಏನು ಜರುಗುತ್ತಿತ್ತೊ ? ಆಲೋಚಿಸಿರಿ. ಬೀಜಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಗಾಳಿಯ ಮೂಲಕ, ನೀರಿನ ಮೂಲಕ, ಪ್ರಾಣಿಗಳ ಮೂಲಕ ಪ್ರಸಾರ ಹೊಂದುತ್ತವೆ. ಆದುದರಿಂದ ಬಹಳ ಸಸ್ಯಗಳು ನಮಗೆ ಹೆಚ್ಚಿನ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಕೆಲವು ಮರಗಳ ಬೀಜಗಳು ನೀರಿನ ಮೂಲಕ (ಅವುಗಳ ಕಾಯಿಗಳು) ಕೊಚ್ಚಿಕೊಂಡು ಹೋಗಿ ದಡವನ್ನು ಸೇರಿ ಇಲ್ಲವೇ ಮಣ್ಣಿನಲ್ಲಿ ಬೆರೆತು ಅಲ್ಲಿಯೇ ಸಸ್ಯಗಳಾಗಿ ಮೊಳೆಕೆಯೊಡೆಯುತ್ತವೆ.

### 5.10. ನರ್ಸರಿಗಳು :

ನೀವು ಮನೆಯಲ್ಲಿ ಹೂ ಸಸ್ಯಗಳನ್ನು ಆಗಲೀ, ಹಣ್ಣಿನ ಗಿಡಗಳನ್ನು ಆಗಲೀ, ಬೆಳೆಸಬೇಕಾದರೆ ಸಸ್ಯಗಳನ್ನು ಎಲ್ಲಿಂದ ತರುತ್ತಾರೆ ? ಕೆಳಗಿನ ಚಿತ್ರವನ್ನು ನೋಡಿರಿ.



ನರ್ಸರೀ

ನಾವು ಮನೆಯಲ್ಲಾಗಲೀ, ತೋಟದಲ್ಲಾಗಲೀ, ಶಾಲೆಯ ಕೈತೋಟದಲ್ಲಾಗಲೀ, ಬೆಳೆಸಲಾಗುವ ಸಸ್ಯಗಳೆಲ್ಲವು ನರ್ಸರಿಯಿಂದ ಬಂದಿರುವಂತಹವು ಆಗಿವೆ. ವಿವಿಧ ರೀತಿಯ ಸಸ್ಯಗಳ ಉತ್ಪತ್ತಿ ಕೇಂದ್ರಗಳನ್ನೇ ನರ್ಸರಿಗಳು ಎನ್ನುವರು. ನರ್ಸರಿಗಳಲ್ಲಿ ಸಸ್ಯಗಳನ್ನು ಬೆಳೆಸಿ ಸರಬರಾಜು ಮಾಡುತ್ತಾರೆ. ಅರಣ್ಯ ಇಲಾಖೆಯವರು ಕೂಡ ಬೇವು, ಹೊಂಗೆ, ತೇಗದಂತಹ ಸಸ್ಯಗಳನ್ನು ನರ್ಸರೀಗಳಲ್ಲಿ ಬೆಳೆಸಿ ಸಾಮಾಜಿಕ ಕಾರ್ಯಗಳ ಅಭಿವೃದ್ಧಿಗೆ ಅವಸರವಾದ ಸಸ್ಯಗಳನ್ನು ನಮಗೆ ಸರಬರಾಜು ಮಾಡುತ್ತಿವೆ. ಆದರೆ ನಮ್ಮ ರಾಷ್ಟ್ರದಲ್ಲಿ ಪೂರ್ವ ಗೋದಾವರಿ ಜಿಲ್ಲೆಯ ರಾಜಮಂಡ್ರಿಯ ಹತ್ತಿರದಲ್ಲಿರುವ 'ಕಡೀಯಂ' ನರ್ಸರಿಯು ದೇಶವ್ಯಾಪ್ತವಾಗಿ ಅವಸರವಾಗುವ ಅನೇಕ ವಿವಿಧ ಸಸ್ಯಗಳನ್ನು ಸರಬರಾಜು ಮಾಡುತ್ತಿರುವುದು ವಿಶೇಷವಾಗಿದೆ.

ನರ್ಸರೀಗಳು ಹೂಗಳು, ಹಣ್ಣುಗಳು, ಅಲಂಕರಣ ಸಸ್ಯಗಳು, ಔಷಧಿ ಸಸ್ಯಗಳು ನಂತಹವುಗಳನ್ನು ಉತ್ಪತ್ತಿ ಮಾಡುತ್ತಾರೆ. ಕೆಲವು ಸಾವಿರ ಬಗೆಯ ಸಸ್ಯಗಳನ್ನು ನಾವು ನರ್ಸರಿಯಲ್ಲಿ ನೋಡಬಹುದು. ಮರುಭೂಮಿಗಳಲ್ಲಿ ಬೆಳೆಯುವ ಪಾಪಸುಕಳ್ಳಿ ನಂತಹ ಸಸ್ಯಗಳಿಂದಲೂ, ಚಿಕ್ಕ ಚಿಕ್ಕ ಕುಂಡಗಳಲ್ಲಿ ಇರುವ ಬೊನ್ಸಾಯ್ ವೃಕ್ಷಗಳವರೆಗೂ ಇಲ್ಲಿ ಲಭಿಸುವುದು ವಿಶೇಷವಾಗಿದೆ. ಮುಖ್ಯವಾಗಿ ಅಂಟುಗಟ್ಟುವಿಕೆ, ಕಸಿಮಾಡುವುದು, ಕಣಜಾಲವರ್ಧನೆ, ಬೀಜಗಳನ್ನು ಹಾಕಿ ಸಸ್ಯಗಳನ್ನು ಉತ್ಪತ್ತಿ ಮಾಡುವುದು ಇಲ್ಲಿ ನಡೆಯುತ್ತದೆ. ಷೆಡ್‌ನೆಟ್ಸ್, ಪೋಲಿಹೌಸ್‌ಗಳು, ಏರ್ಪಾಟು ಮಾಡಿ ನಿಯಂತ್ರಿಸಿದ ವಾತಾವರಣ ಪರಿಸ್ಥಿತಿಗೆ ಸಸ್ಯಗಳನ್ನು ಬೆಳೆಸುವುದು ಇಲ್ಲಿನ ಪ್ರತ್ಯೇಕತೆಯಾಗಿದೆ. ಮೈದಾನ, ಮರುಭೂಮಿ, ಶೀತಲ, ತೇವಾಂಶ ಪ್ರದೇಶಗಳಲ್ಲಿ ಬೆಳೆಯುವ ಸಾವಿರಾರು ವಿವಿಧ ಸಸ್ಯಗಳನ್ನು ಒಂದೇ ಸ್ಥಳದಲ್ಲಿ ಬೆಳೆಯುವುದು ಒಂದು ಜೀವ ವೈವಿಧ್ಯತೆಯಾಗಿದೆ. ದಿನದಿನಕ್ಕೂ ಬೆಳೆಯುತ್ತಿರುವ ಮಾಲಿನ್ಯವನ್ನು ನಿವಾರಿಸಲು ಸಸ್ಯಗಳನ್ನು ಬೆಳೆಸುವುದು ಅವಶ್ಯಕ. ಇದರಿಂದ ಪರಿಸರ ಸಂರಕ್ಷಣೆಗೆ ಕಡೀಯಂ ನರ್ಸರಿಗಳು ಸಹಕರಿಸುತ್ತಿರುವುದು ತುಂಬಾ ಆನಂದದಾಯಕ ಇಂತಹ ನರ್ಸರಿಗಳನ್ನು ನಾವು ತಪ್ಪದೇ ನೋಡಲೇಬೇಕು.

## ಮುಖ್ಯ ಪದಗಳು :

| | | |
|---|---|---|
| 1. ಬಳ್ಳಿಗಳು | 3. ಮರಗಳು | 5. ಬೇರುಗಳು |
| 2. ಪೊದೆಗಳು | 4. ಸಸ್ಯದಲ್ಲಿನ ಭಾಗಗಳು | 6. ಕಾಂಡ |
| 7. ಪತ್ರಹರಿತ್ತು | 8. ಬೀಜಗಳು | 9. ಜೀವನಾಧಾರ |
| 10. ಮೊಳಕೆಯೊಡೆಯುವುದು | 11. ನರ್ಸರಿ | 12. ಪರಿಸರ ಸಂರಕ್ಷಣೆ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

**1 (ವಿಷಯಾವಗಹನ) ತಿಳುವಳಿಕೆ :**

ಅ) ಬಳ್ಳಿಗಳು, ಪೊದೆಗಳು, ಮರಗಳಿಗೂ ಇರುವ ಹೋಲಿಕೆ, ವ್ಯತ್ಯಾಸಗಳನ್ನು ಬರೆಯಿರಿ ?

ಆ) ಸಸ್ಯಗಳಲ್ಲಿ ಯಾವ ಭಾಗಗಳು ನಮಗೆ ಉಪಯೋಗಪಡುತ್ತವೆ ? ಎರಡೆರಡು ಉದಾಹರಣೆಗಳನ್ನು ಬರೆಯಿರಿ.

ಇ) 'ಹೂವು'ಗಳು ಜೀವನಾಧಾರವೆಂದು ನೀವು ಹೇಗೆ ಹೇಳುವಿರಿ ?

ಈ) ನರ್ಸರೀಗಳಿಂದ ಉಪಯೋಗಗಳೇನು ?

ಉ) ಬೀಜಗಳು ಮೊಳಕೆಯೊಡೆಯಲು ಎಂತಹ ಪರಿಸ್ಥಿತಿಗಳು ಬೇಕು ?

SCERT TELANGANA

2. **ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :**

- ರಾಜು ಒಂದು ಗುಲಾಬಿ ಸಸ್ಯವನ್ನು ನೆಟ್ಟಿದ್ದಾನೆ. ಅದು ಸರಿಯಾಗಿ ಬೆಳೆಯಲಿಲ್ಲ. ಬಾಡಿ ಹೋಗಿದೆ. ಇದಕ್ಕೆ ಕಾರಣಗಳು ಏನಾಗಿರಬಹುದೋ ಊಹಿಸಿರಿ. ನೀವು ಊಹಿಸಿರುವುದೆಲ್ಲವೂ ಸರಿಯಾದುದೇ ? ತಿಳಿದುಕೊಂಡು ಹೇಳಿರಿ.

3. **ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :**

ಅ) ಬೀಜ, ಸಸ್ಯವಾಗಿ ಬದಲಾಗುವ ಪದ್ಧತಿಯಲ್ಲಿನ ವಿವಿಧ ಹಂತಗಳನ್ನು ಕ್ರಮ ಪದ್ಧತಿಯಲ್ಲಿ ಬರೆಯಿರಿ ?

ಆ) ಯಾವುದಾದರೂ ಕೆಲವು ಬೀಜಗಳನ್ನು ಮಣ್ಣಿನಲ್ಲಿ ನಾಟಿರಿ ಹಾಗೆಯೇ ಅವುಗಳನ್ನೇ ತೆಗೆದುಕೊಂಡು ಡಬ್ಬಿಯಲ್ಲಿರುವ ಮರಳಿನಲ್ಲಿ ನಾಟಿರಿ. ಎರಡಕ್ಕೂ ದಿನವು ನೀರನ್ನು ಹಾಕಿರಿ. ಐದು ದಿನಗಳ ನಂತರ ಏನು ಜರುಗುವುದೋ ಹೇಳಿರಿ.

4 **ಸಮಾಚಾರ ಕೌಶಲ್ಯ ಪ್ರಾಜೆಕ್ಟ್‌ಗಳು :**

- ನಿಮಗೆ ತಿಳಿದಿರುವ ರೈತರ ಹತ್ತಿರ ಹೋಗಿರಿ. ಅವರು ತರಕಾರಿಗಳನ್ನು ಬೆಳೆಸಲು ಏನೇನು ಮಾಡುತ್ತಾರೆಯೇ ತಿಳಿದು ಕ್ರಮ ಪದ್ಧತಿಯಲ್ಲಿ ಬರೆಯಿರಿ.

5. **ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :**

ಅ) ಯಾವುದಾದರೂ ಒಂದು ಹೂವು ಕಾಯಿಯಾಗಿ ಬದಲಾಗುವವರೆಗೂ ನಡೆಯುವ ಬದಲಾವಣೆಯ ಚಿತ್ರಗಳನ್ನು ಬರೆಯಿರಿ.

ಆ) ನಿಮಗೆ ಇಷ್ಟವಾಗಿರುವ ಯಾವುದಾದರೂ ಒಂದು 'ಹೂವಿನ' ಚಿತ್ರವನ್ನು ಬಿಡಿಸಿ ಅದಕ್ಕೆ ಬಣ್ಣ ಹಾಕಿರಿ. ಅದನ್ನು ಕುರಿತು ಬರೆಯಿರಿ.

ಇ) ನಿಮ್ಮ ಸುತ್ತಮುತ್ತಲೂ ಸಿಗುವ ಹೂವುಗಳು, ಎಲೆಗಳಿಂದ ಒಂದು 'ಹೂಗುಚ್ಛ'ವನ್ನು ತಯಾರು ಮಾಡಿರಿ. ಹೇಗೆ ತಯಾರು ಮಾಡಿವಿರೋ ನಿಮ್ಮ ತರಗತಿಯಲ್ಲಿ ಹೇಳಿರಿ.

6. **ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ನಿಮ್ಮ ಸ್ನೇಹಿತೆಯು ಪಾಠಶಾಲೆಯ ಆವರಣದಲ್ಲಿ ಕೆಲವು ಸಸ್ಯಗಳನ್ನು ನಾಟಿಸಿ ಎಚ್ಚರಿಕೆಯಿಂದ ಬೆಳೆಸುತ್ತಿದ್ದಾಳೆ. ವರ್ಷದ ನಂತರ ಆ ಸಸ್ಯಗಳಿಗೆ ಹುಟ್ಟಿದ ದಿನಾಚರಣೆಯನ್ನು ಮಾಡಿದ್ದಾಳೆ. ಅವುಗಳ ಬಗ್ಗೆ ಅವಳು ತೆಗೆದುಕೊಂಡ ಕ್ರಮಗಳು ನೋಡಿದಾಗ ನಿಮಗೆ ಏನನ್ನಿಸುತ್ತದೆ ?

ಆ) ಸಸ್ಯಗಳು, ಮರಗಳನ್ನು ನಾವು ಏಕೆ ಸಂರಕ್ಷಿಸಿಕೊಳ್ಳಬೇಕು ? ಇದಗೋಸ್ಕರವಾಗಿ ಕೆಲವು ಘೋಷಣೆಗಳನ್ನು ಬರೆಯಿರಿ.

**ನಾನು ಇವುಗಳನ್ನು ಮಾಡಬಲ್ಲೆನಾ ?**

| | | |
|---|---|---|
| 1 | ಬಳ್ಳಿಗಳು, ಪೊದೆಗಳು, ಮರಗಳಿಗೆ ಸಂಬಂಧಿಸಿದ ಉಹಾರಣೆ ಕೊಡಬಲ್ಲೆನು. ಹೋಲಿಕೆಗಳು, ವ್ಯತ್ಯಾಸಗಳನ್ನು ಹೇಳಬಲ್ಲೆನು. | ಹೌದು / ಇಲ್ಲ |
| 2 | ಸಸ್ಯಗಳಲ್ಲಿ ವಿವಿಧ ಭಾಗಗಳು ಅವುಗಳ ಉಪಯೋಗಗಳ ಕುರಿತು ವಿವರಿಸಬಲ್ಲೆನು. | ಹೌದು / ಇಲ್ಲ |
| 3 | ಬೀಜಗಳು ಮೊಳಕೆ ಒಡೆಯುವುದನ್ನು ಕುರಿತು ಪ್ರಯೋಗ ಮಾಡಿ ವಿವರಿಸಬಲ್ಲೆನು. | ಹೌದು / ಇಲ್ಲ |
| 4 | ತರಕಾರಿಗಳನ್ನು ಬೆಳೆಸಲು ರೈತರು ಏನೇನು ಮಾಡುವರೋ ಸಮಾಚಾರವನ್ನು ಸಂಗ್ರಹಿಸಬಲ್ಲೆನು. | ಹೌದು / ಇಲ್ಲ |
| 5 | ಸಸ್ಯಗಳು ನಾಟಿಸಿ ಕಾಪಾಡುವುದನ್ನು ಕುರಿತು ಅಭಿನಂದಿಸಿ ನಿನಾದಗಳನ್ನು ಬರೆಯಬಲ್ಲೆನು. | ಹೌದು / ಇಲ್ಲ |

SCERT TELANGANA



# 6 ದಾರಿಯನ್ನು ತಿಳಿದುಕೊಳ್ಳೋಣ

3ನೇ ತರಗತಿಯಲ್ಲಿ ನೀವು ನಿಮ್ಮ ಊರು / ಗ್ರಾಮವನ್ನು ಕುರಿತು ತಿಳಿದುಕೊಂಡಿದ್ದೀರಿ ಅಲ್ಲವೇ ? ಮಕ್ಕಳು, ದೊಡ್ಡವರು ಎಲ್ಲರೊಂದಿಗೆ ಕೂಡಿ ವಾಸಿಸುವುದು, ಒಂದು ಕುಟುಂಬವಾದರೆ, ಅನೇಕ ಕುಟುಂಬಗಳಿಂದ ಕೂಡಿರುವ ಪ್ರಾಂತವನ್ನು ಗ್ರಾಮ ಅಥವಾ ಊರು ಎಂದು ಕರೆಯುತ್ತೇವೆ. ಈ ಕೆಳಗಿನ ಚಿತ್ರವನ್ನು ನೋಡಿರಿ. ಇದು ರಮ್ಯಾಳ ಊರು. ಈ ಊರಿನಲ್ಲಿ ಏನೇನು ಇವೆಯೆಂದು ? ಹೇಳಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ರಮ್ಯಾಳ ಊರಿಗೆ ನಿಮ್ಮ ಊರಿಗೆ ಇರುವ ವ್ಯತ್ಯಾಸಗಳನ್ನು ಹೇಳಿರಿ.
- ಊರಿಗೆ ಬೆಟ್ಟ / ಗುಡ್ಡಗಳು ಯಾವ ಕಡೆ ಇವೆ ?
- ಊರಿಗೆ ಕೆರೆ ಯಾವ ಕಡೆ ಇದೆ ?
- ಊರಿನ ಹೊಲಗಳು ಯಾವ ಕಡೆ ಇರಬಹುದು ?
- ಊರಿನೊಳಗೆ ಹೇಗೆ ಹೋಗಬಹುದು ?

## 6.1. ದಿಕ್ಕುಗಳನ್ನು ಗುರ್ತಿಸಬಲ್ಲಿರಾ ! :

ಕಸ್ತೂರಿ ತನ್ನ ಗೆಳತಿಯಾದ ಕಮಲಳ ಮನೆಗೆ ಹೋಗಬೇಕೆಂದು ಕೊಂಡಳು. ಕಮಲಳ ಮನೆ ಎಲ್ಲಿ ಇರುವುದು ಎಂದು ರಮ್ಯಾಳನ್ನು ಕೇಳಿದಳು. ಅಂಚೆ ಕಛೇರಿಗೆ ದಕ್ಷಿಣದ ಕಡೆಗೆ ಇದೆಯೆಂದು ರಮ್ಯಾ ಹೇಳಿದಳು. ಕಸ್ತೂರಿ ದಕ್ಷಿಣವೆಂದರೆ ನನಗೆ ಗೊತ್ತಿಲ್ಲವೆಂದಳು. ಆಗ ರಮ್ಯಾ ಉದಯಿಸುತ್ತಿರುವ ಸೂರ್ಯನಿಗೆ ಎದುರಾಗಿ ಮುಖ ಮಾಡಿ ನಿಂತುಕೊಂಡಳು. ಎರಡು ಕೈಗಳನ್ನು ಪಕ್ಕಕ್ಕೆ ಚಾಚಿ ಮುಖಕ್ಕೆ ಅಭಿಮುಖವಾಗಿ ಇರುವುದು ಪೂರ್ವ, ಹಿಂದಗಡೆಯಿರುವುದು ಪಶ್ಚಿಮ, ಬಲಕ್ಕಿರುವುದು ದಕ್ಷಿಣ, ಎಡಗಡೆಯಿರುವುದು ಉತ್ತರ ಎಂದು ನಾಲ್ಕು ದಿಕ್ಕುಗಳ ಹೆಸರುಗಳನ್ನು ಹೇಳಿದಳು.

**ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ, ನಾಲ್ಕು ದಿಕ್ಕುಗಳನ್ನು ಗುರ್ತಿಸಿ ಅವುಗಳ ಹೆಸರುಗಳನ್ನು ಬರೆಯಿರಿ.**




**ಹೀಗೆ ಮಾಡಿರಿ :**

- ನೀವು ನಿಮ್ಮ ತರಗತಿಯಲ್ಲಿ ಎದ್ದು ನಿಲ್ಲಿರಿ. ಸೂರ್ಯನು ಉದಯಿಸುವ ಕಡೆ ಮುಖ ಮಾಡಿ ಕೈಗಳನ್ನು ಚಾಚಿರಿ. ತರಗತಿಯಲ್ಲಿ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳನ್ನು ಗುರ್ತಿಸಿರಿ. ತರಗತಿ ಕೋಣೆಯಲ್ಲಿ ಯಾವ ಕಡೆ ಯಾವ ದಿಕ್ಕು ಇದೆ ?



SCERT TELANGANA

ಈ ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ. ಚಿತ್ರದ ಮಧ್ಯದಲ್ಲಿ ಕಸ್ತೂರಿ ಉತ್ತರ ದಿಕ್ಕಿನ ಕಡೆ ಮುಖ ಮಾಡಿ ನಿಂತಿದ್ದಾಳೆ.




**ಕಸ್ತೂರಿಗೆ ಯಾವ ದಿಕ್ಕುಗಳು ಯಾವ ಕಡೆ ಇವೆಯೋ ಬರೆಯಿರಿ.**

- ಬಾವಿ ______________ ದಿಕ್ಕಿನಲ್ಲಿದೆ.
- ಬಸ್ ನಿಲ್ದಾಣ ______________ ದಿಕ್ಕಿನಲ್ಲಿದೆ.
- ಪಾಠಶಾಲೆಯು ______________ ದಿಕ್ಕಿನಲ್ಲಿದೆ.
- ಮಾವಿನ ಮರ ______________ ದಿಕ್ಕಿನಲ್ಲಿದೆ.
- ನೀವು ಸಹ ನಿಮ್ಮ ಗ್ರಾಮದಲ್ಲಿ ನಿಮ್ಮ ಮನೆಯ ಮುಂದೆ ಕಸ್ತೂರಿಯಂತೆ ನಿಂತುಕೊಂಡು ಯಾವ ದಿಕ್ಕಿಗೆ ಏನು ಇವೆ ಎಂದು ಬರೆಯಿರಿ.



ನೀವು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ದಿಕ್ಕುಗಳನ್ನು ಕುರಿತು ತಿಳಿದುಕೊಂಡಿದ್ದೀರಿ ಅಲ್ಲವೇ ! ಈ ದಿಕ್ಕುಗಳ ಆಧಾರವಾಗಿ, ಮನೆಗೆ, ಬೀದಿಗೆ, ಗ್ರಾಮಕ್ಕೆ, ಯಾವ ದಿಕ್ಕುಗಳಲ್ಲಿ ಏನೇನು ಇದ್ದಾವೆಯೋ ಹೇಳಬಹುದು. ಹಾಗೆಯೇ ಖಾಲಿ ಸ್ಥಳಗಳಿಗೆ ಸಹ ಯಾವ ದಿಕ್ಕಿನಲ್ಲಿ ಏನೇನು ಇವೆಯೋ ಹೇಳಬಹುದು. ಸ್ಥಳಕ್ಕಾಗಲೀ, ಒಂದು ಕಟ್ಟಡ / ಭವನಕ್ಕಾಗಾಲೀ ಅಥವಾ ಒಂದು ಗ್ರಾಮ ಹೀಗೆ ಯಾವುದಾದಕ್ಕಾದರೂ ಸುತ್ತ ಹೊಂದಿಕೊಂಡು ಆಯಾ ದಿಕ್ಕುಗಳಲ್ಲಿ ಏನಿವೆಯೋ ಅವುಗಳನ್ನು ''ಸರಿಹದ್ದುಗಳು'' ಎನ್ನುವರು. ಸರಿಹದ್ದುಗಳ ಆಧಾರವಾಗಿ ಒಂದು ಪ್ರದೇಶದ ಅಥವಾ ಸ್ಥಳದ/ಕಟ್ಟಡದ ಮುಂತಾದವುಗಳು ಇರುವ ಪ್ರದೇಶವನ್ನು ಗುರ್ತಿಸಬಹುದು. ಹೀಗೆ ತಿಳಿದುಕೊಳ್ಳುವುದಕ್ಕೆ ದಿಕ್ಕುಗಳ ಜೊತೆಗೆ ಇನ್ನೂ ಏನಿರುತ್ತವೆಯೋ ಗೊತ್ತೇ ನಿಮಗೆ ?

SCERT TELANGANA

## 6.2 ದಿಕ್ಕುಗಳು, ಮೂಲೆಗಳು :

ನೀವು ದಿಕ್ಕುಗಳನ್ನು ಕುರಿತು ಕಲಿತುಕೊಂಡಿದ್ದೀರಿ ಅಲ್ಲವೇ! ಈ ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ.




ದಿಕ್ಕುಗಳನ್ನು ಗಮನಿಸಿರಿ:

### ಗುಂಪಿನಲ್ಲಿ ಚರ್ಚಿಸಿರಿ :



- ದಿಕ್ಕುಗಳ ಜೊತೆಗೆ ಇನ್ನೂ ಏನು ಕಾಣಿಸುತ್ತವೆ ?
- ಎರಡು ದಿಕ್ಕುಗಳ ಮಧ್ಯೆ ಇರುವ ಪ್ರದೇಶವನ್ನು ನಾವು 'ಮೂಲೆ' ಎಂದು ಕರೆಯುತ್ತೇವೆ. ನಿಮ್ಮ ಮನೆಯಲ್ಲಿ, ತರಗತಿಯಲ್ಲಿ ಮೂಲೆಗಳನ್ನು ಗಮನಿಸಿರಿ.
- ಮೂಲೆಗಳು ಎಷ್ಟಿರಬಹುದು ? ಕೆಳಗಿನ ಪಟ್ಟಿಯಲ್ಲಿ ತುಂಬಿರಿ.
- ದಿಕ್ಕುಗಳು, ಮೂಲೆಗಳು ತಿಳಿಸುವ ಚಾರ್ಟ್ ಮೇಲೆ ಎಳೆದು, ನಿಮ್ಮ ತರಗತಿಯಲ್ಲಿ ಅಂಟಿಸಿರಿ. ನಿಮ್ಮ ಊರಿನ ಚಿತ್ರವನ್ನು ಬಿಡಿಸಿ, ವಿವಿಧ ದಿಕ್ಕುಗಳಲ್ಲಿ, ಮೂಲೆಗಳಲ್ಲಿರುವವನ್ನು ಬರೆಯಿರಿ.

| ದಿಕ್ಕುಗಳ ಮಧ್ಯೆ | ಮೂಲೆ |
|---|---|
| ಪೂರ್ವ, ದಕ್ಷಿಣಗಳ ಮಧ್ಯೆ | |
| ದಕ್ಷಿಣ, ಪಶ್ಚಿಮಗಳ ಮಧ್ಯೆ | |
| ಪಶ್ಚಿಮ, ಉತ್ತರಗಳ ಮಧ್ಯೆ | |
| ಉತ್ತರ, ಪೂರ್ವಗಳ ಮಧ್ಯೆ | |

SCERT TELANGANA

## 6.3 ನಕ್ಷೆ ನಿರ್ಮಾಣ ಹೇಗೆ ? :

ಒಂದು ದಿನ ಶಿಕ್ಷಕರು ತರಗತಿಯಲ್ಲಿ ಕೆಲವು ಚಿತ್ರಗಳನ್ನು ತೋರಿಸಿದರು. ಅವು ನೋಡಿದ ಕಸ್ತೂರಿಯು ''ನಕ್ಷೆಗಳನ್ನು ಹೇಗೆ ತಯಾರು ಮಾಡುತ್ತಾರೆ ? ದೊಡ್ಡ ದೊಡ್ಡ ಪ್ರಾಂತಗಳನ್ನು ಚಿಕ್ಕ ಪೇಪರ್‌ನ ಮೇಲೆ ಯಾವ ವಿಧವಾಗಿ ಎಳೆಯುತ್ತಾರೆ ''? ಎಂದು ಕೇಳಿದರು. ಆಗ ಶಿಕ್ಷಕರು ಅದು ಅರ್ಥವಾಗುವುದಕ್ಕೆ ನಾವು ಮೊದಲು ನಮ್ಮ ತರಗತಿ ಕೋಣೆಯ ಚಿತ್ರವನ್ನು ತಯಾರು ಮಾಡೋಣ. ನೀವು ಮೀಟರ್ ಕಟ್ಟಿಗೆ (ಸ್ಕೇಲ್) ಮತ್ತು ಬೆಂಕಿ ಕಡ್ಡಿಗಳನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದರು.

### 6.3.1. ತರಗತಿ ಕೋಣೆಯ ಅಳತೆಗಳು :

ಮೊದಲು ಕೋಣೆಯ ಉದ್ದ, ಅಗಲಗಳನ್ನು ಅಳೆಯಬೇಕೆಂದು ಶಿಕ್ಷಕರು ಹೇಳಿದರು. ಆಗ ಕಸ್ತೂರಿ ಮತ್ತು ಅವಳ ಮಿತ್ರರು ತರಗತಿ ಉತ್ತರ ದಿಕ್ಕಿನ ಗೋಡೆಯ ಉದ್ದವನ್ನು 'ಮೀಟರ್' ಕಟ್ಟಿಗೆಯಿಂದ ಅಳೆದರು. ಆರು ಮೀಟರುಗಳು ಇದೆ.

**ಪ್ರಾಮಾಣಿಕ ಅಳತೆಯಾಗಿ ಒಂದು ಮೀಟರ್‌ಗೆ ಒಂದು ಬೆಂಕಿ ಕಡ್ಡಿಯಂತೆ ತೆಗೆದುಕೊಳ್ಳಬೇಕು.**

ಉತ್ತರದ ಗೋಡೆಯ ಉದ್ದ ಆರು ಮೀಟರ್‌ಗಳಿರುವುದರಿಂದ ಚಿತ್ರದಲ್ಲಿ ಚಿಕ್ಕದಾಗಿ ತೋರಿಸುವುದಕ್ಕಾಗಿ ಒಂದು ಮೀಟರ್‌ಗೆ ಬದಲು ಒಂದು ಬೆಂಕಿ ಕಡ್ಡಿಯನ್ನು ತೆಗೆದುಕೊಳ್ಳೋಣ ಎಂದು ಶಿಕ್ಷಕರು ಹೇಳಿದರು. ಆಗ ಕಸ್ತೂರಿ ತರಗತಿ ಮಧ್ಯದಲ್ಲಿ ನೆಲದ ಮೇಲೆ ಉತ್ತರದ ಕಡೆ ಆರು ಬೆಂಕಿ ಕಡ್ಡಿಗಳನ್ನು ಇಟ್ಟಳು. ಅದೇ ವಿಧವಾಗಿ ಪೂರ್ವದ ಕಡೆ ಗೋಡೆಯ ಉದ್ದ ಒಂಬತ್ತು ಮೀಟರ್‌ಗಳು ಇದೆಯೆಂದು ಹೇಳಿದಳು. ಮೊದಲು ಇಟ್ಟ ಬೆಂಕಿ ಕಡ್ಡಿಗಳನ್ನು ಸೇರಿಸುತ್ತಾ ಪೂರ್ವದ ಕಡೆ ಒಂಬತ್ತು ಬೆಂಕಿ ಕಡ್ಡಿಗಳನ್ನು ಇರಿಸಿದರು.




**ಸಾಧಾರಣವಾಗಿ ಕಾಗದದ ಮೇಲೆ ಚಿತ್ರ ಎಳೆದಾಗ ಉತ್ತರ ದಿಕ್ಕು ಕಾಗದದ ಮೇಲ್ಭಾಗದಲ್ಲಿ ಇರುವಂತೆ ನೋಡಬೇಕು.**

ಉಳಿದವುಗಳನ್ನು ಅಳೆದಾಗ ದಕ್ಷಿಣದ ಗೋಡೆ ಆರು ಮೀಟರು. ಪಶ್ಚಿಮದ ಗೋಡೆ ಒಂಬತ್ತು ಮೀಟರ್‌ಗಳೇ ಬಂದಿದೆ. ಮಕ್ಕಳ ಅಳತೆಗಳ ಪ್ರಕಾರ ದಕ್ಷಿಣದ ಕಡೆಗೆ ಆರು ಬೆಂಕಿ ಕಡ್ಡಿಗಳು, ಪಶ್ಚಿಮದ ಕಡೆ ಒಂಭತ್ತು ಬೆಂಕಿ ಕಡ್ಡಿಗಳನ್ನು ಇಟ್ಟರು. ಈ ವಿಧವಾಗಿ ಜೋಡಿಸಿದ ಬೆಂಕಿ ಕಡ್ಡಿಗಳ ಸುತ್ತ ನಾಲ್ಕು ಕಡೆ ಚಾಕ್‌ಪೀಸ್‌ನಿಂದ ಗೆರೆ ಎಳೆದು, ಬೆಂಕಿ ಕಡ್ಡಿಗಳನ್ನು ತೊಲಗಿಸಿದರು.

ಈಗ ತರಗತಿ ಕೋಣೆ ಚಿತ್ರ ತಯಾರಾಗಿದೆ. ಈ ರೀತಿ ಅಳತೆಗಳಿಂದ ಕಾಗದದ ಮೇಲೆ ಎಳೆದಿರುವುದನ್ನು 'ಚಿತ್ರ' (ನಕ್ಷೆ) ಎಂದು ಕರೆಯುತ್ತಾರೆ. ಬೆಂಕಿ ಕಡ್ಡಿಗಳ ಸಹಾಯದಿಂದ ಮಕ್ಕಳು ತರಗತಿ ಕೋಣೆಯ ಚಿತ್ರ (ನಕ್ಷೆ)ವನ್ನು ತಯಾರು ಮಾಡಿದ್ದಾರಲ್ಲವೇ ? ಒಂದು ಮೀಟರ್‌ಗೆ ಬದಲಾಗಿ ಒಂದು ಸೆಂಟಿಮೀಟರೆಂದು ಭಾವಿಸಿ ಬೆಂಕಿ ಕಡ್ಡಿಗಳನ್ನು ಬಳಸದಂತೆ ನೇರವಾಗಿ ಕೂಡ ಗೆರೆಗಳು ಎಳೆದು ತರಗತಿ ಕೋಣೆಯ ಚಿತ್ರವನ್ನು ತಯಾರು ಮಾಡಬಹುದು. ಈ ಈಗ ಮಿತ್ರರೊಂದಿಗೆ ಚರ್ಚಿಸಿ ನಿಮ್ಮ ತರಗತಿ ಕೋಣೆ ನಕ್ಷೆಯನ್ನು ಚಾರ್ಟ್ ಮೇಲೆ ಹಾಕಿ ಪ್ರದರ್ಶಿಸಿರಿ.

SCERT TELANGANA

**ಗುಂಪಿನಲ್ಲಿ ಚರ್ಚಿಸಿರಿ :**



- ತರಗತಿ ಕೋಣೆಯ ನಕ್ಷೆ ಎಳೆದಾಗ ಕಸ್ತೂರಿಯವರು ಮೀಟರ್‌ಗೆ ಸಮಾನವಾಗಿ ಬೆಂಕಿಕಡ್ಡಿಗಳನ್ನು ತೆಗೆದುಕೊಂಡಿದ್ದಾರಲ್ಲವೇ ? ಅದರಿಂದ ಅವರಿಗೆ ಏನು ಉಪಯೋಗವಾಗಿದೆ?
- ನಿಮ್ಮ ತರಗತಿ ಕೋಣೆಯ ಚಿತ್ರವನ್ನು ಎಳೆದು ದಿಕ್ಕುಗಳನ್ನು, ಮೂಲೆಗಳನ್ನು ಗುರ್ತಿಸಿರಿ.
- ತರಗತಿ ಕೋಣೆಯಲ್ಲಿ ಯಾವ ಯಾವ ದಿಕ್ಕುಗಳಲ್ಲಿ ಏನು ಇವೆಯೋ ಬರೆಯಿರಿ.

## 6.4. ಗ್ರಾಮ

ದಿಕ್ಕುಗಳು, ಮೂಲೆಗಳನ್ನು ಕುರಿತು ತಿಳಿದುಕೊಂಡಿದ್ದೀರಿ ಅಲ್ಲವೇ ? ಹಾಗೆಯೇ ಪ್ರತಿ ಗ್ರಾಮಕ್ಕೆ ಕೂಡ ಯಾವ ಯಾವ ದಿಕ್ಕುಗಳಲ್ಲಿ ಮತ್ತು ಮೂಲೆಗಳಲ್ಲಿ ಏನೇನು ಇವೆಯೋ ಗುರ್ತಿಸಬಹುದು. ಇವುಗಳಿಂದ ಆ ಗ್ರಾಮದ 'ಸರಿಹದ್ದುಗಳನ್ನು' ಗುರ್ತಿಸಬಹುದು. ಗ್ರಾಮಕ್ಕೆ ಹೊಂದಿಕೊಂಡಂತೆ ಆಯಾ ದಿಕ್ಕುಗಳಲ್ಲಿ ಇರುವವುಗಳನ್ನು 'ಸರಿಹದ್ದುಗಳು' ಎಂದೂ ಕೂಡ ಕರೆಯುತ್ತಾರೆ. ಗ್ರಾಮದಲ್ಲಿ ರಸ್ತೆ ಕಟ್ಟಡ / ಭವನಗಳು, ಪಾಠಶಾಲೆ, ಅಂಚೆ ಕಛೇರಿ, ಬಸ್ ನಿಲ್ದಾಣ, ಹೊಲ-ಗದ್ದೆಗಳು, ಗ್ರಾಮವನ್ನು ಹೊಂದಿಕೊಂಡಿರುವ ಕೆರೆಗಳು ಮೊದಲಾದವುಗಳೆಲ್ಲವನ್ನು ಕೂಡ ಗ್ರಾಮದಲ್ಲಿ ಯಾವ ಕಡೆ ಇವೆಯೋ ಎಂದು ತಿಳಿದುಕೊಳ್ಳುವುದಕ್ಕೆ ದಿಕ್ಕುಗಳು, ಮೂಲೆಗಳು ಉಪಯೋಗವಾಗುತ್ತವೆ. ಹಾಗೆಯೇ ಗ್ರಾಮದೊಳಗಿನ ಯಾವುದಾದರೂ ಪ್ರದೇಶವನ್ನು ಗುರ್ತಿಸಬೇಕಾದರೆ ಅಥವಾ ಯಾರ ಮನೆಗಾದರೂ ಹೋಗಬೇಕಾದರೆ ದಿಕ್ಕುಗಳು, ಮೂಲೆಗಳು ತಿಳಿದರೆ ಸುಲಭವಾಗಿ ಸೇರಿಕೊಳ್ಳಬಹುದು. ಕೆಳಗಿನ ಚಿತ್ರಪಟವನ್ನು ನೋಡಿರಿ. ಗ್ರಾಮದಲ್ಲಿ ಏನೇನು ಇವೆ ? ಎಲ್ಲೆಲ್ಲಿ ಇವೆ ? ಹೇಳಿರಿ.




SCERT TELANGANA

ಗ್ರಾಮದ ಚಿತ್ರಪಟವನ್ನು ನೋಡಿದ್ದೀರಿ ಅಲ್ಲವೇ ! ಈ ಚಿತ್ರ ಪಟದ ಆಧಾರವಾಗಿ ಗುಂಪುಗಳಲ್ಲಿ ಚರ್ಚಿಸಿ ಕೆಳಗಿನ ಖಾಲಿ ಸ್ಥಳಗಳನ್ನು ಪೂರ್ತಿಗೊಳಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಉತ್ತರದಲ್ಲಿ .................................... ಇದೆ.
- ದಕ್ಷಿಣದಲ್ಲಿ .................................... ಇದೆ.
- ಪೂರ್ವದಲ್ಲಿ .................................... ಇದೆ.
- ಪಶ್ಚಿಮದಲ್ಲಿ .................................... ಇದೆ.
- ಈಶಾನ್ಯದಲ್ಲಿ .................................... ಇದೆ.
- ಆಗ್ನೇಯದಲ್ಲಿ .................................... ಇದೆ.
- ನೈರುತ್ಯದಲ್ಲಿ .................................... ಇದೆ.
- ವಾಯುವ್ಯದಲ್ಲಿ.................................... ಇದೆ.

**ಹೀಗೆ ಮಾಡಿರಿ :**

ನಿಮ್ಮ ಶಿಕ್ಷಕರ ಸಹಾಯದಿಂದ ಗ್ರಾಮದ ಚಿತ್ರ ಪಟವನ್ನು ನೆಲದ ಮೇಲೆ ಈ ಕೆಳಗೆ ತಿಳಿಸಿದ ರೀತಿಯಲ್ಲಿ ಬರೆಯಿರಿ.

- ನಿಮ್ಮ ಗ್ರಾಮದಲ್ಲಿ ಏನೇನು ಇವೆಯೋ ಪಟ್ಟಿಯನ್ನು ತಯಾರು ಮಾಡಿರಿ.
- ನಿಮ್ಮ ಗ್ರಾಮಕ್ಕೆ ಯಾವ ಯಾವ ದಿಕ್ಕುಗಳಲ್ಲಿ ಏನೇನು ಇವೆಯೋ ಬರೆಯಿರಿ.
- ನಿಮ್ಮ ಗ್ರಾಮದಲ್ಲಿನ ಪ್ರಧಾನ ರಹದಾರಿಯನ್ನು ಸೀಮೆಸುಣ್ಣದಿಂದ ನೆಲದ ಮೇಲೆ ಎಳೆಯಿರಿ.
- ಹಾಗೆಯೇ ಈ ರಸ್ತೆಯನ್ನೇ ಆಧಾರವಾಗಿ ಮಾಡಿಕೊಂಡು ಗ್ರಾಮಕ್ಕೆ ಯಾವ ಯಾವ ದಿಕ್ಕುಗಳಲ್ಲಿ ಏನೇನು ಇವೆಯೋ ಸೀಮೆಸುಣ್ಣದಿಂದ ಗುರ್ತಿಸಿರಿ.
- ನಿಮ್ಮ ಗ್ರಾಮ ನಕ್ಷೆಯನ್ನು ಹೀಗೆ ಸೀಮೆಸುಣ್ಣದಿಂದ ನೆಲದ ಮೇಲೆ ಬರೆಯಿರಿ.
- ನಿಮ್ಮ ಹಾಗೆ ಉಳಿದ ಗುಂಪಿನವರು ಕೂಡ ಹಾಕಿರುತ್ತಾರೆಯಲ್ಲವೇ ! ಅವರು ಸರಿಯಾಗಿ ಹಾಕಿದ್ದಾರೆಯೇ ? ನೋಡಿ ಹೇಳಿರಿ.

## 6.5 ಮಂಡಲ

ಮಂಡಲ ಎಂದರೆ ಕೆಲವು ಗ್ರಾಮಗಳ ಸಮುದಾಯ. ಮಂಡಲದಲ್ಲಿ ಸಾವಿರಾರುಗಟ್ಟಲೆ ಜನಸಂಖ್ಯೆ ಇರುತ್ತದೆ. ಮಂಡಲದಲ್ಲಿ ಮಂಡಲ ಪ್ರಜಾ ಪರಿಷತ್ತು ಕಾರ್ಯಾಲಯ, ಮಂಡಲ ರೆವಿನ್ಯೂ ಕಾರ್ಯಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಪೋಲಿಸ್ ಠಾಣೆ, ವ್ಯವಸಾಯ ಇಲಾಖೆ ಕಾರ್ಯಾಲಯ, ವಿದ್ಯುತ್ ಇಲಾಖೆ ಕಾರ್ಯಾಲಯದಂತಹ ಸಾರ್ವಜನಿಕ ಸಂಸ್ಥೆಗಳು ಇರುತ್ತವೆ. ಮಂಡಲದಲ್ಲಿ ಎಲ್ಲಾ ಗ್ರಾಮಗಳ ಪ್ರಜೆಗಳು ವಿವಿಧ ಕೆಲಸಗಳ ಪ್ರಯುಕ್ತ ಮಂಡಲ ಕೇಂದ್ರಕ್ಕೆ ಬರುತ್ತಾರೆ. ನಿಮ್ಮ ಮಂಡಲದ ಹೆಸರೇನು ? ನಿಮ್ಮ ಮಂಡಲದಲ್ಲಿ ಎಷ್ಟು ಗ್ರಾಮಗಳಿವೆ ? ನಿಮಗೆ ಗೊತ್ತೇ ? ತಿಳಿದುಕೊಂಡು ಹೇಳಿರಿ. ತರಗತಿ ಕೋಣೆಯ ಚಿತ್ರ ಪಟ, ಗ್ರಾಮದ ಚಿತ್ರಪಟ ತಯಾರು ಮಾಡುವುದು ತಿಳಿದುಕೊಂಡಿದ್ದೀರಿ ಅಲ್ಲವೇ ! ಹೀಗೆ ಪ್ರತಿ ಗ್ರಾಮಕ್ಕೆ ಚಿತ್ರ ಪಟ ಇದ್ದಂತೆ ಗ್ರಾಮಗಳೆಲ್ಲವು ಸೇರಿ ಮಂಡಲಕ್ಕೂ ಸಹ ಒಂದು ಚಿತ್ರ ಪಟ ಇರುತ್ತದೆ.

SCERT TELANGANA

ಒಂದು ಮಂಡಲ ಚಿತ್ರಪಟವನ್ನು ನೋಡೋಣವೇ! ಪಕ್ಕದ ನಕ್ಷೆಯನ್ನು ನೋಡಿರಿ. ಇದು ಆದಿಲಾಬಾದ್ ಜಿಲ್ಲೆಯಲ್ಲಿನ ಲಕ್ಸೆಟ್ಟಿಪೇಟೆ ಮಂಡಲಕ್ಕೆ ಸೇರಿದ್ದು. ಈ ಚಿತ್ರಪಟದಲ್ಲಿನ ಗ್ರಾಮಗಳನ್ನು ಪರಿಶೀಲಿಸಿರಿ.




SCERT TELANGANA

## ಗುಂಪಿನಲ್ಲಿ ಚರ್ಚಿಸಿರಿ :



- ರಂಗಾಪೇಟೆ ಗ್ರಾಮದ ನಾಲ್ಕು ದಿಕ್ಕುಗಳಿಗೆ ಯಾವ ಯಾವ ಗ್ರಾಮಗಳಿವೆ ?
- ದಂಡೇಪಲ್ಲಿ ಮಂಡಲಕ್ಕೆ ಲಕ್ಸೆಟ್ಟಿಪೇಟೆ ಮಂಡಲ ಯಾವ ದಿಕ್ಕಿನಲ್ಲಿದೆ ?
- ತಿಮ್ಮಾಪುರ್ ಗ್ರಾಮಕ್ಕೆ ದಕ್ಷಿಣದಲ್ಲಿರುವ ಗ್ರಾಮ ಯಾವುದು ?
- ಗೋದಾವರಿ ನದಿಗೆ ಅಂಟಿಕೊಂಡು ಇರುವ ಗ್ರಾಮಗಳು ಯಾವುವು ? ಇವು ಗೋದಾವರಿ ನದಿಗೆ ಯಾವ ಕಡೆಗೆ ಇವೆ ?
- ಗೋದಾವರಿ ನದಿ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹರಿಯುತ್ತಿದೆಯೋ ಹೇಳಿರಿ.
- ಚಂದಾಪುರ್ ಗ್ರಾಮ , ತಿಮ್ಮಾಪೂರ್ ಗ್ರಾಮಕ್ಕೆ ಯಾವ ದಿಕ್ಕಿನಲ್ಲಿದೆ ?
- ಲಕ್ಸೆಟ್ಟಿಪೇಟೆ ಮಂಡಲಕ್ಕೆ ಗೋದಾವರಿ ನದಿ ಯಾವ ದಿಕ್ಕಿಗೆ ಇದೆ ?

## ಹೀಗೆ ಮಾಡಿರಿ :

- ನಿಮ್ಮ ಮಂಡಲ ಚಿತ್ರ ಪಟವನ್ನು ಸಂಗ್ರಹಿಸಿರಿ. ಆದರಲ್ಲಿ ನಿಮ್ಮ ಗ್ರಾಮವನ್ನು ಗುರ್ತಿಸಿರಿ. ಸರಿಹದ್ದುಗಳು ಬರೆಯಿರಿ.

## 6.6. ಜಿಲ್ಲೆ :

ಮಂಡಲದಲ್ಲಿ ಗ್ರಾಮಗಳಿದ್ದಂತೆ, ಜಿಲ್ಲೆಯಲ್ಲಿ ಮಂಡಲಗಳಿರುತ್ತವೆ. ಜಿಲ್ಲೆ ಕೇಂದ್ರದಲ್ಲಿ ಜಿಲ್ಲೆ ಕಲೆಕ್ಟರ್ (ಜಿಲ್ಲಾಧಿಕಾರಿಗಳು) ಕಾರ್ಯಾಲಯ, ಜಿಲ್ಲಾ ಪರಿಷತ್ ಕಾರ್ಯಾಲಯ, ಜಿಲ್ಲೆ ಆರೋಗ್ಯ ಕೇಂದ್ರದಂತಹ ಅನೇಕ ಸಾರ್ವಜನಿಕ ಸಂಸ್ಥೆಗಳು ಇರುತ್ತವೆ. ಜಿಲ್ಲೆಯಲ್ಲಿನ ಎಲ್ಲಾ ಮಂಡಲಗಳ ಗ್ರಾಮಗಳಿಂದ ಜನರು ವಿವಿಧ ಕೆಲಸಗಳ ಪ್ರಯುಕ್ತ ಜಿಲ್ಲಾ ಕೇಂದ್ರಕ್ಕೆ ಬರುತ್ತಾರೆ. ನಮ್ಮ ರಾಜ್ಯದಲ್ಲಿ 10 ಜಿಲ್ಲೆಗಳಿವೆ. ಪ್ರತಿಯೊಂದು ಜಿಲ್ಲೆಗೂ ಸಹ ಒಂದು ನಕಾಶೆ (ನಕ್ಷೆ) ಇರುತ್ತದೆ. ಪ್ರತಿಯೊಂದು ಜಿಲ್ಲೆಯ ನಕ್ಷೆಯಲ್ಲಿ ಆ ಜಿಲ್ಲೆಯಲ್ಲಿನ ಮುಖ್ಯವಾದ ಪ್ರದೇಶಗಳನ್ನು, ಸಂಸ್ಥೆಗಳನ್ನು ಕಾರ್ಯಾಲಯಗಳನ್ನು ಸೂಚಿಸುತ್ತಾರೆ.

ಕೆಳಗಿನ ಜಿಲ್ಲೆ ನಕ್ಷೆಯನ್ನು ನೋಡಿರಿ.




ನಲ್ಗೊಂಡ ಜಿಲ್ಲೆಯ ನಕ್ಷೆ

### ಗುಂಪಿನಲ್ಲಿ ಚರ್ಚಿಸಿರಿ :



- ನಲ್ಗೊಂಡ ಜಿಲ್ಲೆಗೆ ಯಾವ ದಿಕ್ಕಿನಲ್ಲಿ ಏನಿವೆಯೋ ಬರೆಯಿರಿ ?
- ನಲ್ಗೊಂಡ ಜಿಲ್ಲೆಯಲ್ಲಿ ಶ್ರೀಶೈಲ ಯಾವ ದಿಕ್ಕಿಗೆ ಇದೆ ?
- ನಲ್ಗೊಂಡ ಜಿಲ್ಲೆಯಲ್ಲಿ ಕೆಲವು ಮಂಡಲಗಳ ಹೆಸರುಗಳನ್ನು ಬರೆಯಿರಿ.
- ನಲ್ಗೊಂಡ ಜಿಲ್ಲೆಯಲ್ಲಿ ಬನಗಾನಪಲ್ಲೆ ಮಂಡಲಕ್ಕೆ ಸರಿಹದ್ದುಗಳು ಬರೆಯಿರಿ ?
- ಆಂಧ್ರಪ್ರದೇಶ ರಾಜ್ಯಕ್ಕೆ ನಲ್ಗೊಂಡ ಜಿಲ್ಲೆ ಯಾವ ಕಡೆ ಇದೆ ?

### ಹೀಗೆ ಮಾಡಿರಿ :

- ನಿಮ್ಮ ಜಿಲ್ಲೆಯ ನಕ್ಷೆಯಲ್ಲಿ ನಿಮ್ಮ ಮಂಡಲವನ್ನು ಗುರ್ತಿಸಿರಿ. ಅದರ ಸರಿಹದ್ದುಗಳು ಬರೆಯಿರಿ.

SCERT TELANGANA

## 6.7. ನಮ್ಮ ರಾಜ್ಯ :

ನಮ್ಮ ರಾಜ್ಯದ ಹೆಸರು ತೆಲಂಗಾಣ ಕೆಲವು ಗ್ರಾಮಗಳು ಸೇರಿ ಒಂದು ಮಂಡಲ, ಕೆಲವು ಮಂಡಲಗಳು ಸೇರಿ ಒಂದು ಜಿಲ್ಲೆ, ಕೆಲವು ಜಿಲ್ಲೆಗಳು ಸೇರಿ ಒಂದು ರಾಜ್ಯ. ಹಾಗೇ ಏರ್ಪಟ್ಟಿದ್ದೆ ನಮ್ಮ ರಾಜ್ಯ. ನಮ್ಮ ತೆಲಂಗಾಣ ರಾಜ್ಯದಲ್ಲಿ 31 ಜಿಲ್ಲೆಗಳಿವೆ. ನಮ್ಮ ರಾಜ್ಯದ ರಾಜಧಾನಿ ಹೈದರಾಬಾದ್. ತೆಲಂಗಾಣದಲ್ಲಿನ ಜನರು (ಪ್ರಜೆಗಳು) ವಿವಿಧ ಹಬ್ಬಗಳನ್ನು ಆಚರಿಸುತ್ತಾರೆ. ವಿವಿಧ ಆಚಾರಗಳನ್ನು ಸಂಪ್ರಾದಾಯಗಳನ್ನು ಪಾಲಿಸುತ್ತಾರೆ.



ಭಾರತದೇಶ ನಕ್ಷೆ

ನಮ್ಮ ರಾಜ್ಯದಲ್ಲಿ ಗೋದಾವರಿ, ಕೃಷ್ಣ, ತುಂಗಭದ್ರ, ಮೂಸಿ ನದಿಗಳು ಪ್ರವಹಿಸುತ್ತವೆ. ಆದಿಲಾಬಾದ, ನಿರ್ಮಲ್, ಕೊಮುರಂಭಿಂ, ಮಂಚಿರ್ಯಾಲ್, ಪೆದ್ದಪಲ್ಲಿ, ಜಯಶಂಕರ, ಮಹಬೂಬಾಬಾದ, ಭದ್ರಾದ್ರಿ ನಾಗರ ಕರ್ನೂಲ್ ಜಿಲ್ಲೆಗಳಲ್ಲಿ ಅಡವಿಗಳು ವಿಸ್ತರಿಸಿ ಇವೆ. ನಮ್ಮ ರಾಜ್ಯದಲ್ಲಿ ಭತ್ತ, ಜೋಳ, ಮೆಕ್ಕೆಜೋಳ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಸುತ್ತಾರೆ. ನಮ್ಮ ರಾಜ್ಯದ ನಕ್ಷೆಯನ್ನು ನೋಡೋಣವೇ!

> **ನಿಮಗೆ ಗೊತ್ತೇ ?**
>
> ತೆಲಂಗಾಣ ರಾಜ್ಯ ಜೂನ್ 2, 2014 ರಂದು ಆವಿರ್ಭವಿಸಿದೆ. ಇದು ಭಾರತ ದೇಶದಲ್ಲಿ 29ನೇ ರಾಜ್ಯ.




SCERT TELANGANA

ನಮ್ಮ ರಾಜ್ಯದ ನಕ್ಷೆಯನ್ನು ನೋಡಿದ್ದೀರಿ ಅಲ್ಲವೇ! ಇದೇ ರೀತಿ ಪ್ರತಿ ರಾಜ್ಯಕ್ಕೆ ಸಹ ಒಂದು ನಕ್ಷೆ(ಪಟ) ಇರುತ್ತದೆ. ಭಾರತದೇಶದ ನಕ್ಷೆಯಲ್ಲಿ ನಮ್ಮ ರಾಜ್ಯವನ್ನು ಗುರ್ತಿಸಿರಿ. ನಮ್ಮ ರಾಜ್ಯವನ್ನು ಹೊಂದಿಕೊಂಡಿರುವ ಇತರ ರಾಜ್ಯಗಳನ್ನು ಸಹ ಗುರ್ತಿಸಿರಿ. ನಮ್ಮ ರಾಜ್ಯಕ್ಕೆ ಯಾವ ಯಾವ ದಿಕ್ಕಿನಲ್ಲಿ ಏನೇನು ಇವೆಯೋ ಗುರ್ತಿಸುವುದರಿಂದ ನಮ್ಮ ರಾಜ್ಯದ ಸರಿಹದ್ದುಗಳನ್ನು ನಾವು ತಿಳಿದುಕೊಳ್ಳಬಹುದು. ನಿಮ್ಮ ಮಿತ್ರರೊಂದಿಗೆ ಕೂಡಿ ಗುಂಪುಗಳಲ್ಲಿ ಚರ್ಚಿಸಿ ಬರೆಯಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ನಮ್ಮ ರಾಜ್ಯಕ್ಕೆ ನಾಲ್ಕು ದಿಕ್ಕುಗಳಲ್ಲಿ ಏನು ಇವೆ ?
- ರಾಜ್ಯದ ನಕ್ಷೆಯಲ್ಲಿ ನಿಮ್ಮ ಜಿಲ್ಲೆ ಎಲ್ಲಿದೆ ಗುರ್ತಿಸಿರಿ.
- ನಿಮ್ಮ ಜಿಲ್ಲೆಯ ಸರಿಹದ್ದುಗಳನ್ನು ಹೇಳಿರಿ.
- ಛತ್ತೀಸ್‌ಘರ್ ರಾಜ್ಯಕ್ಕೆ ಹೊಂದಿಕೊಂಡು ಇರುವ ಜಿಲ್ಲೆಗಳು ಯಾವುವು ?
- ಅಟ್ಲಾಸ್ ತೆಗೆದುಕೊಳ್ಳಿ. ಅಟ್ಲಾಸ್ ಎಂದರೆ ವಿವಿಧ ನಕ್ಷೆಗಳಿರುವ ಪುಸ್ತಕ ಇದರಲ್ಲಿ ರಹದಾರಿಗಳ ಮುಖ್ಯವಾದ ಸ್ಥಳಗಳು, ನದಿಗಳು, ಪರ್ವತಗಳು, ಬೆಳೆಗಳು ಮೊದಲಾದವುಗಳ ವಿವರಗಳಿರುತ್ತವೆ. ಅಟ್ಲಾಸ್‌ನಲ್ಲಿ ನಮ್ಮ ರಾಜ್ಯದ ಚಿತ್ರಪಟವನ್ನು ನೋಡಿರಿ. ಗೋದಾವರಿ ನದಿಯೂ ಯಾವ ಯಾವ ಜಿಲ್ಲೆಗಳ ಮೂಲಕ ಹರಿಯುತ್ತದೆಯೋ ಹೇಳಿರಿ.
- ಹೈದ್ರಾಬಾದ್ ಸುತ್ತಲೂ ಇರುವ ಜಿಲ್ಲೆಗಳು ಯಾವುವು ?
- ಅಟ್ಲಾಸ್‌ನಲ್ಲಿ ನೋಡಿ ನಮ್ಮ ರಾಜ್ಯದಲ್ಲಿನ ಮುಖ್ಯವಾದ ಪಟ್ಟಣಗಳು ಯಾವುವು ಹೇಳಿರಿ. ಬೆಳೆಯುವ ಬೆಳೆಗಳನ್ನು ಗುರ್ತಿಸಿರಿ.

**ಹೀಗೆ ಮಾಡಿರಿ :**

- ಭಾರತ ದೇಶದ ನಕ್ಷೆಯಲ್ಲಿ ನಮ್ಮ ರಾಜ್ಯದ ಸರಿಹದ್ದುಗಳನ್ನು ಗುರ್ತಿಸಿರಿ.
- ನಮ್ಮ ದೇಶಕ್ಕೆ ಯಾವ ದಿಕ್ಕಿಗೆ ಏನು ಇವೆ ಎಂದು ಗುರ್ತಿಸಿರಿ.

ಈ ಪಾಠದಲ್ಲಿ ಗ್ರಾಮ, ಮಂಡಲ, ಜಿಲ್ಲೆ, ರಾಜ್ಯದ ನಕ್ಷೆಗಳನ್ನು ಕುರಿತು ತಿಳಿದುಕೊಂಡಿದ್ದೀರಿ. ಅಲ್ಲವೇ! ಈ ನಕ್ಷೆಗಳನ್ನು ವಿವಿಧ ಸಂದರ್ಭಗಳಲ್ಲಿ ಅಗತ್ಯವಾದಾಗ ಉಪಯೋಗಿಸಬೇಕು. ನಾವು ಹೊಸ ಪ್ರಾಂತಕ್ಕೆ ಹೋದಾಗ ನಕ್ಷೆಯಲ್ಲಿ ಪರಿಶೀಲಿಸಿ ಹೋಗಬೇಕಾದ ಪ್ರಾಂತ / ಪ್ರದೇಶ ಎಲ್ಲಿದೆಯೆಂದು ಗುರ್ತಿಸಬಹುದು. ಸಾಧಾರಣವಾಗಿ ವಿದೇಶಿಯರು ನಮ್ಮ ದೇಶಕ್ಕೆ ಬಂದಾಗ ಯಾರನ್ನು ಕೇಳದೇ ನಕ್ಷೆಯ ಆಧಾರವಾಗಿ ಹೋಗಬೇಕಾದ ಪ್ರಾಂತಗಳನ್ನು, ರಹದಾರಿಗಳ ವಿವರಗಳನ್ನು ತಿಳಿದುಕೊಳ್ಳುವರು. ದೊಡ್ಡ ದೊಡ್ಡ ರೈಲ್ವೆ ನಿಲ್ದಾಣಗಳಲ್ಲಿ, ವಿಹಾರ ಸ್ಥಳಗಳಲ್ಲಿ ಆ ಪ್ರಾಂತಕ್ಕೆ ಸಂಬಂಧಿಸಿದ ನಕ್ಷೆಗಳನ್ನು ಪ್ರದರ್ಶಿಸಿರುತ್ತಾರೆ. ಇವುಗಳನ್ನು ನೋಡಿ ಅಲ್ಲಿಯ ಮುಖ್ಯವಾದ ಪ್ರಾಂತಗಳನ್ನು ಪ್ರದೇಶಗಳನ್ನು ಗುರ್ತಿಸಬಹುದು. ನಕ್ಷೆಗಳ ಆಧಾರವಾಗಿ ಒಂದು ಪ್ರಾಂತದಲ್ಲಿನ ಬಿಸಿಲು, ಬಿಸಿ (ಉಷ್ಣಾಂಶ), ಚಳಿ, ಮಳೆಯ ಪ್ರಮಾಣ (ವರ್ಷ ಪಾತ) ಮುಂತಾದ ಹವಾಮಾನಕ್ಕೆ ಸಂಬಂಧಿಸಿದ ವಿವರಗಳನ್ನು ಸಹ ತಿಳಿದುಕೊಳ್ಳಬಹುದು. ಈ ವಿವರಗಳನ್ನು ನೀವು ಮೇಲಿನ ತರಗತಿಯಲ್ಲಿ ಮತ್ತಷ್ಟು ವಿವರವಾಗಿ ತಿಳಿದುಕೊಳ್ಳುವಿರಿ.

ನೀವು, ನಿಮ್ಮ ತರಗತಿಯಲ್ಲಿರುವ ಆಂಧ್ರಪ್ರದೇಶ್ ನಕ್ಷೆಯನ್ನು, ಭಾರತ ದೇಶ ನಕ್ಷೆಯನ್ನು ನೋಡಿರಿ. ಏನು ಇವೆ ಎಂದು ತಿಳಿದುಕೊಳ್ಳಿರಿ.

SCERT TELANGANA

**ಮುಖ್ಯ ಪದಗಳು :**

| | | | | | |
|---|---|---|---|---|---|
| 1 | ನಕ್ಷೆ/ ಪಟ | 4 | ಜಿಲ್ಲೆ | 7 | ಸರಿಹದ್ದುಗಳು (ಮೇರೆಗಳು) |
| 2 | ಗ್ರಾಮ | 5 | ರಾಜ್ಯ | 8 | ದಿಕ್ಕುಗಳು |
| 3 | ಮಂಡಲ | 6 | ದೇಶ | 9 | ಮೂಲೆಗಳು |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನ) ತಿಳುವಳಿಕೆ :

ಅ) ನಿಮ್ಮ ಮನೆಗೆ ನಾಲ್ಕು ದಿಕ್ಕುಗಳಲ್ಲಿ ಏನು ಇವೆ ?

ಆ) ನಿಮ್ಮ ಪಾಠಶಾಲೆಯ ಸುತ್ತಮುತ್ತಲಿನಲ್ಲಿ ಏನು ಇವೆ ?

- ಪೂರ್ವ ________________
- ಪಶ್ಚಿಮ ________________
- ಉತ್ತರ ________________
- ದಕ್ಷಿಣ ________________
- ವಾಯುವ್ಯ ________________
- ಆಗ್ನೇಯ ________________
- ಈಶಾನ್ಯ ________________
- ನೈರುತ್ಯ ________________

ಇ) 


ಚಂದುಗೆ ಯಾವ ದಿಕ್ಕಿನಲ್ಲಿ ಏನೇನು ಇವೆ ?

ಈ) ಸರಿಹದ್ದುಗಳು ಎಂದರೇನು ? ನಿಮ್ಮ ಗ್ರಾಮಕ್ಕೆ ಸರಿಹದ್ದುಗಳನ್ನು ತಿಳಿಸಿರಿ ?

ಉ) ಮಂಡಲಕ್ಕೆ, ಜಿಲ್ಲೆಗೆ ಇರುವ ವ್ಯತ್ಯಾಸಗಳು ಏನು ?

ಊ) ಗ್ರಾಮಗಳಿಗೆ, ಮಂಡಲಗಳಿಗೆ ಇರುವ ಸಂಬಂಧಗಳು ಏನು ?

SCERT TELANGANA

## 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ತೆಲಂಗಾಣ ನಕ್ಷೆಯನ್ನು ನೋಡಿರಿ. ನಿಮಗೆ ಬೇಕಾದ ಸಮಾಚಾರಗಳಿಗೋಸ್ಕರವಾಗಿ ಕೆಲವು ಪ್ರಶ್ನೆಗಳು ಬರೆಯಿರಿ.

## 3. ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

ಅ) ನಿಮ್ಮ ತರಗತಿ ಕೋಣೆಯ ನಕ್ಷೆಯನ್ನು ಬೆಂಕಿ ಕಡ್ಡಿಗಳ ಸಹಾಯದಿಂದ ಹಾಕಿರಿ. ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

ಆ) ನೀವು ನಿಮ್ಮ ಶಾಲೆಯಿಂದ, ನಿಮ್ಮ ಗ್ರಾಮದಲ್ಲಿ ಯಾವುದಾದರೊಂದು ಮುಖ್ಯ ಸ್ಥಳಕ್ಕೆ ಸೇರುವಂತೆ ಗುರ್ತುಗಳಿಂದ ತೋರಿಸಿರಿ. ಅದನ್ನು ನಿಮ್ಮ ಮಿತ್ರನಿಗೆ ಕೊಡಿರಿ. ಆ ಮುಖ್ಯವಾದ ಸ್ಥಳ ಯಾವುದೋ ಗುರ್ತಿಸಿರುವನೇ ಕೇಳಿರಿ. ಹಾಗೆಯೇ ನಿಮ್ಮ ಮಿತ್ರನು ಬರೆದಿರುವುದನ್ನು ತೆಗೆದುಕೊಂಡು ನೀವು ಹೇಳಿರಿ.

## 4 ಸಮಾಚಾರ ಕೌಶಲ್ಯತೆ, ಪ್ರಾಜೆಕ್ಟ್‌ಗಳು :

- ನಿಮ್ಮ ಸುತ್ತಮುತ್ತಲಿರುವ ಮನೆಗಳಿಗೆ ಹೋಗಿರಿ. ನಿಮ್ಮ ಪರಿಶೀಲನೆಗಳನ್ನು ಕೆಳಗಿನ ಪಟ್ಟಿಯಲ್ಲಿ ನಮೂದು ಮಾಡಿರಿ.

| ಪರಿಶೀಲನೆಗಳು | ನಮೂದು ಮಾಡಬೇಕಾದ ಅಂಶಗಳು | | |
|---|---|---|---|
| | 1ನೇ ಮನೆ | 2ನೇ ಮನೆ | 3ನೇ ಮನೆ |
| • ಮನೆಯ ತಲಬಾಗಿಲು ಯಾವ ದಿಕ್ಕಿನಲ್ಲಿದೆ ? | | | |
| • ಮನೆಯಲ್ಲಿ ಕೊಳಾಯಿ / ಬಾವಿ / ಬೋರು ಬಾವಿ / ನೀರಿನ ಪಂಪು ಮೊದಲಾದವು ಯಾವ ದಿಕ್ಕು / ಯಾವ ಮೂಲೆಯಲ್ಲಿದೆ ? | | | |
| • ಮನೆಯಲ್ಲಿ ಅಡಿಗೆಕೋಣೆ ಯಾವ ಮೂಲೆಯಲ್ಲಿದೆ? | | | |
| • ಮನೆಯಲ್ಲಿ ಖಾಲಿ ಸ್ಥಳ ಯಾವ ದಿಕ್ಕಿನಲ್ಲಿದೆ ? | | | |
| • ಮನೆಗೆ ಕಿಟಕಿಗಳು, ಬಾಗಿಲುಗಳು ಯಾವ ಯಾವ ದಿಕ್ಕಿನಲ್ಲಿ ಇವೆ ? | | | |
| • ಮನೆಗೆ ರಸ್ತೆ ಯಾವ ಕಡೆ ಇದೆ ? | | | |

- ಎಲ್ಲಾ ಮನೆಗಳಲ್ಲಿ ಏರ್ಪಾಟುಗಳು ಒಂದೇ ರೀತಿಯಾಗಿವೆಯೇ ?
- ನೀರಿನ ಸೌಕರ್ಯ, ಅಡಿಗೆ ಮನೆ ಸಾಧಾರಣವಾಗಿ ಎಲ್ಲಾ ಮನೆಗಳಲ್ಲಿ ಯಾವ ದಿಕ್ಕು / ಮೂಲೆಯಲ್ಲಿ ಇವೆ ?
- ಮನೆಯಲ್ಲಿನ ಏರ್ಪಾಟುಗಳಿಗೆ ದಿಕ್ಕುಗಳು / ಮೂಲೆಗಳಿಗೆ ಮಧ್ಯ ಯಾವುದಾದರೂ ಸಂಬಂಧವನ್ನು ಗುರ್ತಿಸಿದ್ದೀರಾ ?

SCERT TELANGANA

## 5. ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟಣೆ :



ಅ) ನಿಮ್ಮ ಮಿತ್ರರೊಂದಿಗೆ ಸೇರಿ ನಿಮ್ಮ ಪಾಠಶಾಲೆಯ ಮಾದರಿಯನ್ನು ರಟ್ಟು ಗಳಿಂದ ತಯಾರು ಮಾಡಿರಿ. ಇದಕ್ಕೆ ಯಾವ ಯಾವ ದಿಕ್ಕಿನಲ್ಲಿ ಏನೇನು ಇವೆಯೋ ತೋರಿಸಬೇಕು.

ಆ) ನಿಮ್ಮ ಮನೆಯ ಚಿತ್ರಪಟ ಹಾಕಿರಿ. ವಿವಿಧ ಕೋಣೆಗಳನ್ನು ಗುರ್ತಿಸಿರಿ.

ಇ) ನಿಮ್ಮ ಗ್ರಾಮದ ಚಿತ್ರಪಟವನ್ನು ಬರೆಯಿರಿ.

ಈ) ನಿಮ್ಮ ಮಂಡಲದ ಚಿತ್ರಪಟವನ್ನು ಬರೆದು, ನಿಮ್ಮ ಗ್ರಾಮವನ್ನು ಗುರುತಿಸಿರಿ.

ಉ) ತೆಲಂಗಾಣ ನಕ್ಷೆಯಲ್ಲಿ ನಿಮ್ಮ ಜಿಲ್ಲೆಯ ಹೆಸರನ್ನು ಬರೆಯಿರಿ. ಮತ್ತು ನಿಮ್ಮ ಜಿಲ್ಲೆಗೆ ಹೊಂದಿಕೊಂಡಿರುವ ಜಿಲ್ಲೆಗಳ ಹೆಸರುಗಳನ್ನು ಬರೆಯಿರಿ.

ಊ) ತೆಲಂಗಾಣ ನಕ್ಷೆಯ ಆಧಾರವಾಗಿ ಯಾವ ಜಿಲ್ಲೆಗಳ ಗುಂಟ ಗೋದಾವರಿ ನದಿ ಪ್ರವಹಿಸುತ್ತದೆ ಹೇಳಿರಿ.

ಋ) ತೆಲಂಗಾಣ ನಕ್ಷೆಯನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಬರೆದು ಮೇಲಿನ ಚಿತ್ರದಲ್ಲಿನ ಜಿಲ್ಲೆಗಳ ಹೆಸರುಗಳನ್ನು ಬರೆಯಿರಿ. ರಾಜ್ಯ ಮೇರೆಗಳನ್ನು ಬರೆಯಿರಿ.

ಎ) ನಿಮ್ಮ ಜಿಲ್ಲೆಯ ನಕ್ಷೆಯನ್ನು ಬರೆದು, ನಿಮ್ಮ ಮಂಡಲವನ್ನು ಗುರುತಿಸಿರಿ.

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :

ಅ) ನೀವು ನಕ್ಷೆಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಬಳಸುತ್ತೀರಿ ?

ಆ) ನಕ್ಷೆಗಳಿಂದ ನೀವು ಯಾವ ಯಾವ ಸಮಾಚಾರ ತಿಳಿದುಕೋಳ್ಳುತ್ತೀರೋ ಹೇಳಿರಿ.

ಇ) ನಕ್ಷೆಗಳ ಅವಶ್ಯಕತೆ ಏಕೆ ? ಯಾಕೆ ?

### ನಾನು ಇವುಗಳನ್ನು ಮಾಡಬಲ್ಲೆನಾ ?

| | | |
|---|---|---|
| 1 | ದಿಕ್ಕುಗಳು, ಮೂಲೆಗಳ ಬಗ್ಗೆ ಹಾಗೆಯೇ ಮನೆಗೆ, ಶಾಲೆಗೆ, ಗ್ರಾಮಕ್ಕೆ ಯಾವ ಯಾವ ದಿಕ್ಕಿನಲ್ಲಿ ಏನೇನು ಇವೆಯೋ ಹೇಳುವೆನು. | ಹೌದು / ಇಲ್ಲ |
| 2 | ರಾಜ್ಯದ ನಕ್ಷೆಯನ್ನು ನೋಡಿ ತಿಳಿಯದ ಅಂಶಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಬರೆಯಬಲ್ಲೆನು. | ಹೌದು / ಇಲ್ಲ |
| 3 | ಪಾಠಶಾಲೆಯ ಮಾದರಿಯನ್ನು ರಟ್ಟುಗಳಿಂದ ತಯಾರು ಮಾಡಬಲ್ಲೆನು. | ಹೌದು / ಇಲ್ಲ |
| 4 | ನಕ್ಷೆಗಳನ್ನು ಅವಶ್ಯಕವಾದ ಸಮಾಚಾರಕ್ಕಾಗಿ ಉಪಯೋಗಿಸುವೆನು. | ಹೌದು / ಇಲ್ಲ |

SCERT TELANGANA

# 7  ಸಾರ್ವಜನಿಕ ಸಂಸ್ಥೆಗಳು

ರಂಗಾಪುರ ಗ್ರಾಮಕ್ಕೆ ಸುತ್ತಲೂ ಬೆಟ್ಟಗುಡ್ಡಗಳಿವೆ. ಗ್ರಾಮಕ್ಕೆ ಹತ್ತಿರದಲ್ಲಿ ನದಿ ಪ್ರವಹಿಸುತ್ತದೆ. ಮಳೆ ಹೆಚ್ಚಾಗಿ ಬರುವುದರಿಂದ ನದಿಗೆ ಪ್ರವಾಹಗಳು ಬಂದಿವೆ. ಪ್ರವಾಹದ ನೀರು ರಂಗಾಪುರ ಗ್ರಾಮದೊಳಕ್ಕೆ ಪ್ರವೇಶಿಸಿದೆ. ಇದರಿಂದ ಗ್ರಾಮದಲ್ಲಿನ ಬೀದಿಗಳೆಲ್ಲವು ನೀರಿನಿಂದ ತುಂಬಿವೆ. ಪ್ರವಾಹಗಳು ಕಡಿಮೆಯಾದ ನಂತರ ಬೀದಿಗಳೆಲ್ಲವೂ ಕೆಸರಿನಿಂದ ತುಂಬಿದೆ. ವಿದ್ಯುತ್ ತಂತಿಗಳು ಬಿದ್ದು ಹೋಗಿವೆ. ಕೊಳಾಯಿ ಪೈಪುಗಳು ಒಡೆದು ಹೋಗಿವೆ. ಕೊಳಾಯಿಗಳಲ್ಲಿ ನೀರು ಬರುವುದಿಲ್ಲ. ಗ್ರಾಮದಲ್ಲಿ ಇದರಿಂದ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಹೀಗೆ ಗ್ರಾಮದಲ್ಲಿನ ಸಮಸ್ಯೆಗಳನ್ನು ಯಾರು ಪರಿಹರಿಸುತ್ತಾರೆ ? ಯಾರು ಶ್ರದ್ಧೆವಹಿಸಬೇಕು ? ಹೀಗೆ ಪ್ರವಾಹಗಳು ಬಂದಾಗ ಗ್ರಾಮದಲ್ಲಿ ಇನ್ನೂ ಯಾವ ಯಾವ ಸಮಸ್ಯೆಗಳು ಬಂದಿರಬಹುದು? ಮೊದಲಾದ ವಿಷಯಗಳನ್ನು ಕುರಿತು ನಿಮ್ಮ ಮಿತ್ರರೊಂದಿಗೆ ಚರ್ಚಿಸಿರಿ. ಬರೆಯಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ರಂಗಾಪುರ ಬೀದಿಗಳಲ್ಲಿ ಕೆಸರನ್ನು ಯಾರು ತೆಗೆದುಹಾಕಬೇಕು ?
- ವಿದ್ಯುತ್ ತಂತಿಗಳನ್ನು ಯಾರು ರಿಪೇರಿ ಮಾಡಬೇಕು ?
- ಕೊಳಾಯಿ ಪೈಪುಗಳನ್ನು ಯಾರು ರಿಪೇರಿ ಮಾಡುತ್ತಾರೆ ?
- ಗ್ರಾಮದಲ್ಲಿ ಸಮಸ್ಯೆಗಳು ಎದುರಾದರೆ ಯಾರಿಗೆ ದೂರು ಸಲ್ಲಿಸಬೇಕು ?

ಗ್ರಾಮದಲ್ಲಿನ ಸಮಸ್ಯೆಗಳನ್ನು ಪರಿಷ್ಕರಿಸುವುದಕ್ಕೆ, ಗ್ರಾಮದಲ್ಲಿ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಗ್ರಾಮ ಪಂಚಾಯಿತಿ ಇರುತ್ತದೆ. ಗ್ರಾಮ ಸ್ಥಾಯಿಯಲ್ಲಿ ಪಾಠಶಾಲೆ, ಪಶುಚಿಕಿತ್ಸಾಲಯ, ಅಂಗನವಾಡಿ ಕೇಂದ್ರದಂತಹ ಇತರ ಸಂಸ್ಥೆಗಳು ಸಹ ಇರುತ್ತವೆ. ಇವುಗಳಿಂದ ಜನರಿಗೆ ಒಳಿತು ಜರುಗುತ್ತದೆ. ಹೀಗೆ ಸಮಾಜದಲ್ಲಿನ ಪ್ರಜೆಗಳೆಲ್ಲರಿಗೂ (ಜನರಿಗೆ) ಅವಶ್ಯಕವಾದ (ಬೇಕಾಗುವ) ಕೆಲಸಗಳನ್ನು ಮಾಡುವ ಸಂಸ್ಥೆಗಳನ್ನು ''ಸಾರ್ವಜನಿಕ ಸಂಸ್ಥೆಗಳು'' ಎನ್ನುವರು.

## 7.1 ಸಾರ್ವಜನಿಕ ಸಂಸ್ಥೆಗಳು - ಗ್ರಾಮ ಪಂಚಾಯಿತಿ :




ಮೋಹನ್ ಆಹಾರ ಭದ್ರತೆಯ ಚೀಟಿ (ರೇಷನ್ ಕಾರ್ಡ್)ಗಾಗಿ ಅರ್ಜಿ ಸಲ್ಲಿಸಬೇಕೆಂದುಕೊಂಡಿದ್ದಾನೆ. ಆಹಾರ ಭದ್ರತೆಯ ಕಾರ್ಡ್ ತೆಗೆದುಕೊಂಡರೆ ನಿತ್ಯಾವಸರ ವಸ್ತುಗಳು ಬರುತ್ತವೆ. ಬ್ಯಾಂಕ್ ಸಾಲವನ್ನು ಸಹ ನೀಡುತ್ತದೆ.

ಮಗಳು ಅರುಣಳನ್ನು ಕರೆದುಕೊಂಡು ಗ್ರಾಮ ರೆವೆನ್ಯೂ ಕಾರ್ಯದರ್ಶಿಯನ್ನು ಭೇಟಿಯಾಗಲು ಗ್ರಾಮ ಪಂಚಾಯಿತಿ ಕಛೇರಿ ಹೋದನು.

'' ನನ್ನ ಹೆಸರು ಮೋಹನ್, ನನಗೆ ಹೆಂಡತಿ, ಮಗ, ಮಗಳು ಇದ್ದಾರೆ. ನನಗೆ ಆಹಾರ ಭದ್ರತೆಯ ಕಾರ್ಡ್ ಇಲ್ಲ. ಅದಕ್ಕಾಗಿ ಅರ್ಜಿ ಸಲ್ಲಿಸಲು ಬಂದಿರುವೆನು'' ಎಂದು ಹೇಳಿದನು. ಬಿಳಿ ಕಾಗದದ ಮೇಲೆ ನಿನ್ನ ಮಾಹಿತಿಯನ್ನು ಬರೆದು ಅರ್ಜಿಯನ್ನು

SCERT TELANGANA

ಕೊಡು ಎಂದು ಪಂಚಾಯತಿ ಕಾರ್ಯದರ್ಶಿ ಹೇಳಿದನು.

ಹೀಗಿರುವಾಗ ಬೆಳೆಯ ವಿವರಗಳ ನಮೂದಿಗಾಗಿ ಬಂದಿರುವವರನ್ನು ಒಳಗೆ ಬರಲು ಗ್ರಾಮ ಕಾರ್ಯದರ್ಶಿಗಳು ಬರ ಹೇಳಿದರು. ಪಹಣಿ (ಅಡಂಗಲ್) ಯ ಆಧಾರವಾಗಿ ಗ್ರಾಮದ ರೆವೆನ್ಯೂ ಸಹಾಯಕನ ಜೊತೆಗೂಡಿ ಗ್ರಾಮ ಕಾರ್ಯದರ್ಶಿ ರಿಕಾರ್ಡ್‌ಗಳ (ದಾಖಲಾತಿಗಳು)ನ್ನು ಪರಿಶೀಲಿಸಿ ರಸೀದಿಗಳನ್ನು ನೀಡಿದರು. ಗ್ರಾಮಸ್ಥಾಯಿಯಲ್ಲಿ ಗ್ರಾಮ ಕಾರ್ಯದರ್ಶಿಯಂತೆ ಇತರೆ ಅಧಿಕಾರಿಗಳು ಸಹ ಇರುತ್ತಾರೆ.

ಗ್ರಾಮ ಪಂಚಾಯಿತಿ ಹಂತದಲ್ಲಿ ವಿವಿಧ ಅಧಿಕಾರಿಗಳು ಮಾಡುವ ಕೆಲವು ಕೆಲಸಗಳನ್ನು ಕೆಳಗೆ ನೀಡಿರುವ ಪಟ್ಟಿಯಲ್ಲಿವೆ. ಆ ಕೆಲಸಗಳನ್ನು ಯಾವ ಅಧಿಕಾರಿಗಳು ನಿರ್ವಹಿಸುವರೋ ನಿಮ್ಮ ಶಿಕ್ಷಕರಿಂದ ತಿಳಿದುಕೊಂಡು ಪಟ್ಟಿಯಲ್ಲಿ ನಮೂದಿಸಿರಿ.

| ಕ್ರ.ಸಂ. | ಕೆಲಸದ ಹೆಸರು | ಜವಾಬ್ದಾರಿವಹಿಸುವ ಅಧಿಕಾರಿ |
|---|---|---|
| 1. | ಬೆಳೆಗಳ ವಿವರಗಳ ನಮೂದು | ಗ್ರಾಮ ರೆವೆನ್ಯೂ ಅಧಿಕಾರಿ (ವಿ.ಆರ್.ಒ) |
| 2. | ಮನೆ ಕಂದಾಯ ವಸೂಲಿ | |
| 3. | ಬೀದಿ ದೀಪಗಳ ಏರ್ಪಾಟು | |
| 4. | ಭೂ ವಿವರಗಳ ನಿರ್ವಹಣೆ | |
| 5. | ಜನನ ಮರಣಗಳ ನಮೂದು | |
| 6. | ರೆವೆನ್ಯೂ ಕಾರ್ಯಾಲಯದ ಕೆಲಸಗಳಿಗೆ ಜವಾಬ್ದಾರಿವಹಿಸುವಿಕೆ | |
| 7. | ಮಂಡಲ ಪರಿಷತ್ ಕಾರ್ಯಾಲಯದ ಕೆಲಸಕ್ಕೆ ಜವಾಬ್ದಾರಿವಹಿಸುವಿಕೆ | |
| 8. | ಕೊಳಾಯಿ ನೀರಿನ ಬಿಲ್ಲು ವಸೂಲು ಮಾಡುವಿಕೆ | |
| 9. | ಅಂಚೆ ಪತ್ರಗಳನ್ನು ತಲುಪಿಸುವುದು | |
| 10. | ಶಾಲಾ ನಿರ್ವಹಣೆ | |
| 11. | ಒಳ ಚರಂಡಿ ನಿರ್ವಹಣೆ (ಶುಭ್ರಗೊಳಿಸುವಿಕೆ) | |
| 12. | ಚುಚ್ಚುಮದ್ದುಗಳು, ಔಷಧಿಗಳ (ವಿತರಣೆ) ನೀಡುವಿಕೆ | |

**ಶೇಖರಿಸಿರಿ :**



- ನೀವು ನಗರಗಳಲ್ಲಿ ವಾಸಿಸಿದರೆ ಪಟ್ಟಿಯಲ್ಲಿ ಸೂಚಿಸಿದ ಅಂಶಗಳಿಗೆ ಜವಾಬ್ದಾರಿವಹಿಸುವವರ ವಿವರಗಳನ್ನು ನಿಮ್ಮ ತಂದೆ ತಾಯಿಗಳನ್ನು / ಶಿಕ್ಷಕರನ್ನು ಕೇಳಿ ತಿಳಿಯಿರಿ. ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ.
- ನಿಮ್ಮ ಗ್ರಾಮಾಭಿವೃದ್ಧಿಯ ಮೇಲೆ, ವಿವಿಧ ಕೆಲಸಗಳ ಮೇಲೆ ಗ್ರಾಮ ಪಂಚಾಯಿತಿಯೂ ಎಂದಾದರೂ ಸಮೀಕ್ಷೆ ನಡೆಸಿದೆಯೇ ? ಆಗಿದ್ದರೆ ಯಾವ ಅಂಶಗಳ ಮೇಲೆ ಚರ್ಚಿಸಿದ್ದಾರೆ? ನಿಮ್ಮ ಸರ್ಪಂಚ್ ಮತ್ತು ಗ್ರಾಮ ಕಾರ್ಯದರ್ಶಿಯನ್ನು ಬೇಟಿಯಾಗಿ ಸಮಾಚಾರವನ್ನು ಸಂಗ್ರಹಿಸಿರಿ.

SCERT TELANGANA




ಅರುಣ ಬಿಳಿ ಕಾಗದದ ಮೇಲೆ ಅರ್ಜಿಯನ್ನು ಬರೆದಳು. ಅದನ್ನು ಕಾರ್ಯದರ್ಶಿಗೆ ಕೊಟ್ಟಳು. ತಹಶಿಲ್ದಾರ್ ಅವರ ಕಛೇರಿ, ಅವರು ಆನ್‌ಲೈನ್‌ನಲ್ಲಿ ವಿವರಗಳನ್ನು ನಮೋದಿಸಿದರು. ಮೋಹನ್ ಬರೆದುಕೊಟ್ಟ ಮಾಹಿತಿಯನ್ನು ತಮ್ಮಲ್ಲೇ ಇರುವ ಮಾಹಿತಿಯೊಂದಿಗೆ ಹೋಲಿಸಿ ನೋಡಿದರು. ಮೋಹನ್ ಕುಟುಂಬದ ಮಾಹಿತಿಯನ್ನು ಜಿಲ್ಲಾ ನಾಗರಿಕ ಸರಬರಾಜು ಅಧಿಕಾರಿಗಳಿಗೆ ಕಳುಹಿಸಿದರು. ಕೆಲವು ದಿನಗಳ ನಂತರ ಜಿಲ್ಲಾ ಕಛೇರಿ ಅವರು ಆಹಾರ ಭದ್ರತೆಯ ಕಾರ್ಡನ್ನು ಮಂಜೂರುಮಾಡಿ ತಹಶಿಲ್ದಾರರಿಗೆ ಕಳುಹಿಸಿದರು.






SCERT TELANGANA

**ನಿಮಗೆ ಗೊತ್ತೇ ?**

ಇತ್ತೀಚಿಗೆ ಆಧಾರ್ ಚೀಟಿ ಮಂಜುರಾತಿ ಮಾಡುವ ಸಂದರ್ಭದಲ್ಲಿ ವ್ಯಕ್ತಿಗಳ ಕಣ್ಣುಗಳನ್ನು 'ಐರಿಷ್' ಕೆಮಾರಾದಲ್ಲಿ ಭಾವಚಿತ್ರವನ್ನು ತೆಗೆಯುತ್ತಿದ್ದಾರೆ. ವ್ಯಕ್ತಿಯ ಕಣ್ಣು ಗುಡ್ಡೆಯ ಮೇಲಿರುವ ವೃತ್ತಾಕಾರ (ವಲಯಾಕಾರ) ಭಾಗವನ್ನು 'ಐರಿಷ್' ಎನ್ನುವರು. ಐರಿಷ್ ಕೆಮರಾ ಐರಿಷ್ ಭಾಗವನ್ನು ಫೋಟೋ ತೆಗೆದು ಹಾಳಾಗದಂತೆ ಭದ್ರಪಡಿಸುತ್ತದೆ. ಇದನ್ನು 'ಮಿಮಿಜೋಯ್' ಕಂಡು ಹಿಡಿದಿದ್ದಾರೆ. ಒಂದು ಸಾರಿ ಫೋಟೋ ತೆಗೆಸಿಕೊಂಡವರು ಮತ್ತೊಂದು ಸಾರಿ ಬಂದರೆ ಇದು ತಕ್ಷಣವೇ ಗುರ್ತಿಸುತ್ತದೆ.

**ಐರಿಷ್ ಫೋಟೋ ತೆಗೆಯುವ ಕೇಂದ್ರ**



**ಹೀಗೆ ಮಾಡಿರಿ :**

- ನಿಮ್ಮ ಮನೆಯಲ್ಲಿ ಆಹಾರ ಭದ್ರತೆಯ ಚೀಟಿಯನ್ನು ಪರಿಶೀಲಿಸಿರಿ. ಯಾವ ಯಾವ ಸಮಾಚಾರವನ್ನು ಗಮನಿಸಿದ್ದೀರೋ ನಿಮ್ಮ ನೋಟು ಪುಸ್ತಕದಲ್ಲಿ ಬರೆಯಿರಿ.

ತಹಶಿಲ್ದಾರರಿಂದ ಮೋಹನ್ ಆಹಾರ ಭದ್ರತೆಯ ಕಾರ್ಡನ್ನು ಪಡೆದುಕೊಂಡನು. ಈಗ ಮೋಹನ್ ನ್ಯಾಯ ಬೆಲೆಯ ಅಂಗಡಿಯಿಂದ ಸರಕುಗಳನ್ನು ತೆಗೆದುಕೊಳ್ಳುತ್ತಿದ್ದನು. ಆಹಾರ ಭದ್ರತೆಯ ಕಾರ್ಡು ಇದ್ದವರಿಗೆ ನ್ಯಾಯ ಬೆಲೆಯ ಅಂಗಡಿಯಲ್ಲಿ ಸರಕಾರ ನಿರ್ಣಯಿಸಿದ ಬೆಲೆಯಲ್ಲಿಯೇ ಸರಕುಗಳನ್ನು ಮಾರುತ್ತಾರೆ.

**ಸಂಗ್ರಹಿಸಿರಿ :**



ನಿಮ್ಮ ಸ್ನೇಹಿತರೊಂದಿಗೆ ನ್ಯಾಯಬೆಲೆ ಅಂಗಡಿಗೆ ಹೋಗಿರಿ. ಕೆಳಗಿನ ಸಮಾಚಾರವನ್ನು ಶೇಖರಿಸಿರಿ.

| ಕ್ರ.ಸಂ. | ವಿವರಗಳು | ಇದೆ / ಇಲ್ಲ |
|---|---|---|
| 1 | ಸೂಚನಾ ಫಲಕ | |
| 2 | ಕೆಲಸದ ವೇಳಾ ಪಟ್ಟಿ | |
| 3 | ಸೂಚನಾ ಫಲಕದಲ್ಲಿನ ದಿನಸೀ ವಸ್ತುಗಳು ಮಾರಾಟಕ್ಕಾಗಿ | |
| 4 | ದರಗಳ ಪಟ್ಟಿ | |
| 5 | ಒಂದು ತಿಂಗಳು ದಿನಸೀ ವಸ್ತುಗಳು ತೆಗೆದುಕೊಳ್ಳದಿದ್ದರೆ ಮುಂದಿನ ತಿಂಗಳಲ್ಲಿ ನೀಡುವಿರಾ ? | |



SCERT TELANGANA

ಪಡಿತರ ವಸ್ತುಗಳನ್ನು ಸರಿಯಾಗಿ ಕೊಡದಿದ್ದರೆ ಏನು ಮಾಡಬೇಕು ? ಗೊತ್ತೇ ? ದಾರಿದ್ರ್ಯ ರೇಖೆಗೆ ಕೆಳಗಿರುವ ಕಡುಬಡವರಿಗಾಗಿ ಸರ್ಕಾರ ನ್ಯಾಯ ಬೆಲೆ ಅಂಗಡಿಗಳಿಂದ ದಿನಸೀ ವಸ್ತುಗಳನ್ನು ಸರಬರಾಜು ಮಾಡುತ್ತದೆ. ಅವು ಬಡವರಿಗೆ ದೊರೆಯುವುದು ಬಹಳ ಅವಶ್ಯಕ. ಸರಿಯಾಗಿ ದೊರೆಯುವುದಿಲ್ಲವೆಂದು ತಿಳಿದರೆ ತಹಶಿಲ್ದಾರರಿಗೆ ದೂರು ಸಲ್ಲಿಸಬೇಕು.

## 7.2. ಸಾರ್ವಜನಿಕ ಸಂಸ್ಥೆಗಳು - ಮಂಡಲ ಕೇಂದ್ರ :

ಮಂಡಲ ಕೇಂದ್ರದಲ್ಲಿ ತಹಶಿಲ್ದಾರರ ಕಾರ್ಯಾಲಯ ಇರುತ್ತದೆಂದು ತಿಳಿದುಕೊಂಡಿದ್ದೀರಿ. ಅಲ್ಲವೇ! ಇದನ್ನೇ ಮಂಡಲ ರೆವೆನ್ಯೂ ಕಾರ್ಯಾಲಯವೆಂದು ಸಹ ಕರೆಯುತ್ತಾರೆ. ಇದು ಮಂಡಲ ವ್ಯಾಪ್ತಿಯೊಳಗಿನ ಗ್ರಾಮದಲ್ಲಿನ ಕುಟುಂಬಗಳಿಗೆ ಪಡಿತರ ಚೀಟಿಯನ್ನು ಕೊಡುವುದು. ಭೂ ತೆರಿಗೆ ಎಂದರೆ ''ವ್ಯವಸಾಯ ಭೂಮಿಗಳಿಗೆ ಸಲ್ಲಿಸುವ ತೆರಿಗೆ'' ಯನ್ನು ವಸೂಲಿ ಮಾಡುವ ಕೆಲಸಗಳನ್ನು ನಿರ್ವಹಿಸುತ್ತದೆ. ಇದಕ್ಕಾಗಿ ಪ್ರತೀ ಗ್ರಾಮದಲ್ಲಿ ತಹಶೀಲ್ದಾರ ಕಾರ್ಯಾಲಯದ (ಕಂದಾಯ ಇಲಾಖೆ) ಪರವಾಗಿ ಕಾರ್ಯ ನಿರ್ವಹಿಸಲು ಯಾರು ಇರುತ್ತಾರೆ. ನಿಮಗೆ ತಿಳಿದಿದೆಯೇ ? ತಿಳಿದುಕೊಂಡು ಹೇಳಿರಿ. ಮಂಡಲ ಸ್ಥಾಯಿಯಲ್ಲಿ ಮಂಡಲ ರೆವೆನ್ಯೂ ಕಾರ್ಯಾಲಯದ ಜೊತೆಗೆ ಜನಗಳಿಗೆ ಸೇವೆ ಮಾಡಲು ಇನ್ನೂ ಇತರ ಕಾರ್ಯಾಲಯಗಳು ಸಹ ಇರುತ್ತವೆ.

ಮಂಡಲ ಕೇಂದ್ರದಲ್ಲಿ ಇನ್ನೂ ಯಾವ ಯಾವ ಸಂಸ್ಥೆಗಳು ಇರುತ್ತವೆಯೋ ಗೊತ್ತೇ? ಕೆಳಗಿನ ಪಟ್ಟಿಯಲ್ಲಿನ ವಿವರಗಳನ್ನು ಓದಿರಿ.

| ಮಂಡಲ ಹಂತದಲ್ಲಿರುವ ಸಂಸ್ಥೆ | ಮಾಡುವ ಕಾರ್ಯಗಳು |
|---|---|
| **ಮಂಡಲ ಪರಿಷದ್ ಕಾರ್ಯಾಲಯ**<br> | ♦ ಪ್ರಾಥಮಿಕ ಶಿಕ್ಷಣವನ್ನು ತಲುಪಿಸುವುದು.<br>♦ ವ್ಯವಸಾಯ, ಪಶುಪೋಷಣೆ, ಮೀನು.<br>ಕೋಳಿಗಳನ್ನು ಬೆಳೆಸುವುದು ಅಭಿವೃದ್ಧಿ ಮಾಡುವುದು.<br>♦ ಮಂಡಲದಲ್ಲಿ ರಸ್ತೆಗಳ ನಿರ್ಮಾಣ ಮಾಡುವುದು.<br>ಅವುಗಳನ್ನು ರಿಪೇರಿ ಮಾಡುವುದು.<br>♦ ಸಾಗುವಳಿ ನೀರು ಸರಬರಾಜು ಮಾಡುವುದು.<br>♦ ಆರೋಗ್ಯ, ಮಕ್ಕಳ ಕಲ್ಯಾಣ (ಶಿಶುಸಂಕ್ಷೇಮ) ,<br>ಪರಿಶುದ್ಧತೆ ಕಾರ್ಯಕ್ರಮಗಳನ್ನು ಮಾಡುವುದು,<br>ಮೊದಲಾದವು. |
| **ಪೋಲಿಸ್ ಠಾಣೆ**<br> | ♦ ಶಾಂತಿ ಭದ್ರತೆಗಳನ್ನು ಕಾಪಾಡುವುದು.<br>♦ ಅಪರಾಧಗಳು ನಡೆಯದಂತೆ ಮಾಡುವುದು.<br>♦ ಜನರೊಂದಿಗೆ ಉತ್ತಮ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು.<br>♦ ಜನರ ದೂರುಗಳನ್ನು ಸ್ವೀಕರಿಸುವುದು ತಕ್ಷಣ ಸ್ಪಂದಿಸುವುದು.<br>♦ ಅಪರಾಧಗಳ ಮೇಲೆ ವಿಚಾರಿಸುವುದು ರಿಕಾರ್ಡ್ ಮಾಡುವುದು.<br>♦ ಜನರನ್ನು ಸುರಕ್ಷಿತವಾಗಿ ಬದುಕಲು ಮತ್ತು ನಿಯಮಗಳನ್ನು ಪಾಲಿಸಲು ಸಹಾಯ ಮಾಡುತ್ತದೆ.<br>♦ ಮಕ್ಕಳ ಸಂಬಂದಿತ ಸಮಸ್ಯೆಗಳ ರಕ್ಷಣೆಗಾಗಿ ಮತ್ತು ಮಕ್ಕಳ ರಕ್ಷಣಾ ಸಂಸ್ಥೆಗಳು ಇತ್ಯಾದಿ. |

SCERT TELANGANA

| ಮಂಡಲ ಹಂತದಲ್ಲಿರುವ ಸಂಸ್ಥೆ | ಮಾಡುವ ಕಾರ್ಯಗಳು |
|---|---|
| **ತಹಶಿಲ್ದಾರ್ ಕಾರ್ಯಾಲಯ**  | ♦ ಗ್ರಾಮ ರೆವೆನ್ಯೂ ಅಧಿಕಾರಿಗಳು ಮತ್ತು ಮಂಡಲದಲ್ಲಿನ ಕಾರ್ಯಾಲಯ ಸಿಬ್ಬಂದಿಯ ಕೆಲಸವನ್ನು ತನಿಖೆ ಮಾಡುವುದು.<br>♦ ಜನರಿಂದ ಬಂದ ದೂರುಗಳನ್ನು ವಿಚಾರಣೆ ಮಾಡುವುದು.<br>♦ ಸರ್ಕಾರದ ಯೋಜನೆಗಳು ಜನರಿಗೆ ದೊರೆಯುವಂತೆ ನೋಡುವುದು.<br>♦ ಕುಲ, ಆದಾಯ ಧೃಢೀಕರಣ ಪತ್ರಗಳನ್ನು ಕೊಡುವುದು.<br>♦ ಬಿಟ್ಟಿ ಕೆಲಸದಿಂದ ಜನರನ್ನು ವಿಮುಕ್ತ ಗೊಳಿಸುವುದು.<br>♦ ರೈತರಿಗೆ ಪಟ್ಟದಾರು ಪಾಸ್ ಪುಸ್ತಕಗಳನ್ನು ಮಂಜೂರಾತಿ ಮಾಡುವುದು.<br>♦ ಭೂ ವಿವಾದಗಳನ್ನು ಪರಿಷ್ಕರಿಸುವುದು. |
| **ಪ್ರಾಥಮಿಕ ಆರೋಗ್ಯ ಕೇಂದ್ರ**  | ♦ ಮಂಡಲ ವ್ಯಾಪ್ತಿಯಲ್ಲಿನ ಜನರ ಸಾಧಾರಣ ರೋಗಗಳನ್ನು /ಕಾಯಿಲೆಗಳನ್ನು ಪ್ರತಿದಿನ ನೋಡುವುದು.<br>♦ ಆರೋಗ್ಯ ಉಪಕೇಂದ್ರಗಳ ನಿರ್ವಹಣೆಯನ್ನು ತನಿಖೆ ಮಾಡುವುದು.<br>♦ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಮಂಡಲದಲ್ಲಿ ಜಾರಿಗೆ ತರುವುದು.<br>♦ ಮಾತಾ-ಶಿಶು ಸಂರಕ್ಷಣೆ ಕೆಳಗೆ ಹೆರಿಗೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೇ ಮಾಡುವುದು.<br>♦ ಕಾಯಿಲೆ / ರೋಗಗಳನ್ನು ಆಧರಿಸಿ ಜಿಲ್ಲೆಯ ಆರೋಗ್ಯ ಕೇಂದ್ರಕ್ಕೆ ಸಿಫಾರಸ್ಸು ಮಾಡಬಹುದು. |
| **ಬ್ಯಾಂಕ್**  | ♦ ಜನರಿಂದ ಡಿಪಾಜಿಟ್‌ಗಳನ್ನು ಸ್ವೀಕರಿಸುವುದು.<br>♦ ಮಂಡಲ ವ್ಯಾಪ್ತಿಯಲ್ಲಿ ರೈತರಿಗೆ ಸಾಲಗಳನ್ನು ಕೊಡುವುದು.<br>♦ ದಿನ ನಿತ್ಯದ ಡಿಪಾಜಿಟ್‌ಗಳನ್ನು ಸ್ವೀಕರಿಸುವುದು.<br>♦ ಮಂಡಲದಲ್ಲಿನ ಮಹಿಳಾ ಸಂಘಗಳಿಗೆ ಸಾಲಗಳನ್ನು ಕೊಡುವುದು. |

SCERT TELANGANA

| ಮಂಡಲ ಹಂತದಲ್ಲಿರುವ ಸಂಸ್ಥೆ | ಮಾಡುವ ಕಾರ್ಯಗಳು |
|---|---|
| **ಮಂಡಲ ಸಂಪನ್ಮೂಲಗಳ ಕೇಂದ್ರ**   | ♦ ಮಂಡಲದಲ್ಲಿ ಶೇಕಡ 100% ರಷ್ಟು ಮಕ್ಕಳನ್ನು ಶಾಲೆಯಲ್ಲಿ ನಮೂದು ಮಾಡುವುದು.<br>♦ ಶಾಲೆಯಲ್ಲಿ ಸೇರಿದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಕಲಿಸುವುದು.<br>♦ ಶಾಲೆಗಳನ್ನು ಮಾನಿಟರಿಂಗ್ ಮಾಡುವುದು.<br>♦ ಸರಿಯಾದ ಸಮಯಕ್ಕೆ ಹಾಜರಾಗದಿರುವ ಶಿಕ್ಷಕರ ಮೇಲೆ ಕ್ರಮ ತೆಗೆದುಕೊಳ್ಳುವುದು.<br>♦ ಮಧ್ಯಾಹ್ನ ಊಟದ ನಿರ್ವಹಣೆ ಸರಿಯಾಗಿ ನಡೆಯುವಂತೆ ನೋಡುವುದು. |
| **ಪಶು ಚಿಕಿತ್ಸಾಲಯ**  | ♦ ಪ್ರಾಣಿಗಳ ಆರೋಗ್ಯವನ್ನು ರಕ್ಷಿಸುವುದು.<br>♦ ಪ್ರಾಣಿಗಳಿಗೆ ಬರುವ ರೋಗಗಳನ್ನು ಗುರ್ತಿಸಿ, ಚಿಕಿತ್ಸೆ ಮಾಡುವುದು.<br>♦ ಗಾಯಗೊಂಡ ಪ್ರಾಣಿಗಳಿಗೆ ಕಟ್ಟು ಕಟ್ಟುವುದು.<br>♦ ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ವ್ಯಾಧಿಗಳನ್ನು ಗುರ್ತಿಸಿ, ನಿವಾರಣೋಪಾಯಗಳನ್ನು ತೆಗೆದುಕೊಳ್ಳುವುದು.<br>♦ ಯಜಮಾನರಿಗೆ ಪ್ರಾಣಿಗಳ ಬೆಳೆಸುವಿಕೆಯ ಕುರಿತು ಸಲಹೆಗಳು, ಸೂಚನೆಗಳನ್ನು ನೀಡುವುದು.<br>♦ ಪ್ರಾಣಿಗಳಿಗೆ ಪೌಷ್ಟಿಕಾರದ ಬಗ್ಗೆ ರೈತರನ್ನು ಚೈತನ್ಯಗೊಳಿಸುವುದು. |

ಮಂಡಲ ಕೇಂದ್ರದಲ್ಲಿ ಯಾವ ಯಾವ ಕಾರ್ಯಾಲಯಗಳು ನಮಗೆ ಹೇಗೆ ಉಪಯೋಗವಾಗುತ್ತವೆ ಎಂಬುದನ್ನು ತಿಳಿದುಕೊಂಡಿದ್ದೀರಿ ಅಲ್ಲವೇ ! ಮಂಡಲ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಮಾವೇಶಗಳು ನಡೆಯುತ್ತವೆ. ಇವುಗಳಲ್ಲಿ ಮಂಡಲ ಸ್ಥಾಯಿಯಲ್ಲಿ ಎಲ್ಲಾ ಕಾರ್ಯಕ್ರಮಗಳ ಅಧಿಕಾರಿಗಳು ಪಾಲ್ಗೊಳ್ಳುವರು. ಇದು ಯಾರ ನೇತೃತ್ವದಲ್ಲಿ ನಡೆಯುತ್ತದೆಯೋ ಗೊತ್ತೇ? ಗ್ರಾಮಕ್ಕೆ ಅಧ್ಯಕ್ಷ ಇದ್ದಂತೆ ಮಂಡಲಕ್ಕೆ ಮಂಡಲ ಅಧ್ಯಕ್ಷರು ಇರುತ್ತಾರೆ. ಇವರು ಚುನಾವಣೆಯ ಮೂಲಕ ಆಯ್ಕೆಯಾಗಿ, ಈತನ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಸಮಾವೇಶಗಳು ನಡೆಯುತ್ತವೆ. ಗ್ರಾಮ, ಮಂಡಲಗಳ ಅಭಿವೃದ್ದಿ ಹೊಂದಬೇಕಾದರೆ ನಾಯಕತ್ವ ಲಕ್ಷಣಗಳು, ಸ್ನೇಹಾಭಾವ ಹೊಂದಿರುವ ಗ್ರಾಮ ಸರ್ಪಂಚ್, ಮಂಡಲಾಧ್ಯಕ್ಷರು ಹಾಗೆಯೇ ಗ್ರಾಮಗಳಲ್ಲಿ ಮತ್ತು ಮಂಡಲಗಳಲ್ಲಿರುವ ಅಧಿಕಾರಿಗಳ ಮೇಲೆ ಆಧಾರಪಟ್ಟಿರುತ್ತವೆ.

SCERT TELANGANA

**ಹೀಗೆ ಮಾಡಿರಿ :**

- ನಿಮ್ಮ ಮಂಡಲದ ಹೆಸರು ಏನು ?
- ನಿಮ್ಮ ಮಂಡಲಕ್ಕೆ ಅಧ್ಯಕ್ಷ / ಅಧ್ಯಕ್ಷೆ ಯಾರು ?
- ಇವರು ಯಾವ ಗ್ರಾಮಕ್ಕೆ ಹೊಂದಿದವರು ?
- ನಿಮ್ಮ ಮಂಡಲದಲ್ಲಿ ಅಭಿವೃದ್ಧಿ ಸಮಾವೇಶಗಳು ಯಾವಾಗ ಯಾವಾಗ ನಡೆಯುತ್ತವೆ ?
- ನಿಮ್ಮ ಗ್ರಾಮದಿಂದ ಈ ಸಮಾವೇಶಕ್ಕೆ ಯಾರು ಹಾಜರಾಗುತ್ತಾರೆ ?
- ಸಮಾವೇಶದಲ್ಲಿ ಯಾವ ಯಾವ ಅಂಶಗಳು ಚರ್ಚಿಸುತ್ತಾರೆ ?
- ಗ್ರಾಮ ಪಂಚಾಯಿತಿ ಕಾರ್ಯದ ಬಗ್ಗೆ ಗ್ರಾಮದಲ್ಲಿರುವ ಇತರೆ ಸಾರ್ವಜನಿಕ ಸಂಸ್ಥೆಯ ಕಾರ್ಯ ವೈಖರಿಯ ಬಗ್ಗೆ ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

ಮಂಡಲ ಪರಿಷತ್ ಕಾರ್ಯಾಲಯದಲ್ಲಿ ನಡೆಯುವ ಅಭಿವೃದ್ಧಿ ಸಮಾವೇಶಗಳಿಗೆ ಮೊದಲೇ ಮಂಡಲ ಅಧ್ಯಕ್ಷರ ಹೆಸರಿನಲ್ಲಿ ಸಮಾಚಾರ ಪತ್ರವನ್ನು ಸದಸ್ಯರಿಗೆ ಕಳುಹಿಸುತ್ತಾರೆ. ರಂಗಾರೆಡ್ಡಿ ಜಿಲ್ಲೆಯಲ್ಲಿರುವ ಕೊತ್ತೂರು ಮಂಡಲ ಅಭಿವೃದ್ಧಿ ಕಾರ್ಯಾಲಯದಲ್ಲಿ ಸರ್ವಸಭೆ / ಸಮಾವೇಶಕ್ಕೆ ಆಹ್ವಾನಿಸುವ ಪತ್ರವನ್ನು ನೋಡಿರಿ.

**ಮಂಡಲ ಅಭಿವೃದ್ಧಿ ಕಾರ್ಯಾಲಯ, ಕೊತ್ತೂರು ಮಂಡಲ, ರಂಗಾರೆಡ್ಡಿ ಜಿಲ್ಲೆ.**

ಪತ್ರ ಸಂಖ್ಯೆ : 2/ಬಿ/2016. ದಿನಾಂಕ : 10-11-2016

**ಸರ್ವಸಭೆ ಸಮಾವೇಶಕ್ಕೆ ಆಹ್ವಾನ**

**ವಿಷಯ** : ದಿನಾಂಕ : 28-11-2016ರಂದು ನಡೆಯುವ ಸರ್ವಸಭೆ ಸಮಾವೇಶಕ್ಕೆ ಸದಸ್ಯರಿಗೆ ಆಹ್ವಾನ.

-

ಈ ಮೂಲಕ ಮಂಡಲ ಅಭಿವೃದ್ಧಿ ಕಾರ್ಯಾಲಯ, ಕೊತ್ತೂರು ಮಂಡಲ ಜಿಲ್ಲಾ ಪರಿಷತ್ ಪ್ರಾದೇಶಿಕ ಸದಸ್ಯರೆಲ್ಲರಿಗೆ (ಜೆಡ್.ಪಿ.ಟಿ.ಸಿ), ಮಂಡಲ ಪರಿಷತ್ ಪ್ರಾದೇಶಿಕ ಸದಸ್ಯರಿಗೆ (ಎಂ.ಪಿ.ಟಿ.ಸಿ.) ಕೋ-ಆಪ್ಟೆಡ್ ಸದಸ್ಯರಿಗೆ ಮತ್ತು ಸಮಸ್ತ (ಎಲ್ಲಾ) ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ತಿಳಿಯಪಡಿಸುವುದೇನೆಂದರೆ ಮಂಡಲ ಪರಿಷತ್ ಕೊತ್ತೂರು ಸರ್ವಸದಸ್ಯರ ಸಮಾವೇಶ ದಿನಾಂಕ:28-11-2016 ರಂದು ಬೆಳಿಗ್ಗೆ 11.30 ಗಂಟೆಗೆ ಮಂಡಲ ಅಭಿವೃದ್ಧಿ ಕಾರ್ಯಾಲಯ, ಕೊತ್ತೂರುನಲ್ಲಿ ನಿರ್ವಹಿಸಲು ನಿರ್ಣಯಿಸಲಾಗಿದೆ. ಅದಕ್ಕಾಗಿ ಸದಸ್ಯರೆಲ್ಲರೂ ಹಾಜರಾಗಬೇಕೆಂದು ಕೋರಲಾಗಿದೆ.

ಅಧ್ಯಕ್ಷರು
ಮಂಡಲ ಪರಿಷತ್ ಕಾರ್ಯಾಲಯ, ಕೊತ್ತೂರು ಮಂಡಲ,
ರಂಗಾರೆಡ್ಡಿ ಜಿಲ್ಲೆ.

SCERT TELANGANA

ಸರ್ವಸಭ್ಯ ಸಮಾವೇಶಕ್ಕೆ ಸಂಬಂಧಿಸಿದ ಪತ್ರವನ್ನು ನೋಡಿದ್ದೀರಿ ಅಲ್ಲವೇ! ಇದಕ್ಕೆ ಹಾಜರಾಗುವ ಸದಸ್ಯರು ಯಾವ ಯಾವ ಅಂಗಳನ್ನು ಕುರಿತು ಚರ್ಚಿಸುವರು ಗೊತ್ತೇ? ಅವುಗಳನ್ನು ಕಾರ್ಯಕ್ರಮದ ಅಂಶಗಳು ಎನ್ನುವರು. ಕೋತ್ತೂರು ಸರ್ವಸದಸ್ಯರ ಸಮಾವೇಶಕ್ಕೆ ಸಂಬಂಧಿಸಿದ ಕಾರ್ಯಕ್ರಮದ ಅಂಶಗಳನ್ನು ಓದಿರಿ.

**ಕಾರ್ಯಕ್ರಮದ ಅಂಶಗಳು**

- ವ್ಯವಸಾಯ.
- ಪಶುಗಳ ಸಂವರ್ಧಕ ಶಾಖೆ ಕೆಲಸದ ಸ್ವಭಾವ.
- ಪಂಚಾಯಿತಿರಾಜ್ ಮತ್ತು ಗ್ರಾಮೀಣಾಭಿವೃದ್ಧಿ
- ಪಿಂಚಣಿ.
- ಕುಡಿಯುವ ನೀರಿನ ಯೋಜನೆ.
- ಹಣ್ಣಿನ ತೋಟಗಳು.
- ಪ್ರಾಥಮಿಕ ಶಿಕ್ಷಣ.
- ಮಹಿಳಾ ಶಿಶು ಸಂಕ್ಷೇಮ.
- ನೀರಿನ ಸಂಗ್ರಹಣೆ, ಸಂರಕ್ಷಣೆ
- ಪ್ರಾಥಮಿಕ ಆರೋಗ್ಯ ಕೇಂದ್ರದ ಕಾರ್ಯವೈಖರಿ
- ವಿದ್ಯುದೀಕರಣ.
- ಗೃಹ ನಿರ್ಮಾಣ.
- ರಸ್ತೆ ಮತ್ತು ಕಟ್ಟಡಗಳು.
- ಕಾರ್ಖಾನೆ ಮತ್ತು ಮಾಲಿನ್ಯ ನಿಯಂತ್ರಣ
- ಇತರೆ ಅಂಶಗಳು ಅಧ್ಯಕ್ಷರ ಅನುಮತಿಯಿಂದ.

ಅಂಶ (ಎಜೆಂಡಾ)ಗಳನ್ನು ನೋಡಿದ್ದೀರಿ ಅಲ್ಲವೆ! ಈ ಸಮಾವೇಶದಲ್ಲಿ ಸದಸ್ಯರು ಯಾರು ಯಾರು ಹಾಜರಾಗುತ್ತಾರೋ, ಏನು ಮಾತನಾಡುತ್ತಾರೋ, ನಿಮ್ಮ ಮಿತ್ರರೊಂದಿಗೆ ಗುಂಪಿನಲ್ಲಿ ಚರ್ಚಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಮಂಡಲ ಪರಿಷತ್ ಅಭಿವೃದ್ಧಿ ಸಮಾವೇಶಗಳಿಗೆ ಯಾರು ಯಾರು ಹಾಜರಾಗುತ್ತಾರೆ?
- ನೀವು ಯಾವ ಅಂಶಗಳನ್ನು ಕುರಿತು ಮಾತನಾಡ ಬಹುದು?
- ಒಂದು ವೇಳೆ ನೀವೇ ಗ್ರಾಮಕ್ಕೆ ಅಧ್ಯಕ್ಷರಾದರೆ, ನಿಮ್ಮ ಗ್ರಾಮಕ್ಕೆ ಹೊಂದಿದ ಯಾವ ಅಂಶಗಳನ್ನು ಮಂಡಲ ಅಭಿವೃದ್ಧಿ ಸಮಾವೇಶಗಳಲ್ಲಿ ಚರ್ಚಿಸುತ್ತೀರಿ ?
- ಮಂಡಲ ಪರಿಷತ್ ಸರ್ವಸಭ್ಯೆ ಸಮಾವೇಶಗಳಿಗೆ ಯಾರು ಯಾರು ಅಧಿಕಾರಿಗಳು ಹಾಜರಾಗುತ್ತಾರೆ.

ಮಂಡಲ ಸ್ಥಾಯಿ ಅಭಿವೃದ್ಧಿ ಸಮಾವೇಶಗಳಲ್ಲಿ ಆಯಾ ಗ್ರಾಮಗಳ ಸಮಸ್ಯೆಗಳನ್ನು ಕುರಿತು ಸರ್ಪಂಚ್‌ರು, ಎಂ.ಪಿ.ಟಿ.ಸಿ. ಸದಸ್ಯರು ಚರ್ಚಿಸುತ್ತಾರೆ. ಅವರು ಕೇಳಿದ ಪ್ರಶ್ನೆಗಳಿಗೆ ಮಂಡಲ ಸ್ಥಾಯಿ ಅಧಿಕಾರಿಗಳು ಉತ್ತರಗಳನ್ನು ನೀಡುತ್ತಾರೆ. ಮಂಡಲ ಅಭಿವೃದ್ಧಿ ಅಧಿಕಾರಿಗಳು, ಸಮಾವೇಶ ನಿರ್ವಹಣೆಯಲ್ಲಿ ಸಹಕಾರ ನೀಡುತ್ತಾರೆ. ಮಂಡಲ ರೆವೆನ್ಯೂ ಅಧಿಕಾರಿಗಳು, ವ್ಯವಸಾಯ ಶಾಖೆ ಅಧಿಕಾರಿಗಳು ಪಶು ವೈದ್ಯಾಧಿಕಾರಿಗಳು, ಮಂಡಲ ಶಿಕ್ಷಣ ಅಧಿಕಾರಿಗಳು (ಎಂ.ಇ.ಒ.), ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಮುಂತಾದವರು ಈ ಸಮಾವೇಶಕ್ಕೆ ಹಾಜರಾಗುತ್ತಾರೆ. ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ಉತ್ತರಗಳನ್ನು ಹೇಳುತ್ತಾರೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಮಂಡಲ ಪರಿಷತ್ ಅಭಿವೃದ್ಧಿ ಸಮಾವೇಶದಲ್ಲಿ ಸದಸ್ಯರು ಕೇಳಿದ ಪ್ರಶ್ನೆಗಳು ಕೆಲವು ಪಟ್ಟಿಯಲ್ಲಿವೆ. ಆ ಪ್ರಶ್ನೆಗಳನ್ನು ಓದಿರಿ. ಈ ಪ್ರಶ್ನೆಗಳಿಗೆ ಯಾವ ಅಧಿಕಾರಿಗಳು ಉತ್ತರಗಳನ್ನು ಹೇಳುತ್ತಾರೋ ಗುಂಪಿನಲ್ಲಿ ಚರ್ಚಿಸಿ ಬರೆಯಿರಿ.

SCERT TELANGANA

| ಕ್ರ.ಸಂ. | ಪ್ರಶ್ನೆಗಳು | ಉತ್ತರ ಹೇಳುವ ಅಧಿಕಾರಿಗಳು |
|---|---|---|
| 1 | ರೈತರಿಗೆ ಬೀಜಗಳನ್ನು ಯಾವಾಗ ಸರಬರಾಜು ಮಾಡುತ್ತಾರೆ ? | |
| 2 | ಗ್ರಾಮಕ್ಕಿರುವ ರಸ್ತೆ ಹದಗೆಟ್ಟಿದೆ. ಕುಣಿಗಳಿವೆ ಓಡಾಡುವುದಕ್ಕೆ ಕಷ್ಟವಾಗುತ್ತದೆ ಯಾವಾಗ ರಿಪೇರಿ ಮಾಡುತ್ತಾರೆ ? | |
| 3 | ನಮ್ಮ ಗ್ರಾಮದಲ್ಲಿ ಮಧ್ಯಾಹ್ನ ಊಟ ಮಾಡುವವರಿಗೆ ದುಡ್ಡನ್ನು ಯಾವಾಗ ಕೊಡುತ್ತಾರೆ ? | |
| 4 | ನಮ್ಮ ಗ್ರಾಮದ ಪಾಠಶಾಲೆಯಲ್ಲಿ ಬಾಲಕೀಯರಿಗೆ ಸರಿಹೋಗುವ ಶೌಚಾಲಯಗಳು ಇಲ್ಲ ಯಾವಾಗ ನಿರ್ಮಿಸುತ್ತಾರೆ ? | |
| 5 | ನಮ್ಮ ಶಾಲೆಯ ಮಕ್ಕಳಿಗೆ ಗ್ರಂಥಾಲಯ ಪುಸ್ತಕಗಳು ಬೇಕು ? | |
| 6 | ಗ್ರಾಮದಲ್ಲಿ ರೈತರಿಗೆ ಗೊಬ್ಬರಗಳನ್ನು ಕೊಂಡುಕೊಳ್ಳಲು ಸಾಲ ಬೇಕು. ಎಷ್ಟು ಮಂಜೂರು ಮಾಡುತ್ತಾರೆ ? ಹೇಗೆ ? | |
| 7 | ನಮ್ಮ ಗ್ರಾಮದಲ್ಲಿ ಕೆಲವು ಮಂದಿಗೆ ಮನೆಗಳನ್ನು ಯಾವಾಗ ಮಂಜೂರಾತಿ ಮಾಡುತ್ತಾರೆ. | |

### 7.3 ಸಾರ್ವಜನಿಕ ಸಂಸ್ಥೆಗಳು - ಜಿಲ್ಲೆ ಕೇಂದ್ರ ಕಲೆಕ್ಟರ್ ಕಾರ್ಯಾಲಯ :

ಮೋಹನ್ ಮತ್ತು ಕಿರಣ್ ಕುಟುಂಬಗಳು ಅಕ್ಕಪಕ್ಕದಲ್ಲಿವೆ. ಕಿರಣ್ ಆಗಿಂದಾಗ್ಗೆ ಅನಾರೋಗ್ಯಕ್ಕೆ ಗುರಿಯಾಗುತ್ತಿದ್ದಾನೆ. ಇದ್ದಕ್ಕಿದ್ದಂತೆ ಒಂದು ದಿನ ಕೆಳಗೆ ಬಿದ್ದು ಬಿಟ್ಟನು. ಅವನ ಹೆಂಡತಿ ಜ್ಯೋತಿ ಅಳುವುದನ್ನು ನೋಡಿ ಮೋಹನ್ ಬೇಗನೆ »108µ ಗೆ ಫೋನ್ ಮಾಡಿದನು. 108 ವಾಹನ ಬಂದಿದೆ. ಕಿರಣ್‌ನನ್ನು ಸರ್ಕಾರಿ ವೈದ್ಯ ಶಾಲೆಯಲ್ಲಿ ಸೇರಿಸಿದರು.

ವೈದ್ಯರು ಪರೀಕ್ಷೆ ಮಾಡಿ ಕಿರಣ್‌ಗೆ ''ಹೃದಯಾಘಾತ'' ವಾಗಿದೆ. ಎಂದರು.ಪ್ರಸ್ತುತ ತಾತ್ಕಾಲಿಕವಾಗಿ ಚಿಕಿತ್ಸೆ ನೀಡಿದ್ದೇವೆ. ಆರೋಗ್ಯಕ್ಕೆ ಏನು ತೊಂದರೆ ಯಿಲ್ಲ. ಆದರೆ ತಿಂಗಳೊಳಗೆ ಹೃದಯಕ್ಕೆ ಆಪರೇಷನ್ ಮಾಡ ಬೇಕೆಂದು ಹೇಳಿದರು.



ಜಿಲ್ಲಾ ಕಲೆಕ್ಟರ್ ಕಾರ್ಯಾಲಯ ನಲ್ಗೊಂಡ

SCERT TELANGANA

ಆರೋಗ್ಯಶ್ರೀ ಕಾರ್ಡ್ ಇದ್ದರೆ ಉಚಿತವಾಗಿ ಆಪರೇಷನ್ ಮಾಡುತ್ತಾರೆಂದು ಸಲಹೆ ನೀಡಿದ್ದಾರೆ. ಆದ್ದರಿಂದ ಜ್ಯೋತಿ ನಮಗೆ ಬಿಳಿಯ ಪಡಿತರ ಚೀಟಿ ಇರುವುದರಿಂದ ಆರೋಗ್ಯಶ್ರೀ ಕಾರ್ಡ್ ಪಡೆಯಲು ಅರ್ಹತೆ ಇದೆಯೆಂದು ತಿಳಿದುಕೊಂಡಳು. ಅದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕೆಂದು ನಿರ್ಣಯಿಸಿಕೊಂಡಳು. ಕೆಳಗಿನ ವಿಧವಾಗಿ ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಬರೆದಳು.

**ಅರ್ಜಿ ನಮೂನೆ**

ದಿನಾಂಕ : 01.11.2016

ಗೆ,
ಶ್ರೀಯುತ ಜಿಲ್ಲಾಧಿಕಾರಿಗಳು,
ವಿಕಾರಾಬಾದ ಜಿಲ್ಲೆ
ತೆಲಂಗಾಣ

ಮಾನ್ಯರೇ

**ವಿಷಯ** : ಆರೋಗ್ಯಶ್ರೀ ಜೀವವಿಮಾ ಕಾಯಿದೆಯಿಂದ ''ಆರೋಗ್ಯಶ್ರೀ'' ಕಾರ್ಡ್ ಕೊಡುವುದನ್ನು ಕುರಿತು.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನನ್ನ ಆರೋಗ್ಯ ಸರಿಯಾಗಿಲ್ಲ. ಇತ್ತೀಚೆಗೆ ಹೃದಯಾಘಾತಕ್ಕೆ ಒಳಗಾಗಿರುವೆ ಎಂದು ವೈದ್ಯರು ತಿಳಿಸಿದ್ದಾರೆ. ತಕ್ಷಣವೇ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ವೈದ್ಯರು ಹೇಳಿದ್ದಾರೆ. ಶಸ್ತ್ರಚಿಕಿತ್ಸೆಗೆ ಆಗುವಷ್ಟು ಹಣ ನನ್ನ ಹತ್ತಿರವಿಲ್ಲ.

ಆದ್ದರಿಂದ ಆರೋಗ್ಯಶ್ರೀ ಕಾರ್ಡ್ ಕೊಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯಾವಾದಗಳೊಂದಿಗೆ,

ಇಂತಿ ತಮ್ಮ ವಿಧೆಯ,

**ಲಗತ್ತು ಪತ್ರಗಳು**

1) ವೈದ್ಯ ಪರೀಕ್ಷೆಯ ವಿವರಗಳು
2) ಆಧಾರ್ ಕಾರ್ಡು

ಕಿರಣ್,
ಗ್ರಾಮ : ಪಟ್ಲೂರ್, ಮಂ.: ಮರ್ಪಲ್ಲಿ,
ಜಿಲ್ಲೆ : ವಿಕಾರಾಬಾದ ತೆಲಂಗಾಣ.

ಮರುದಿನ ಕಿರಣ್ ಕುಟುಂಬ ಜಿಲ್ಲಾಧಿಕಾರಿಗಳ ಕಾರ್ಯಾಲಕ್ಕೆ ಹೋಗಿ ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ಎಲ್ಲಾ ವಿಷಯವನ್ನು ಹೇಳಿದರು. ಅರ್ಜಿಯನ್ನು ಕೊಟ್ಟರು. ಜಿಲ್ಲಾಧಿಕಾರಿಗಳು ಆ ಅರ್ಜಿಯನ್ನು ಆರೋಗ್ಯ ವಿಮೆ ವಿಭಾಗದ ಅಧಿಕಾರಿಗಳಿಗೆ ಕಳುಹಿಸಿದರು. ವಾರದ ದಿನಗಳಲ್ಲಿ ಆರೋಗ್ಯಶ್ರೀ ಕಾರ್ಡ್‌ನ್ನು ಸಂಬಂಧಿತ ಅಧಿಕಾರಿ ಕಿರಣ್‌ಗೆ ಕೊಟ್ಟರು. ಆರೋಗ್ಯಶ್ರೀ ಕಾರ್ಡ್‌ನಿಂದ ಕಿರಣ್ ಉಚಿತ ವೈದ್ಯ ಚಿಕಿತ್ಸೆಯನ್ನು ಮಾಡಿಸಿಕೊಂಡನು. ಸಂಪೂರ್ಣ ಆರೋಗ್ಯದಿಂದ ಸಂತೋಷದಿಂದ ಮನೆಗೆ ಬಂದನು. ನಮ್ಮ ಗ್ರಾಮದಲ್ಲಿ ಅವಸರಗಳನ್ನು ತೀರಿಸಿಕೊಳ್ಳಲು ಜಿಲ್ಲಾ ಸ್ಥಾಯಿಯಲ್ಲಿ ಅನೇಕ ಕಾರ್ಯಾಲಗಳಿವೆ. ಇವುಗಳಿಂದ ಮಂಡಲ, ಗ್ರಾಮ ಸ್ಥಾಯಿಯಲ್ಲಿ ನಿರ್ವಹಿಸುವ ಕೆಲಸಗಳ ಹಣವನ್ನು ಬಿಡುಗಡೆ ಮಾಡುತ್ತಾರೆ. ಜಿಲ್ಲಾ ಸ್ಥಾಯಿಯಲ್ಲಿ ಜನರೆಲ್ಲರಿಗೆ

**ಶೇಖರಿಸಿರಿ :**



- ಜಿಲ್ಲಾ ಕೇಂದ್ರದಲ್ಲಿ ಕಲೆಕ್ಟರ್ ಕಾರ್ಯಾಲಯದ ಜೊತೆಗೆ ಇನ್ನೂ ಯಾವ ಯಾವ ಕಾರ್ಯಾಲಯಗಳು ಇವೆಯೋ ನಿಮ್ಮ ಶಿಕ್ಷಕರಿಂದ ತಿಳಿದುಕೊಂಡು ಪಟ್ಟಿಯಲ್ಲಿ ಬರೆಯಿರಿ.

SCERT TELANGANA

| ಕ್ರ.ಸಂ | ಜಿಲ್ಲಾ ಮಟ್ಟದ ಕಾರ್ಯಾಲಯದ ಹೆಸರು | ಅಧಿಕಾರಿಗಳ ಹೆಸರು | ಮಾಡುವ ಮುಖ್ಯವಾದ ಕೆಲಸದ ಹೆಸರು |
|---|---|---|---|
| | | | |
| | | | |
| | | | |
| | | | |
| | | | |

ಉಪಯೋಗವಾಗುವ ಇತರೆ ಸಂಸ್ಥೆಗಳು, ಸರ್ಕಾರಿ ಕಾರ್ಯಾಲಯಗಳು ಸಹ ಇರುತ್ತವೆ.

ಗ್ರಾಮಸ್ಥಾಯಿಯಿಂದ ಜಿಲ್ಲಾ ಸ್ಥಾಯಿಯವರೆಗೆ ವಿವಿಧ ಸಾರ್ವಜನಿಕ ಸಂಸ್ಥೆಗಳು ಜನರ ಅವಸರಗಳನ್ನು ತೀರಿಸುವುದಕ್ಕೆ ಕೆಲಸ ಮಾಡುತ್ತವೆ. ಸಂಸ್ಥೆಗಳಲ್ಲಿನ ಅಧಿಕಾರಿಗಳು ತಮಗೆ ಮೀಸಲಾಗಿಟ್ಟ ಕೆಲಸಗಳು ಮಾಡುತ್ತಾರೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಮುಷ್ಕರ, ಬಂದ್‌ಗಳು, ಧರಣಿಗಳು ರಸ್ತೆತಡೆಗಳಂತಹ ಸಂದರ್ಭಗಳಲ್ಲಿ ಕೆಲವರು ಸರ್ಕಾರದ ಕಾರ್ಯಾಲಗಳಿಗೆ, ಬಸ್ಸುಗಳಿಗೆ ನಷ್ಟವನ್ನೊಂಟುಮಾಡುತ್ತಾರೆ. ಸರ್ಕಾರ ಆಸ್ತಿಯಲ್ಲವೆ ! ನಮ್ಮದೇನು ಹೋಗುತ್ತದೆಂದುಕೊಳ್ಳುವರು. ಸರ್ಕಾರದ ಆಸ್ತಿ ಎಂದರೆ ಯಾರು ?
- ಈ ಸಂಸ್ಥೆಗಳಿಗೆ ಹಣ ಎಲ್ಲಿಂದ ಬರುತ್ತದೆ ?
- ಸರ್ಕಾರದ ಆಸ್ತಿಗಳಿಗೆ ನಷ್ಟ ಬರದಂತೆ ಇರಬೇಕಾದರೆ ನಾವು ಏನು ಮಾಡಬೇಕು.

## 7.4 ಸಾರ್ವಜನಿಕ ಸಂಸ್ಥೆಗಳು – ಸರ್ಕಾದ ಆಸ್ತಿ

ಸಾರ್ವಜನಿಕ ಸಂಸ್ಥೆಗಳು ಪೌರರ ಪ್ರಾಥಮಿಕ ಅವಸರಗಳನ್ನು ತೀರಿಸುತ್ತವೆ. ಈ ಕೆಲಸಗೋಸ್ಕರ ಹಣ ಅವಶ್ಯಕ. ಸಂಸ್ಥೆಗಳು ನಿರ್ವಹಿಸುವುದಕ್ಕೆ ಕಾರ್ಯಾಲಯಗಳು, ಉದ್ಯೋಗಿಗಳು, ಅವರಿಗೆ ಸಂಬಳಗಳಂತಹವುಗಳಿಗೆ ಸಹ ದುಡ್ಡು ಅವಶ್ಯಕ.

ಸಾರ್ವಜನಿಕ ಸಂಸ್ಥೆಗಳ ನಿರ್ವಹಣೆ ಮತ್ತು ವಿವಿಧ ಕೆಲಸಕ್ಕಾಗಿ ಅವಸರವಾಗುವ ಹಣ ನಮ್ಮದೇ! ನಾವೆಲ್ಲರೂ ಸರ್ಕಾರಕ್ಕೆ ವಿವಿಧ ತೆರಿಗೆಗಳು, ಶುಲ್ಕಗಳ ಹೆಸರಿನ ಮೇಲೆ ಹಣವನ್ನು ಪಾವತಿಸುತ್ತೇವೆ. ಆ ಹಣದಿಂದಲೇ ಸರ್ಕಾರ ನಮ್ಮ ಅವಸರಗಳನ್ನು ತೀರಿಸುತ್ತದೆ. ಸರ್ಕಾರದ ಆಸ್ತಿ ಎಂದರೆ ಅದು ನಮ್ಮ ಆಸ್ತಿ! ಅದನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಯವರಿಗೆ ಕೊಡಬೇಕಾದ ಅವಶ್ಯಕತೆ ನಮ್ಮೆಲರ ಕರ್ತವ್ಯವಾಗಿದೆ. ಇಲ್ಲವಾದರೆ ಅಭಿವೃದ್ಧಿ ನಡೆಯುವುದಿಲ್ಲ.ಪೌರರಾದ ನಾವು ಜವಾಬ್ದಾರಿಯಿಂದ ಪ್ರವರ್ತಿಸಬೇಕು. ದೇಶ ನಮ್ಮದು, ಆಸ್ತಿಗಳು ನಮ್ಮವು.

ಬೀದಿದೀಪಗಳು, ನೀರಿನ ಪಂಪುಗಳು, ಪಂಚಾಯಿತಿ ಕಾರ್ಯಾಲಯ, ವೈದ್ಯಶಾಲೆ ಇವೆಲ್ಲವು ನಮ್ಮ ಗೋಸ್ಕರಲ್ಲವೇ! ಹಗಲು ಸಹ ಬೀದಿ ದೀಪಗಳು ಬೆಳಗುವುದು, ಕೊಳಾಯಿಗಳು ದುರಾವಸ್ಥೆ ಹೊಂದಿ ನೀರು ವ್ಯರ್ಥವಾಗಿ ಹೋಗುವುದು, ಸರ್ಕಾರಿ ಕಾರ್ಯಾಲಯಗಳ ವರಂಡಾಗಳು, ಬಾಗಿಲುಗಳು, ಕಿಟಕಿಗಳನ್ನು ಹಾಳು ಮಾಡುವುದೆಂದರೆ ನಮಗೆ ನಾವೇ ನಷ್ಟವನ್ನು ಉಂಟು ಮಾಡಿಕೊಳ್ಳುವೆವು ಎಂದರ್ಥ. ಇವೆಲ್ಲವೂ ನಮ್ಮವೆ. ಅವುಗಳನ್ನು ನಾವೇ ಕಾಪಾಡಿಕೊಳ್ಳಬೇಕು.

SCERT TELANGANA

## 7.5 ಸಮಾಚಾರ ಹಕ್ಕು :

ಅಮ್ಮ : ಏನು ರವಿ, ಆಟದ ಮೈದಾನಕ್ಕೆ ಹೋಗದೇ, ಕೆಲವು ದಿನಗಳಿಂದಲೂ ಮನೆಯ ಮುಂದೆಯೇ ಆಟವಾಡುತ್ತಿದ್ದೀರಿ ಏಕೆ?

ರವಿ : ಅಬ್ಬಾ! ಅಲ್ಲಿ ಚರಂಡಿ ನೀರು ಹರಿದು ಮೈದಾನದಲ್ಲಿ ನೀರು ಹರಿಯುತ್ತಾ ದುರ್ವಾಸನೆ ಬರುತ್ತಿದೆಯಮ್ಮಾ!

ಅಮ್ಮ : ವಾಸನೆ ಬಂದರೆ ಕೊಳಚೆ ಕಾಲುವೆ ಸಮಸ್ಯೆಯನ್ನು ಕುರಿತು ಪಂಚಾಯಿತಿ ಕಾರ್ಯಾಲಯದಲ್ಲಿ ದೂರನ್ನು ಸಲ್ಲಿಸೋಣ. ಅಷ್ಟೇ ಅಲ್ಲದೇ ಹೀಗೆ ಮನೆ ಮುಂದೆ ಆಟಾವಾಡುತ್ತಾರೆಯೇ ?

ರಾಜು : ಚಿಕ್ಕಮ್ಮ! ಈ ಸಮಸ್ಯೆಯನ್ನು ಕುರಿತು ನನ್ನ ಅಣ್ಣ ಐದು ದಿನಗಳ ಮುಂಚಿತವಾಗಿಯೇ ಪಂಚಾಯಿತಿ ಕಾರ್ಯಾಲಯದಲ್ಲಿ ದೂರನ್ನು ಬರೆದು ಕೊಟ್ಟಿದ್ದಾನೆ.

ಅರುಣ : ಚಿಕ್ಕಮ್ಮ! ದೂರನ್ನು ಸಲ್ಲಿಸಿದರೆ ಅವರು ಹಿಡಿಸಿಕೊಳ್ಳುತ್ತಾರೆಯೇ ?

ಅಮ್ಮ : 12 ಅಕ್ಟೋಬರ್ 2005 ವರ್ಷದಿಂದ ಸಮಾಚಾರ ಹಕ್ಕು ಕಾಯಿದೆ ಜಾರಿಗೆ ಬಂದಿದೆ. ಅಂದಿನಿಂದಲೂ ಪ್ರಜೆಗಳು ನೀಡುವ ದೂರುಗಳನ್ನು ಎಲ್ಲರೂ ಹಿಡಿಸಿಕೊಳ್ಳುತ್ತಿದ್ದಾರೆ ?

ಅರುಣ : ಚಿಕ್ಕಮ್ಮ! ಸಮಾಚಾರ ಹಕ್ಕು ಕಾಯಿದೆ ಎಂದರೇನು ?

ಅಮ್ಮ : ಸಾರ್ವಜನಿಕ ಸಂಸ್ಥೆಗಳಿದ ಸಮಾಚಾರವನ್ನು ಪಡೆಯುವ ಹಕ್ಕನ್ನೇ ಸಮಾಚಾರ ಹಕ್ಕು ಎನ್ನುವರು. ಇತರ ಭಾಗವಾಗಿ ನಮ್ಮ ಸರ್ಕಾರ ಮಾಡುವ ಕೆಲಸಗಳು, ಪತ್ರಗಳು, ನಿವೇಧನೆಗಳು, ಮುಂತಾದವುಗಳಿಗೆ ಸಂಬಂಧಿಸಿದಂತೆ ಸಮಾಚಾರವನ್ನು ತಿಳಿದುಕೊಳ್ಳಬಹುದು. ಅವುಗಳ ನಕಲು (ಕಾಪಿಗಳು) ಪಡೆಯಬಹುದು.

### ಸಮಾಚಾರ ಹಕ್ಕು ಕಾಯಿದೆ - 2005

ಸರ್ಕಾರಿ ಕಾರ್ಯಾಲಯಗಳಿಂದ ಕೋರುವ ಸಮಾಚಾರವನ್ನು ನಾವು ಹೊಂದಲು ಉದ್ದೇಶಿಸಿರುವ ಕಾಯಿದೆಯೇ ಸಮಾಚಾರ ಹಕ್ಕು. ಸರ್ಕಾರಿ ಕಾರ್ಯಾಲಯದಲ್ಲಿನ, ದಾಖಲೆಗಳು, ಪತ್ರಗಳು, ಮೆಮೋಗಳು, ಆದೇಶಗಳುನಿವೇಧನೆಗಳಿಂದ ನಮಗೆ ಅವಸರವಾದ ವಿವರಗಳನ್ನು ತಿಳಯುವ ಹಕ್ಕು ನಮಗಿರುತ್ತದೆ. ಈ ಹಕ್ಕಿನ ಮೂಲಕ ನಕಲು ಅಥವಾ ಇದಕ್ಕಾಗಿ ಅವಸರವಾದ ಅರ್ಜಿಗಳನ್ನು ಅಧಿಕಾರಿಗಳಿಗೆ ಕೊಡಬೇಕು. ಲಿಖಿತಪೂರ್ವಕವಾಗಿ ಸಂಬಂಧಿತ ಅಧಿಕಾರಿಯಿಂದ ವಿವರಗಳನ್ನು ಶೇಖರಿಸಬಹುದು.

ಅರ್ಜಿಯನ್ನು ಬಿಳಿ ಹಾಳೆಯ ಮೇಲೆ ಆದರೂ ಕೂಡ ಬರೆದುಕೊಡಬಹುದು. ನಾಮಮಾತ್ರಅರ್ಜಿ ಶುಲ್ಕ ಸಲ್ಲಿಸಬೇಕು. ಗ್ರಾಮ ಮಟ್ಟದಲ್ಲಿ ಸಮಾಚಾರ ಶುಲ್ಕ ಸಲ್ಲಿಸುವ ಅವಸರವಿಲ್ಲ. ಅರ್ಜಿ ಹಾಕಿದ 30 ದಿನಗಳಲ್ಲಿ ಸಂಬಂಧಿತ ಅಧಿಕಾರಿ ಸಮಾಚಾರವನ್ನು ಕೊಡಬೇಕು. ಜೀವಿಸುವ ಹಕ್ಕು, ವ್ಯಕ್ತಿಗೆ ಸ್ವಾತಂತ್ರ್ಯಕ್ಕೆ ಸಂಬಂಧಿಸಿದವುಗಳು ಆದರೆ 48 ಗಂಟೆಗಳಲ್ಲಿ ಕೊಡಬೇಕು.

ಕೇಂದ್ರ, ರಾಷ್ಟ್ರ ಮಟ್ಟದಲ್ಲಿ ಸಮಾಚಾರ ಆಯೋಗ ಸ್ವತಂತ್ರವಾಗಿ ಕೆಲಸ ಮಾಡುತ್ತದೆ. ಪ್ರತಿ ಸರ್ಕಾರಿ ಕಾರ್ಯಾಲಯದಲ್ಲಿಯೂ ಸಾರ್ವಜನಿಕ ಸಂಪರ್ಕ ಅಧಿಕಾರಿಗಳಿರುತ್ತಾರೆ. ಕಾರ್ಯಾಲಯದ ಸೂಚನಾ ಫಲಕದಲ್ಲಿ ಯಾವ ಸಮಾಚಾರವನ್ನು ಎಷ್ಟು ಸಮಯದಲ್ಲಿ ಕೊಡುತ್ತಾರೆ ಎಂದು ಹೇಳುತ್ತಾರೆ.

ಪ್ರಜೆಗಳೆಲ್ಲರೂ ಸರ್ಕಾರದ ಭಾಗವೇ! ಪ್ರತಿ ಕಾರ್ಯಾಲಯದ ಕೆಲಸದ ರೀತಿಯನ್ನು ಅವಸರವಾದ ಸಮಾಚಾರ ಕೇಳುವ ಹಕ್ಕು ಎಲ್ಲರಿಗೂ ಇದೆ. ಸರ್ಕಾರೀ ಯಂತ್ರಾಂಗವೂ ಸ್ವ - ಇಚ್ಛೆಯಿಂದ ಪ್ರಜೆಗಳಿಗೆ ಸಮಾಚಾರವನ್ನು ತಿಳಿಯಪಡಿಸಬೇಕೆಂಬುದೇ ಮುಖ್ಯ ಉದ್ದೇಶವಾಗಿದೆ.

SCERT TELANGANA

ರವಿ : ಅಮ್ಮಾ! ನಮ್ಮ ಗ್ರಾಮದಲ್ಲಿ ಎಲ್ಲಾ ಕಾರ್ಯಾಲಯಗಳಲ್ಲಿ ವಿವರಗಳನ್ನು ಪ್ರದರ್ಶಿಸುವರೇ ?

ಅಮ್ಮ : ತಪ್ಪದೇ ಇಡಬೇಕು. ಸಮಾಚಾರವನ್ನು ಪ್ರದರ್ಶನದಲ್ಲಿಡುವುದು ಅಧಿಕಾರಿಗಳ ಕರ್ತವ್ಯ. ಕೇಳಿ ತಿಳಿದುಕೊಳ್ಳುವುದು ನಮ್ಮ ಹಕ್ಕು.

ಅರುಣ : ಚಿಕ್ಕಮ್ಮಾ! ಕೇಳಿ ತಿಳಿದುಕೊಳ್ಳಬೇಕು ಎಂದೆ ಅಲ್ಲವೇ! ಮತ್ತೇ ಯಾರನ್ನು ಕೇಳಬೇಕು ?

ಅಮ್ಮ : ಒಳ್ಳೆಯ ಪ್ರಶ್ನೆಯನ್ನು ಕೇಳಿದೆ ಅರುಣಾ, ಕಾರ್ಯಾಲಯಗಳಲ್ಲಿ ಪ್ರಜಾ ಸಮಾಚಾರ ಅಧಿಕಾರಿಯನ್ನು ಕೇಳಿ ತಿಳಿದುಕೊಳ್ಳಬಹುದು. ಸಮಾಚಾರ ವಿವರಗಳನ್ನು ಪತ್ರಗಳ ರೂಪದಲ್ಲಿ ಸಹ ಪಡೆಯಬಹುದು.

## ಸಮಾಚಾರಕ್ಕಾಗಿ ಅರ್ಜಿ

ದಿನಾಂಕ : ____________

ಸಾರ್ವಜನಿಕ ಸಂಪರ್ಕ ಅಧಿಕಾರಿಗಳು,( ಗ್ರಾಮ ಕಾಯದರ್ಶಿ),
ಗ್ರಾಮ ಪಂಚಾಯಿತಿ ಕಾರ್ಯಾಲಯ,
ಬಿಜ್ವಾರ (ಗ್ರಾಮ),
ಮಲ್ದಕಲ್ (ಮಂಡಲ),
ಜೋಗುಲಾಂಬ (ಜಿಲ್ಲೆ),
ಸಾರ್ವಜನಿಕ ಸಂಕರ್ಪ ಅಧಿಕಾರಿಗಳಿಗೆ,

## ಸಮಾಚಾರಕ್ಕಾಗಿ ವಿಜ್ಞಾಪನೆ

ಸಮಾಚಾರಹಕ್ಕುಕಾಯಿದೆ 2005, ಸೆಕ್ಷನ್ 6(1) ಪ್ರಕಾರಕೆಳಗಿನಸಮಾಚಾರವನ್ನುಸೆಕ್ಷನ್ 4(4) ಕೆಳಗೆತೆಲುಗು/ಹಿಂದಿ/ಇಂಗ್ಲೀಷ್‌ನಲ್ಲಿಪ್ರತಿ ಪೇಜಿಯನ್ನುಸೆಕ್ಷನ್ 2 (ಜೆ) (ii) ಪ್ರಕಾರದೃಢೀಕರಿಸಿ ಕೊಡುವರು.

2012-13 ವರ್ಷದಲ್ಲಿ ಗ್ರಾಮ ಪಂಚಾಯಿತಿಗೆ ಬಂದ ಅನುದಾನಗಳ ಕುರಿತು ಕೆಳಗಿನ ವಿವರಗಳನ್ನು ತಿಳಿಯಪಡಿಸುವುರು.

2012-13 ನೇ ಸಾಲಿನಲ್ಲಿ ಬಂದ ಹಣದ ಮೊತ್ತ ____________ ರೂಪಾಯಿಗಳು.

ಅವುಗಳನ್ನು ಯಾವ ಯಾವ ಕೆಲಸಕ್ಕೆ, ಎಷ್ಟೆಷ್ಟು ಖರ್ಚು ಮಾಡಿದ್ದಾರೆ ? ____________

ಖರ್ಚು ಮಾಡಿದ ಮೇಲೆ ಹಣ ಉಳಿದಿವೆಯೇ ? ____________

ಉಳಿದರೆ ಎಷ್ಟು ರೂಪಾಯಿಗಳು ಉಳಿದಿವೆ ? ____________

ಅರ್ಜಿ ಶುಲ್ಕ ರೂ. 10/- ಚಲಾನ್ ರೂಪದಲ್ಲಿ ಸಲ್ಲಿಸುತ್ತಿದ್ದೇನೆ. ರಸೀದಿಯನ್ನು ಕೋಡುವುದು.

ಅರ್ಜಿದಾರರ ಸಹಿ

ಹೆಸರು : ವೆಂಕಟ್

ಹೆಸರು : ವೆಂಕಟ್
ಗ್ರಾ : ಬಿಜ್ವಾರ
ಮಂ : ಮಲ್ದಕಲ್
ಜಿ : ಜೋಗುಲಾಂಬ

SCERT TELANGANA

ರಾಜು : ಚಿಕ್ಕಮ್ಮಾ ! ನಮ್ಮ ಅಣ್ಣ ಚರಂಡಿ ಕಾಲುವೆಯ ಸಮಸ್ಯೆ ಕುರಿತು 5 ದಿನಗಳ ಹಿಂದೆ ಪಂಚಾಯಿತಿ ಕಾರ್ಯಾಲಯದಲ್ಲಿ ದೂರು ನೀಡಿದ್ದಾರೆ ಅಲ್ಲವೆ! ಆ ವಿಷಯ ಏನಾಗಿದೆ ಈಗ ನಾವು ಕೇಳಿ ತಿಳಿದುಕೊಳ್ಳಬಹುದೇ ?

ಅಮ್ಮ : ತಿಳಿದುಕೊಳ್ಳಬಹುದು 30 ದಿನಗಳಲ್ಲಿ ಸಮಾಚಾರನ್ನು ನೀಡಬೇಕು.

ಅರುಣ : 30 ದಿನಗಳಲ್ಲಿ ಸಮಾಚಾರ ನೀಡದಿದ್ದರೆ?

ಅಮ್ಮ : ಅವರ ಬಗ್ಗೆ ಮೇಲಿನ (ಉನ್ನತ) ಅಧಿಕಾರಿಗಳಿಗೆ ದೂರು ಸಲ್ಲಿಸಬೇಕು. ಬಿಳಿಯ ಕಾಗದವನ್ನು ತೆಗೆದುಕೊಂಡು ಬನ್ನಿ. ಅರ್ಜಿ ಹೇಗೆ ಬರೆಯಬೇಕು. ಹೇಳುತ್ತೇನೆ. (ಅಮ್ಮ ಹೇಳಿದಂತೆ ಮಕ್ಕಳು ಬಿಳಿಯ ಕಾಗದದ ಮೇಲೆ ಬರೆದು ಅಮ್ಮನೊಂದಿಗೆ ಸೇರಿ ಗ್ರಾಮ ಕಾರ್ಯದರ್ಶಿಯನ್ನು ಭೇಟಿಯಾಗುತ್ತಾರೆ)

ರಾಜು, ರವಿ, ಅರುಣ, ಅಮ್ಮ : ನಮಸ್ತೇ ಸಾರ್ ! ನಿಮ್ಮನ್ನು ಕಾಣಲು ಬಂದೀದ್ದೇವೆ ಸಾರ್ !

ಗ್ರಾಮ ಕಾರ್ಯದರ್ಶಿ : ಮಕ್ಕಳೇ ಏನು ಬೇಕು ನಿಮಗೆ ?

ಅಮ್ಮ : ಸಾರ್ ! ಇವರು ದಿನ ಆಡಿಕೊಳ್ಳುವ ಮೈದಾನದ ಪಕ್ಕದಲ್ಲಿರುವ ಚರಂಡಿ ಕಾಲುವೆಯ ನೀರು ಹರಿದು ದುರ್ವಾಸನೆ ಬರುತ್ತಿದೆ. ಇದನ್ನು ಕುರಿತು ರಾಜುವಿನ ಅಣ್ಣ 5 ದಿನಗಳ ಕೆಳಗೆ ದೂರು (ಫಿರ್ಯಾದು) ಕೊಟ್ಟಿದ್ದಾನೆ.

ಗ್ರಾಮ ಕಾರ್ಯದರ್ಶಿ : ಕೆಲಸದವರು ಚರಂಡಿ ಕಾಲುವೆಯನ್ನು ದಿನವು ಶುಭ್ರಗೊಳಿಸುತ್ತಾರಲ್ಲವೆ !

ರಾಜು : ಇಲ್ಲ ಸಾರ್. ಬಹಳ ದಿನಗಳಿಂದ ಚರಂಡಿ ಕಾಲುವೆಯನ್ನು ಯಾರು ಶುಭ್ರ ಮಾಡುತ್ತಿಲ್ಲ.

ಅರುಣ : ಅಸಲು ಚರಂಡಿ ಕಾಲುವೆಯನ್ನು ಯಾರು ಶುಭ್ರಮಾಡುತ್ತಾರೆ ? ಎಷ್ಟು ದಿನಗಳಿಗೆ ಒಂದು ಸಲ ಶುಭ್ರ ಮಾಡುತ್ತಾರೆ ?

ಗ್ರಾಮ ಕಾರ್ಯದರ್ಶಿ : ಈ ವಿವರಗಳು ನಿಮಗೇಕೆ ?

ಅಮ್ಮ : ಹಾಗೇ ಎನ್ನಬಾರದು. ಸಮಾಚಾರ ಹಕ್ಕು ಕಾಯಿದೆಯ ಪ್ರಕಾರ ಕೇಳಿ ತಿಳಿದುಕೊಳ್ಳುವ ಹಕ್ಕು ಎಲ್ಲರಿಗೆ ಇದೆ. ಮಕ್ಕಳೇ ಅರ್ಜಿ ಕೊಡಿರಿ.

ಗ್ರಾಮ ಕಾರ್ಯದರ್ಶಿ : (ಅರ್ಜಿ ತೆಗೆದುಕೊಂಡು) ಸರೆ, ಹೋಗಿ ನೀವು.

ಮಕ್ಕಳು : ಮತ್ತೇ ರಸೀದಿ !

ಗ್ರಾಮ ಕಾರ್ಯದರ್ಶಿ : ಭಲೆ ಮಕ್ಕಳು ! (ರಸೀದಿ ಬರೆದು) ಇದನ್ನು ತೆಗೆದುಕೊಳ್ಳಿ. ಈಗಲೇ ಚರಂಡಿ ಕಾಲುವೆಯನ್ನು ಶುಭ್ರ ಮಾಡಿಸುತ್ತೇನೆ. ಮಕ್ಕಳೇ ನೀವು ಸಮಾಚಾರವನ್ನು ಕೇಳಿರಿರಲ್ಲವೆ! ಪಂಚಾಯಿತಿ ಪೌರ ಕಾರ್ಮಿಕರು ಚರಂಡಿ ಕಾಲುವೆಯನ್ನು ಪ್ರತಿದಿನ ಶುಭ್ರಮಾಬೇಕು. ಈಸಮಾಚಾರವನ್ನು ನಿಮಗೆ ಪತ್ರದ ರೂಪದದಲ್ಲಿ ಕಳಿಸುತ್ತೇನೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಸಮಾಚಾರ ಹಕ್ಕು ಕಾಯಿದೆಯನ್ನು ಯಾವ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಬಹುದು
- ನಿಮ್ಮ ಗ್ರಾಮದಲ್ಲಿನ ಸಮಸ್ಯೆಗಳನ್ನು ಕುರಿತು ಯಾವ ಸಮಾಚಾರವನ್ನು ತಿಳಿದುಕೊಳ್ಳಬೇಕೆಂದು ಕೋರಿಕೊಳ್ಳುತ್ತಾರೆ ? ಇದಕ್ಕಾಗಿ ಅರ್ಜಿ ಬರೆಯಿರಿ.

SCERT TELANGANA

**ಮುಖ್ಯ ಪದಗಳು :**

| | | | | | |
|---|---|---|---|---|---|
| 1 | ಸಾಮಾಜಿಕ ಸಂಸ್ಥೆ | 6 | ಗ್ರಾಮಪಂಚಾಯಿತಿ | 11. | ರೇಷನ್ ಕಾರ್ಡ್ |
| 2 | ವಸ್ತುಗಳು | 7 | ಮಂಡಲ ಪರಿಷತ್ | 12. | ಆರೋಗ್ಯಶ್ರೀ ಕಾರ್ಡ್ |
| 3 | ದೂರು | 8 | ಕಲೆಕ್ಟರ್ ಕಾರ್ಯಾಲಯ | 13. | ಸಾರ್ವಜನಿಕರ ಆಸ್ತಿ |
| 4 | ನಿವೇಧನೆಗಳು | 9 | ಸರ್ವಸಭ್ಯ ಸಮಾವೇಶ | 14. | ಪ್ರಾಥಮಿಕ ಆರೋಗ್ಯ ಕೇಂದ್ರ |
| 5 | ಸಾಲ | 10. | ಮಂಡಲ ಪರಿಷತ್ ಅಧ್ಯಕ್ಷರು | 15. | ಪಶು ವೈದ್ಯಶಾಲ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನ) ತಿಳುವಳಿಕೆ :

ಅ) ಸಾರ್ವಜನಿಕ ಸಂಸ್ಥೆಗಳೆಂದು ಯಾವುದನ್ನು ಕರೆಯುತ್ತಾರೆ ? ಕೆಲವು ಉದಾಹರಣೆಗಳು ಬರೆಯಿರಿ.

ಆ) ಗ್ರಾಮ ಪಂಚಾಯಿತಿ ಮಾಡುವ ಕೆಲಸಗಳನ್ನು ತಿಳಿಸಿರಿ.

ಇ) ನಿಮ್ಮ ಗ್ರಾಮದಲ್ಲಿ ಸಮಸ್ಯೆಗಳು ಇವೆಯೇ ? ಗ್ರಾಮಪಂಚಾಯಿತಿ ಅವುಗಳನ್ನು ತೀರುಸುತ್ತದೆಯೇ?

ಈ) ನಿಮ್ಮ ಮಂಡಲದ ಹೆಸರೇನು ? ಅಲ್ಲಿ ಯಾವ ಯಾವ ಕಾರ್ಯಾಲಯಗಳಿವೆ ?

ಉ) ನಿಮ್ಮ ಜಿಲ್ಲೆಯ ಹೆಸರೇನು ? ನಿಮ್ಮ ಜಿಲ್ಲೆ ಕೇಂದ್ರ ಎಲ್ಲಿದೆ ? ಅಲ್ಲಿ ಯಾವ ಯಾವ ಕಾರ್ಯಾಲಯಗಳಿವೆ ?

ಊ) ಮಂಡಲ ಅಭಿವೃದ್ಧಿ ಕಾರ್ಯಾಲಯಗಳು, ತಹಶೀಲ್ದಾರು ಕಾರ್ಯಾಲಯಗಳು ಮಾಡುವ ಕೆಲಸದಲ್ಲಿ ವ್ಯತ್ಯಾಸಗಳು ಏನು ?

ಋ) ಪ್ರತಿ ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಕೊಡುವುದಿಲ್ಲ. ಏಕೆ ?

ಎ) ಸಮಾಚಾರ ಹಕ್ಕುನಿಂದ ಆಗುವ ಪ್ರಯೋಜನೆಗಳಾವುವು ? ನೀವು ಯಾವ ಸಮಾಚಾರವನ್ನು ತಿಳಿದುಕೊಳ್ಳಬೇಕೆಂದಿರುವಿರಿ ?

ಏ) ನಿಮ್ಮ ಗ್ರಾಮದಲ್ಲಿನ ಸಮಸ್ಯೆಗಳನ್ನು ತಿಳಿದುಕೊಳ್ಳಲು ನೀವು ಸಮಾಚಾರ ಹಕ್ಕುನ್ನು ಉಪಯೋಗಿಸಿಕೊಳ್ಳುವಿರೇ?

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ಜಿಲ್ಲಾ ಕೇಂದ್ರದಲ್ಲಿ ಯಾವುದಾದರೊಂದು ಕಾರ್ಯಾಲಯದ ಹೆಸರು ಬರೆಯಿರಿ. ಆ ಕಾರ್ಯಾಲಯದಿಂದ ಜನರಿಗೆ ಯಾವ ಯಾವ ಕೆಲಸ ನಡೆಯುತ್ತದೆಯೋ ತಿಳಿದುಕೊಳ್ಳಬೇಕು. ಇದಕ್ಕಾಗಿ ಯಾವ ಪ್ರಶ್ನೆಗಳನ್ನು ಕೇಳುತ್ತೀರಿ ?

### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ನಿಮ್ಮ ಗ್ರಾಮದಲ್ಲಿ ನಡೆಯುತ್ತಿರುವ ಗ್ರಾಮಸಭೆಗೆ ಹೋಗಿರಿ. ಸಭೆಯಲ್ಲಿ ಯಾರು ಯಾರು ಯಾವ ಯಾವ ಅಂಶಗಳನ್ನು ಚರ್ಚಿಸುತ್ತಾರೇ ತಿಳಿದುಕೊಂಡು ಬರೆಯಿರಿ.

### 4. ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :

- ಗ್ರಾಮ ಪಂಚಾಯಿತಿ ಅಥವಾ ಮಂಡಲ ಕೇಂದ್ರದಲ್ಲಿ ಯಾವುದಾದರೊಂದು ಕಾರ್ಯಾಲಯಕ್ಕೆ ಹೋಗಿರಿ. ಆ ಕಾರ್ಯಾಲಯದಲ್ಲಿ ಯಾರು ಯಾರು ಇರುವರು ? ಯಾವ ಯಾವ ಕೆಲಸ ಮಾಡುತ್ತಾರೆ ? ಆ ಕಾರ್ಯಾಲಯದಿಂದ ಜನರಿಗೆ ಆಗುವ ಪ್ರಯೋಜಗಳೇನು ? ವಿವರಗಳನ್ನು ಶೇಖರಿಸಿರಿ. ಪ್ರದರ್ಶಿಸಿರಿ.



SCERT TELANGANA

## 5. ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟಣೆ :

ಅ) ನಿಮ್ಮ ಮಂಡಲದ ನಕ್ಷೆಯನ್ನು ಹಾಕಿರಿ. ನಿಮ್ಮ ಮಂಡಲದಲ್ಲಿ ಯಾವ ಯಾವ ಸಂಸ್ಥೆಗಳಿವೆ ಗುರ್ತಿಸಿರಿ.

ಆ) ನಿಮ್ಮ ಜಿಲ್ಲೆಯ ನಕ್ಷೆಯಲ್ಲಿ ನಿಮ್ಮ ಮಂಡಲವನ್ನು ಗುರ್ತಿಸಿರಿ. ಇದಕ್ಕೆ ಹೊಂದಿಕೊಂಡು ಇನ್ನೂ ಯಾವ ಮಂಡಲಗಳಿವೆಯೋ ಗುರ್ತಿಸಿರಿ.

ಇ) ಯಾವ ಯಾವ ಕಾರ್ಯಾಲಗಳಿವೆಯೋ ಒಂದೊಂದಕ್ಕೆ ಗುರ್ತುನ್ನು ಸೂಚಿಸಿರಿ.

ಉದಾ : ಶಾಲೆ △ ಆರೋಗ್ಯ ಚಿಕಿತ್ಸಾಲಯ +

ಅಂಚೆ ಕಛೇರಿ P ಬ್ಯಾಂಕು ○

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :

ಅ) ಸರ್ಕಾರಿ ಕಾರ್ಯಾಲಯಗಳು, ಸಾಮಾಜಿಕ ಸಂಸ್ಥೆಗಳು, ಪ್ರಜೆಗಳ ಆಸ್ತಿ ಇವುಗಳಿಗೆ ನಷ್ಟ ಉಂಟಾಗದಂತೆ ನಾವು ಯಾವ ಕೆಲಸಗಳನ್ನು ಮಾಡಬಹುದು ?

ಆ) ನಿಮ್ಮ ಪಾಠಶಾಲೆ ಒಂದು ಸಾರ್ವಜನಿಕ ಸೇವೆ ಸಂಸ್ಥೆ ಹೌದಲ್ಲವೇ! ಹಾಗಾದರೇ ನೀವು ನಿಮ್ಮ ಪಾಠಶಾಲೆಯಲ್ಲಿ ಮಾಡಬೇಕಾದ, ಮಾಡಬಾರದ ಕೆಲಸಗಳನ್ನು ಬರೆಯಿರಿ.

ಇ) ಗ್ರಾಮದಲ್ಲಿ ನಿರ್ವಹಿಸುವ ಗ್ರಾಮಸಭೆಗೆಯಾಗಲಿ, ಶಾಲೆಯಲ್ಲಿ ನಡೆಯುವ ತಂದೆ ತಾಯಿಗಳ ಸಮಾವೇಶಗಳಿಗಾಗಲೀ ಪಾಲಕರು ಹಾಜರಾಗಬೇಕು. ಆಗಲೇ ಅಲ್ಲಿ ಏನು ನಡೆಯುತ್ತದೆ ಎಂದು ತಿಳಿಯುತ್ತಿದೆ. ಮತ್ತೆ ನೀವು ನಿಮ್ಮ ತಂದೆ ತಾಯಿಯರು ತಪ್ಪದೇ ಇವುಗಳಿಗೆ ಹಾಜರಾಗುವಂತೆ ಮಾಡಲು ನೀವು ಏನು ಮಾಡುವಿರಿ.

ಈ) ನಿಮ್ಮ ತಮ್ಮ/ ಅಣ್ಣ/ ಅಕ್ಕ/ತಂಗಿ ಶಾಲೆಯಿಂದ ಬರಲಿಲ್ಲವೆಂದುಕೊಳ್ಳಿ. ಆಗ ಸಮೀಪದಲ್ಲಿರುವ ಪೋಲಿಸ್ ಸ್ಟೇಷನ್‌ನಲ್ಲಿ ಲಿಖಿತರೂಪದ ಫಿರ್ಯಾದಿ ಕೊಡಿರಿ.

### ನಾನು ಇವುಗಳನ್ನು ಮಾಡಬಲ್ಲೆನಾ ?

| | | |
|---|---|---|
| 1 | ಗ್ರಾಮದಿಂದ ಜಿಲ್ಲೆಯವರೆಗೆ ಎಲ್ಲೆಲ್ಲಿ ಯಾವ ಸಂಸ್ಥೆಗಳಿವೆಯೋ ಹೇಳುವೆನು. | ಹೌದು / ಇಲ್ಲ |
| 2 | ವಿವಿಧ ಸಂಸ್ಥೆಗಳಿಂದ ಜನರಿಗೆ ಆಗುವ ಒಳಿತನ್ನು ಗುರ್ತಿಸುವುವೆನು. | ಹೌದು / ಇಲ್ಲ |
| 3 | ಜಿಲ್ಲಾ ನಕ್ಷೆಯಲ್ಲಿ, ಮಂಡಲ ನಕ್ಷೆಯಲ್ಲಿ ಕಾರ್ಯಾಲಯಗಳನ್ನು ಗುರ್ತಿಸುವೆನು. | ಹೌದು / ಇಲ್ಲ |
| 4 | ಯಾವುದಾದರೂ ಸಂಸ್ಥೆಯಿಂದ ಸಮಾಚಾರವನ್ನು ಶೇಖರಿಸುವುದಕ್ಕೆ ಬೇಕಾದ ಪ್ರಶ್ನೆಗಳನ್ನು ಕೇಳುವೆನು. | ಹೌದು / ಇಲ್ಲ |
| 5 | ಮಂಡಲ ನಕ್ಷೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಸಂಸ್ಥೆಗಳಿವೆಯೋ ಗುರ್ತಿಸುವೆನು. | ಹೌದು / ಇಲ್ಲ |
| 6 | ಸರ್ಕಾರಿ ಕಾರ್ಯಾಲಯಗಳು ಪ್ರಜೆಗಳ ಆಸ್ತಿಯಾದ್ದರಿಂದ ಇವುಗಳನ್ನು ಕಾಪಾಡುವುದಕ್ಕೆ ನಾವೇನು ಮಾಡಬೇಕೋ ವಿವರಿಸುವೆನು. | ಹೌದು / ಇಲ್ಲ |

SCERT TELANGANA

# 8  ಮನೆಗಳು - ನಿರ್ಮಾಣ - ಪರಿಶುಭ್ರತೆ

ನಾವು ವಾಸಿಸುವುದಕ್ಕೆ ಮನೆ ಅವಶ್ಯಕ. ಗ್ರಾಮಗಳಲ್ಲಿಯೂ, ಪಟ್ಟಣಗಳಲ್ಲಿಯೂ ವಿವಿಧ ಪ್ರಕಾರಗಳ ಮನೆಗಳು ಇರುತ್ತವೆ. ಈ ಕೆಳಗೆ ಕೊಟ್ಟಿರುವ ಕೆಲವು ಮನೆಗಳನ್ನು ಪರಿಶೀಲಿಸೋಣವೇ !



SCERT TELANGANA

**ಗುಂಪಿನಲ್ಲಿ ಚರ್ಚಿಸಿರಿ :**



- ಚಿತ್ರದಲ್ಲಿ ಯಾವ ಯಾವ ಪ್ರಕಾರದ ಮನೆಗಳು ಇವೆ ?
- ನಿಮ್ಮ ಊರಿನಲ್ಲಿ ಯಾವ ಯಾವ ಪ್ರಕಾರದ ಮನೆಗಳು ಇವೆ ?
- ಮನೆಗಳು ವಿವಿಧ ಪ್ರಕಾರಗಳಲ್ಲಿ ಇರುವುದಕ್ಕೆ ಕಾರಣ ಏನು ?

## 8.1 ಮನೆಗಳು - ಅಂದು - ಇಂದು

ಹಿಂದಿನ ಕಾಲಕ್ಕೆ ಹೋಲಿಸಿದರೆ ಮನೆಗಳಲ್ಲಿ ಸಾಕಷ್ಟು ಮಾರ್ಪಾಡುಗಳಾಗಿವೆ. ಹಿಂದಿನ ಕಾಲದಲ್ಲಿ ಪ್ರಜೆಗಳು ಎಲ್ಲಿ ವಾಸಿಸುತ್ತಿದ್ದರು ? ಎಂತಹ ಮನೆಗಳಲ್ಲಿ ವಾಸಿಸುತ್ತಿದ್ದರು ಗೊತ್ತೆ ?

ಯಾದಗಿರಿ ಗಾರೆ ಕೆಲಸದ ಮೇಸ್ತ್ರಿ, ಕಳೆದ 20 ವರ್ಷಗಳಿಂದ ಮನೆಗಳು ಕಟ್ಟುತ್ತಿದ್ದಾನೆ. ಗ್ರಾಮಗಳಲ್ಲಿಯು, ಪಟ್ಟಣಗಳಲ್ಲಿಯೂ ವಿವಿಧ ಪ್ರಕಾರಗಳ ಮನೆಗಳು ಕಟ್ಟಿದನು. ಯಾದಗಿರಿ ಕಟ್ಟಿದ ಕೆಲವು ಮನೆಗಳನ್ನು ಪರಿಶೀಲಿಸೋಣ !

ನಾನು ಚಿಕ್ಕವನಾಗಿದ್ದಾಗ ನಮ್ಮ ಅಪ್ಪ, ಅಮ್ಮನವರು ನಮ್ಮ ಮನೆ ಕಟ್ಟಿದರು. ನಮ್ಮದು ಮಣ್ಣಿನಿಂದ ಕಟ್ಟಿದ ಮನೆ. ನಾನು, ನಮ್ಮ ಅಣ್ಣಾ ಕೂಡಾ ಮನೆ ಕಟ್ಟುವುದಕ್ಕೆ ಸಹಾಯ ಮಾಡಿದೆವು. ಮಣ್ಣನ್ನು ತೋಡಿ, ನೀರಿನಿಂದ ಕಲಿಸಿ ಮುದ್ದೆಗಳಾಗಿ ಮಾಡಿದೆವು. ಈ ಮಣ್ಣಿನ ಮುದ್ದೆಗಳನ್ನೇ ಜೋಡಿಸಿ ಗೋಡೆ ಕಟ್ಟಿದರು. ನಾಲ್ಕು ಗೋಡೆಗಳು, ಆರು ಅಡಿಗಳ ಎತ್ತರ, ಎದ್ದ ನಂತರ ಜಾಲಿಮರಗಳ ತೊಲೆಗಳ ಮೇಲೆ, ಬಿದುರು ಬೊಂಬುಗಳನ್ನು ಜೋಡಿಸಿ ತಾಳೆ ಗರಿಗಳನ್ನು ಹೊದಿಸಿದ್ದೇವೆ. ಒಂದು ಬೇವಿನ ದಿಮ್ಮಿಗಳನ್ನು (ಕೊರಡು) ಕೋಯ್ದು ಬಡಗಿ ಸತ್ಯಣ್ಣನಿಂದ ಬಾಗಿಲುಗಳು, ಕಿಟಕಿಗಳು ಮಾಡಿಸಿದರು. ಇವುಗಳನ್ನು ಗೋಡೆಯಲ್ಲಿ ಬಿಗಿಸಿದರು. ನಮ್ಮ ಅಮ್ಮ ಕೋಣೆಯ ಗೋಡೆಗಳಿಗೆ , ನೆಲವನ್ನು ಸಗಣಿಯಿಂದ ಸಾರಿಸಿ ರಂಗೋಲಿ ಹಾಕುತ್ತಿದ್ದರು. ಶುಭಕಾರ್ಯಗಳ ಸಮಯದಲ್ಲಿ ಗೋಡೆಗಳಿಗೆ ನಾವೇ ಸುಣ್ಣ ಹಾಕುತ್ತಿದ್ದೆವು. ಆ ದಿನಗಳಲ್ಲಿ ನಮ್ಮ ಮನೆ ಕಟ್ಟುವುದಕ್ಕೆ ಸಾಮಾಗ್ರಿಗಳೆಲ್ಲಾ ಸ್ಥಳೀಯವಾಗಿ ಉಚಿತವಾಗಿ ದೊರೆಯುತ್ತಿದ್ದವು. ನಮ್ಮ ಮನೆಯೂ ತಂಪಾಗಿ ಇರುತ್ತವೆ.



**ಗುಂಪಿನಲ್ಲಿ ಚರ್ಚಿಸಿರಿ :**



- ಯಾದಗಿರಿ, ಅವರು ಮನೆಕಟ್ಟುವುದಕ್ಕಾಗಿ ಯಾವ ಯಾವ ಸಾಮಾಗ್ರಿ ಬಳಸಿದ್ದಾರೆ? ಇದರಲ್ಲಿ ಏನೇನು ಕೊಂಡಿರುವರು ? ಯಾವ ಸಾಮಾಗ್ರಿಗಳು ಉಚಿತವಾಗಿ ದೊರೆತವು ?
- ಹಿಂದಿನ ಕಾಲದಲ್ಲಿ ಕಟ್ಟಿದ ಮಣ್ಣಿನ ಮನೆಗೆ, ಈಗಿನ ಕಾಲದಲ್ಲಿನ ಮನೆಗಳಿಗೂ ವ್ಯತ್ಯಾಸವೇನು?
- ಈಗಿನ ಕಾಲದಲ್ಲಿಯೂ ಸಹ ಮಣ್ಣಿನಿಂದ ಮನೆಗಳು ಕಟ್ಟುತ್ತಾರೆಯೇ ? ಏಕೆ ?

## 8.2. ಮಣ್ಣಿನ ಮಾಳಿಗೆಗಳು :

ನಾನು 18 ವರ್ಷಗಳಿಗೆ, ಗಾರೆ ಮೇಸ್ತ್ರಿಯು ಆದೆನು. ಮೊದಲಿಗೆ ಮಣ್ಣಿನ ಮಾಳಿಗೆಗಳು ಕಟ್ಟುತ್ತಿದ್ದೆನು. ನಿಮಗೆ ಗೊತ್ತೆ? ಮಾಳಿಗೆಯ ಗೋಡೆಗಳು ಮಣ್ಣಿನಿಂದ ಕಟ್ಟುತ್ತಿದ್ದೆವು. ಮೇಲ್ಛಾವಣಿ ಕೂಡಾ ಮಣ್ಣಿನಿಂದಲೇ ಹಾಕುತ್ತಿದ್ದೆವು. ಅಂದಿನ ದಿನಗಳಲ್ಲಿ ಉಸುಕು, ಸುಣ್ಣವನ್ನು ಮಿಶ್ರಣ ಯಂತ್ರದಲ್ಲಿ ಹಾಕಿ ಚೆನ್ನಾಗಿ ತಿರಿಗಿಸಿದ ನಂತರ ಬಂದ ಮಿಶ್ರಣವನ್ನು ಉಪಯೋಗಿಸಿ ಗೋಡೆಗಳು ಕಟ್ಟುತ್ತಿದ್ದೆವು. ಹಳೆ ಕಾಲದ ಕೋಟೆಯ ಗೋಡೆಗಳು ಸಹ ಕಲ್ಲು, ಸುಣ್ಣದಿಂದ ಕಟ್ಟಿರುವಂತಹುಗಳೇ!

ಅಂದಿನ ದಿನಗಳಲ್ಲಿ ನಾನು, ಸುಟ್ಟ ಇಟ್ಟಿಗೆಗಳು, ಸುಣ್ಣದಿಂದ ಬಹಳ 'ಪಕ್ಕಾಮನೆ' ಗಳನ್ನು ಕಟ್ಟಿದೆನು. ಈ 'ಪಕ್ಕಾಮನೆ' ಗಳಲ್ಲಿ ಅಡುಗೆ ಮನೆ, ಧಾನ್ಯಗಳು ಸಂಗ್ರಹಿಸುವ ಕೋಣೆಗಳು ಇರುತ್ತಿದ್ದವು. ಗೋಡೆಗಳನ್ನು ಉಸುಕು, ಸುಣ್ಣದ ಮಿಶ್ರಣದಿಂದ ಪ್ಲಾಸ್ಟರಿಂಗ್ ಮಾಡುತ್ತಿದ್ದೆವು. ಟೇಕು, ಮತ್ತಿ ಕಟ್ಟಿಗೆಯ ತೊಲೆಗಳನ್ನು ಅಳವಡಿಸಿ ಬೆಂಗಳೂರು ಹಂಚುಗಳಿಂದ ಮೇಲ್ಛಾವಣಿ ಹಾಕುತ್ತಿದ್ದೆವು. ನೆಲದ ಮೇಲೆ ತಾಂಡೂರು, ಷಾಬಾದ್, ಮಾಚರ್ಲ ಬಂಡೆಗಳನ್ನು ಹಾಕುತ್ತಿದ್ದೆವು. ಮನೆಯ ಸುತ್ತಾ ಖಾಲಿ ಸ್ಥಳವು ಹೆಚ್ಚಾಗಿ ಬಿಡುತ್ತಿದ್ದೆವು. ಪ್ರತಿ ಮನೆಗಳಲ್ಲಿಯೂ ಬೇವಿನ ಮರ ಬೆಳೆಸುತ್ತಿದ್ದರು. ಮನೆಯ ಮುಂದೆ ಜಗುಲಿಗಳು ಇರುತ್ತಿದ್ದವು. ರಾತ್ರಿ ಸಮಯ ಹೆಚ್ಚು ಮಂದಿ, ಹೊರಗಡೆ ಮಂಚಗಳು ಹಾಕಿಕೊಂಡು ನಿದ್ರಿಸುತ್ತಿದ್ದರು.



SCERT TELANGANA

ಮನೆಯ ಮುಂದೆ ಜಗುಲಿಗಳು ಇರುವುದರಿಂದ ಉಪಯೋಗವೇನು ?

ಹೆಚ್ಚು ಹಣ ಉಳ್ಳವರು ಕಾಂಕ್ರೀಟ್ ಮನೆ ಕಟ್ಟಿಕೊಳ್ಳುತ್ತಿದ್ದರು. ಇಟ್ಟಿಗೆಯ ಗೋಡೆಗಳು ಕಟ್ಟುತ್ತಿದ್ದೆವು. ಇದರ ಮೇಲೆ ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುತ್ತಿದ್ದೆವು. ಮೇಲ್ಛಾವಣಿಯನ್ನು ಸಿಮೆಂಟ್, ಜಲ್ಲಿಕಲ್ಲು, ಮರಳು ಕಲಿಸಿದ ಕಾಂಕ್ರೀಟ್ ಮಿಶ್ರಣದಿಂದ ಮೇಲ್ಛಾವಣಿ ನಿರ್ಮಾಣ ನಡೆಯುತ್ತಿತು.




## ಗುಂಪಿನಲ್ಲಿ ಚರ್ಚಿಸಿರಿ :



- ಇಟ್ಟಿಗೆಯಿಂದ ಗೋಡೆಗಳು ಕಟ್ಟುವಾಗ ಇಟ್ಟಿಗೆಗಳನ್ನು ಹೇಗೆ ಹೊಂದಿಸುತ್ತಾರೆ ?
- ಪಕ್ಕಾಮನೆಗಳು ಕಟ್ಟುವುದಕ್ಕೆ ಯಾವ ಸಾಮಾಗ್ರಿ ಬಳಸುತ್ತಾರೆ ? ಆ ಸಾಮಾಗ್ರಿ ಎಲ್ಲಿ ದೊರೆಯುತ್ತಿದ್ದವು ?
- ಪಕ್ಕಾಮನೆ ನಿರ್ಮಾಣಕ್ಕೆ ಯಾವ ಯಾವ ಕೆಲಸಗಾರರು ಬೇಕಾಗುತ್ತಾರೆ ?

ಇತ್ತೀಚಿಗೆ ನಾನು ಒಂದು ಡೂಪ್ಲೆಕ್ಸ್ ಮನೆ ಕಟ್ಟಿದ್ದೇನೆ. ಮನೆ ಯಜಮಾನರ ಹೆಸರು ಚಕ್ರಪಾಣಿ ಮನೆಯ ವಿಸ್ತೀರ್ಣ 36 ಅಡಿ ಉದ್ದ 30 ಅಡಿಗಳ ಅಗಲವಿದೆ. ಇಂಜಿನಿಯರ್‌ನಿಂದ ಮನೆಯ ನೀಲಿ ನಕಾಶೆಯನ್ನು ತಯಾರು ಮಾಡಿಸಿದನು.






## ಆಲೋಚಿಸಿರಿ ...

**ಚಕ್ರಪಾಣಿಯ ಮನೆ ನಕ್ಷೆಯನ್ನು ಪರಿಶೀಲಿಸಿರಿ. ಮೊದಲ ಅಂತಸ್ತಿನಲ್ಲಿ ಏನೇನು ಇವೆಯೋ ಹೇಳಿರಿ.**



SCERT TELANGANA

ಮೊದಲು ಸಿಮೆಂಟ್ ಕಾಂಕ್ರೀಟ್‌ನಿಂದ ಬೆಡ್‌ಹಾಕಿ, ಕಬ್ಬಿಣ ಬೇಲಿ ವ್ಯವಸ್ಥೆಯಲ್ಲಿ ಕಾಂಕ್ರೀಟ್ ಹಾಕಿ ಪಿಲ್ಲರ್ ಸ್ತಂಭಗಳ ನಿರ್ಮಾಣ ಮಾಡಿದ್ದೇವೆ. ಸಿಮೆಂಟ್ ಇಟ್ಟಿಗೆಗಳಿಂದ ಗೋಡೆಗಳು ಕಟ್ಟಿದ್ದೇವೆ. ಮೇಲ್ಛಾವಣಿ ಹಾಕುವುದಕ್ಕೆ ಲಿಫ್ಟ್, ವೈಬ್ರೇಟರ್ ಬಳಸಿದೆವು. ಗೋಡೆಗಳನ್ನು ಮೊದಲು ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡಿ ನಂತರ ವಾಲ್‌ಕೇರ್ ಇಟ್ಟು ಮತ್ತಷ್ಟು ನುಣುಪಾಗಿ ಮಾಡಿದೆವು. ಕೋಣೆಗಳು ತಂಪಾಗಿ ಇರುವುದಕ್ಕೆ ಮೇಲ್ಛಾವಣಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಷೀಟ್‌ನಿಂದ ಸೀಲಿಂಗ್ ಮಾಡಿದೆವು. ನೆಲದ ಮೇಲೆ ರಾಜಾಸ್ಥಾನ್‌ದಿಂದ ತರಿಸಿದ ಅಮೃತ ಶಿಲೆ ಬಂಡೆಗಳು ಹಾಕಿದೆವು. ಅಡುಗೆ ಕೋಣೆಯಲ್ಲಿ ಬಾತ್‌ರೂಂನಲ್ಲಿ ಸಿರಾಮಿಕ್‌ಟೈಲ್ಸ್ ಹಾಕಿದ್ದೇವೆ.

ಆದರೆ, ಈ ಮನೆ ಕಟ್ಟುವುದಕ್ಕೆ ನನ್ನ ನೈಪುಣ್ಯತೆ ಸರಿ ಹೋಗಲಿಲ್ಲ. ಟೈಲ್ಸ್ ಹಾಕುವುದಕ್ಕೆ, ಬಂಡೆಗಳು ಹಾಕುವುದಕ್ಕೆ, ಸೀಲಿಂಗ್ ಮಾಡುವುದಕ್ಕೆ ಬಣ್ಣಗಳು ಹಾಕುವುದಕ್ಕೆ, ಪೈಪುಗಳನ್ನು ಜೋಡಣೆ ಮಾಡುವುದಕ್ಕೆ, ನೈಪುಣ್ಯತೆ ಇರುವ ಕಾರ್ಮಿಕರು ಬಹಳ ಕೂಲಿ ಕಾರ್ಮಿಕರು ಬೇಕಾದರು. ಮನೆ ಮೇಲೆ ಅಳವಡಿಸಿದ ಸೌರಶಕ್ತಿ ಫಲಕಗಳಿಂದ ಮನೆಗೆ ಬೇಕಾದ ಕರೆಂಟ್ ತಯಾರು ಆಗುತ್ತಿದೆ. ನೀರು ಬಿಸಿ ಆಗುತ್ತಿವೆ. ಇದ್ದ ಸ್ಥಳವೆಲ್ಲಾ ಮನೆ ಕಟ್ಟುವುದಕ್ಕೆ ಸರಿಹೋಗಿದೆ. ಮನೆ ಮೇಲ್ಛಾವಣಿಗೆ ಪ್ಲಾಸ್ಟಿಕ್ ಷೀಟ್ಸ್ ಹೊಂದಿಸಿ. ಮಣ್ಣಿನಿಂದ ಮಡಿಗಳನ್ನು ಮಾಡಿ ತರಕಾರಿಗಳು, ಹೂವಿನ ಸಸಿಗಳು ಬೆಳೆಯಲು ಏರ್ಪಾಡಿಸಿದ್ದೇವೆ. ಇದನ್ನೇ 'ರೂಫ್ ಗಾರ್ಡೆನ್' ಎಂದು ಕರೆಯುತ್ತಾರೆ

**ಆಲೋಚಿಸಿರಿ ...**

- **ಡೂಪ್ಲೆಕ್ಸ್ ಮನೆಗೆ ಸಾಧಾರಣ ಪಕ್ಕಾ ಮನೆ ಮನೆಗೆ ಮಧ್ಯೆ ಇರುವ ವ್ಯತ್ಯಾಸವೇನು?**
- **ರೂಫ್ ಗಾರ್ಡೆನ್‌ವನ್ನು ಬೆಳೆಸುವುದರಲ್ಲಿ ಉದ್ದೇಶ ಏನು ?**

## 8.3. ಮನೆ ನಿರ್ಮಾಣ ಹೇಗೆ ನಡೆಯುತ್ತದೆಯೋ ತಿಳಿಯೋಣ ! :

ನಿಮ್ಮ ಸಮೀಪ ಪ್ರಾಂತದಲ್ಲಿ ನಿರ್ಮಿಸುತ್ತಿರುವ ಯಾವುದಾದರು ಮನೆಯ ಹತ್ತಿರ ಹೋಗಿರಿ. ಈ ಕೆಳಗಿನ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.

**ಸಂಗ್ರಹಿಸಿರಿ :**



- ಎಂತಹ ಮನೆ ನಿರ್ಮಿಸುತ್ತಿದ್ದಾರೆ ? ಎಷ್ಟು ಸ್ಥಳದಲ್ಲಿ ನಿರ್ಮಿಸುತ್ತಿದ್ದಾರೆ ?
- ಎಷ್ಟು ಮಂದಿ ಕೆಲಸ ಮಾಡುತ್ತಿದ್ದಾರೆ ? ಯಾರ್‍ಯಾರು ಯಾವ ಕೆಲಸ ಮಾಡುತ್ತಿದ್ದಾರೆ ?
- ಕೆಲಸ ಮಾಡುತ್ತಿರುವವರಿಗೆ ದೈನಂದಿನ ಕೂಲಿ ಎಷ್ಟು ಕೊಡುತ್ತಾರೆ ? (ಯಾರನ್ನಾದರೂ ಮೂವರನ್ನು ಕೇಳಿ ಬರೆಯಿರಿ)
- ಮನೆಯ ನಿರ್ಮಾಣಕ್ಕೆ ಯಾವ ಯಾವ ಸಾಮಾಗ್ರಿ ಉಪಯೋಗಿಸುತ್ತಾರೆ ? ಯಾವ ಉಪಕರಣಗಳನ್ನು ಬಳಸುತ್ತಾರೆ ?
- ಈ ಸಾಮಾಗ್ರಿಯನ್ನು ಹೇಗೆ ತಂದರು ? (ಟ್ರಾಕ್ಟರ್ / ಲಾರಿ / ಆಟೋ / ಎತ್ತಿನ ಬಂಡಿ / ರಿಕ್ಷಾ / ಇತರೆ)
- ಒಂದು ಕೋಣೆಯನ್ನು ನಿರ್ಮಿಸುವುದಕ್ಕೆ ಎಷ್ಟು ಇಟ್ಟಿಗೆಗಳು ಬೇಕು ? ಎಷ್ಟು ಚೀಲ ಸಿಮೆಂಟ್ ಬೇಕು ?
- ಒಂದು ಕೋಣೆಯನ್ನು ನಿರ್ಮಿಸುವುದಕ್ಕೆ ಸುಮಾರಾಗಿ ಎಷ್ಟು ಖರ್ಚಾಗುತ್ತದೆ ?

SCERT TELANGANA

## 8.4 ಇಟ್ಟಿಗೆಗಳನ್ನು ತಯಾರು ಮಾಡುವ ವಿಧಾನ :

ಮನೆಗಳು ಕಟ್ಟುವುದಕ್ಕೆ ಮಣ್ಣಿನ ಇಟ್ಟಿಗೆಗಳನ್ನೆ ಬಳಸುತ್ತಿದ್ದಾರೆ. ಹಗುರವಾದ, ಧೃಢವಾದ, ಕೆಂಪು ಬಣ್ಣದಲ್ಲಿರುವ ನಾಣ್ಯತೆಯಿಂದ ಕೂಡಿರುವ ಇಟ್ಟಿಗೆಗಳಿಗೆ ಬೇಡಿಕೆ ಹೆಚ್ಚಾಗಿರುತ್ತದೆ. ಆದರೆ ಈ ಇಟ್ಟಿಗೆಗಳನ್ನು ಹೇಗೆ ತಯಾರು ಮಾಡುವರೋ ಗೊತ್ತೆ? ಇಟ್ಟಿಗೆಗಳನ್ನು ತಯಾರು ಮಾಡುವ ವಿವಿಧ ಹಂತಗಳ ಕುರಿತು ತಿಳಿದುಕೊಳ್ಳೋಣ !



**ಇಟ್ಟಿಗೆಗಳನ್ನು ತಯಾರು ಮಾಡುವುದರಲ್ಲಿ ಕೆಳಗಿನ ಹಂತಗಳಿರುತ್ತವೆ.**



- ಜೇಡಿ ಮಣ್ಣನ್ನು ಸಂಗ್ರಹಿಸುವುದು.
- ಜೇಡಿ ಮಣ್ಣನ್ನು ಬೂದಿಯಲ್ಲಿ ಮಿಶ್ರಣ ಮಾಡುವುದು.
- ಇದನ್ನು ನೀರಿನಿಂದ ಕಲಿಸಿ ದನಗಳಿಂದ ತುಳಿಸಿ ಮೆತ್ತಗೆ ಮಾಡುವುದು.
- ಮಣ್ಣಿನ ಮುದ್ದೆಗಳನ್ನು ಇಟ್ಟಿಗೆ ಆಕಾರದಲ್ಲಿರುವ ಅಚ್ಚುಗಳಲ್ಲಿ ಹಾಕಿ, ಹಸಿ ಇಟ್ಟಿಗೆಗಳನ್ನು ಎರಡು ದಿನಗಳವರೆಗೆ ಒಣಗಿಸುತ್ತಾರೆ.
- ಆರಿದ ನಂತರ ಹಸಿ ಇಟ್ಟಿಗೆಗಳನ್ನು ಭಟ್ಟಿಯಲ್ಲಿ ಜೋಡಿಸಿ ಕಟ್ಟಿಗೆಗಳು, ಭತ್ತದ ಹೊಟ್ಟಿನಿಂದ ಸುಡುತ್ತಾರೆ. ಇಟ್ಟಿಗೆ ಭಟ್ಟಿಯು 30 ದಿನಗಳ ವರೆಗೆ ಸುಡುತ್ತದೆ.
- ಇಟ್ಟಿಗೆ ಕೆಂಪಾಗಿ ಸುಟ್ಟ ನಂತರ ಒಂದು ವಾರದವರೆಗೆ ತಂಪುಗೊಳಿಸಿ ನಂತರ ಮನೆ ಕಟ್ಟುವವರಿಗೆ ಮಾರುತ್ತಾರೆ.

## ಗುಂಪಿನಲ್ಲಿ ಚರ್ಚಿಸಿರಿ :



ಇಟ್ಟಿಗೆಗಳನ್ನು ಹೇಗೆ ತಯಾರಿಸುತ್ತಾರೆಂಬುದು ತಿಳಿದುಕೊಂಡಿರಲ್ಲವೇ ! ಕೆಳಗಿನ ಚಿತ್ರಗಳನ್ನು ನೋಡಿರಿ.

ಇಟ್ಟಿಗೆಗಳು ತಯಾರಿಸುವಲ್ಲಿ ಹಂತಗಳನ್ನು ಚಿತ್ರಗಳ ಕೆಳಗೆ ಬರೆಯಿರಿ.



1. ______________________________



2. ______________________________



3. ______________________________



4. ______________________________



5. ______________________________



6. ______________________________

ಮನೆ ನಿರ್ಮಾಣಕ್ಕೆ, ಇಟ್ಟಿಗೆಗಳ ಜೊತೆ ಕಲ್ಲು, ಸಿಮೆಂಟ್ ಜಲ್ಲಿಕಲ್ಲು, ಕಬ್ಬಿಣ ತುಂಡುಗಳು, ಟೈಲ್ಸ್, ಮೊದಲಾದವುಗಳು ಸಹ ಅವಸರವಾಗುತ್ತವೆ. ಇವುಗಳ ಬಗ್ಗೆ ತಿಳಿದುಕೊಳ್ಳೋಣ.

SCERT TELANGANA

## 8.5. ಮನೆ ನಿರ್ಮಾಣ - ಇತರ ಸಾಮಾಗ್ರಿ :

ಇಟ್ಟಿಗೆ ಮನೆ ಕಟ್ಟುವುದಕ್ಕೆ ಇಟ್ಟಿಗೆಗಳ ಜೊತೆ ಬುನಾದಿಗೆ ಬಳಸುವ ಕಲ್ಲು, ನೆಲದ ಮೇಲೆ ಹಾಸುವ ಬಂಡೆಗಳು ನಮ್ಮ ರಾಜ್ಯದಲ್ಲಿ ತಾಂಡೂರು, ಖಮ್ಮಂನಲ್ಲಿ ವಿವಿಧ ಬಣ್ಣಗಳಲ್ಲಿ ಲಭಿಸುತ್ತವೆ.



ತಾಂಡೂರು ಬಂಡೆಗಳು




ರಾಜಸ್ಥನ ಬಂಡೆಗಳು



ಷಾಬಾದ್ ಬಂಡೆಗಳು



ಖಮ್ಮಂ ಗ್ರಾನೈಟ್

ಕಾಂಕ್ರೀಟ್ ಮಿಶ್ರಮ ತಯಾರು ಮಾಡುವುದಕ್ಕೆ ಜಲ್ಲಿ (ಕಂಕರ) ಕಲ್ಲು ಅವಸರ ವಾಗುತ್ತವೆ. ಇದಕ್ಕಾಗಿ ಕ್ರಷರುಗಳನ್ನು ಉಪಯೋಗಿಸುತ್ತಾರೆ. ದೊಡ್ಡ ದೊಡ್ಡ ಕಲ್ಲುಗಳನ್ನು ಮಿಷನ್‌ನಲ್ಲಿ ಹಾಕಿ ಸಣ್ಣ ಸಣ್ಣ ಜಲ್ಲಿ ಕಲ್ಲುಗಳಾಗಿ ಮಾಡುತ್ತಾರೆ. ಈ ಕೆಲಸಗಳು ಮಾಡುವ ಕಾರ್ಮಿಕರು ಅವಶ್ಯಕವಾದರೆ ಅಲ್ಲಿಯೇ ನಿವಾಸ ಇರುವವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಅವರ ಜೊತೆ ಅವರ ಮಕ್ಕಳು ಸಹ ಅಲ್ಲಿಯೇ ಇರುತ್ತಾರೆ.



ಸ್ಟೋನ್ ಕ್ರಷರ್ ಮಿಷನ್

**ಆಲೋಚಿಸಿರಿ ...**

- ಕಾರ್ಮಿಕರ ಮಕ್ಕಳು ಶಾಲೆಗೆ ಹೋಗುತ್ತಾರೆಯೇ ? ಅವರು ಓದಿಕೊಳ್ಳದಿದ್ದರೆ ಏನಾಗುತ್ತದೆ ?
- ಇಟ್ಟಿಗೆ ಭಟ್ಟಿಗಳು, ಮನೆ ನಿರ್ಮಾಣ ಸ್ಥಳದಲ್ಲಿರುವ ಕಾರ್ಮಿಕರಿಗೆ ಬೇಕಾಗುವ ವಸತಿಗಳಾವುವು ? ಯಾವ ವಿಧವಾಗಿ ಹೊಂದಿಸಬೇಕು ?

## 8.6. ಅಪಾರ್ಟ್‌ಮೆಂಟ್ ನಿರ್ಮಾಣ :



ಪಟ್ಟಣಗಳಲ್ಲಿ ಸ್ಥಳದ ಬೆಲೆ ಬಹಳ ಹೆಚ್ಚಾಗಿರುತ್ತದೆ. ಆದ್ದರಿಂದ ಕಡಿಮೆ ಸ್ಥಳದಲ್ಲಿ ಜಾಸ್ತಿ ಮನೆಗಳು ಇರುವ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳು ನಿರ್ಮಿಸುತ್ತಾರೆ. ಒಂದೊಂದು ಅಪಾರ್ಟ್‌ಮೆಂಟ್‌ನಲ್ಲಿ 25 ರಿಂದ 30 ಕುಟುಂಬಗಳಿರುವ ಹಾಗೆ ನಿರ್ಮಿಸುತ್ತಾರೆ. ಒಂದೊಂದು ಕುಟುಂಬ ಇರುವುದನ್ನು 'ಪ್ಲಾಟ್' ಎನ್ನುತ್ತಾರೆ. ಈ ಮಧ್ಯ ಕಾಲದಲ್ಲಿ ಬಹಳ ಜಾಸ್ತಿ ಕುಟುಂಬಗಳು ಎಂದರೆ 50 ಕ್ಕಿಂತ ಹೆಚ್ಚು ಕುಟುಂಬಗಳು ಇರುವ ಹಾಗೆ ಅಪಾರ್ಟ್‌ಮೆಂಟ್‌ಗಳು ನಿರ್ಮಿಸುತ್ತಿದ್ದಾರೆ. ಅಪಾರ್ಟ್‌ಮೆಂಟುಗಳ ನಿರ್ಮಾಣಕ್ಕೆ ಯಾವ ಯಾವ ಉಪಕರಣಗಳನ್ನು ಉಪಯೋಗಿಸುತ್ತಾರೆ ಗೊತ್ತೆ ? ಕೆಳಗಿನ ಉಪಕರಣಗಳನ್ನು ಪರಿಶೀಲಿಸಿರಿ.



ಕಾಂಕ್ರೀಟ್ ಮಿಶ್ರಣ ಮಾಡುವ ಯಂತ್ರದ ಚಿತ್ರ



ಕ್ರೇನ್



ಮೇಲಕ್ಕೆ ಸಾಮಾಗ್ರಿ ತೆಗೆದು ಕೊಂಡು ಹೋಗುವ ಯಂತ್ರ (ಲಿಫ್ಟ್)

**ಗುಂಪಿನಲ್ಲಿ ಚರ್ಚಿಸಿರಿ :**



- ಇವುಗಳನ್ನು ಏಕೆ ಉಪಯೋಗಿಸುತ್ತಾರೆಯೇ ಹೇಳಿರಿ.
- ಇವುಗಳನ್ನು ಇಷ್ಟು ಎತ್ತರ ಹೇಗೆ ನಿರ್ಮಿಸಿದ್ದಾರೆ ಆಲೋಚಿಸಿರಿ.
- ಅಷ್ಟು ಎತ್ತರಕ್ಕೆ ನಿರ್ಮಾಣ ಸಾಮಾಗ್ರಿಗಳನ್ನು ಹೇಗೆ ಕೊಂಡೊಯ್ದಿರಬಹುದು ?

SCERT TELANGANA

**ಆಲೋಚಿಸಿರಿ ...**

**ಅಪಾರ್ಟ್‌ಮೆಂಟುಗಳಿಗೂ, ಸಾಧಾರಣ ಮನೆಗಳಿಗೂ ಇರುವ ವ್ಯತ್ಯಾಸಗಳು ಹೇಳರಿ.**

ಸಾಧಾರಣವಾಗಿ ಅಪಾರ್ಟ್‌ಮೆಂಟುಗಳಲ್ಲಿ ಕೆಳಗೆ ಅಮೃತಶಿಲೆ ಆಗಲಿ ಟೈಲ್ಸ್ ಆಗಲಿ ಹಾಕುತ್ತಾರೆ. ನಿಮ್ಮ ಪ್ರಾಂತದಲ್ಲಿ ಇವು ದೊರೆಯುತ್ತವೆಯೇ? ಇವು ನಿಮ್ಮ ಪ್ರಾಂತಕ್ಕೆ ಎಲ್ಲಿಂದ, ಹೇಗೆ ಬಂದವು ಎಂಬುದನ್ನು ತಿಳಿದುಕೊಂಡು ಹೇಳಿರಿ.

ಸಾಧಾರಣವಾಗಿ ಮನೆಗೆ ಕಟ್ಟಿಗೆಯಿಂದ ಮಾಡಿದ ಬಾಗಿಲುಗಳು, ಕಿಟಕಿಗಳು ಇರುತ್ತವೆ. ಈ ಮಧ್ಯ ಕಾಲದಲ್ಲಿ ಕಬ್ಬಿಣದಿಂದ ಮಾಡಿದವುಗಳನ್ನು ಸಹ ಬಳಸುತ್ತಾರೆ. ಅಪಾರ್ಟ್‌ಮೆಂಟ್‌ಗಳಂತಹವುಗಳಲ್ಲಿ ಪ್ಲೈವುಡ್‌ನಿಂದ ಮಾಡಿದ ಬಾಗಿಲುಗಳನ್ನು ಬಳಸುತ್ತಾರೆ. ಕಿಟಿಕಿಗಳಿಗೆ, ಗಾಜಿನ ಬಾಗಿಲುಗಳನ್ನು ಸಹ ಬಳಸುತ್ತಾರೆ.

**ಆಲೋಚಿಸಿರಿ ...**

**ಬಾಗಿಲುಗಳು, ಕಿಟಕಿಗಳು ಮೊದಲಾದವುಗಳಿಗೆ ಕಟ್ಟಿಗೆ ಬದಲಿಗೆ ಇತರೆ ಸಾಮಾಗ್ರಿಗಳನ್ನು ಏಕೆ ಬಳಸಿರಬಹುದು?**

## 8.7 ಮನೆಗಳು - ವಿವಿಧ ಪ್ರದೇಶಗಳು :

ಉಷ್ಣತೆ ಮತ್ತು ವರ್ಷಾಪಾತ, ಲಭಿಸುವ ಸಾಮಾಗ್ರಿಗಳಿಗೆ ಅನುಗುಣವಾಗಿ ಮನೆಗಳನ್ನು ನಿರ್ಮಿಸುವರು, ನಮ್ಮ ದೇಶದಲ್ಲಿನ ವಿವಿಧ ಪ್ರಾಂತಗಳಲ್ಲಿರುವ ಮನೆಗಳ ಬಗ್ಗೆ ತಿಳಿಯೋಣ. !

ಈಶಾನ್ಯ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ನಾಗಲ್ಯಾಂಡ್‌ಗಳಲ್ಲಿ ಮಳೆಯು ಅಧಿಕವಾಗಿ ಬೀಳುತ್ತದೆ. ತಂಪಾದ ವಾತಾವರಣ ಇರುತ್ತದೆ. 1826 ರಲ್ಲಿ ಬ್ರಿಟೀಷ್‌ನವರು ಇಲ್ಲಿ ಮನೆಗಳನ್ನು ಕಟ್ಟಲು ಪ್ರಾರಂಭಿಸಿದರು. ಇಲ್ಲಿ ಹಲಗೆಯಿಂದ ಮಾಡಿದ ಮನೆಗಳು ಅಧಿಕವಾಗಿ ಕಂಡು ಬರುತ್ತವೆ. ಬಿದಿರು ಬೊಂಬುಗಳನ್ನು ಗೋಡೆಗಳಂತೆ ಇವುಗಳಿಗೆ ಆಕಳು ಸಗಣಿಯನ್ನು ಬೆರೆಸಿದ ಜೇಡಿಮಣ್ಣನ್ನು ಮೆತ್ತುತ್ತಿದ್ದರು. ಮನೆಗಳ ಮೇಲ್ಭಾಗದಲ್ಲಿ ರೇಕುಗಳಿಂದ ಇಳಿ ಜಾರಾಗಿ ನಿರ್ಮಿಸುತ್ತಿದ್ದರು. ಕೆಳಭಾಗವನ್ನು 'ಸ್ಲಿಟ್ಸ್'ಗಳ ಮೇಲೆ ನಿರ್ಮಿಸುತ್ತಿದ್ದರು. ಮಳೆಯ ನೀರು ಹೋಗುವ ಮಾರ್ಗವನ್ನು 'ಸ್ಲಿಟ್ಸ್' ಎನ್ನುವರು.



**ಆಲೋಚಿಸಿರಿ ...**

**ಮನೆಯ ಮೇಲ್ಛಾವಣಿಯನ್ನು ರೇಕುಗಳಿಂದ ಇಳಿ ಜಾರಾಗಿ ಏಕೆ ಮಾಡುತ್ತಿದ್ದರು ?**



SCERT TELANGANA

ಕಾಶ್ಮೀರ್ ಬಹಳ ಶೀತ ಪ್ರದೇಶವಾಗಿದ್ದು ಇಲ್ಲಿನ ಉಷ್ಣೋಗ್ರತೆಯು ಕೆಲವೊಮ್ಮೆ $0^0$ ಗಿಂತಲೂ ಕಡಿಮೆ ಯಾಗುತ್ತದೆ. ಇಲ್ಲಿ ಪರ್ವತ ಗಳ ಮೇಲೆ ಮನೆಗಳಿರುತ್ತವೆ. ಶ್ರೀನಗರದಲ್ಲಿನ 'ಜೀಲಂ' ನದಿಯ ಮೇಲೆ 'ಡೊಂಗ್' ಎಂಬುವ ಹಡುಗು ಮನೆಯಲ್ಲಿ ಪ್ರಯಾಣಿಕರು ವಿಹರಿಸುತ್ತಾರೆ.




**ನಿಮಗೆ ಗೊತ್ತೆ ?**

ನಮ್ಮ ರಾಜ್ಯದಲ್ಲಿ ತಾಂಡೂರು ಪ್ರದೇಶದಲ್ಲಿ ಬಣ್ಣದ ಬಂಡೆಗಳು ದೊರೆಯುತ್ತವೆ. ಈ ಪ್ರಾಂತ್ಯದಲ್ಲಿ ಕಲ್ಲುಗಳು ಅತಿ ಕಡಿಮೆ ಬೆಲೆಗೆ ದೊರೆಯುವುದರಿಂದ ಮನೆಗೋಡೆಗಳು, ಮೇಲ್ಛಾವಣಿ, ಫ್ಲೋರಿಂಗ್ ಎಲ್ಲವುಗಳನ್ನು ಕಲ್ಲಿನಿಂದ ನಿರ್ಮಿಸುತ್ತಾರೆ. 'ಕಲ್ಲಿನ ಮೇಲ್ಛಾವಣಿ ವಿಚಿತ್ರವಾಗಿದೆ ಅಲ್ಲವೆ! ಅದೇ ವಿಧವಾಗಿ ಸಮುದ್ರ ತೀರ ಪ್ರಾಂತ್ಯಗಳಲ್ಲಿ ತೆಂಗಿನ ಗರಿಗಳನ್ನು ನಲ್ಲಮಲ ಮತ್ತು ಮನ್ಯಂ ಕಾಡುಗಳಲ್ಲಿರುವ ಬಿದಿರುಗಳನ್ನು ಮನೆ ನಿರ್ಮಾಣಗಳಿಗೆ ಹೆಚ್ಚಾಗಿ ಉಪಯೋಗಿಸುತ್ತಾರೆ.



## 8.8. ಮನೆಗಳು - ಸಮಸ್ಯೆಗಳು :

ನಾವು ನಿವಸಿಸುವುದಕ್ಕಾಗಿ ಮನೆಗಳು ಅವಸರವಲ್ಲವೆ ! ಆದರೆ ನಮ್ಮ ಸುತ್ತ ಇರುವವರಲ್ಲಿ ಬಹಳಷ್ಟು ಜನರಿಗೆ ಸ್ವಂತ ಮನೆಗಳು ಇರಲಾರವು. ಇವರು ಬಾಡಿಗೆ ಮನೆಗಳಲ್ಲಿ ಅಥವಾ ತಾತ್ಕಲಿಕ ನಿವಾಸಗಳಲ್ಲಿ ಇರುತ್ತಾರೆ. ನಮ್ಮ ರಾಜ್ಯದಲ್ಲಿರುವ ಬಹಳ ಬಡ ಜನರಿಗೂ ಸಹ ಸ್ವಂತ ಮನೆಗಳಿಲ್ಲ. ಇವರಿಗೆ ಸರ್ಕಾರ ಮನೆ ಕಟ್ಟಿಸಿ ಕೊಡುತ್ತದೆ.

**ಗುಂಪಿನಲ್ಲಿ ಚರ್ಚಿಸಿರಿ :**



- ಮಕ್ಕಳೇ ! ನಿಮ್ಮೆಲ್ಲರಿಗೂ ಸ್ವಂತ ಮನೆಗಳಿವೆಯೇ ? ನಿಮ್ಮದು ಯಾವ ವಿಧದ ಮನೆ ?
- ಪ್ರತಿಯೊಬ್ಬರಿಗೂ ಸ್ವಂತ ಮನೆಗಳು ಏಕೆ ಇರುವುದಿಲ್ಲ ?
- ಸ್ವಂತ ಮನೆಗಳು ಇಲ್ಲದವರಿಗೆ ಯಾವ ಯಾವ ಸಮಸ್ಯೆಗಳು ಇರುತ್ತವೆ ?
- ನಿಮಗೆ ಮನೆ ಹೇಗಿದ್ದರೆ ಇಷ್ಟ? ಯಾವ ಯಾವ ಸೌಕರ್ಯಗಳು ಇರಬೇಕು ?
- ಮನೆ ಸೌಕರ್ಯಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಇರುವುದಕ್ಕೆ ಕಾರಣಗಳು ಏನಾಗಿರಬಹುದು?

SCERT TELANGANA

ಪಟ್ಟಣಗಳಲ್ಲಿ ಬಡವರು ಚರಂಡಿಗಳ ಮೇಲೆ, ನದಿ ದಂಡೆಯಲ್ಲಿ ಖಾಲಿಯಾಗಿರುವ ಸರ್ಕಾರಿ ಸ್ಥಳಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುವರು. ಹೈದಾರಾಬಾದ್‌ನ ಒಂದು ಕೊಳಚೆ ಪ್ರದೇಶದ ಚಿತ್ರವನ್ನು ಪರಿಶೀಲಿಸಿರಿ.



**ಆಲೋಚಿಸಿರಿ ...**

**ಕೊಳಚೆ ಪ್ರದೇಶವು ಇಂತಹ ಅಪರಿಶುಭ್ರವಾಗಿ ಏಕೆ ಇರುತ್ತವೆ ?**

## 8.9. ಬಯಲು ಪ್ರದೇಶದಲ್ಲಿ ಮಲ ವಿಸರ್ಜನೆ :



ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಬಹಳ ಮನೆಗಳಲ್ಲಿ ಶೌಚಾಲಯಗಳಿಲ್ಲ. ಕೆಲವರಿಗೆ ಶೌಚಾಲಯಗಳು ಇದ್ದರು ಬಯಲು ಪ್ರದೇಶದಲ್ಲೇ ಮಲ ವಿಸರ್ಜನೆ ಮಾಡುತ್ತಿದ್ದಾರೆ. ಇದು ಒಂದು ದುರಾಭ್ಯಾಸವಾಗಿದೆ. ಇದರಿಂದ ಅನೇಕ ನಷ್ಟಗಳು ಉಂಟಾಗುತ್ತವೆ. ಮಲದ ಮೇಲೆ ಕುಳಿತ ನೊಣಗಳಿಂದ ಸೂಕ್ಷ್ಮಾಣು ಜೀವಿಗಳು ವ್ಯಾಪ್ತಿ ಹೊಂದುತ್ತವೆ. ಕಾಲುವೆ ಕಟ್ಟೆಗಳು, ಕೆರೆಯ ಕಟ್ಟೆಯ ಮೇಲೆ ಮಲ ವಿಸರ್ಜನೆ ಮಾಡಿದಾಗ ಮಳೆಯಿಂದ ಅದು ನೀರಿನೊಳಗೆ ಸೇರುತ್ತದೆ.

ಇಂತಹ ಕಲುಷಿತವಾದ ನೀರನ್ನು ಕುಡಿದಾಗ, ಆಹಾರವನ್ನು ತಿಂದಾಗ ಕಾಲರಾ, ಟೈಫಾಯಿಡ್‌ನಂತಹ ರೋಗಗಳು ವ್ಯಾಪಿಸುತ್ತವೆ. ಬಯಲು ಪ್ರದೇಶದಲ್ಲಿ ಮಲ ವಿಸರ್ಜನೆಯಿಂದ ಜಂತು ಹುಳು ವ್ಯಾಪ್ತಿ ಹೊಂದುತ್ತವೆ. ಇವುಗಳನ್ನೇ 'ಜಂತುಹುಳು'ಗಳು ಎನ್ನುವರು. ಇವುಗಳಿಂದ ರಕ್ತಹೀನತೆ ಉಂಟಾಗುತ್ತದೆ. ನಾವು ತಿನ್ನುವ ಆಹಾರ ಅವೇ ತಿನ್ನುತ್ತವೆ, ನಾವು ಬಲಹೀನರಾಗುತ್ತೇವೆ. ವರ್ಷಕ್ಕೆ ಎರಡು ಸಾರಿ ಹೊಟ್ಟೆಯಲ್ಲಿಯ ಹುಳಗಳು ಹೋಗುವುದಕ್ಕಾಗಿ ಡಿವಾರ್ಮಿಂಗ್ ಮಾತ್ರೆಗಳು ಹಾಕಿಕೊಳ್ಳಬೇಕು.

## 8.10. ಸಂಪೂರ್ಣ ಪರಿಶುಭ್ರತಾ ಚಳುವಳಿ :

ಎಲ್ಲರಿಗೆ ಶೌಚಾಲಯ ಸೌಕರ್ಯಗಳು ಕಲ್ಪಿಸುವುದಕ್ಕೆ ಸರ್ಕಾರ ಕೃಷಿ ಮಾಡುತ್ತಿದೆ. ಬಲಹೀನ ವರ್ಗದವರಿಗೆ ಶೌಚಾಲಯ ನಿರ್ಮಾಣಕ್ಕೆ ಆರ್ಥಿಕ ಸಹಾಯ ಮಾಡುತ್ತಿದೆ.

ನಿಮ್ಮ ಗ್ರಾಮದಲ್ಲಿ ಈ ಸೌಕರ್ಯವನ್ನು ಎಷ್ಟು ಜನರು ಉಪಯೋಗಿಸಿಕೊಳ್ಳುತ್ತಿದ್ದಾರೆ.



### ''ಮನೆಯಲ್ಲಿ ಶೌಚಾಲಯ ಇದ್ದರೆ ಮಾತ್ರ ಸಂಸಾರಕ್ಕೆ ಹೋಗುತ್ತೇನೆ'' ಎಂದ ಅನಿತಾಬಾಯಿ

ಫೋಟೋದಲ್ಲಿರುವ ಮಹಿಳೆಯ ಹೆಸರು ಅನಿತಾಬಾಯಿ. ಇವರದು ಮಧ್ಯ ಪ್ರದೇಶ್‌ನ ಬೇತುಲ್ ಜಿಲ್ಲೆಯಲ್ಲಿನ 'ಚಿಚೌಲಿ' ಗ್ರಾಮ. 2011 ಮೇ ತಿಂಗಳಲ್ಲಿ ರತನ್‌ಪೂರ್ ಗ್ರಾಮಕ್ಕೆ ಸಂಬಂಧಿಸಿದ ಶಿವರಾಂನ ಜೊತೆ ವಿವಾಹವಾಗಿದೆ. ಗಂಡನ ಮನೆಗೆ ಹೋದಾಗ ಅನಿತಾಬಾಯಿಗೆ ಅಲ್ಲಿ ಶೌಚಾಲಯದ ಸೌಕರ್ಯ ಇಲ್ಲದ ಕಾರಣ ತೊಂದರೆಕ್ಕಿಡಾದಳು. ಶೌಚಾಲಯವಿಲ್ಲದ ಕಾರಣ ತನ್ನ ತವರು ಮನೆಗೆ ಹೋಗಿ, ಗಂಡನ ಮನೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿದರೆ ಮಾತ್ರ ಮತ್ತೆ ಸಂಸಾರ ಮಾಡಲು ಹೋಗುತ್ತೇನೆ ಎಂದಳು. ಅದರ ಬಗ್ಗೆ ಅವರ ಕುಟುಂಬದಲ್ಲಿ ಗ್ರಾಮದಲ್ಲಿ ಚರ್ಚೆ ನಡೆಯಿತು. ಅನಿತಾಬಾಯಿ ಹೇಳಿರುವುದರಲ್ಲಿ ನ್ಯಾಯವಿದೆ ಎಂದು ಎಲ್ಲಾರು ಅಂದರು. ಆಗ ಅನಿತಾಬಾಯಿ ಗಂಡನ ಮನೆಯಲ್ಲಿ ಶೌಚಾಲಯ ಕಟ್ಟಿಸಿದರು. ಹಾಗೆ ಆ ಗ್ರಾಮದಲ್ಲಿ ಇನ್ನುಳಿದವರು ಸಹ ಶೌಚಾಲಯಗಳನ್ನು ಕಟ್ಟಿಸಿಕೊಂಡರು. ಈ ವಿಧವಾಗಿ ಅನಿತಾಬಾಯಿ ಪರಿಶುಭ್ರತೆ ಕ್ರಾಂತಿಗೆ ನಾಂದಿಯಾದಳು. ಈ ಸಂಘಟನೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರವಾಯಿತು. ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಇವರಿಗೆ ''ಸುಲಭ್ ಶೌಚಾಲಯ ವ್ಯವಸ್ಥೆ ಪ್ರಶಸ್ತಿ'' ಕೆಳಗೆ ರೂ. 5,00,000/- ಚೆಕ್ಕನ್ನು ಕೊಟ್ಟರು. ಅಂದಿನ ರಾಷ್ಟ್ರಪತಿ ಪ್ರತಿಭಾ ಪಾಟಿಲ್, ಪ್ರಧಾನಮಂತ್ರಿ ಮನ್ಮೋಹನ್‌ಸಿಂಗ್‌ರವರು ಸಹ ಇವರನ್ನು ಅಭಿನಂದಿಸಿದರು.



ಕೇಂದ್ರ ಮಂತ್ರಿ ಶ್ರೀ ಜೈರಾಂ ರಮೇಶರಿಂದ ನಗದು ಬಹುಮಾನವನ್ನು ತೆಗೆದುಕೊಳ್ಳುತ್ತಿರುವ ಅನಿತಾಬಾಯಿ.

### ನಿಮಗೆ ಗೊತ್ತೆ?

ಶೇಕಡ 100% ನೈರ್ಮಲ್ಯತೆ ಹೊಂದಿರುವ ಗ್ರಾಮಗಳು ಎಂದರೆ ಮುಖ್ಯವಾಗಿ ಗ್ರಾಮದಲ್ಲಿನ ಎಲ್ಲಾ ಮನೆಗಳಲ್ಲಿ ಶೌಚಾಲಯ ಸೌಕರ್ಯ ಇದ್ದು, ಗ್ರಾಮದಲ್ಲಿ ನೈರ್ಮಲ್ಯತೆ ಸರಿಯಾಗಿದ್ದರೆ ಆ ಗ್ರಾಮಕ್ಕೆ ''ನಿರ್ಮಲ್ ಪುರಸ್ಕಾರ'' ಅವಾರ್ಡು ದೊರೆಯುತ್ತದೆ. ಇದನ್ನು ಜಾರಿಗೊಳಿಸುವುದಕ್ಕೆ ರಾಷ್ಟ್ರಪತಿಯವರಿಂದ ಬಹುಮಾನವನ್ನು ವಿತರಿಸುವರು. ನಿಮ್ಮ ಜಿಲ್ಲೆ / ಮಂಡಲದಲ್ಲಿ ಇಂತಹ ನಿರ್ಮಲ್ ಪುರಸ್ಕಾರ ಅವಾರ್ಡು ಹೊಂದಿದ ಗ್ರಾಮಗಳು ಎಷ್ಟು ಇವೆಯೋ ತಿಳಿದುಕೊಂಡು ಹೇಳಿರಿ.




ಭಾರತದ ರಾಷ್ಟ್ರಪತಿಯಿಂದ ನಿರ್ಮಲ್ ಪುರಸ್ಕಾರ ತೆಗೆದುಕೊಳ್ಳುವುದು

SCERT TELANGANA

## 8.11. ನೈರ್ಮಲ್ಯತೆ - ಅವಶ್ಯಕತೆ :



"ಆರೋಗ್ಯವೇ ಮಹಾಭಾಗ್ಯ" ಎನ್ನುವರು ಅಪರಿಶುಭ್ರತೆಯಿಂದ ಅನೇಕ ರೋಗಗಳು ವ್ಯಾಪಿಸುತ್ತವೆ. ನಮ್ಮ ಆರೋಗ್ಯಕ್ಕೆ ಅಪರಿಶುಭ್ರತೆಯೇ ಪ್ರಥಮ 'ಶತ್ರುವು' ಎಂದು ಹೇಳಬಹುದು. ಕೆಳಗಿನ ಚಿತ್ರವನ್ನು ನೋಡಿರಿ. ಏನು ನಡೆಯುತ್ತದೋ ಹೇಳಿರಿ. ಇದರಿಂದ ಎಂತಹ ನಷ್ಟ ಉಂಟಾಗುತ್ತದೆ ?

**ಗುಂಪಿನಲ್ಲಿ ಚರ್ಚಿಸಿರಿ :**



- ಕಸವನ್ನು ಹೀಗೆ ಚೆಲ್ಲುವುದು ಸರಿಯೇ ? ಆಲೋಚಿಸಿರಿ.
- ಹೀಗೆ ಮಾಡುವುದರಿಂದ ನಮಗೆ ಆಗುವ ನಷ್ಟಗಳನ್ನು ಚರ್ಚಿಸಿರಿ.
- ನಿಮ್ಮ ಮನೆಗಳಲ್ಲಿ / ಪಾಠಶಾಲೆಗಳಲ್ಲಿನ ಕಸವನ್ನು ನೀವು ಹೇಗೆ ವಿಸರ್ಜನೆ ಮಾಡುವಿರಿ ?
- ಕಸವೆಲ್ಲಾ ಕೆಲಸಕ್ಕೆ ಬರುವುದಿಲ್ಲವೇ ? ಮತ್ತೆ ಯಾವುದಾಕ್ಕಾದರು ಬಳಸಬಹುದೇ ?
- ನಮ್ಮ ಮನೆಗಳಲ್ಲಿ ಕಸವನ್ನು ಕಡಿಮೆಮಾಡಬೇಕಾದರೆ ಏನು ಮಾಡಬೇಕು ?

## 8.12 ನಮ್ಮ ಮನೆಯಲ್ಲಿ ಕಸ ಹೇಗೆ ತಯಾರಾಗುತ್ತದೆ :

ನಿಮ್ಮ ಮನೆಯಲ್ಲಿ ಕೂಡಿ ಹಾಕುವ ವ್ಯರ್ಥ ಪದಾರ್ಥಗಳನ್ನು, ಪರಿಶೀಲಿಸಿರಿ. ಇದರಲ್ಲಿ ಯಾವುವು ಇವೆ ? ಆಹಾರ ಪದಾರ್ಥಗಳು, ಎಲೆಗಳು, ಹಣ್ಣಿನ ತೊಗಟೆಗಳಂತಹ ಸಾವಯವ ವ್ಯರ್ಥ ಪದಾರ್ಥಗಳು, ಪ್ಲಾಸ್ಟಿಕ್ ಚೀಲಗಳು, ಮರಮುಟ್ಟುಗಳಿಂದ ಉಂಟಾದ ವ್ಯರ್ಥ ಪದಾರ್ಥಗಳು ಇವೆ ಅಲ್ಲವೇ !

ಸಾವಯವ ವ್ಯರ್ಥ ಪದಾರ್ಥವು ತ್ವರಿತವಾಗಿ ಕೊಳೆತು ಹೋಗಿ ಮಣ್ಣಿನಲ್ಲಿ ಬೆರೆತು ಹೋಗುತ್ತದೆ. ಅದಕ್ಕಾಗಿ ಇದನ್ನು ಕಾಂಪೋಸ್ಟ್ ಕುಣಿಯಲ್ಲಿ ಹಾಕಬೇಕು. ಒಣಗಿದ ವ್ಯರ್ಥ ಪದಾರ್ಥವನ್ನು ಪುನಃ ಬಳಕೆ ಮಾಡಲು ಅವಕಾಶವಿದೆ. ಇಂತಹವುಗಳನ್ನು ಶೇಖರಣೆ ಮಾಡುವವರಿಗೆ ಕೊಡಬೇಕು. ಮುನ್ಸಿಪಾಲಿಟಿಯವರು ಪಟ್ಟಣಗಳಲ್ಲಿ ಸಾವಯವ ಮತ್ತು ವ್ಯರ್ಥ ಪದಾರ್ಥಗಳನ್ನು ಬಿಡಿ ಬಿಡಿಯಾಗಿ ಶೇಖರಣೆ ಮಾಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಮುನ್ಸಿಪಲ್ ವಾಹನವು ನಿಮ್ಮ ಮನೆಯ ಹತ್ತಿರ ಬಂದಾಗ ಸಾವಯವ, ಒಣ ವ್ಯರ್ಥ ಪದಾರ್ಥಗಳನ್ನು ಕಸದ ಬುಟ್ಟಿಯವರಿಗೆ ಕೊಡಬೇಕು.

ಮನೆ ಪರಿಸರದಲ್ಲಿ, ಪಾಠಶಾಲೆಯಲ್ಲಿ ಕೂಡಿ ಹಾಕಿದ ವ್ಯರ್ಥ ಪದಾರ್ಥವನ್ನು, ಎಲೆಗಳನ್ನು ಕುಪ್ಪೆ ಮಾಡಿ ಸುಡುವುದು ಸರಿಯಲ್ಲ. ಇದರಿಂದ ವಾಯು ಮಾಲಿನ್ಯ ಉಂಟಾಗುತ್ತದೆ. ರೇಕು, ಗಾಜುಗಳಂತಹವುಗಳು ಉಳಿದು ಬಿಡುತ್ತವೆ. ಹೀಗೆ ಮಾಡುವುದರಿಂದ ಪರಿಸರವು ಹಾನಿಗೀಡಾಗುತ್ತದೆ.

**ಆಲೋಚಿಸಿರಿ ...**

**ನಿಮ್ಮ ಮನೆಯಲ್ಲಿ ಯಾವ ಯಾವ ತರಹದ ವ್ಯರ್ಥ ಪದಾರ್ಥವು ಇರುತ್ತವೆ ? ಹಸಿ ವ್ಯರ್ಥ ಪದಾರ್ಥ ಯಾವುದು ? ಒಣ ವ್ಯರ್ಥ ಪದಾರ್ಥ ಯಾವುವು ? ಈ ಕಸವನ್ನು ನೀವೇನು ಮಾಡುತ್ತೀರಿ ?**



SCERT TELANGANA

**ನಿಮಗೆ ಗೊತ್ತೆ?**

ಚಂಡೀಗಡ್‌ನಲ್ಲಿ ಲೇಕ್‌ಚಂದ್ ಎಂಬ ವ್ಯಕ್ತಿ ಪ್ರಜೆಗಳು ಬಿಸಾಕಿದ ವ್ಯರ್ಥ ಪದಾರ್ಥಗಳನ್ನು ಶೇಖರಿಸಿ ಅದನ್ನು ನಿರ್ಮಾಣ ಸಾಮಾಗ್ರಿಯಾಗಿ ಬದಲಾಯಿಸಿಕೊಂಡು ಚಂದವಾದ "ರಾಕ್ ಗಾರ್ಡ್‌ನ್" ನನ್ನು ನಿರ್ಮಿಸಿದನು.



ಪರಿಸರಗಳನ್ನು ಪರಿಶುಭ್ರವಾಗಿ ಇಟ್ಟುಕೊಳ್ಳುವುದು ಎಷ್ಟೋ ಮುಖ್ಯವೋ ಕಸ ಇಲ್ಲದಂತೆ ಮಾಡುವುದು ಅಷ್ಟೇ ಮುಖ್ಯ. ನಮ್ಮ ಮನೆಗಳಲ್ಲಿ ತಯಾರಾಗುವ ಕಸವನ್ನು ಹೇಗೆ ಕಡಿಮೆ ಮಾಡಬಹುದೋ ಆಲೋಚಿಸಿರಿ.

**ಪರಿಸರ ಸಂರಕ್ಷಣೆಗಾಗಿ ಈ ಮೂರು ಸೂತ್ರಗಳನ್ನು ಪ್ರತಿಯೊಬ್ಬರು ಪಾಲಿಸಬೇಕು.**

1. **ಕಸವನ್ನು ಕಡಿಮೆಮಾಡುವುದು** : ಬೇಕಾದ ವಸ್ತುಗಳನ್ನು ತಕ್ಕ ಪ್ರಮಾಣದಲ್ಲಿ, ಕೆಲವು ವಸ್ತುಗಳನ್ನು ಪೂರ್ತಿಯಾಗಿ ಬಳಸುವುದರಿಂದ ಕಸ ಕಡಿಮೆ ಮಾಡಬಹುದು ಅಥವಾ ಪೂರ್ತಿಯಾಗಿ ನಿವಾರಿಸಬಹುದು. ಉಪಯೋಗಿಸಿ ಬಿಸಾಕಿದ ಪ್ಲಾಸ್ಟಿಕ್ ನೀರಿನ ಗ್ಲಾಸುಗಳು, ಪ್ಲೇಟುಗಳು, ಪ್ಲಾಸ್ಟಿಕ್ ಚೀಲಗಳು, ಪ್ಲಾಸ್ಟಿಕ್ ಟೀ ಗ್ಲಾಸುಗಳು, ಪ್ಲಾಸ್ಟಿಕ್ ಚಮಚಗಳು, ಬಳಸಬಾರದು. ಅವು ಒಂದು ದಿನ ಬಳಸಿ / ಒಂದು ಸಾರಿ ಬಳಸಿ ಹೊರ ಹಾಕುವುದರಿಂದ ಎಲ್ಲಿ ನೋಡಿದರೂ ಅವು ಕುಪ್ಪೆಗಳಾಗಿ ತಯಾರಾಗುತ್ತವೆ. ನೀರಿನಲ್ಲಿ ಹಾಕುವುದರಿಂದ ಹಾಗೆ ಅವುಗಳು ನೀರಿನಲ್ಲಿ ಉಳಿದು ಜಲ ಮಾಲಿನ್ಯ ಉಂಟಾಗಿ ನೀರಿನಲ್ಲಿರುವ ಸಸ್ಯಗಳು, ಮೀನುಗಳು ನಾಶವಾಗುತ್ತವೆ. ಈ ಪ್ಲಾಸ್ಟಿಕ್ ಬದಲಾಗಿ ಸ್ಟೀಲ್, ಲೋಹಗಳಿಂದ ತಯಾರು ಮಾಡಿದಂತವುಗಳನ್ನು ಬಳಸಬೇಕು. ಇವುಗಳನ್ನೇ ಪುನಃ ಉಪಯೋಗಿಸಬಹುದು.

2 **ಪುನಃ ಬಳಸುವುದು** : ಉಪಕರಣಗಳನ್ನು ರಿಪೇರಿ ಅಥವಾ ರೀ ಫಿಲ್ಲಿಂಗ್ ಮಾಡಿ ಬಳಸುವುದು, ಚೀಲಗಳು, ಕವರ್‌ಗಳಂತಹವುಗಳನ್ನು ಹೊರ ಹಾಕದಂತೆ ಪುನಃ ಬಳಸಬಹುದು. ಹೀಗೆ ಮಾಡುವುದರಿಂದ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸಿದಂತಾಗುತ್ತದೆ.

3. **ರೀ ಸೈಕ್ಲಿಂಗ್** : ಕಬ್ಬಿಣ, ಪ್ಲಾಸ್ಟಿಕ್, ಗಾಜು, ಕಾಗದ, ಎಲೆಕ್ಟ್ರಾನಿಕ್ ಪರಿಕರಗಳನ್ನು ರೀ ಪ್ರಾಸೆಸಿಂಗ್ ಮಾಡಿ ಪುನಃ ಹೊಸ ವಸ್ತುಗಳನ್ನು ತಯಾರಿಸುತ್ತಾರೆ. ಹೀಗೆ ರೀ ಸೈಕ್ಲಿಂಗ್ ಮಾಡುವುದರಿಂದ ಸಹ ಕಸವನ್ನು ಕಡಿಮೆಮಾಡಬಹುದು

**ಮಾಡಿ ನೋಡಿರಿ ...**

**ನಿಮ್ಮ ಪಾಠಶಾಲೆಯಲ್ಲಿ ಕಾಂಪೋಸ್ಟ್ ಕುಣಿಯನ್ನು ಏರ್ಪಾಟು ಮಾಡಿರಿ. ಅದರಲ್ಲಿ ಮರದ ಎಲೆಗಳಂತಹ ವ್ಯರ್ಥ ಪದಾರ್ಥಗಳನ್ನು ಹಾಕಿರಿ. ಮಣ್ಣನ್ನು ಮುಚ್ಚಿರಿ. ತಿಂಗಳೊಳಗೆ ಏರ್ಪಡಿಸಿದ ಕಾಂಪೋಸ್ಟ್‌ನ್ನು ಶಾಲೆ ತೋಟದ ಸಸ್ಯಗಳಿಗೆ ಹಾಕಿರಿ.**

## 8.13. ಉತ್ತಮ ಮನೆ ಹೇಗಿರಬೇಕು



ಚಿತ್ರದಲ್ಲಿಯ ಮನೆ ಹೇಗಿದೆ ?

ಹಸಿರು ಸಸ್ಯಗಳು, ಪರಿಶುಭ್ರ ಗಾಳಿ, ಬೆಳಕು, ಹೇರಳವಾಗಿ ಲಭಿಸುವ ಮನೆ ಆಹ್ಲಾದಕರವಾಗಿ ಇರುತ್ತದೆ. ಮನೆಯ ಹಿಂದೆ-ಮುಂದೆ ಖಾಲಿ ಜಾಗ ಇರಬೇಕು. ಹೀಗೆ ಯಾವ ಲಕ್ಷಣ ಗಳಿದ್ದರೆ ಅದು ಉತ್ತಮ ಮನೆ ಆಗುತ್ತದೆ.



SCERT TELANGANA

**ಮುಖ್ಯ ಪದಗಳು :**

| | | |
|---|---|---|
| 1. ಗಾರೆ ಕೆಲಸದ ಮೇಸ್ತ್ರಿ | 6. ಅಪಾರ್ಟ್‌ಮೆಂಟ್ | 11. ರೂಫ್ ಗಾರ್ಡನ್ |
| 2. ಮನೆ ನಿರ್ಮಾಣ | 7. ಮಣ್ಣಿನ ಮಾಳಿಗೆಗಳು | 12. ಇಟ್ಟಿಗೆ ಭಟ್ಟಿಗಳು |
| 3. ಹಂಚಿನ ಮನೆ | 8. ಮನೆ ಮೇಲ್ಛಾವಣಿ | 13. ಸ್ಟೋನ್ ಕ್ರಷರ್, ಕ್ರೇನ್ |
| 4. ಪಕ್ಕಾ ಮನೆ | 9. ಮನೆಯ ನಕ್ಷೆ | 14. ಕೊಳಚೆ ಪ್ರದೇಶಗಳು |
| 5. ಹಸಿಯಾಗಿರುವ ಕಸ | 10. ಸಿಮೆಂಟ್ ಕಾಂಕ್ರೀಟ್ | 15. ನೈರ್ಮಲ್ಯ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನ) ತಿಳುವಳಿಕೆ :

ಅ) ನಿಮ್ಮ ಪ್ರಾಂತದಲ್ಲಿರುವ ವಿವಿಧ ರೀತಿಯ ಮನೆಗಳನ್ನು ಬರೆಯಿರಿ.

ಆ) ಮನೆ ನಿರ್ಮಾಣದಲ್ಲಿ ಸ್ಥಾನಿಕವಾಗಿ ದೊರೆಯುವ ವಸ್ತುಗಳಾವುವು ? ಇತರ ಪ್ರದೇಶಗಳಿಂದ ತಂದ ಸಾಮಾಗ್ರಿಗಳನ್ನು ಪಟ್ಟಿಯಲ್ಲಿ ಬರೆಯಿರಿ.

ಇ) ಮನೆ ನಿರ್ಮಾಣದಲ್ಲಿ ಯಾರ್ಯಾರು ಪಾಲ್ಗೊಳ್ಳುವರು ? ಅವರನ್ನು ಏನೆಂದು ಕರೆಯುತ್ತಾರೆ ?

ಈ) ಬಹುಅಂತಸ್ತು ಭವನಗಳು ಏಕೆ ನಿರ್ಮಿಸುತ್ತಾರೆ ? ಇವುಗಳಿಂದ ಆಗುವ ಉಪಯೋಗಗಳನ್ನು ಬರೆಯಿರಿ.

ಉ) ನಿಮ್ಮ ಮನೆ ಪರಿಶುಭ್ರವಾಗಿ ಇರಬೇಕಾದರೆ ನೀವು ಏನು ಮಾಡುತ್ತೀರಿ ?

ಊ) ಬಹಳ ಜನರಿಗೆ ಇಲ್ಲಿಯವರೆಗೆ ಸ್ವಂತ ಮನೆಗಳು ಇಲ್ಲ. ಏಕೆ ?

ಋ) ನಿವಸಿಸುವ ಮನೆ ಆಧಾರದ ಮೇಲೆ ಬಡವರು, ಶ್ರೀಮಂತರು ಎಂದು ಹೇಳಬಹುದೇ ? ಹೇಗೆ ?

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

ಅ) ಶ್ರೀಧರ್ ಈ ಮಧ್ಯ ಮೋಟರ್‌ಸೈಕಲ್‌ನ ಮೇಲೆ ಭಾರತ ದೇಶ ಯಾತ್ರೆ ಮಾಡಿ ಬಂದನು. ದೇಶದಲ್ಲಿ ವಿವಿಧ ಪ್ರದೇಶಗಳಲ್ಲಿ ಎಂತಹ ಮನೆಗಳು ಇವೆಯೋ ಎನ್ನುವುದನ್ನು ತಿಳಿಯುವುದಕ್ಕೆ ಯಾವ ಯಾವ ಪ್ರಶ್ನೆಗಳು ಕೇಳುತ್ತೀರಿ?

ಆ) 'ಬಿಲಾಲ್ ' ಮನೆ ಕಟ್ಟಿಸಬೇಕೆಂದು ಸಂಕಲ್ಪಿಸಿದನು. ಮನೆ ನಿರ್ಮಾಣ ಕುರಿತು ಗಾರೆ ಕೆಲಸದ ಮೇಸ್ತ್ರಿಯನ್ನು ಯಾವ ಯಾವ ಪ್ರಶ್ನೆಗಳು ಕೇಳಿರಬಹುದು ಬರೆಯಿರಿ.

### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

ಯಾವುದಾದರು ಒಂದು ಸರಕಾರದ ನೆರವಿನಿಂದ ಕಟ್ಟಿದ ಮನೆಯನ್ನು ಪರಿಶೀಲಿಸಿ ಪಟ್ಟಿಯನ್ನು ತುಂಬಿರಿ.

ಅ) ಅಡಿಪಾಯ ಎತ್ತರ ____________ ಅಡಿಗಳು.

ಆ) ಕೋಣೆಗಳ ಸಂಖ್ಯೆ ____________

ಇ) ನೀರಿನ ಸೌಕರ್ಯ ಇದೆ / ಇಲ್ಲ.

ಈ) ಶೌಚಾಲಯ ಇದೆ / ಇಲ್ಲ.

ಉ) ಪ್ರಹಾರಿ ಗೋಡೆ ಇದೆ / ಇಲ್ಲ ಇದ್ದರೆ ಉದ್ದ ____________ ಅಡಿಗಳು.



SCERT TELANGANA

4 **ಸಮಾಚಾರ ಕೌಶಲ್ಯತೆ, ಪ್ರಾಜೆಕ್ಟ್‌ಗಳು :**

- ನಿಮ್ಮ ಸಮೀಪದಲ್ಲಿರುವ 5 ಮನೆಗಳಿಗೆ ಸಂದರ್ಶಿಸಿ ಸಮಾಚಾರ ಶೇಖರಿಸಿರಿ, ಬರೆಯಿರಿ.

| ಕ್ರ.ಸಂ. | ಕುಟುಂಬ ಯಜಮಾನನ ಹೆಸರು | ಕಸವನ್ನು ಎಲ್ಲಿ ಹಾಕುತ್ತಿದ್ದಾರೆ. | | | |
|---|---|---|---|---|---|
| | | ತಿಪ್ಪೆ | ಕಸದ ಹುಂಡಿ | ಗೋಡೆಯ ಪಕ್ಕ | ರಸ್ತೆಯ ಮೇಲೆ |
| | | | | | |
| | | | | | |
| | | | | | |
| | | | | | |
| | | | | | |

5 **ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟಣೆ :**

ಅ) ನೀವು ಇರುವ ಮನೆ ನಕ್ಷೆ ರಚಿಸಿರಿ. ಅದರಲ್ಲಿ ಎಲ್ಲೆಲ್ಲಿ ಏನೇನು ಇವೆ ಗುರ್ತಿಸಿರಿ. ನಿಮ್ಮ ಮನೆ ಕುರಿತು ಹೇಳಿರಿ.

ಆ) ಚಂದವಾದ, ಪರಿಶುಭ್ರವಾದ ಉತ್ತಮ ಮನೆ ಹೇಗಿರುತ್ತದೆ ಊಹಿಸಿರಿ. ಆ ಮನೆಯ ನಕ್ಷೆಯನ್ನು ಚಾರ್ಟ್ ಮೇಲೆ ರಚಿಸಿರಿ. ಬಣ್ಣಗಳನ್ನು ಹಾಕಿರಿ. ಮನೆಯನ್ನು ಕುರಿತು ಐದಾರು ವಾಕ್ಯಗಳು ಬರೆಯಿರಿ. ಪ್ರದರ್ಶಿಸಿರಿ.

6 **ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ಮನೆಗಳ ನಿರ್ಮಾಣದಲ್ಲಿ ಬಹಳ ಜನ ಕಾರ್ಮಿಕರು ಕೃಷಿ ಅವಶ್ಯಕತೆ ಇದೆ ಅಲ್ಲವೇ ! ಅವರ ಶ್ರಮಶಕ್ತಿಯನ್ನು ನೀನು ಹೇಗೆ ಅಭಿನಂದಿಸುತ್ತೀಯೇ ?

ಆ) ನಿಮ್ಮ ಗ್ರಾಮದಲ್ಲಿ ಇರುವ ಉತ್ತಮ ಮನೆ ಯಾರದು ? ಅದು ಏಕೆ ಉತ್ತಮ ಮನೆಯಾಗಿದೆ. ಕಾರಣಗಳನ್ನು ಬರೆಯಿರಿ.

ಇ) ನಿಮ್ಮ ಮನೆಯು ಸಸ್ಯಗಳು, ಪಕ್ಷಿಗಳು, ಪ್ರಾಣಿಗಳೊಂದಿಗೆ ತುಂಬಿ ತುಳುಕುವಂತೆ ಕಂಡು ಬರಲು ನೀವೇನು ಮಾಡುವಿರಿ ?

**ನಾನು ಇವುಗಳನ್ನು ಮಾಡಬಲ್ಲೆನಾ ?**

| | | |
|---|---|---|
| 1 | ಮನೆ ನಿರ್ಮಾಣ ಕುರಿತು, ಅವಸರವಾದ ಸಾಮಾಗ್ರಿ ಕುರಿತು, ವಿವಿಧ ಬಗೆಯ ಮನೆಯ ವಿವರಿಸಬಲ್ಲೆನು. | ಹೌದು / ಇಲ್ಲ |
| 2 | ಮನೆ, ಮನೆಯ ನಿರ್ಮಾಣವನ್ನು ಕುರಿತು ಗಾರೆ ಮೇಸ್ತ್ರಿಯನ್ನು ಪ್ರಶ್ನಿಸಬಲ್ಲೆನು. | ಹೌದು / ಇಲ್ಲ |
| 3 | ಸಮೀಪದಲ್ಲಿನ ಮನೆಗಳಿಗೆ ಸಂದರ್ಶಿಸಿ ಸಮಾಚಾರವನ್ನು ಶೇಖರಿಸಿ ಪಟ್ಟಿಯಲ್ಲಿ ಬರೆದು ವಿವರಿಸಿಸಬಲ್ಲೆನು. | ಹೌದು / ಇಲ್ಲ |
| 4 | ನಮ್ಮ ಮನೆಯ ನಕ್ಷೆಯನ್ನು, ಅಂದವಾದ ಮನೆ ಚಿತ್ರ ಬಿಡಿಸಿ, ವಿವರಿಸಬಲ್ಲೆನು. | ಹೌದು / ಇಲ್ಲ |
| 5 | ಕಾರ್ಮಿಕರ ಶ್ರಮವನ್ನು ಅಭಿನಂದಿಸಬಲ್ಲೆನು. ಜೀವ ವೈವಿಧ್ಯತೆಗೋಸ್ಕರ ಕೃಷಿ ಮಾಡಬಲ್ಲೆನು. | ಹೌದು / ಇಲ್ಲ |

SCERT TELANGANA

# 9  ನಮ್ಮ ಊರು - ನಮ್ಮ ಕೆರೆ

ನನ್ನ ಹೆಸರು ವರಲಕ್ಷ್ಮಿ. ನಮ್ಮದು ವ್ಯವಸಾಯ ಕುಟುಂಬ ನಮ್ಮ ಅಜ್ಜ, ಮುತ್ತಜ್ಜನ ಕಾಲದಿಂದಲೂ ವ್ಯವಸಾಯವನ್ನು ಮಾಡುತ್ತಿದ್ದೇವೆ. ನಮ್ಮ ವ್ಯವಸಾಯಕ್ಕೆ ಆಧಾರ 'ನಾಗರ ಕೆರೆ'. ಕಳೆದ ಎರಡು ವರ್ಷಗಳಿಂದ 'ನಾಗರ ಕೆರೆ' ತುಂಬಿರುವುದಿಲ್ಲ. ಆದುದರಿಂದ ಮಳೆಯ ಆಧಾರಿತ ಬೆಳೆಗಳು ಬೆಳೆಯುವಂತಾಗಿದೆ.

**ಸ್ನೇಹಿತರೊಂದಿಗೆ ಚರ್ಚಿಸಿರಿ - ಬರೆಯಿರಿ.**

| ಕೆರೆ ತುಂಬಿದಾಗ ಬೆಳೆಯುವ ಬೆಳೆಗಳು | ಕೆರೆ ತುಂಬದೇ ಇದ್ದಾಗ ಬೆಳೆಯುವ ಬೆಳೆಗಳು |
|---|---|
| | |

ಕಳೆದೆರೆಡು ವರ್ಷಗಳಿಂದ ಭತ್ತದ ಬೆಳೆ ಸರಿಯಾಗಿ ಬೆಳೆಯುತ್ತಿಲ್ಲ. ಇದರಿಂದ ಕೆರೆಯ ಆಧಾರವಾಗಿ ಯಾವಾಗಲೂ ಬೆಳೆಯುವ ಭತ್ತದ ಬದಲಾಗಿ ಜೋಳ, ನೆಲಗಡಲೆ, ಹುರುಳಿ, ರಾಗಿಯನ್ನು ಹಾಕಿದ್ದೇವೆ. ಮಳೆಯು ಸರಿಯಾಗಿ ಬೀಳದೇ ಈ ಬೆಳೆಗಳು ಸಹ ಸರಿಯಾಗಿ ಬೆಳೆದಿರುವುದಿಲ್ಲ.

**ಆಲೋಚಿಸಿರಿ...**

**ಮಳೆಗಳು ಸರಿಯಾಗಿ ಬೀಳದಿದ್ದರೆ ಏನು ಆಗುತ್ತದೆ ?**

ಈ ವರ್ಷವೂ ಕೂಡ ಪ್ರಾರಂಭದಿಂದ ಮಳೆಯು ಬಿದ್ದಿಲ್ಲ. ಆದರೂ ಮೂರು ದಿನಗಳಿಂದ ಮಾತ್ರ ಮಳೆ ವಿಪರೀತವಾಗಿ ಬೀಳುತ್ತಿದೆ. ಈ ಮಳೆಗಳು ಬಿತ್ತನೆ ಮಾಡಲು ಎಷ್ಟೋ ಅನುಕೂಲ.

ಮಳೆ ಕಡಿಮೆಯಾದರೆ 'ನಾಗರ ಕೆರೆ' ಯ ಹತ್ತಿರ ಹೋಗಬೇಕೆಂದುಕೊಂಡಿರುವೆ. ಆದರೆ ಕೆರೆಗೆ ಹೋಗುವ ದಾರಿಯಲ್ಲಿ ಇರುವ 'ಉದ್ದೆಮಡುಗು' ಎನ್ನುವ ಚಿಕ್ಕ ಕಾಲುವೆ ಹರಿಯುವುದರಿಂದ ಅದನ್ನು ದಾಟಲಾರದೇ 'ನಾಗರ ಕೆರೆ' ಹತ್ತಿರ ಹೋಗುವುದು ಆಗುತ್ತಿಲ್ಲ. ಮಕ್ಕಳು ! ಮಳೆಗಾಲದಲ್ಲಿ ಕಾಲುವೆಗಳು, ತೆಗ್ಗಿರುವ ಪ್ರದೇಶದಲ್ಲಿ ಪ್ರವಾಹವು ವೇಗವಾಗಿ ಇರುತ್ತದೆ. ಅದಕ್ಕಾಗಿಯೇ ಅದರಲ್ಲಿ ಇಳಿಯಬಾರದು. ಇಳಿದರೆ ಪ್ರವಾಹಕ್ಕೆ ಕೊಚ್ಚಿಕೊಂಡು ಹೋಗುತ್ತಾರೆ. ನೀವು ಕೂಡ ಇಳಿಯಬೇಡಿ ಜಾಗ್ರತ!

ಮಧ್ಯಾಹ್ನದ ನಂತರ ಮಳೆ ಸ್ವಲ್ಪ ಕಡಿಮೆ ಆಗಿದೆ. ಬಿಸಿಲು ಬಂದಿದೆ. ಚಿಕ್ಕ ಹನಿಗಳು ಬೀಳುತ್ತಾ ಇವೆ. ಆಕಾಶದಲ್ಲಿ ಕಾಮನ ಬಿಲ್ಲು ಕಾಣಿಸಿದೆ.

SCERT TELANGANA

ಗ'ಡಿಬಿಡಿಯಾಗಿ 'ನಾಗರಕೆರೆ' ಯನ್ನುಸೇರಿದೆ. ಮೊದಲೇ ಅಲ್ಲಿ ಹನುಮಯ್ಯ, ಸತ್ಯಪ್ಪ, ರಾವ್ ಗೋಪಾಲ್‌ನಾಯಕ್ ಪುಲ್ಲಪ್ಪ, ಮನ್ನೆಪ್ಪ ರೆಡ್ಡಿ ಇದ್ದಾರೆ. ಗೌರಿ, ಅನ್ನಪೂರ್ಣ ಕೂಡ ಬಂದರು. ಪ್ರವಾಹದ ನೀರು ಕೆರೆಗೆ ಬರುತ್ತದೆ. ಕೆರೆಯು ತುಂಬಿ ತೂಮು ಹರಿಯುತ್ತಿದೆ.



ಹಳ್ಳ ಎಂದರೆ ______________________________

______________________________

ಕೆರೆ ತುಂಬುವುದು, ಪ್ರವಾಹದ ನೀರು, ತೂಮು ಹರಿಯುವುದು, ಬೆಳೆಯುವ ಬೆಳೆಗಳು, ಕೆರೆಕಟ್ಟೆಯ ಗಟ್ಟಿತನದ ಕುರಿತು ಎಲ್ಲರು ಮಾತನಾಡಿಕೊಂಡೆವು. ಈ ಸಾರಿ ಎರಡು ಬೆಳೆಗಳು ಬೆಳೆಯಬಹುದು ಎನ್ನುವ ಸಂತೋಷದಲ್ಲಿ ಕೆಲವರು ಹೊಲದ ಕಡೆಗೆ, ಕೆಲವರು ಮನೆಯ ಕಡೆಗೆ ಹೋದರು.

ನಾನು ಸಹ ಕೆರೆಕಟ್ಟೆ ಇಳಿದು ಹೊಲದ ಕಡೆಗೆ ಹೋಗುತ್ತಿದ್ದಾಗ ನರಹರಿ ಕಾಣಿಸಿದನು. ನಮ್ಮ ಊರಿನ ಜೊತೆಗೆ, ಸುತ್ತಮುತ್ತಲಿನ ಊರಿನಲ್ಲಿರುವ ಪ್ರತಿ ಕುಟುಂಬವನ್ನು ಕುರಿತು, ಕೆರೆಗಳು, ಬೆಳೆಯುವ ಬೆಳೆಗಳು, ದೇವಾಲಯಗಳು ಹೀಗೆ ಎಲ್ಲಾ ವಿಷಯಗಳ ಕುರಿತು ಆತನಿಗೆ ತಿಳಿದಿದೆ. ಆತನು ಯಾವಾಗಲೂ ಕೆರೆ ಯನ್ನು ಕುರಿತು ಹಿಂದಿನ ವಿಷಯಗಳನ್ನು ಹೇಳುತ್ತಾ ಇರುತ್ತಾನೆ.

**ಸಂಗ್ರಹಿಸಿರಿ :**



ನಿಮ್ಮ ಸುತ್ತಮುತ್ತಲೂ ಯಾವ ಯಾವ ಕೆರೆಗಳಿವೆ ? ಅವುಗಳಿಂದಾಗುವ ಪ್ರಯೋಜನೆಗಳೇನು ?

| ಕೆರೆ ಇರುವ ಊರು | ಕೆರೆಯ ಹೆಸರು | ಉಪಯೋಗಗಳು |
| --- | --- | --- |
| | | |

SCERT TELANGANA

## 9.1. 'ನಾಗರ ಕೆರೆ ' ಯ ಚರಿತ್ರೆ :

ನನ್ನ ಹೆಸರು ನರಹರಿ ನಮಗೆ ನಾಗರ ಕೆರೆಯ ಕೆಳಗಡೆ ಸ್ವಲ್ಪ ಹೊಲ ಇದೆ. ವ್ಯವಸಾಯವನ್ನು ಮಾಡುತ್ತೇವೆ. ಆದರೆ ಗ್ರಾಮ ಚರಿತ್ರೆಯನ್ನು ಹೇಳುವುದು ನಮ್ಮ ಪ್ರಧಾನ ವೃತ್ತಿಯಾಗಿದೆ. ನಮ್ಮ ಅಜ್ಜ, ಮುತ್ತಜ್ಜನ ಕಾಲದಿಂದಲೂ ಈ ಕೆಲಸವನ್ನು ಮಾಡುತ್ತಿದ್ದೇವೆ. ನಾಗರ ಕೆರೆಯ ಬಗ್ಗೆ ನನಗೆ ಚೆನ್ನಾಗಿ ಗೊತ್ತು! ನಮ್ಮ ಅಪ್ಪ, ಅಜ್ಜ, ಮುತ್ತಜ್ಜನವರು ಸಹ ಎಷ್ಟೊ ವಿಷಯಗಳನ್ನು ನಮ್ಮ ಊರಿನ ಕೆರೆಯನ್ನು ಕುರಿತು ಹೇಳಿದ್ದಾರೆ. ತುಂಬಿದ ಕೆರೆಯನ್ನು ನೋಡಿದರೆ ಆ ವಿಷಯಗಳೆಲ್ಲವೂ ನೆನಪಿಗೆ ಬರುತ್ತಿರುತ್ತದೆ.

ಈಗ ' ನಾಗರ ಕೆರೆ ' ಇರುವ ಕಡೆ ಹಿಂದೆ ದೊಡ್ಡ ಕುಂಟೆ ಇತ್ತು. ಯಾವ ಸ್ವಲ್ಪ ದೊಡ್ಡ ಮಳೆ ಬಿದ್ದರೂ ಕೂಡ ಅದು ಪೂರ್ತಿಯಾಗಿ ತುಂಬುತ್ತಿತ್ತು. ಕುಂಟೆಗೆ ಇರುವ ಚಿಕ್ಕ ಅಡ್ಡಗೋಡೆಯ ಮೂಲಕ ಕೆಳಗಡೆಯ ಹೊಲಗಳಿಗೆ ನೀರನ್ನು ಬಿಡುತ್ತಿದ್ದರು. ಕುಂಟೆ ಕೆಳಗೆ ಇರುವ ಕೆಲವು ಜನರ ಹೊಲಗಳಿಗೆ ಮಾತ್ರ ನೀರು ಹೋಗುತ್ತಿತ್ತು. ಮಲ್ಲಿಕಾರ್ಜುನ ಎನ್ನುವ ರೈತನು ಎಲ್ಲಾ ಹೊಲಗಳಿಗೆ ನೀರು ಹರಿಯುವಂತೆ ಮಾಡಬೇಕೆಂದು ತಹಶೀಲ್ದಾರ (ಕಂದಾಯ ಅಧಿಕಾರಿ)ರನ್ನು ಬೇಟಿಯಾದನು. ಇಂಜೀನಿಯರ್ (ಅಭಿಯಂತರರು) 'ಅಬ್ದುಲ್ ಬಾರಿ' ಕುಂಟೆಯ ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿ ಕುಂಟೆಯನ್ನು ಕೆರೆಯಾಗಿ ಮಾರ್ಪಡಿಸಲು ಯೋಜನೆಯನ್ನು ತಯಾರು ಮಾಡಿದನು.

**ಆಲೋಚಿಸಿರಿ...**

**ಕುಂಟೆಗೆ, ಕೆರೆಗೆ ಇರುವ ವ್ಯತ್ಯಾಸಗಳೇನು ?**

## 9.1. ಕೆರೆಯ ನಿರ್ಮಾಣ :

ಕೆರೆಯ ನಿರ್ಮಾಣದ ಕೆಲಸ ಪ್ರಾರಂಭವಾದವು. ಪ್ರತಿ ಕುಟುಂಬದಲ್ಲಿನ ಎಲ್ಲರೂ ಜವಾಬ್ದಾರಿಯಾಗಿ ಕೆಲಸದಲ್ಲಿ ಪಾಲ್ಗೊಂಡರು ಗ್ರಾಮದಲ್ಲಿನ ಪ್ರಜೆಗಳೆಲ್ಲರೂ ಒಂದಾಗಿ ಕೆರೆಯ ನಿರ್ಮಾಣದಲ್ಲಿ ಪಾಲ್ಗೊಂಡರು.

ಮುಂಚಿತವಾಗಿ ಪ್ರವಾಹದ ನೀರು ಎಲ್ಲಿಂದ ಬರುತ್ತದೆಯೋ ಪರಿಶೀಲಿಸಿದರು.

ಪ್ರವಾಹ ಅಂದರೆ ______________________________

______________________________

ಪ್ರವಾಹದ ನೀರು ಬಹಳ ಬರುವ ಪ್ರದೇಶಗಳಿಂದ ನೇರವಾಗಿ ಕಾಲುವೆಗಳನ್ನು ಅಗೆದು ಕುಂಟೆಗೆ ಕಳುಹಿಸಿದರು. ನಂತರ ಕೆರೆ ಕಟ್ಟುವುದನ್ನು ಪ್ರಾರಂಭಿಸಿದರು. ಎತ್ತಿನ ಗಾಡಿಗಳಲ್ಲಿ ಸುತ್ತಮುತ್ತಲಿನ ಗ್ರಾಮಗಳಿಂದ ಮಣ್ಣನ್ನು ತಂದು ಎತ್ತರವಾಗಿ ಕಟ್ಟೆಯನ್ನು ಕಟ್ಟಿದರು. ಒಳಗಡೆ ಕಲ್ಲನ್ನು ಸೇರಿಸಿ ಕಟ್ಟಿದರು. ಇದಕ್ಕೆ ಊರಿನ ಹೊರಗಿನ ಬೆಟ್ಟದಿಂದ ಕಲ್ಲನ್ನು ಒಡೆದು ತಂದರು. ಕೆರೆಯ ಕಟ್ಟೆಗೆ ಎರಡೂ ಕಡೆಯು ಎರಡು 'ತೂಬು' ಗಳನ್ನು ಕಟ್ಟಿದ್ದರು.

**ಆಲೋಚಿಸಿರಿ...**

**'ತೂಬು' ಎಂದರೇನು ?**

**ಕೆರೆಗಳಿಗೆ ತೂಬುಗಳು ಏಕೆ ಇರುತ್ತವೆ ?**





SCERT TELANGANA

ತೂಬುಗಳನ್ನು ಕಟ್ಟುವ ಸಮಯದಲ್ಲಿ ಇಂಜಿನಿಯರ್ ಅಬ್ದುಲ್ ಬಾರಿ ಸ್ವ ಇಚ್ಛೆಯಿಂದ ಆ ಕೆಲಸವನ್ನು ಪೂರ್ತಿಗೊಳಿಸಿದನು. ಕೆರೆಗೆ ನೀರು ಎಷ್ಟು ಸೇರಿದೆ ? ಎಷ್ಟು ನೀರನ್ನು ಹೊಲಗಳಿಗೆ ಬಿಡಬೇಕು ಎನ್ನುವ ಅಳತೆಗಳನ್ನು ಏರ್ಪಾಟು ಮಾಡಿದರು. ಇಂದಿಗೂ ಅದು ಬಳಿ ಬಣ್ಣದಿಂದ ಕಂಡು ಬರುತ್ತದೆ. ತೂಬುನ್ನು ತಿರುಗಿಸುವ ವಿಧಾನವವನ್ನು ಆಶ್ಚರ್ಯವಾಗಿ ಎಲ್ಲರು ನೋಡುತ್ತಿದ್ದರಂತೆ ತೂಬು ಗೇಟ್‌ಗಳನ್ನು ಮೇಲೆಕ್ಕೆತ್ತಿದ್ದರೆ ನೀರು ಕಾಲುವೆಗೆ ಹರಿಯುತ್ತದೆ. ತೂಬು ಗೇಟ್‌ಯನ್ನು ಕೆಳಗೆ ಬಿಟ್ಟರೇ ನೀರು ಹರಿಯುವುದು ನಿಲ್ಲುತ್ತದೆ.

**ನಿಮಗೆ ಗೊತ್ತೆ ?**

ಕೆಲವು ಕೆರೆಗಳು ಕಾಲುವೆಗಳೊಂದಿಗೆ ಸೇರುವಂತೆ ಇರುತ್ತವೆ. ಮಳೆ ಕಾಲದಲ್ಲಿ ಒಂದು ಕೆರೆ ತುಂಬಿದರೆ ನೀರು ಕಾಲುವೆಯ ಮೂಲಕ ಬೇರೆ ಕೆರೆಯನ್ನು ಸೇರುತ್ತದೆ. ಹೆಚ್ಚಾಗಿ ಕಾಕತೀಯ ರಾಜರು, ನಿಜಾಂ ರಾಜರು ಇಂತಹ ಸರಪಳಿಯಂತಹ ಕೆರೆಗಳನ್ನು ತೆಲಂಗಾಣ ರಾಜ್ಯದ ತುಂಬಾ ನಿರ್ಮಿಸಿದ್ದಾರೆ.

ತೂಬಿನ ನಿರ್ಮಾಣ ಪೂರ್ತಿಯಾದ ನಂತರ ಹಳ್ಳದ ಕೆಲಸ ಪ್ರಾರಂಭವಾಯಿತು. ಕೆರೆ ತುಂಬಿದ ನಂತರ ಬಂದ ನೀರು ಹರಿಯಬಿಡಲು ಅನುಗುಣವಾಗಿ ಒಂದು ಕಡೆ ದೊಡ್ಡ ಕಲ್ಲುಗಳಿಂದ ಅವಿಗು ಕಟ್ಟಿದರು. ಅವಿಗು ಹರಿಯುವ ಜಾಗ ಸವೆಯದಂತೆ ದೊಡ್ಡ ದೊಡ್ಡ ಕಲ್ಲುಗ್ಗಳನ್ನು ಇಟ್ಟರು. ಗ್ರಾಮದಲ್ಲಿನ ಮೇಸ್ತ್ರಿಗಳು ಇದಗೋಸ್ಕರವಾಗಿ ಬಹಳ ಕಷ್ಟಪಟ್ಟರು. ಕೆರೆಯನ್ನು ಕಟ್ಟುವಾಗ ಎಲ್ಲರಿಗೂ ಅಡುಗೆಯನ್ನು ಒಂದೇ ಕಡೆ ಮಾಡುತ್ತಿದ್ದರು. ಮಧ್ಯಾಹ್ನ ಸಮಯದಲ್ಲಿ ಎಲ್ಲರೂ ಒಂದೇ ಕಡೆ ಕುಳಿತುಕೊಂಡು ಭೋಜನ ಮಾಡುತ್ತಿದ್ದರು. ಇನ್ನೂ ಯಾವ ಯಾವ ಕೆಲಸಗಳು ಹೇಗೆ ಮಾಡಬೇಕು ಎಂದು ಚರ್ಚಿಸುತ್ತಾ ಇದ್ದರು. ನಂತರ ಕಾಲುವೆಗಳು ಅಗೆಯಲು ಪ್ರಾರಂಭ ಮಾಡಿದರು. ಎರಡು ತೂಬುಗಳಿಂದ ಬಂದ ನೀರು ನಾಲ್ಕು ಕಾಲುವೆಗಳ ಮೂಲಕ ಎಲ್ಲಾ ಹೊಲಗಳಿಗೂ ದೊರೆಯುವಂತೆ ಕಾಲುವೆಗಳನ್ನು ಅಗೆದರು. ನಂತರ ಈ ಕಾಲುವೆಗಳನ್ನು ಕಲ್ಲು ಸಿಮೆಂಟಿನಿಂದ ಕಟ್ಟಿದರು.

**ಗುಂಪಿನಲ್ಲಿ ಚರ್ಚಿಸಿರಿ :**

- ಕೆರೆಯ ನಿರ್ಮಾಣದಲ್ಲಿ ತೂಬು, ಕೆರೆಗಳು, ಹಳ್ಳಗಳು ಏಕೆ ಅವಶ್ಯಕ ?



ಕೆರೆ ಕಟ್ಟಿದ ಮರು ವರ್ಷದಿಂದ ಮಳೆ ಚೆನ್ನಾಗಿ ಬಿದ್ದಿದೆ. ಕೆರೆ ಕೆಳಗಡೆ ಇರುವ ಎಲ್ಲಾ ಹೊಲದಲ್ಲಿ ಭತ್ತದ ಬೆಳೆ ಹಾಕಿದರು. ಬೆಳೆಗಳು ಚೆನ್ನಾಗಿ ಬೆಳೆದಿದ್ದರಿಂದ ಜನರ ಜೀವನವೂ ಉತ್ತಮಗೊಂಡಿದೆ. ಅವರ ಜೀವನದಲ್ಲಿ ದೊಡ್ಡ ಬದಲಾವಣೆ ಬಂದಿದೆ. ನಮ್ಮ ಕುಟುಂಬಕ್ಕೆ ಕೂಡ ಆರ್ಥಿಕ ಸಮಸ್ಯೆಯನ್ನು ನಿವಾರಿಸಿದೆ.

**ಸಂಗ್ರಹಿಸಿರಿ :**



- ನಿಮ್ಮ ಹತ್ತಿರದಲ್ಲಿರುವ ಕೆರೆಯನ್ನು ಹೇಗೆ ಕಟ್ಟಿದ್ದಾರೇ ಎಂಬ ವಿವರಗಳನ್ನು ಸಂಗ್ರಹಿಸಿ ಬರೆಯಿರಿ.
- ನಿಮ್ಮ ಪರಿಸರದಲ್ಲಿರುವ ಕೆರೆಗಳನ್ನು ನೋಡಿ, ಅವು ಎಷ್ಟು ವಿಸ್ತೀರ್ಣದಲ್ಲಿ ಇವೆಯೋ ಬರೆಯಿರಿ.

SCERT TELANGANA

## 9.3. ರಾಜ್ಯದಲ್ಲಿರುವ ದೊಡ್ಡ ಕೆರೆಗಳು :

ನಾಗರ ಕೆರೆಯಂತೆಯೇ ನಮ್ಮ ರಾಜ್ಯದಲ್ಲಿ ಹಲವಾರು ಕೆರೆಗಳು ಇವೆ. ರಾಜ್ಯದಲ್ಲಿನ ಕೆಲವು ದೊಡ್ಡ ಕೆರೆಗಳ ಕುರಿತು ತಿಳಿದುಕೊಳ್ಳೋಣ.

### 9.3.1. ರಾಮಪ್ಪ ಕೆರೆ :

ಜಯಶಂಕರ ಜಿಲ್ಲೆಯಲ್ಲಿನ ರಾಮಪ್ಪ ದೇವಾಲಯದ ಹತ್ತಿರದಲ್ಲಿ ರಾಮಪ್ಪ ಕೆರೆ ಇದೆ. ಇದು ಮಾನವ ನಿರ್ಮಿತ ಕೆರೆ. 13 ನೇ ಶತಮಾನದಲ್ಲಿ ನಿರ್ಮಿಸಿದ ಈ ಕೆರೆ 24 ಚ..ಕಿ.ಮೀ. ಗಳವರೆಗೆ ವಿಸ್ತರಿಸಿದೆ. ಸುತ್ತಮುತ್ತಲೂ ಇರುವ ವ್ಯವಸಾಯ ಭೂಮಿಗಳಿಗೆ ಈ ಕೆರೆಯೇ ಆಧಾರ. ಈ ಕೆರೆಯ ಸುತ್ತಲೂ ಕಾಡುಗಳು, ಬೆಟ್ಟಗಳು ಇವೆ. ಈ ಕೆರೆಯ ಪಕ್ಕದಲ್ಲಿರುವ ರಾಮಪ್ಪ ದೇವಾಲಯವು ಶಿಲ್ಪಕಲೆಗೆ ಪ್ರಸಿದ್ಧಿಯಾಗಿದೆ.



SCERT TELANGANA

### 9.3.2. ಪಾನಗಲ್ ಕೆರೆ :

ಪಾನಗಲ್ ಕೆರೆಯು ನಲಗೊಂಡ ಜಿಲ್ಲೆಯಲ್ಲಿದೆ. ಇದಕ್ಕೆ ಉದಯ ಸಮುದ್ರಮ್ ಎಂದು ಕೂಡ ಕರೆಯುತ್ತಾರೆ. ಇದು ನಲಗೊಂಡ ಪಟ್ಟಣದಿಂದ 3 ಕಿ.ಮೀ. ದೂರದಲ್ಲಿದೆ. ಇದನ್ನು ಕಾಕತೀಯ ದೊರೆ ಪ್ರತಾಪರುದ್ರ ನಿರ್ಮಿಸಿದ್ದಾನೆ. ಇದು ಸಾವಿರಾರು ಎಕರೆ ಭೂಮಿಗೆ ನೀರನ್ನು ಒದಗಿಸುತ್ತದೆ. ಪ್ರಸಿದ್ಧ ಛಾಯಾ ಸೋಮೇಶ್ವರಸ್ವಾಮಿ ಮಂದಿರ ಇಲ್ಲಿ ನೆಲೆಗೊಂಡಿದೆ.



### 9.3.3. ಹುಸೇನ್ ಸಾಗರ್ :



ಹೈದ್ರಾಬಾದಿನಲ್ಲಿರುವ ಹುಸೇನ್ ಸಾಗರ್ ಕೆರೆಯು ರಾಜ್ಯದಲ್ಲಿನ ದೊಡ್ಡ ಕೆರೆಗಳಲ್ಲಿ ಒಂದು. ಇದನ್ನು 1562 ರಲ್ಲಿ ಹಜ್ರತ್ ಹುಸ್ಸೇನ್ ಷಾವಲಿ ನಿರ್ಮಿಸಿದ್ದಾನೆ. ಹುಸ್ಸೇನ್ ಸಾಗರದ ದಡದಲ್ಲಿ ಹೈದ್ರಾಬಾದ್, ಸಿಕಿಂದರಾಬಾದ್ ನಗರಗಳನ್ನು ಸೇರಿಸುವ ಈ ಕೆರೆಯ ದಡವನ್ನು 1946 ರಲ್ಲಿ ದೊಡ್ಡ ರಸ್ತೆಯಾಗಿ ಬದಲಾಯಿಸಿದರು. ಇದನ್ನೇ 'ಟ್ಯಾಂಕ್ ಬಂಡ್' ಎನ್ನುವರು. 5.7 ಚ.ಕಿ.ಮಿ. ವಿಸ್ತೀರ್ಣ ಇರುವ ಈ ಕೆರೆಯು ಈಗ ಬಹಳಷ್ಟು ಕುಗ್ಗಿದೆ. ಕೆರೆಯ ಅಂತರಗಂಗೆ ಎಲೆಗಳಿಂದ ತುಂಬಿ ಹೋಗಿದೆ. ಸಂದರ್ಶಕರು ಕಸವನ್ನು ಬಿಸಾಡುವುದು. ನಗರದಲ್ಲಿನ ಚರಂಡಿ ನೀರು ಸೇರುವುದು, ಕಾರ್ಖಾನೆಗಳ ತ್ಯಾಜ್ಯ ಪದಾರ್ಥಗಳು ಸೇರುವುದು, ವಿನಾಯಕ ವಿಗ್ರಹಗಳು ವಿಸರ್ಜನೆಯಿಂದ ಹುಸ್ಸೇನ್ ಸಾಗರ್ ಬಹಳ ಕಲುಷಿತಗೊಂಡಿದೆ. 32 ಅಡಿಗಳ ಆಳ ಇರುವ ಈ ಕೆರೆ ಬಹಳಷ್ಟು ಹೂಳಿ ಹೋಗಿದೆ. ಸದ್ಯದಲ್ಲಿ ಈ ಕೆರೆಯನ್ನು ಮಾಲಿನ್ಯ ರಹಿತವನ್ನಾಗಿಸುವ ಪ್ರಯತ್ನ ನಡೆಯುತ್ತಿದೆ.



ಹೈದ್ರಾಬಾದಿನಲ್ಲಿರುವ ಇನ್ನೊಂದು ಕೆರೆ ಉಸ್ಮಾನ್ ಸಾಗರ್ ಕೆರೆ ಇದನ್ನು ಮೂಸಿ ಉಪನದಿಯ ಮೇಲೆ ನಿರ್ಮಿಸಿದ್ದಾರೆ. ಇದನ್ನೇ ಗಂಡಿಪೇಟ ಕೆರೆ ಎಂದುಕರೆಯುತ್ತಾರೆ. ಇದು ಸಿಹಿ ನೀರಿನ ಕೆರೆ ಆಗಿದೆ. ಇಂದಿಗೂ ಇದು ಹೈದ್ರಾಬಾದ್‌ನಗರ ವಾಸಿಗಳಿಗೆ ಕುಡಿಯುವ ನೀರಿಗೆ ಉಪಯೋಗವಾಗುತ್ತಿದೆ.

SCERT TELANGANA

**ಗುಂಪಿನಲ್ಲಿ ಚರ್ಚಿಸಿರಿ :**



- ಕೆರೆಗಳು ಏಕೆ ಬೇಕು ?
- ನಿಮ್ಮ ಜಿಲ್ಲೆಯಲ್ಲಿ ಇಂತಹ ಕೆರೆಗಳು ಇವೆಯೇ ? ಎಲ್ಲಿ ಇವೆ ?
- ರಾಜ್ಯದಲ್ಲಿರುವ ಇನ್ನೂ ಕೆಲವು ದೊಡ್ಡಕೆರೆಗಳ ವಿವರಗಳನ್ನು ಹೇಳಿರಿ. ತೆಲಂಗಾಣ ನಕಾಶೆಯಲ್ಲಿ ಅವುಗಳನ್ನು ಗುರ್ತಿಸಿರಿ.

## 9.4. ಕೆರೆಯೊಂದಿಗೆ ರೈತರ ಅನುಬಂಧ :

ಕೆರೆಗಳಿಂದ ನಮಗೆ ಬಹಳಷ್ಟು ಲಾಭಗಳು ಇವೆಯೆಂದು ತಿಳಿದಿದ್ದೀರಲ್ಲವೆ! ನಾಗರ ಕೆರೆಯೊಂದಿಗೆ ಅನುಬಂಧ ಇರುವವರಲ್ಲಿ ಚೆನ್ನಯ್ಯ ಕೂಡ ಒಬ್ಬ. ಚೆನ್ನಯ್ಯ ಏನು ಹೇಳುತ್ತಿದ್ದಾನೋ ತಿಳಿಯೋಣವೇ !

ನನ್ನ ಹೆಸರು ಚೆನ್ನಯ್ಯ ಚಿಕ್ಕಂದಿನಿಂದಲೂ ನನಗೆ ' ನಾಗರ ಕೆರೆ ' ಯೊಂದಿಗೆ ಅನುಬಂಧವಿದೆ. ನಮ್ಮ ತಂದೆ ನನಗೆ ಈಜನ್ನು ಈ ಕೆರೆಯಲ್ಲಿಯೇ ಕಲಿಸಿದ್ದಾನೆ. ಪ್ರತಿ ಭಾನುವಾರ ಸ್ನೇಹಿತರೊಂದಿಗೆ ಈ ಕೆರೆಯಲ್ಲಿ ಬಟ್ಟೆಗಳನ್ನು ಒಗೆದುಕೊಳ್ಳುತ್ತಿದ್ದೆ.

ಸ್ನೇಹಿತರೊಂದಿಗೆ ಕೂಡಿ ಕೆರೆಯಲ್ಲಿ ಮೀನುಗಳನ್ನು, ಏಡಿಗಳನ್ನು ಹಿಡಿಯುತ್ತಿದ್ದೆವು. ದೊಡ್ಡ ದೊಡ್ಡ ಕಪ್ಪೆಗಳನ್ನು ನೋಡಿದರೆ ಭಯವಾಗುತ್ತಿತ್ತು. ಹಾವುಗಳು ಕೂಡ ಇದ್ದವು. ಒಮ್ಮೊಮ್ಮೆ ಆಮೆಗಳು ದೊರೆಯುತ್ತಿದ್ದವು. ಅವುಗಳನ್ನು ತೆಗೆದುಕೊಂಡ ಬಂದು ಮನೆಯ ತೊಟ್ಟಿಯಲ್ಲಿ ಬಿಟ್ಟು ಬಹಳ ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದೆ. ನೀರಿನ ಮೇಲೆ ಹಾರಿ ಹೋಗುವ ಪಕ್ಷಿಗಳನ್ನು ನೋಡಿದರೆ ಸಂತೋಷ ಎನಿಸುತ್ತದೆ. ನಮ್ಮ ಮಗನು, ಅವನ ಶಿಕ್ಷಕರು ಹೇಳಿದ್ದಾರೆಂದು ಮಣ್ಣಿನಿಂದ ವಿನಾಯಕ ವಿಗ್ರಹಗಳನ್ನು ತಯಾರು ಮಾಡುತ್ತಿರುವುದನ್ನು ನೋಡಿ ನಾನು ಕೆಲವನ್ನು ತಯಾರಿಸಿಕೊಟ್ಟೆನು.

**ಆಲೋಚಿಸಿರಿ :**

**ಕೆರೆಯು ಗ್ರಾಮದ ಜನರ ಯಾವ ಅವಶ್ಯಕತೆಗಳಿಗೆ ಉಪಯೋಗವಾಗುತ್ತವೆ ?**

## 9.5. ಕೆರೆಯಿಂದಾಗುವ ಪ್ರಯೋಜನಗಳು :

ಕೆರೆಯ ದಂಡೆಗೆ ಅಂಟಿಕೊಂಡಿರುವ ಹೊಲ ನಮ್ಮದು. ಪ್ರತಿ ದಿನವು ಕೆರೆಯ ಹತ್ತಿರ ಹೋಗುವುದು, ತೂಬು ತೆಗೆಯುವುದು, ಕಾಲುವೆಗಳ ಮೂಲಕ ನೀರು ಹೊಲಗಳಿಗೆ ಬಿಡುವುದು ನಾನು ಮಾಡುವ ಮುಖ್ಯವಾದ ಕೆಲಸಗಳು ಗ್ರಾಮದಲ್ಲಿರುವ ಪ್ರತಿಯೊಬ್ಬರಿಗೂ 'ನಾಗರ ಕೆರೆ ' ಯೊಂದಿಗೆ ಅನುಬಂಧ ಇದೆ. ಪ್ರತಿಯೊಬ್ಬರೂ ಯಾವುದೋ ಒಂದು ವಿಧವಾಗಿ ಕೆರೆಯ ಮೇಲೆ ಆಧಾರಪಟ್ಟಿರುತ್ತಾರೆ. ಬಹಳ ಜನರಿಗೆ ನಾಗರ ಕರೆಯ ಕೆಳಗಡೆ ಹೊಲಗಳಿವೆ. ವ್ಯವಸಾಯ ಮಾಡುತ್ತಿರುವ ರೈತರಿಗೆ ನಾಗರಕೆರೆಯೇ ಆಧಾರ ಕೆರೆಯು, ತುಂಬಿದರೇ ವ್ಯವಸಾಯದಾರರಿಗೆ, ವ್ಯವಸಾಯ ಕೂಲಿಗಳಿಗೆ ಹಬ್ಬವೇ. ಗ್ರಾಮದಲ್ಲಿ ಮಕ್ಕಳೆಲ್ಲರೂ ಈ ಕೆರೆಯಲ್ಲಿಯೇ ಈಜು ಕಲೆಯುತ್ತಾರೆ. ಬಟ್ಟೆ ಒಗೆಯುವವರಿಗೂ ಈ ಕೆರೆಯೇ ಆಧಾರ. ಕೆರೆಯು ತುಂಬಿದರೇ ಮೀನು ಹಿಡಿಯುವವರೆಗೂ ಹಬ್ಬವೇ! ಈಗ ಮೀನುಗಳನ್ನು ಬೆಳೆಸಲು ಅವರು ಮೀನಿನ ಮರಿಗಳನ್ನು ಬಿಡುತ್ತಾರೆ. ಪುಂಡೆ, ಸೆಣಬು ಸಸ್ಯಗಳನ್ನು ನೀರಿನಲ್ಲಿ ನೆನಸಿ, ಅವುಗಳ ನಾರಿನಿಂದ ಹಗ್ಗ ಹೆಣೆಯುತ್ತಾರೆ.

SCERT TELANGANA

ಕೆರೆಯಲ್ಲಿ ಕೊಳವೆ ಬಾವಿಯನ್ನು ಹಾಕಿಸಿ ಗ್ರಾಮದಲ್ಲಿ ನೀರಿನ ಟ್ಯಾಂಕ್‌ಗಳನ್ನು ಕಟ್ಟಿ ಪ್ರತಿ ಮನೆಗೆ ನೀರನ್ನು ಸರಬರಾಜು ಮಾಡುತ್ತಿದ್ದಾರೆ. ಪ್ರಾಣಿಗಳು, ಪಕ್ಷಿಗಳು ನೀರು ಕುಡಿಯುವುದಕ್ಕೆ 'ನಾಗರ ಕೆರೆ' ಇಂದಿಗೂ ಆಧಾರವಾಗಿದೆ. ಕೆರೆಯು ತುಂಬಿದಾಗ ಸುತ್ತಮುತ್ತಲೂ ಇರುವ ಬಾವಿಗಳು, ಕೊಳವೆ ಬಾವಿಗಳು, ಚೆಕ್‌ಡ್ಯಾಂಗಳಲ್ಲಿ ನೀರಿನ ಮಟ್ಟ ಅಧಿವಾಗಿರುತ್ತದೆ.

ಕೆರೆಯಲ್ಲಿ ನೀರು ಕಡಿಮೆಯಾದಾಗ ಮೀನು ಹಿಡಿಯುತ್ತಾರೆ. ಕೆಲವು ರೈತರು ಸೌತೆಕಾಯಿಗಳು, ಕರ್ಬೂಜ ಹಣ್ಣು, ಕಲ್ಲಂಗಡಿಗಳನ್ನು ಬೆಳೆಸುತ್ತಾರೆ. ಬೇಸಿಗೆಯಲ್ಲಿ ಕೆರೆಯಲ್ಲಿನ ಹೂಳನ್ನು ತೆಗೆದು ಹಾಕುತ್ತಾರೆ. ರೈತರೆಲ್ಲರೂ ಈ ಹೂಳಿನ ಮಣ್ಣನ್ನು ಹೊಲದಲ್ಲಿ ಚೆಲ್ಲುವರು. ಕೆರೆಯಲ್ಲಿನ ಹೂಳಿನ ಮಣ್ಣು ಸಾರವಂತಾಗಿರುವುದರಿಂದ ಬೆಳೆಗಳು ಚೆನ್ನಾಗಿ ಬೆಳೆಯುತ್ತವೆ. ಕೆರೆಗಳಲ್ಲಿ ಹೂಳನ್ನು ತೆಗೆಯುವುದರಿಂದ ನೀರು ಹೆಚ್ಚಾಗಿ ಸಂಗ್ರಹವಾಗುತ್ತವೆ.

**ಗುಂಪಿನಲ್ಲಿ ಚರ್ಚಿಸಿರಿ :**



- ರೈತರು ಹಗ್ಗದಿಂದ ಏನೇನು ಮಾಡುತ್ತಾರೆ ?
- ಕೆರೆಗಳಲ್ಲಿಯೇ ಕೊಳವೆ ಬಾವಿಗಳನ್ನು ಏಕೆ ತೆಗೆಯುತ್ತಾರೆಂಬುದನ್ನು ಬರೆಯಿರಿ ?
- ಕೆರೆಯ ಮಣ್ಣಿನಿಂದ (ಹೂಳೂ ಮಣ್ಣು) ಏನೇನು ಮಾಡುತ್ತಾರೆ ?
- ಕೆರೆಗಳು ತುಂಬಿದರೆ ನಿಮಗೆ ಸಂತೋಷವಾಗುತ್ತದೆ ? ಏಕೆ ?

## 9.6. ಕೆರೆಗಳ ಮಾಲಿನ್ಯ

ಕೆರೆಗಳಿಂದ ಆಗುವ ಉಪಯೋಗಗಳು ತಿಳಿದಿದ್ದೀರಲ್ಲವೇ ! ಈ ಕೆಳಗಿನ ಚಿತ್ರವನ್ನು ನೋಡಿರಿ.



SCERT TELANGANA

**ಆಲೋಚಿಸಿರಿ :**

- **ಕೆರೆಯು ಯಾವ ವಿಧವಾಗಿ ಮಾಲಿನ್ಯವಾಗುತ್ತಿದೆ ?**
- **ಅದರಿಂದ ಉಂಟಾಗುವ ನಷ್ಟಗಳೇನು ?**

ಕೆರೆಯ ನೀರು ಅನೇಕ ವಿಧಗಳಲ್ಲಿ ಕಲುಷಿತವಾಗುತ್ತಿದೆ. ಗ್ರಾಮದಲ್ಲಿನ ಹೆಚ್ಚಿನ ಜನರು ಕೆರೆಯಲ್ಲಿಯೇ ಬಟ್ಟೆಗಳನ್ನು ಒಗೆಯುತ್ತಾರೆ. ಅನೇಕ ಮಂದಿ ಮುಂಜಾವಿನ ಚಟುವಟಿಕೆಗಳನ್ನು ಕೆರೆಯದಡದಲ್ಲಿಯೇ ಮಾಡುತ್ತಾರೆ. ಪಶುಗಳನ್ನು ತೊಳೆಯುತ್ತಾರೆ, ಎಮ್ಮೆಗಳನ್ನು ತೊಳೆಯುತ್ತಾರೆ, ಮಕ್ಕಳು ಆಟವಾಡುತ್ತಾರೆ, ಈಜಾಡುತ್ತಾರೆ, ಈಗ ಟ್ರಾಕ್ಟರ್‌ಗಳು, ಜೀಪುಗಳು, ಆಟೋಗಳನ್ನು ಸಹ ಕೆರೆಯಲ್ಲಿಯೇ ತೊಳೆಯುತ್ತಿದ್ದಾರೆ. ಪ್ರತಿ ವರ್ಷವು ವಿನಾಯಕ ವಿಗ್ರಹಗಳನ್ನು ವಿಸರ್ಜನೆ ಮಾಡುತ್ತಾರೆ. ಕಳೆದು ಎರಡು ವರ್ಷಗಳಿಂದಲೂ ಊರಿನ ಅಕ್ಕಪಕ್ಕದ ಗ್ರಾಮದವರೂ ಕೂಡ ನಮ್ಮ ಊರಿನಲ್ಲಿರುವ ಕೆರೆಯಲ್ಲಿಯೇ ವಿನಾಯಕ ವಿಗ್ರಹಗಳನ್ನು ವಿಸರ್ಜನೆ ಮಾಡುತ್ತಾರೆ. ಅದರಿಂದ ವಿಗ್ರಹಗಳ ಬಣ್ಣವು ನೀರಿನಲ್ಲಿ ಕರಗಿ ನೀರೆಲ್ಲವೂ ಮಾಲಿನ್ಯವಾಗುತ್ತಿದೆ. ಮೀನುಗಳು ಕೂಡ ಸಾಯುತ್ತಿವೆ. ಕೆರೆಯ ಹತ್ತಿರ ಇರುವ ಮನೆಗಳಿಂದ ಚರಂಡಿ ಕೊಳಚೆ ನೀರು ಕೆರೆಗೆ ಸೇರುತ್ತದೆ. ಸಾಯಂಕಾಲ ಕೆರೆಯ ಹತ್ತಿರಕ್ಕೆ ವಿಹಾರಕ್ಕೆ ಬಂದವರು ಊಟ ಮಾಡಿದ ನಂತರ ಉಳಿದ ತ್ಯಾಜ್ಯಗಳನ್ನು ಕೆರೆಯಲ್ಲಿ ಹಾಕುತ್ತಾರೆ. ಈ ವಿಧವಾಗಿ ಕೆರೆಯು ಪ್ಲಾಸ್ಟಿಕ್ ಕವರ್‌ಗಳಿಂದ, ಕೊಳಚೆ ನೀರಿನಿಂದ ದಿನದಿಂದ ದಿನಕ್ಕೂ ಅನೇಕ ವಿಧವಾಗಿ ಮಾಲಿನ್ಯವಾಗುತ್ತಿದೆ. ರಾಸಾಯನಿಕ ಔಷಧಿಗಳು, ಕಾರ್ಖಾನೆಗಳಿಂದ ಬರುವ ವ್ಯರ್ಥ ಪದಾರ್ಥಗಳು. ಹಾನಿಕರವಾದ ಮಾಲಿನ್ಯಕಾರಕಗಳು ಭೂಗರ್ಭಜಲವನ್ನು, ಕೆರೆಯಲ್ಲಿನ ನೀರನ್ನು ಕಲುಷಿತಗೊಳಿಸುತ್ತಿವೆ. ಒಂದು ಕಾಲದಲ್ಲಿ ಉಪಯೋಗಕ್ಕೆ ಬಂದಿರುವ ಕೆರೆಯು ಈಗ ಉಪಯೋಗಕ್ಕೆ ಬಾರದಂತೆ ಆಗಿದೆ. ಇತ್ತೀಚಿಗೆ ಕೆರೆಯ ನೀರು ಮಾಲಿನ್ಯವಾಗದಂತೆ ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ.

ಕಳೆದ ವರ್ಷ ಕೆರೆಗೆ ಸ್ವಲ್ಪ ದೂರದಲ್ಲಿ ಒಂದು ಕಾರ್ಖಾನೆಯನ್ನು ನಿರ್ಮಿಸಲು ನಿರ್ಣಯಿಸಿದಾಗ ಊರಿನ ಜನರೆಲ್ಲರೂ ಒಟ್ಟಾಗಿ ಅದನ್ನು ವಿರೋಧಿಸಿದ್ದರಿಂದ ಅದರ ನಿರ್ಮಾಣ ನಿಂತು ಹೋಯಿತು.

ರಸಾಯನಿಕ ಔಷಧಿಗಳ ಕಾರ್ಖಾನೆಗಳು, ಕಂಪನಿಗಳಿಂದ ಬರುವ ವ್ಯರ್ಥಗಳು, ಹಾನಿಕರವಾದ ಕಲುಷಿತಗಳು, ಭೂಗರ್ಭಜಲವನ್ನು, ಕೆರೆಯ ನೀರನ್ನು ಕಲುಷಿತ ಮಾಡುತ್ತವೆ.

ಕೆರೆಗೆ ಹಾನಿಯನ್ನುಂಟುಮಾಡುವ ಕೆಲಸಗಳು ನಿಮ್ಮ ಪಾಂತ್ರದಲ್ಲಿ ಗಮನಿಸಿದ್ದೀರಾ ? ಅವು ಯಾವುವು ? ಅವನ್ನು ವಿರೋಧಿಸಲು ಎಲ್ಲರೂ ಕಲಿಸಿ ಒಟ್ಟಾಗಿ ಏನಾದರೂ ಮಾಡಿದ್ದಿರಾ ?

ನಮ್ಮ ಪಕ್ಕದ ಊರಿನ ಕೆರೆಯನ್ನು ನೋಡಿದರೆ ಎಷ್ಟೋ ನೋವು ಉಂಟಾಗುತ್ತದೆ. ಅದು ನಮ್ಮ ಮಾವನವರ ಊರು. ಆ ಕೆರೆಯಲ್ಲಿ ಚಿಕ್ಕಂದಿನಲ್ಲಿ ಈಜಾಡಿದ್ದೇನೆ. ಈಗ ಅಲ್ಲಿ ಕೆರೆ ಇಲ್ಲವಾಗಿದೆ. ಎಲ್ಲರು ಮನೆಗಳನ್ನು ಕಟ್ಟಿಸಿದ್ದಾರೆ. ಒಂದು ಕಾಲದಲ್ಲಿ ಅಲ್ಲಿ ಕೆರೆ ಇತ್ತು ಎಂದರೆ ಯಾರು ನಂಬುವುದಿಲ್ಲ.

**ಗುಂಪಿನಲ್ಲಿ ಚರ್ಚಿಸಿರಿ :**



- ಕೆರೆಯ ನೀರು ಮಾಲಿನ್ಯವಾಗದಂತೆ ಇರಲು ನೀವು ಏನು ಮಾಡುವಿರಿ ?
- ಕಾರ್ಖಾನೆಯ ನಿರ್ಮಾಣವನ್ನು ಗ್ರಾಮದ ಜನರು ಏಕೆ ವಿರೋಧ ಮಾಡಿದರು ?
- ಕೆರೆ ಜಾಗದಲ್ಲಿ ಮನೆಗಳನ್ನು ಏಕೆ ಕಟ್ಟಿಕೊಂಡಿದ್ದಾರೆ. ಇದರಿಂದ ಆಗುವ ನಷ್ಟಗಳೇನು ?
- ಹಿಂದಿನ ಕಾಲದಲ್ಲಿ ರಾಜರುಗಳು ಕೆರೆಗಳನ್ನು ನಿರ್ಮಿಸುತ್ತಿದ್ದರು. ಇದರ ಬಗ್ಗೆ ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.

SCERT TELANGANA

## 9.7. ಕೆರೆಗಳು - ನಾವುಗಳು :

ನಾನು ಬೆಳೆಕೊಯ್ಯುವ (ಕಟಾವು) ಸಮಯದಲ್ಲಿ ರಾತ್ರಿಯ ವೇಳೆ ಕೆರೆದಂಡೆಯಲ್ಲಿಯೇ ನಿದ್ರಿಸುತ್ತೇನೆ. ಮಧ್ಯಾಹ್ನ ಕೆರೆದಂಡೆಯ ಮೇಲಿರುವ ಮರದ ನೆರಳಿನಲ್ಲಿ ಕುಳಿತು ಊಟ ಮಾಡುವುದು ಹವ್ಯಾಸವಾಗಿದೆ. ಕೆರೆ ತುಂಬಿದಾಗ ಕೆರೆಯದಂಡೆಯ ಮೇಲೆ ಇರುವ 'ಪೋಚಮ್ಮ' ಹಬ್ಬ ಮಾಡಿದ ನಂತರ ಹೊಲಗಳಿಗೆ ನೀರನ್ನು ಹರಿಸುತ್ತಾರೆ. ಇದಕ್ಕೋಸ್ಕರವಾಗಿ ಗ್ರಾಮದಲ್ಲಿನ ಪ್ರತಿ ಮನೆಯವರು ಅಕ್ಕಿ, ಹಣವನ್ನು ಕೊಡುತ್ತಾರೆ. ಎಲ್ಲರೂ ಕೆರೆದಂಡೆಯಲ್ಲಿ ಊಟ ಮಾಡಿದ ನಂತರ ಹೊಲಗಳಿಗೆ ನೀರನ್ನು ಬಿಡುತ್ತಾರೆ.

ಬತುಕಮ್ಮ ಹಬ್ಬದ ದಿನಗಳಲ್ಲಿ ತುಂಬಿದ ಕೆರೆಯಲ್ಲಿ ಬತುಕಮ್ಮಗಳನ್ನು ಬಿಡುತ್ತಾರೆ. ಇದನ್ನು ನೋಡುವುದಕ್ಕೂ ಎಷ್ಟೋ ಸಂತೋಷವಾಗಿರುತ್ತದೆ. ಸಾಯಂಕಾಲ ಕೆರೆಯ ದಡದ ಮೇಲೆ ನಿಂತು ಸೂರ್ಯೋದಯ, ಸೂರ್ಯಾಸ್ತಮಯವನ್ನು ನೋಡುವುದು ನನಗೆ ಬಲು ಇಷ್ಟ, ಬೇಸಿಗೆಯ ಎಲ್ಲಾ ವೇಳೆಯಲ್ಲಿ ವಾತಾವರಣ ತಂಪಾಗಿ ಇರುತ್ತದೆ. ರೈತರು ಕೆರೆಯ ದಂಡೆಯಯ ಮೇಲೆ ಇರುವ ಮರಗಳ ಕೆಳಗೆ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಸಾಯಂಕಾಲ ಪಕ್ಷಿಗಳು ಗುಂಪಾಗಿ ಆಕಾಶದಲ್ಲಿ ಹೋಗುವುದು. ಕೆರೆಯಿಂದ ಪಶುಗಲು ಗುಂಪಾಗಿ ಹೋಗುವುದು. ರಾತ್ರಿಯಲ್ಲಿ ಹೊಲಗಳಿಂದ ಬರುವ ತಂಪಾದ ಗಾಳಿಯು ತೋಟಗಳಿಂದ ಬರುವ ವಾಸನೆ ಮುಂತಾದವುಗಳಿಂದ ಹಳ್ಳಿ ಜೀವನವು ಶ್ರೇಷ್ಠ ಎಂದು ಎನಿಸುತ್ತದೆ. ಕೆರೆ ನೀರಿನಲ್ಲಿ ಹೆಚ್ಚಾಗಿ ಕೊಳೆ ಸಸ್ಯ, ತಾವರೆಗಳು ಅರಳುತ್ತವೆ. ನೀರಿನ ಮೇಲೆ ಒಡಾಡುವ ಕೀಟಗಳು, ಹುಳುಗಳು ಅವುಗಳನ್ನು ತಿನ್ನುವ ಮೀನುಗಳು ಮೀನುಗಳನ್ನು ಬೇಟೆಯಾಡುವ ಕೊಕ್ಕರೆಗಳಿಂದ ಕೆರೆಯನ್ನು ಎಷ್ಟು ಕಾಲ ನೋಡಿದರೂ ಸಾಕಾಗುವುದಿಲ್ಲ.

### ಬತ್ತಿದ ಕೆರೆಗಳು - ಬರ :

ಈ ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ಮಳೆಗಳು ಇಲ್ಲದೇ ಕೆರೆಗಳು ಒಣಗಿ ಹೋದರೆ ಅದರ ಪ್ರಭಾವ ಯಾವುದರ ಮೇಲೆ ಬಿಳುವುದು? ಹೇಗೆ
- ಕೆರೆಗಳು ಒಣಗಿ ಹೋದಾಗ ಅದರ ಮೇಲೆ ಆಧಾರಪಟ್ಟವರಿಗೆ ಯಾವ ವಿಧವಾದ ನಷ್ಟಗಳು ಉಂಟಾಗುತ್ತವೆ?

ಪರಿಸರ ಮಾಲಿನ್ಯ ಮರಗಳನ್ನು ಕಡಿಯುವುದು, ಅರಣ್ಯ ನಾಶದಿಂದ ಬರುಬರುತ್ತಾ ಹಚ್ಚ ಹಸಿರು ಕಡಿಮೆಯಾಗುತ್ತಿದೆ. ಸೂರ್ಯನಿಂದ ಬರುವ ಬಿಸಿಲು ಮರಗಳ ಮೇಲೆ ಅಲ್ಲದೇ ಭೂಮಿಯ ಮೇಲೆ ಬಿದ್ದು, ಭೂಮಿ ವಾತಾವರಣ ಬಿಸಿಯಾಗುತ್ತದೆ. ಮಳೆಗಳು ಪ್ರತಿ ವರ್ಷವು ಕಡಿಮೆಯಾಗುತ್ತಿವೆ. ಭೂಮಿಯ ವಿವಿಧ ಪ್ರದೇಶಗಳಲ್ಲಿ ಬರಗಾಲ ಏರ್ಪಡುತ್ತದೆ. ಮಳೆ ಬಾರದೇ, ಕೆರೆಗಳು ತುಂಬದೇ, ರೈತರು ಕೊಳವೆ ಭಾವಿಗಳನ್ನು ಹಾಕಿ ನೂರಾರು ಅಡಿಗಳಿಂದ ಭೂಗರ್ಭಜಲವನ್ನು ಮೇಲಕ್ಕೆ ತರುತ್ತಿದ್ದಾರೆ. ಮಾನವರು ಮಾಡುವ ಈ ರೀತಿಯ ಕೆಲಸಗಳಿಂದ ಪರಿಸರಕ್ಕೆ ಹಾನಿಯುಂಟಾಗಿ ಬರಗಾಲ ಪರಿಸ್ಥಿತಿಗಳು ಏರ್ಪಡುತ್ತವೆ. ಇಂದಿಗೂ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರನ್ನು ಬಹಳ ದೂರದ ಪ್ರದೇಶಗಳಿಂದ ತಂದುಕೊಳ್ಳುತ್ತಿದ್ದಾರೆ. ಸರ್ಕಾರವು ಟ್ಯಾಂಕ್‌ಗಳ ಮೂಲಕ ಸರಬರಾಜು ಮಾಡುವ ನೀರಿನ ಮೇಲೆಯೇ ಆಧಾರಪಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಏಕೆ ನಿರ್ಮಾಣವಾಯಿತು ? ಇದು ದೊಡ್ಡ ಸಮಸ್ಯೆಯೇ ? ಇದರ ಕ್ರಮ ಯಾರು ತೆಗೆದುಕೊಳ್ಳಬೇಕು ಮತ್ತು ಯಾವ ಕ್ರಮ ತೆಗೆದುಕೊಳ್ಳಬೇಕು ?

**ಆಲೋಚಿಸಿರಿ...**

**ಈ ಪರಿಸ್ಥಿತಿಗಳು ಹೀಗೆ ಮುಂದುವರೆಸಿದರೆ ನಾವು ಭವಿಷ್ಯದಲ್ಲಿ ಎಂತಹ ದುಸ್ಥಿತಿ ಎದುರಿಸಬೇಕಾಗುತ್ತದೆ ಎಂಬುದನ್ನು ಊಹಿಸಿರಿ. ಇದಕ್ಕೆ ನಾವು ಏನು ಮಾಡಬೇಕು ?**

### 9.8. ಕೆರೆಗಳ ನಿರ್ವಹಣೆ :



ಚಿತ್ರದಲ್ಲಿನ ಕೆರೆಯನ್ನು ನೋಡಿರಿ. ಕೆರೆಯಲ್ಲಿ ತಾವರೆ ಸಸ್ಯಗಳನ್ನು ಬೆಳೆದಿದ್ದೇವೆ ಅಲ್ಲವೇ ! ಎಷ್ಟೋ ಉಪಯೋಗಗಳಿದ್ದರೂ ಕೆರೆಗಳು ಹೀಗೇಕೆ ಬದಲಾವಣೆ ಆಗುತ್ತಿವೆ? ಕೆರೆಗಳನ್ನು ಯಾರು ನೋಡಿಕೊಳ್ಳಬೇಕು. ಜಾಗ್ರತೆ ವಹಿಸದಿದ್ದರೆ ಏನಾಗುತ್ತದೆ ? ಕೆರೆಗಳನ್ನು ಕಾಪಾಡಿ ಕೊಂಡರೆ ನಮ್ಮ ಭವಿಷ್ಯಕ್ಕೆ ಉಪಯೋಗವಾಗುತ್ತದೆ. ಕೆರೆಯ ನಿರ್ವಹಣೆ ಕುರಿತು 'ಯಾಕೂಬ್' ಏನು ಹೇಳುತ್ತಾನೆಯೋ ನೋಡೋಣ.

ನನ್ನ ಹೆಸರು ಯಾಕೂಬ್. ನಾಗರ ಕೆರೆಯ ಕೆಳಗೆ ನಮ್ಮ ಹೊಲಗಳಿವೆ. ಕೆರೆಗಳ ಅಭಿವೃದ್ಧಿಗೆ ಸರ್ಕಾರ ನೀರಾವರಿ ಯಾಜಮಾನ್ಯ ಸಂಘಗಳನ್ನು ಏರ್ಪಾಟು ಮಾಡಿದೆ ಅಲ್ಲವೇ ! ಊರಲ್ಲಿ ರೈತರೆಲ್ಲರೂ ಸೇರಿ ನನ್ನನ್ನು ಅಧ್ಯಕ್ಷನಾಗಿ ನೇಮಕ ಮಾಡಿದ್ದಾರೆ. ನಮ್ಮ ಸಂಘ ಪ್ರತಿ ವರ್ಷವು ತೂಬುಗಳು ಕೋಡಿಗಳು ಕಾಲುವೆಗಳಿಗೆ ದುರಸ್ತಿ ಮಾಡಿಸುತ್ತದೆ. ಕೆರೆಯ ಕಟ್ಟೆಯು ಒಡೆದು ಹೋಗದಂತೆ ಜಾಗ್ರತೆ ವಹಿಸುತ್ತೇವೆ. ನಮ್ಮ ಊರಿಗೆ ಕೆರೆಯು ಜೀವನಾಧಾರವಾಗಿದೆ.

**ಸಂಗ್ರಹಿಸಿರಿ :**



ಪ್ರಸ್ತುತದಲ್ಲಿ ನಮ್ಮ ರಾಜ್ಯ ಸರ್ಕಾರ 'ಮಿಷನ್ ಕಾಕತೀಯ' ಹೆಸರಿನಿಂದ ಒಣಗಿ ಹೋದ ಕೆರೆಗಳ ಹೂಳನ್ನು ತೆಗೆಸಿ ನೀರಿನ ಸಾಮರ್ಥ್ಯ ಹೆಚ್ಚಿಸುವ ಪ್ರಯತ್ನ ಮಾಡುತ್ತಿದೆ.



SCERT TELANGANA

**ನಿಮಗೆ ಗೊತ್ತೆ ?**




ರಾಜಾಸ್ಥಾನ್ ರಾಜ್ಯದಲ್ಲಿನ ಉದಯಪುರ್ ನಗರವನ್ನು ಸರೋವರಗಳ ನಗರ ಎನ್ನುವರು. ಉದಯಪುರ್ ಸುತ್ತಾ ಅನೇಕ ಸರೋವರಗಳು ಇರುವುದರಿಂದ ಆ ಹೆಸರು ಬಂದಿದೆ. ಪೂರ್ವಕಾಲದಲ್ಲಿ ಕುಡಿಯುವ ನೀರಿಗೆ, ವ್ಯವಸಾಯಕ್ಕಾಗಿ ಇವುಗಳನ್ನು ನಿರ್ಮಿಸಿದ್ದಾರೆ. ಉದಯಪುರ್‌ದಲ್ಲಿನ ಎಲ್ಲಾ ಸರೋವರಗಳಲ್ಲಿ 'ಪಿಚೋಲಾ' ಸರೋವರ ಪ್ರಮುಖವಾಗಿದೆ. 1362 ನಲ್ಲಿ ಬಂಜಾರುಗಳಿಂದ ನಿರ್ಮಿಸಲಾಗಿ, ನಂತರದ ಕಾಲದಲ್ಲಿ ಮಹಾರಜ ಉದಯಸಿಂಗ್‌ನಿಂದ ಈ ಸರೋವರವನ್ನು ಅಭಿವೃದ್ಧಿಗೊಳಿಸಲಾಗಿತ್ತು. ಉದಯ್‌ಪುರ್ ನಗರದಲ್ಲಿನ ರಾಜಭವನಗಳೆಲ್ಲಾ ಸರೋವರಗಳ ದಂಡೆಯ ಮೇಲೆ ನಿರ್ಮಿಸಿದ್ದಾರೆ. ಅದರಲ್ಲಿ ಜೆಗ್ ನಿವಾಸ್, ಸಿಟಿ ಪ್ಯಾಲೆಸ್ ಮುಖ್ಯವಾದವುಗಳು.

**ಮುಖ್ಯ ಪದಗಳು :**

| | | | | | |
|---|---|---|---|---|---|
| 1 | ವ್ಯವಸಾಯ | 6 | ಪ್ರವಾಹದನೀರು | 11. | ತಾವರೆ ಗಿಡಗಳು |
| 2 | ಕಾಲುವೆ | 7 | ತೂಬು | 12. | ಕೆರೆಯ ಕಾಲುಷ್ಯ |
| 3 | ಕೆರೆ | 8 | ಕೆರೆನಿರ್ಮಾಣ | 13. | ಕೆರೆಯಿಂದಾಗುವ ಪ್ರಯೋಜನೆಗಳು |
| 4 | ಕುಂಟೆ | 9 | ಕೆರೆಯಕಟ್ಟೆ | 14. | ಕೆರೆಯ ಕಿಂಡಿಗಳು |
| 5 | ಹಳ್ಳಗಳು | 10. | ವ್ಯವಸಾಯಭೂಮಿಗಳು | 15. | ಕೆರೆಯ ನಿರ್ವಹಣೆ |



SCERT TELANGANA

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1. (ವಿಷಯಾವಗಹನೆ) ತಿಳುವಳಿಕೆ :

ಅ) ಕೆರೆಯು ಏಕೆ ಅವಶ್ಯಕ ?

ಆ) ಕೆರೆಯ ನೀರು ಯಾವ ಯಾವ ಕೆಲಸಗಳಿಗೆ ಉಪಯೋಗವಾಗುತ್ತವೆ ?

ಇ) ನೀರಿನ ಯೋಜನೆ ಸಂಘಗಳು ಏಕೆ ಅವಶ್ಯಕ ?

ಈ) ನಿಮ್ಮ ಊರಲ್ಲಿ ಬೆಳೆಯುವ ಬೆಳೆಗಳಲ್ಲಿ ಕಡಿಮೆ ನೀರಿಗೆ ಬೆಳೆಯುವ ಬೆಳೆಗಳಾವುವು ?

ಉ) ತೂಬಿನಿಂದ ಯಾವ ಯಾವ ಉಪಯೋಗಗಳು ಇರುವುವೆಂದು ನೀವು ತಿಳಿದಿರುವಿರಿ ?

ಊ) ಕೆರೆಯ ಮೇಲೆ ಯಾರ್‍ಯಾರು ಆಧಾರಪಡುತ್ತಾರೆ ? ಮುಖ್ಯವಾಗಿ ರೈತರು ಹೇಗೆ ಆಧಾರಪಡುತ್ತಾರೆ ?

ಋ) ಕೆರೆಗಳನ್ನು ನಾವು ಹೇಗೆ ಸಂರಕ್ಷಿಸಿಕೊಳ್ಳಬೇಕು ?

### 2. ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

ಅ) ಕವಿತ ತನ್ನ ಅಜ್ಜನ ಜೊತೆ ಸಹ ಅವರ ಊರಿನಲ್ಲಿರುವ ಚೆಕ್‌ಡ್ಯಾಂಗೆ ಹೊರಟಳು. ಆಕೆ ಚೆಕ್‌ಡ್ಯಾಂ ಕುರಿತು ಅಜ್ಜನನ್ನು ಬಹಳ ಪ್ರಶ್ನೆಗಳು ಕೇಳಿದಳು. ನೀವಾದರೆ ಯಾವ ಯಾವ ಪ್ರಶ್ನೆಗಳನ್ನು ಹಾಕುತ್ತಿದ್ದೀರಿ ?

### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ಸಮೀಪದಲ್ಲಿನ ಕೆರೆಯ ಹತ್ತಿರ ಹೋಗಿರಿ. ಅಲ್ಲಿ ಕಾಣಿಸುತ್ತಿರುವ ಅಂಶಗಳನ್ನು ಬರೆಯಿರಿ. (ಕೆರೆಯಲ್ಲಿ, ಕೆರೆಯ ದಂಡೆಯ ಮೇಲೆ, ಕೆರೆಯ ಸುತ್ತಮುತ್ತ ಕೆರೆಯಿಂದಾಗುವ ಪ್ರಯೋಜನೆಗಳು ಮೊದಲಾದವು.)
- ಶಿಕ್ಷಕರ ಸಹಾಯದಿಂದ ನಿಮ್ಮ ಊರಿನಲ್ಲಿರುವ ಹೊಲಗಳಿಗೆ, ಭೇಟಿಕೊಡಿ. ಕೆರೆಯಿಂದ ಹೊಲಗಳಿಗೆ ನೀರು ಹರಿಯುವ ಮಾರ್ಗಗಳನ್ನು ಪರಿಶೀಲಿಸಿರಿ. ಬ್ಲಾಕ್ ಡಯಾಗ್ರಮ್ ಹಾಕಿರಿ.

### 4 ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :

- ನಿಮಗೆ ತಿಳಿದ ಅಥವಾ ನಿಮ್ಮ ಜಿಲ್ಲೆಯಲ್ಲಿನ ಅಥವಾ ರಾಜ್ಯದಲ್ಲಿನ ಪ್ರಸಿದ್ಧವಾದ ಕೆರೆಯ ಹೆಸರು ಬೆರೆಯಿರಿ. ಅದರ ಚರಿತ್ರೆ ತಿಳಿದುಕೊಳ್ಳಿರಿ. ಅದರ ಚಿತ್ರ ಹಾಕಿರಿ. ಆ ಕೆರೆಯ ವಿವರಗಳನ್ನು ಬರೆದು ಪ್ರದರ್ಶಿಸಿರಿ. ಇದಕೋಸ್ಕರ ಕೆರೆಯ ಬಗ್ಗೆ ತಿಳಿಸುವ ಪುಸ್ತಕಗಳನ್ನಾಗಲೀ, ವಾರ್ತಾ ಪತ್ರಿಕೆಗಳಾಗಲೀ, ಅಥವಾ ಅಂತರ್ಜಾಲ (ಇಂಟರ್ ನೆಟ್) ಗಳಲ್ಲಾಗಲೀ ವಿವರಗಳನ್ನು ಸಂಗ್ರಹಿಸಿರಿ.

### 5 ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :

ಅ) ರಾಮಪ್ಪ, ಪಾಕಾಲ, ಹುಸ್ಸೇನ್ ಸಾಗರ ಇನ್ನೂ ಕೆಲವು ಕೆರೆಗಳ ಹೆಸರುಗಳನ್ನು ಸಂಗ್ರಹಿಸಿರಿ. ಇವು ನಮ್ಮ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಯಾವ ಊರಿನಲ್ಲಿದೆ ಎಂಬುದನ್ನು ತೆಲಂಗಾಣ ನಕ್ಷೆಯಲ್ಲಿ ಗುರ್ತಿಸಿರಿ.

SCERT TELANGANA

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :

ಅ) ಕೆರೆಗೆ ರಂಧ್ರ ಬಿದ್ದಿದೆ ಊರಿನವರೆಲ್ಲಾ ಕೂಡಿ ಅದನ್ನು ಮುಚ್ಚಿ ಹಾಕಿದರು. ಅದನ್ನು ನೋಡಿದಾಗ ನೀನು ಒಬ್ಬೊಬ್ಬರ ಶ್ರಮದ ಬಗ್ಗೆ ನಿಮ್ಮ ಗೆಳೆಯರೊಂದಿಗೆ ಹೇಗೆ ಹೇಳುವಿರಿ ?

ಆ) ಕೆರೆಗಳು ನಮಗೆ ಅಲ್ಲದೇ ಪಕ್ಷಿಗಳಿಗೆ, ಪ್ರಾಣಿಗಳಿಗೆ ಇತರ ಕೀಟಗಳಿಗೂ ಜೀವನಾಧಾರ. ಇಂತಹ ಕೆರೆಗಳನ್ನು ಮಾಲಿನ್ಯತೆಯಿಂದ ಕಾಪಾಡುವುದಕ್ಕೆ ನೀವೆಲ್ಲರು ಮೆರವಣಿಗೆ ಪಾಲ್ಗೊಳ್ಳಬೇಕೆಂಬುವರು ಇದಗೋಸ್ಕರ ನೀವು ಮಾಲಿನ್ಯವನ್ನು ನಿವಾರಿಸುವುದನ್ನು ತಿಳಿಸುವ ಘೋಷಣೆಗಳನ್ನು ಬರೆಯಿರಿ. ಹಾಗೇ ಕೆರೆಗಳು ಮಾಲಿನ್ಯರಹಿತವಾಗಿರುವುದಕ್ಕಾಗಿ ಇನ್ನೂ ಏನೇನು ಮಾಡಬಹುದು. ತಿಳಿಸಿರಿ.

ಇ) ಕೆರೆಗಳನ್ನು ಮುಚ್ಚಿ ಹಾಕಿ ಮನೆಗಳನ್ನು ನಿರ್ಮಿಸುತ್ತಿದ್ದಾರೆ. ಹೀಗೆ ಮಾಡುವುದರಿಂದ ಪ್ರಾಣಿಗಳಿಗೆ, ಮನುಷ್ಯರಿಗೆ ಎಂತಹ ನಷ್ಟಗಳು ಉಂಟಾಗುತ್ತವೆ ? ಇದನ್ನು ನಿವಾರಿಸುವುದಕ್ಕೆ ನಾವು ಏನು ಮಾಡಬೇಕು ?

### ನಾನು ಇವುಗಳನ್ನು ಮಾಡಬಲ್ಲೆನಾ ?

| | | |
|---|---|---|
| 1 | ಕೆರೆಯಿಂದಾಗುವ ಉಪಯೋಗಗಳನ್ನು, ಕೆರೆಯ ನಿರ್ಮಾಣದಲ್ಲಿನ ಹಂತಗಳನ್ನು, ವಿವರಿಸಬಲ್ಲೆನು. | ಹೌದು / ಇಲ್ಲ |
| 2 | ಚೆಕ್ ಡ್ಯಾಂ ಕುರಿತು ವಿವರಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳಬಲ್ಲೆನು. | ಹೌದು / ಇಲ್ಲ |
| 3 | ಪ್ರಸಿದ್ಧವಾದ ಕೆರೆಗಳನ್ನು ನಕ್ಷೆಯಲ್ಲಿ ಗುರ್ತಿಸಬಲ್ಲೆನು. | ಹೌದು / ಇಲ್ಲ |
| 4 | ಕೆರೆಯ ಚರಿತ್ರೆಯನ್ನು ತಿಳಿದುಕೊಂಡು ಪ್ರದರ್ಶಿಸಬಲ್ಲೆನು. | ಹೌದು / ಇಲ್ಲ |
| 5 | ಕೆರೆಗಳನ್ನು ಕಾಪಾಡುವುದಕ್ಕೆ ನಿನಾದಗಳನ್ನು ಬರೆಯಬಲ್ಲೆನು. | ಹೌದು / ಇಲ್ಲ |




SCERT TELANGANA

# 10  ನಮ್ಮ ಆಹಾರ - ನಮ್ಮ ಆರೋಗ್ಯ

ನಾವು ಜೀವಿಸುಲು ಆಹಾರವು ಅವಶ್ಯಕ, ಆದರೆ ಎಲ್ಲರು ಸಹ ಒಂದೇ ರೀತಿಯಾದ ಆಹಾರವನ್ನು ತಿನ್ನಲು ಸಾಧ್ಯವೇ ? ಒಂದೇ ಸಮಯದಲ್ಲಿ ತಿನ್ನುತ್ತೇವೆಯೇ ? ಆಹಾರವನ್ನು ತಿನ್ನುವ ಅಭ್ಯಾಸಗಳು ಹೇಗಿರುತ್ತವೆ ? ಆಲೋಚನೆ ಮಾಡಿರಿ. ನಮಗೆ ಆಹಾರವು ಪ್ರಾಣಿಗಳಿಂದ ಅಥವಾ ಸಸ್ಯಗಳಿಂದ ಲಭಿಸುತ್ತದೆ. ಆಹಾರಕ್ಕೆ ಸಂಬಂಧಪಟ್ಟ ಕೆಲವು ವಿವರಗಳು ಈ ಪಾಠದಲ್ಲಿ ತಿಳಿದುಕೊಳ್ಳೋಣವೇ!

ಈ ಕೆಳಗಿನ ಚಿತ್ರವನ್ನು ನೋಡಿರಿ. ಇಲ್ಲಿ ಏನೇನು ಮಾಡುತ್ತಿದ್ದಾರೆ, ಹೇಳಿರಿ.



**ಆಲೋಚಿಸಿರಿ ...**

- ಯಾರ್ಯಾರು ಏನೇನು ಮಾಡಿತ್ತಿದ್ದಾರೆ ?
- ಮೇಲಿನ ಚಿತ್ರದಲ್ಲಿ ಎಲ್ಲರು ಎಲ್ಲಿಗೆ ಬಂದಿದ್ದಾರೆಂದು ತಿಳಿದು ಕೊಂಡಿದ್ದೀರಿ? ಏಕೆ ಬಂದಿದ್ದಾರೆ ?

## 10.1. ವಿಹಾರಯಾತ್ರೆ : ವನಭೋಜನಗಳು

ನಾವಿದ್, ವಿಪಿನ್, ನೀಲಿ, ದೀಪಿ ಇವರೆಲ್ಲರೂ ಐದನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಇವರ ಕುಟುಂಬದವರೆಲ್ಲರೂ ಒಂದು ದಿನ ವಿಹಾರ ಯಾತ್ರೆಗೆ ಹೋದರು. ಕಾಲುವೆ ದಂಡೆಯಲ್ಲಿರುವ ಮರಗಳ ಮಧ್ಯವಿರುವ ಸ್ಥಳವನ್ನು ವಿಹಾರಕ್ಕೆ ಆಯ್ಕೆ ಮಾಡಿಕೊಂಡರು. ಚಿಕ್ಕವರು, ದೊಡ್ಡವರು ಕುಳಿತು ಮಾತುಕತೆಯಾಡಿದರು. ವಿವಿಧ ಆಟಗಳನ್ನು ಆಡಿದರು. ಅಡುಗೆ ಮಾಡಿಕೊಳ್ಳುವುದಕ್ಕೆ ಕಟ್ಟಿಗೆಗಳನ್ನು ಆರಿಸಿಕೊಂಡು ಬಂದರು. ಒಲೆಗಳನ್ನು ಏರ್ಪಡಿಸಿ ತಾವು ತೆಗೆದುಕೊಂಡು ಬಂದ ಪದಾರ್ಥಗಳಿಂದ ಮಕ್ಕಳು, ಹಿರಿಯರು ಸೇರಿ ಅಡುಗೆಯನ್ನು ಮಾಡಿದರು.

SCERT TELANGANA

ಮಧ್ಯಾಹ್ನ ಊಟದ ಸಮಯಕ್ಕೆ ಎಲ್ಲರು ವೃತ್ತಾಕಾರದಲ್ಲಿ ಕುಳಿತುಕೊಂಡರು. ಮಕ್ಕಳು ಎಲೆಗಳನ್ನು ಹಾಕಿದರು. ಕೆಲವರು ಅಲ್ಲೇ ಮರಗಳಲ್ಲಿನ ಎಲೆಗಳನ್ನು ಕಿತ್ತುಕೊಂಡು ಪ್ಲೇಟ್‌ಗಳಾಗಿ ಉಪಯೋಗಿಸಿಕೊಂಡರು. ತಯಾರಿಸಿದ ಆಹಾರದ ಜೊತೆಗೆ ನಾವಿದ್‌ನು ತಂದ ಜೋಳದ ರೊಟ್ಟಿಗಳು, ನೀಲಿಯಾ ತಂದ ಸಿಹಿ ಪದಾರ್ಥಗಳು, ಸೊಂಡಿಗೆಗಳು, ವಿಪಿನ್‌ನು ತಂದ ಬೇಯಿಸಿದ ಹುರುಳಿ, ತೊಗರಿಕಾಳು, ನೆಲಗಡಲೆ, ದೀಪ್ತಿಯು ತಂದ ಗಂಜಿ ಎಲ್ಲರಿಗೂ ಕೊಟ್ಟರು. ಪ್ರತಿಯೊಂದು ಕುಟುಂಬದಿಂದ ತಂದ ಆಹಾರ ಪದಾರ್ಥಗಳನ್ನು ಎಲ್ಲರು ಹಂಚಿಕೊಂಡರು. ಆ ದಿನವೆಲ್ಲಾ ಎಲ್ಲರು ಬಹಳ ಸಂತೋಷದಿಂದ ಕಳೆದರು. ಹೀಗೆ ವಾಯುವಿಹಾರವನ್ನು ಜರುಗಿಸಿಕೊಳ್ಳುವುದಕ್ಕೆ ಹಬ್ಬಗಳು, ಆಚಾರಗಳು ಅವಸರವಿಲ್ಲ. ಎಲ್ಲರೂ ಕೂಡಿ ನಿರ್ಣಯಿಸಿದರೆ ಸರಿಹೋಗುತ್ತದೆ ಅಲ್ಲವೇ !

**ಗುಂಪಿನಲ್ಲಿ ಚರ್ಚಿಸಿರಿ :**



- ಇತರರ ಜೊತೆಗೆ ಕೂಡಿ ತಿನ್ನುವುದು ನಿಮಗೆ ಇಷ್ಟವೇನಾ ? ಏಕೆ ?
- ವನಭೋಜನಕ್ಕೆ ಹೋಗುವುದು ಎಂದರೆ ಏಕೆ ಇಷ್ಟವೋ ಹೇಳಿರಿ.
- ಸಾಧಾರಣವಾಗಿ ಮನೆಗಳಲ್ಲಿ ತಯಾರಿಸುವ ಅಡುಗೆಗಳಿಗೂ, ಪಿಕ್ನಿಕ್‌ನಲ್ಲಿರುವ ಅಡುಗೆಗಳಿಗೂ ಇರುವ ವ್ಯತ್ಯಾಸಗಳೇನು ?
- ಎಂತಹ ಸಂದರ್ಭಗಳಲ್ಲಿ ಇತರರ ಜೊತೆ ಕೂಡಿ ಸಾಮೂಹಿಕ ಭೋಜನವನ್ನು ಮಾಡುತ್ತಾರೆ?

## 10.2. ಮಧ್ಯಾಹ್ನ ಊಟ :



ಶಾಲೆಯಲ್ಲಿ ಊಟದ ವೇಳೆಯಾಗಿದ್ದು ಗಂಟೆಯು ಬಾರಿಸಿತು. ಮಕ್ಕಳೆಲ್ಲರು ನೀರಿನ ಕೊಳಾಯಿಯ ಸಮೀಪಕ್ಕೆ ಹೋಗಿ ತಮ್ಮ ತಟ್ಟೆಗಳನ್ನು, ಕೈ,ಕಾಲು, ಮುಖವನ್ನು ಶುಭ್ರವಾಗಿ ತೊಳೆದುಕೊಂಡರು. ಊಟಕ್ಕಾಗಿ ಸಾಲಿನಲ್ಲಿ ನಿಂತರು. ಈ ದಿನ ಮಧ್ಯಾಹ್ನದ ಊಟ ಕಿಚಿಡಿ, ಸಾಂಬಾರು ನೀಡಿದರು. ಒಂದೊಂದು ದಿನ ಒಂದೊಂದು ಅಡುಗೆ ಇರುತ್ತದೆ. ಎಲ್ಲರು ಒಟ್ಟಿಗೆ ಊಟ ಮಾಡುವುದರಿಂದ ಬೇರೆ ತರಗತಿ ಮಕ್ಕಳ ಜೊತೆ ಸ್ನೇಹವು ಬೆಳೆಯುತ್ತದೆ. ಮನೆಯಿಂದ ತಂದ ಊಟವನ್ನು ಬೇರೆ ಮಕ್ಕಳೊಂದಿಗೆ ಹಂಚಿಕೊಳ್ಳುತ್ತಾರೆ. ಹಾಗೇ ಯಾರ್‍ಯಾರ ಮನೆಯಲ್ಲಿ ಯಾವ ಅಡುಗೆ ಮಾಡುವರೋ ತಿಳಿಯುತ್ತದೆ. ಕೆಲವರು ಚಟ್ನಿಯನ್ನು ತಿನ್ನುತ್ತಾರೆ. ಇನ್ನೂ ಕೆಲವರು ಕಾಯಿಪಲ್ಲೆಗಳನ್ನು ಬಿಸಾಡುತ್ತಾರೆ. ಕೆಲವು ಮಕ್ಕಳು ಸರಿಯಾಗಿ ತಿನ್ನುವುದಿಲ್ಲ. ಕೆಲವು ಮಕ್ಕಳಿಗೆ ಮನೆಯಲ್ಲಿ ಸರಿಯಾದ ಆಹಾರ ದೊರೆಯುವುದಿಲ್ಲ. ಹಾಗೆಯೇ ಪಾಠಶಾಲೆಗೆ ಬರುತ್ತಾರೆ. ಈ ರೀತಿಯ ಮಕ್ಕಳು ಓದಿನಲ್ಲಿ ಆಸಕ್ತಿಯನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಅಂತಹ ಮಕ್ಕಳಿಗೆ ಪಾಠಶಾಲೆಗಳಲ್ಲಿ ನೀಡುವ ಮಧ್ಯಾಹ್ನದ ಊಟ ಅವಶ್ಯಕವಾಗಿರುತ್ತದೆ.

ನಮ್ಮ ದೇಶದಲ್ಲಿ ಬಹಳಷ್ಟು ಮಕ್ಕಳಿಗೆ ಒಂದು ಹೊತ್ತಿನ ಊಟವು ಸಹ ಸಿಗದ ಪರಿಸ್ಥಿತಿ ಇದೆ. ಸರಿಯಾದ ಆಹಾರ ಸಿಗದಿರುವುದರಿಂದ ಅವರು ಆರೋಗ್ಯದಿಂದ ಇರುವುದಿಲ್ಲ. ಓದಿನಲ್ಲಿಯೂ ಚುರುಕುತನ ಇರುವುದಿಲ್ಲ. ಆದ್ದರಿಂದ ಸುಪ್ರೀಂ ಕೋರ್ಟ್ ಪ್ರತಿ ಪಾಠಶಾಲೆಯಲ್ಲಿರುವ ಮಕ್ಕಳಿಗೆ ಸರಿಯಾದ ಪೌಷ್ಠಿಕ ಆಹಾರವನ್ನು ಒದಗಿಸಬೇಕೆಂದು ಹೇಳಿದೆ. ಆಗಿನಿಂದ ಮಧ್ಯಾಹ್ನದ ಊಟವನ್ನು ಎಲ್ಲಾ ಸರ್ಕಾರಿ ಪಾಠಶಾಲೆಗಳಲ್ಲಿರುವ ಮಕ್ಕಳಿಗೆ ನೀಡುತ್ತಿದ್ದಾರೆ.

**ಆಲೋಚಿಸಿರಿ...**

- ಮಧ್ಯಾಹ್ನದ ಊಟವನ್ನು ನಿಮಗೆ ಯಾರು ಬಡಿಸುವರು ?
- ನಿಮ್ಮ ಶಾಲೆಯಲ್ಲಿ ಎಲ್ಲರೂ ಮಧ್ಯಾಹ್ನ ಊಟವನ್ನು ತಿನ್ನುತ್ತಿದ್ದಾರೆಯೇ ? ಮನೆಯಿಂದ ತೆಗೆದುಕೊಂಡ ಊಟವನ್ನು ತಿನ್ನುತ್ತಿದ್ದಾರೆಯೇ ? ಏಕೆ ?
- ಈ ದಿನ ನಿಮ್ಮ ಶಾಲೆಯ ಮಧ್ಯಾಹ್ನದ ಊಟದಲ್ಲಿ ಏನೇನು ಇದ್ದವು ?
- ಶಾಲೆಯಲ್ಲಿ ನಿಮಗೆ ಸರಿಯಾಗುಷ್ಟು ಆಹಾರವನ್ನು ನೀಡುತ್ತಿದ್ದಾರೆ ?
- ನಿಮ್ಮ ಶಿಕ್ಷಕರು ನಿಮ್ಮೊಂದಿಗೆ ಬೆರೆತು ಊಟ ಮಾಡುತ್ತಿದ್ದಾರೆಯೇ ? ಇಲ್ಲವೇ ? ಏಕೆ ?
- ಕಾಯಿಪಲ್ಲೆಗಳನ್ನು ಎಲ್ಲರು ತಿನ್ನುತ್ತಿದಾರೆಯೇ ? ಹೊರಗಡೆ ಚೆಲ್ಲುತ್ತಿದ್ದಾರೆಯೇ ? ಏಕೆ ?
- ಮಧ್ಯಾಹ್ನದ ಊಟ ಹೇಗಿದ್ದರೆ ನಿಮಗೆ ಇಷ್ಟವಾಗುತ್ತದೆ ?

**ಸಂಗ್ರಹಿಸಿರಿ :**



ಕಳೆದ ವಾರ ಪಾಠಶಾಲೆಯ ಮಧ್ಯಾಹ್ನ ಊಟದಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಊಣಬಡಿಸಿರುವರೋ , ಹಾಗೆಯೇ ನೀವು ಯಾವ ಯಾವ ಪದಾರ್ಥಗಳು ಇದ್ದರೆ ಚೆನ್ನಾಗಿರುತ್ತದೆ ಅಂದುಕೊಳ್ಳುತ್ತಿರೋ ಈ ಪಟ್ಟಿಯಲ್ಲಿ ಬರೆಯಿರಿ.

SCERT TELANGANA

| ದಿನಗಳು | ಪಾಠಶಾಲೆಯ ಮಧ್ಯಾಹ್ನ ಊಟದಲ್ಲಿ ಊಣಬಡಿಸಿದ ಆಹಾರಗಳು | ನಿಮಗೆ ಇಷ್ಟವೇ / ಇಲ್ಲವೇ | ನಿಮಗೆ ಇಷ್ಟವಾದ ಆಹಾರ |
|---|---|---|---|
| ಸೋಮವಾರ | | | |
| ಮಂಗಳವಾರ | | | |
| ಬುಧವಾರ | | | |
| ಗುರುವಾರ | | | |
| ಶುಕ್ರವಾರ | | | |
| ಶನಿವಾರ | | | |

- ನಿಮಗೆ ಯಾವ ದಿನದ ಆಹಾರ ಇಷ್ಟವಾಗುವುದು ? ಏಕೆ ?
- ನಿಮಗೆ ಯಾವ ದಿನದ ಆಹಾರ ಇಷ್ಟವಾಗಿಲ್ಲ? ಏಕೆ ?
- ಎಲ್ಲರಿಗೂ ಮಧ್ಯಾಹ್ನದ ಊಟ ಇಷ್ಟವಾಗುತ್ತದೆಯೆ ?
- ನಿಮ್ಮ ಶಾಲೆಯಲ್ಲಿ ಮಧ್ಯಾಹ್ನದ ಊಟದ ನಂತರ ಉಳಿದ ಆಹಾರ ಪದಾರ್ಥಗಳನ್ನು ಏನು ಮಾಡುತ್ತಿರಿ ?

## 10.3. ಆರೋಗ್ಯ ಅಭ್ಯಾಸಗಳು :

ಆಹಾರವು ವ್ಯರ್ಥವಾಗುವುದರಿಂದ ನಷ್ಟ ಉಂಟಾಗುತ್ತದೆ. ಹಾಳಾಗಿರುವ ಆಹಾರವನ್ನು ತಿಂದರೆ ಏನಾಗುತ್ತದೆಯೋ ಹೇಳಿರಿ. ಆಹಾರವು ಏಕೆ ವ್ಯರ್ಥವಾಗುತ್ತದೆ ? ಹೇಗೆ ಅಪರಿಶುಭ್ರವಾಗುತ್ತದೆ. ಆಹಾರದಿಂದ ನಮಗೆ ಶಕ್ತಿ ಸಿಗುತ್ತದೆ. ಆರೋಗ್ಯವಾಗಿ ಇರುತ್ತೇವೆ. ಮತ್ತು ಇಂತಹ ಆಹಾರದ ಬಗ್ಗೆ ಕಡೆಗಣಿಸಿದರೆ ಏನಾಗುತ್ತದೆ. ಗೊತ್ತೆ? ಕೆಳಗಿನ ಚಿತ್ರವನ್ನು ನೋಡಿರಿ.



SCERT TELANGANA

**ಆಲೋಚಿಸಿರಿ...**

- ಆಹಾರ ಪದಾರ್ಥಗಳ ಮೇಲೆ ನೊಣಗಳು ಬಿದ್ದಿರುವುದನ್ನು ನೀವು ಯಾವಾಗಾದರೂ ನೋಡಿದ್ದೀರಾ? ನೊಣಗಳ ಜೊತೆ ಕ್ರಿಮಿ ಕೀಟಗಳು ಸಹ ಬಿದ್ದಿವೆಯೇ ? ಇದ್ದರೇ ಅವು ಯಾವುವು ?
- ರಸ್ತೆ ಪಕ್ಕದಲ್ಲಿ ಯಾವ ಯಾವ ಆಹಾರ ಪದಾರ್ಥಗಳನ್ನು ಮಾರುತ್ತಾರೆ ? ಆ ಆಹಾರ ಪದಾರ್ಥಗಳ ಮೇಲೆ ಮುಚ್ಚದಿದ್ದರೇ ಏನಾಗುತ್ತದೆ ?

ರಸ್ತೆಯ ಪಕ್ಕದಲ್ಲಿ ಮಾರುವ ಆಹಾರ ಪದಾರ್ಥಗಳ ಮೇಲೆ ಮುಚ್ಚಳ ಮುಚ್ಚದಿದ್ದರೆ ಅವುಗಳ ಮೇಲೆ ಧೂಳು ಸೇರಿಕೊಳ್ಳುತ್ತವೆ. ನೊಣಗಳು ಇತರ ಕೀಟಗಳು ಸೇರಿಕೊಳ್ಳುತ್ತವೆ. ಅಪರಿಶುಭ್ರವಾದ ಸ್ಥಳಗಳಲ್ಲಿ ತಿರುಗುವ ಇವುಗಳ ಕಾಲುಗಳಿಗೆ, ಶರೀರಕ್ಕೆ, ಕಣ್ಣಿಗೆ ಕಾಣದ ಸೂಕ್ಷ್ಮ ಜೀವಿಗಳು, ಧೂಳಿನ ಕಣಗಳು ಅಂಟಿಕೊಂಡಿರುತ್ತದೆ. ಇವು ನಾವು ತಿನ್ನುವ ಪದಾರ್ಥಗಳ ಮೇಲೆ ಕುಳಿತು ಕಲುಷಿತವನ್ನುಂಟು ಮಾಡುತ್ತವೆ. ಇವು ಆರೋಗ್ಯಕ್ಕೆ ಹಾನಿಯುನ್ನುಂಟು ಮಾಡುತ್ತವೆ. ಕೆಲವು ಹೋಟಲ್‌ಗಳಲ್ಲಿ, ರಸ್ತೆಯ ಪಕ್ಕದಲ್ಲಿ ತಿನ್ನುವ ಆಹಾರ ಪದಾರ್ಥಗಳನ್ನು ತಯಾರಿಸುವರು. ಉಪಯೋಗಿಸಿದ ಎಣ್ಣೆಯನ್ನು ಪುನಃ ಪುನಃ ಬಳಸುತ್ತಾರೆ, ಈ ರೀತಿಯಾಗಿ ಬಳಸಿದ ಎಣ್ಣೆಯನ್ನು ಮತ್ತೆ ಕಾಯಿಸಿ ಬಳಸುವುದು ಆರೋಗ್ಯಕ್ಕೆ ಹಾನಿಕರ. ಅಂತಹ ಪದಾರ್ಥಗಳನ್ನು ತಿನ್ನಬಾರದು. ಬಿಸಿ ಬಿಸಿ ಪದಾರ್ಥಗಳನ್ನು ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು, ಆದಷ್ಟುಮಟ್ಟಿಗೆ ಮನೆಯಲ್ಲಿಯೇ ತಯಾರಿಸಿದ ಆಹಾರವನ್ನು ತಿನ್ನಬೇಕು.

ಪರಿಶುಭ್ರವಾದ ಆಹಾರವನ್ನು ತಿನ್ನಬೇಕು. ಆಹಾರವು ಪರಿಶುಭ್ರವಾಗಿದ್ದರೂ ಸಹ ಅಪರಿಶುಭ್ರವಾದ ಕೈಗಳಿಂದ ಆಹಾರವನ್ನು ಸೇವಿಸಿದರೆ ಅನಾರೋಗ್ಯಕ್ಕೆ ಗುರಿಯಾಗುತ್ತೇವೆ. ಒಳ್ಳೆಯ ಆಹಾರದ ಅಭ್ಯಾಸಗಳನ್ನು ಹೊಂದಿರುವುದು ಅವಶ್ಯಕ. ಆದರೆ ನಿಮಗೆ ಯಾವ ಯಾವ ಆಹಾರದ ಅಭ್ಯಾಸಗಳನ್ನು ಹೊಂದಿದ್ದೀರಿ. ಈ ಕೆಳಗಿನವುಗಳನ್ನು ಓದಿರಿ, ನೀವು ಪಾಲಿಸಿದರೆ "✓" ಇಡಿರಿ.

**ನೀವು ಇವುಗಳನ್ನು ಪಾಲಿಸುತ್ತೀರಾ ?**

- ತಾಜಾ ಆಹಾರ ಪದಾರ್ಥಗಳನ್ನು ಭುಜಿಸುತ್ತೀರೇ ?
- ಆಹಾರವನ್ನು ತಿನ್ನುವ ಮುಂಚೆ ಕೈಗಳನ್ನು ಸೋಪಿನಿಂದ ಶುಭ್ರವಾಗಿ ತೊಳೆದುಕೊಳ್ಳುವಿರೇ ?
- ನೀವು ತಿನ್ನುವ ಪ್ಲೇಟುಗಳನ್ನು ಶುಭ್ರವಾಗಿ ತೊಳೆದುಕೊಳ್ಳುವಿರೇ ?
- ಬೇಯಿಸಿದ ಆಹಾರ ಪದಾರ್ಥಗಳ ಮೇಲೆ ಮುಚ್ಚಳಗಳನ್ನು ಮುಚ್ಚಿದ್ದೀರಾ ?
- ಹೊರಗಡೆ ಮಾರುವ ಇಲ್ಲವೇ ಸಿಗುವ ಆಹಾರ ಪದಾರ್ಥಗಳಲ್ಲದೇ ಮನೆಯಲ್ಲಿ ಮಾಡಿದ ಆಹಾರ ದ ಪದಾರ್ಥಗಳನ್ನು ತಿನ್ನುತೀರಾ ?
- ಆಗತಾನೇ ತಯಾರಿಸಿದ ಕಡಿಮೆ ಬೆಲೆಯಲ್ಲಿ ಸ್ಥಳೀಯವಾಗಿ ಸಿಗುವ ತರಕಾರಿಗಳು, ಹಣ್ಣು ಗಳನ್ನು ತೆಗೆದುಕೊಳ್ಳುತೀರಾ?
- ವ್ಯರ್ಥ ಪದಾರ್ಥಗಳನ್ನು ಎಲ್ಲಿ ಅಂದರೆ ಅಲ್ಲಿ ಬಿಸಾಡದೇ ಅವುಗಳಿಗೊಸ್ಕರವಾಗಿ ಇಟ್ಟ ಕಸದ ತೊಟ್ಟಿಗಳಲ್ಲಿ ಹಾಕುತ್ತಾರೆಯೇ ?
- ಮಲಮೂತ್ರ ವಿಸರ್ಜನೆ ಮಾಡಿದ ನಂತರ ಕೈಗಳನ್ನು ಸಬ್ಬುಗಳಿಂದ ಶುಭ್ರವಾಗಿ ತೊಳೆದುಕೊಳ್ಳುತ್ತಿರಾ ?
- ಬೆಳಿಗ್ಗೆ ರಾತ್ರಿ ಹಲ್ಲುಗಳನ್ನು ಉಜ್ಜುವಿರಾ? ಆ ನಂತರ ವಸಡುಗಳನ್ನು ಕೈಗಳಿಂದ ತಿಕ್ಕುತ್ತಿರಾ ?
- ಆಹಾರವನ್ನು ತೆಗೆದುಕೊಳ್ಳುವ ಮುನ್ನ ತಿಂದ ಮೇಲೆ ನೀರಿನಿಂದ ಪುಕ್ಕಳಿಸುವಿರಾ ? ಬಾಯಿಯನ್ನು ಶುಭ್ರವಾಗಿ ತೊಳೆದುಕೊಳ್ಳುವಿರಾ ?



SCERT TELANGANA

ಮೇಲೆ ತಿಳಿಸಿದ ವಿಧವಾಗಿ ಒಳ್ಳೆಯ ಆಹಾರದ ಅಭ್ಯಾಸಗಳನ್ನು ಹೊಂದಿರುವುದು ಅವಶ್ಯಕ. ಒಂದು ವೇಳೆ ನೀವು ಮೇಲಿನವುಗಳನ್ನು ಪಾಲಿಸದೇ ಇದ್ದರೇ ತಪ್ಪದೇ ಈ ದಿನದಿಂದ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಆಹಾರದ ಬಗ್ಗೆ ತಿಳಿದುಕೊಂಡಿದ್ದೀರಿ ಅಲ್ಲವೇ ! ಮತ್ತೆ ನಾವು ತಿನ್ನುವ ಆಹಾರವು ಹೇಗೆ ಲಭಿಸುವುದು ಎಂದು ನಿಮಗೆ ಗೊತ್ತೇ ?

**ಹೀಗೆ ಮಾಡಿರಿ :**

- ಒಂದು ರೊಟ್ಟಿಯನ್ನು ಅಥವಾ ಬ್ರೆಡ್ ತುಂಡುಗಳನ್ನು ತೆಗೆದುಕೊಂಡು ಅದರ ಮೇಲೆ ನೀರು ಚೆಲ್ಲಿ ಮೂರು ನಾಲ್ಕು ದಿನಗಳವರೆಗೆ ಮುಚ್ಚಿಡಬೇಕು. ನಂತರ ಉಂಟಾಗುವ ಬದಲಾವಣೆಗಳನ್ನು ಪರಿಶೀಲಿಸಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ರೊಟ್ಟಿ / ಬ್ರೆಡ್ ಮೇಲೆ ಏನಾದರೂ ಮಚ್ಚೆಗಳು ಇವೆಯೇ ? ಇದ್ದರೆ ಅವು ಯಾವ ಬಣ್ಣದಲ್ಲಿವೆ?
- ರೊಟ್ಟಿಯ ವಾಸನೆಯಲ್ಲಿ ಯಾವ ಬದಲಾವಣೆಗಳು ಬಂದಿವೆ ? ಇವುಗಳನ್ನು ತಿನ್ನಬಹುದೇ?
- ಇಂತಹ ರೊಟ್ಟಿಗಳನ್ನು ತಿನ್ನುವುದು ಒಳ್ಳೆಯದಲ್ಲ. ಏಕೆ ?
- ಉಪ್ಪಿನಕಾಯಿಗಳು, ಕೊಳೆಯುತ್ತಿರುವ ತರಕಾರಿಗಳು ಹಸಿ ಕೊಬ್ಬರಿಗಳ ಮೇಲಾಗಲಿ ಬೂಜು ಬರುವುದನ್ನು ನೋಡಿದ್ದೀರಿ ? ಆ ರೀತಿ ಬೂಜು ಏಕೆ ಬರುತ್ತದೆ ? ಆಲೋಚಿಸಿರಿ.

**ಹೀಗೆ ಮಾಡಿರಿ :**

- ಬೇಯಿಸುವ ಆಹಾರ ಪದಾರ್ಥಗಳು ಮತ್ತು ಬೇಯಿಸದ ಹಸಿ ಪದಾರ್ಥಗಳು ಕೆಲವನ್ನು ಪಾತ್ರೆಯಲ್ಲಿ ಇಟ್ಟು, ಎರಡು ದಿನಗಳ ನಂತರ ಅದರ ಬಣ್ಣ, ವಾಸನೆಯಲ್ಲಿ ಯಾವ ಬದಲಾವಣೆಗಳು ಕಂಡು ಬಂದಿವೆ ಗಮನಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಅನ್ನದಲ್ಲಿ ಯಾವ ಬದಲಾವಣೆಗಳು ಬಂದಿವೆ ?
- ಪಲ್ಯೆ, ತರಕಾರಿಗಳು, ಸಾಂಬಾರಿನಲ್ಲಿ ಯಾವ ಬದಲಾವಣೆಗಳು ಬಂದಿವೆ ?
- ಸಂಗ್ರಹಿಸಿಟ್ಟ ಆಹಾರ ಪದಾರ್ಥಗಳಲ್ಲಿ ಈ ಬದಲಾವಣೆಗಳು ಯಾವುದರಿಂದ ಬಂದಿವೆ ?
- ಹಾಲಿನಲ್ಲಿ, ಮೊಸರಿನಲ್ಲಿ, ಯಾವ ಬದಲಾವಣೆಗಳು ಬಂದಿವೆ ?
- ಬೇಯಿಸಿದ ತರಕಾರಿಗಳು, ಹಣ್ಣುಗಳಲ್ಲಿ ಯಾವ ಬದಲಾವಣೆಗಳು ಬಂದಿವೆ ?
- ಬೇಯಿಸಿದ ಇಲ್ಲವೇ ಬೇಯಿಸದ ಆಹಾರ ಪದಾರ್ಥಗಳಲ್ಲಿ ಯಾವುದು ಬೇಗನೆ ಬಾಡಿಹೋಗುತ್ತವೆ ? ಏಕೆ ಆಲೋಚಿಸಿರಿ.



SCERT TELANGANA

ಆಹಾರ ಪದಾರ್ಥಗಳ ಮೇಲೆ ಅನೇಕ ರೀತಿಯ ಸೂಕ್ಷ್ಮಜೀವಿಗಳು ಬೆಳೆದು ಅವುಗಳನ್ನು ಹಾಳು ಮಾಡುತ್ತವೆ. ನಾಶಪಡಿಸುವ ಸೂಕ್ಷ್ಮಜೀವಿಗಳು ಆಹಾರ ಪದಾರ್ಥಗಳಲ್ಲಿ ವಿಷಪೂರಿತವನ್ನುಂಟು ಮಾಡುತ್ತವೆ. ಅಂತವುಗಳನ್ನು ನಾವು ಆಹಾರವಾಗಿ ತೆಗೆದುಕೊಂಡರೇ ಅನಾರೋಗ್ಯಕ್ಕೆ ಗುರಿಯಾಗಿತ್ತೇವೆ. ಹಾನಿಕಾರಕ ಸೂಕ್ಷ್ಮಜೀವಿಗಳು ಸೇರದಂತೆ, ಧೂಳಿನಂತಹ ಪದಾರ್ಥಗಳು ಬೀಳದಂತೆ ತಕ್ಕ ಜಾಗ್ರತೆಗಳನ್ನು ತೆಗೆದುಕೊಂಡರೆ ಆಹಾರ ಪದಾರ್ಥಗಳು ಶುಭ್ರವಾಗಿ ಇರುತ್ತವೆ. ಆದ್ದರಿಂದ ಯಾವಾಗಿನ ಪದಾರ್ಥಗಳನ್ನು ಆಗಲೇ ಅಂದರೆ ತಾಜತನದಲ್ಲಿರುವಾಗಲೇ ತಿನ್ನಬೇಕು. ಅವಶ್ಯಕತೆಗೆ ತಕ್ಕಂತೆ ಬಳಕೆ ಮಾಡುವುದು ಅಥವಾ ಕೊಳ್ಳುವುದು ಒಳಿತು ಅಲ್ಲವೇ.

## 10.4. ಆಹಾರ ಪದಾರ್ಥಗಳ ಸಂಗ್ರಹಣೆ :

ಕೆಲವು ಆಹಾರ ಪದಾರ್ಥಗಳು ನಮಗೆ ವರ್ಷಾಂತ್ಯದವರೆಗೆ ಸಿಗುತ್ತವೆಯೇ ? ಹೀಗೆ ವರ್ಷಾಂತ್ಯದವರೆಗೆ ಸಿಗುವವು ಯಾವುವು ? ಇವು ವರ್ಷಾಂತ್ಯದವರೆಗೆ ಹಾಳಾಗದಂತೆ ಹೇಗೆ ಸಂಗ್ರಹಣೆ ಮಾಡಬೇಕು ?

ಹುಣಿಸೆಚಟ್ನಿ / ಉಪ್ಪಿನಕಾಯಿ, ಜಾಮ್, ಸಂಡಿಗೆ ಮೊದಲಾದವುಗಳು ಬಹಳ ದಿನಗಳವರೆಗೆ ಸಂಗ್ರಹಣೆ ಮಾಡುವರು. ತರಕಾರಿಗಳು, ಮಾಂಸ, ಮೀನಿನ ತುಂಡುಗಳಿಗೆ ಬೇಕಾಗುವಷ್ಟು ಉಪ್ಪು ಬೆರೆಸಿ ಬಿಸಿಲಿನಲ್ಲಿ ಒಣಗಿಸಿ ಸಂಗ್ರಹಣೆ ಮಾಡುತ್ತಾರೆ. ಅವಸರವಿದ್ದಾಗ ಅವುಗಳನ್ನು ಬಳಸುತ್ತಾರೆ. ಇವುಗಳನ್ನೇ 'ಒಣಆಹಾರ' ಎನ್ನುವರು.

## 10.5. ಜನತಾ ಫ್ರಿಜ್‌ನ್ನು ತಯಾರು ಮಾಡೋಣ :

ಮಣ್ಣು ಇಲ್ಲವೇ ಸಿಮೆಂಟ್‌ನಿಂದ ಮಾಡಿದ ಎರಡು ತೊಟ್ಟಿಗಳು ತೆಗೆದುಕೊಳ್ಳಬೇಕು. ಒಂದರಲ್ಲೊಂದು ಹಿಡಿಯುವಂತೆ ಅವುಗಳ ಮಧ್ಯ ಮೂರು ನಾಲ್ಕು ಸೆಂಟಿ.ಮೀಟರ್‌ಗಳು ಖಾಲಿ ಇರುವಂತೆ ನೋಡಿಕೊಳ್ಳಬೇಕು. ದೊಡ್ಡದಾಗಿರುವ ತೊಟ್ಟಿಯಲ್ಲಿ ಎರಡು ಮೂರು ಸೆಂಟಿಮೀಟರ್ ಎತ್ತರದವರೆಗೆ ಮರಳನ್ನು ಹಾಕಬೇಕು. ಅದರಲ್ಲಿ ಚಿಕ್ಕ ತೊಟ್ಟಿಯನ್ನಿಡಬೇಕು. ಎರಡು ತೊಟ್ಟಿಗಳ ಮಧ್ಯ ಖಾಲಿ ಸ್ಥಳದಲ್ಲಿ ಸಹ ಮರಳನ್ನು ತುಂಬಬೇಕು. ಮರುಳನ್ನು ನೀರಿನಿಂದ ನೆನಸಬೇಕು. ಒಳಗಡೆ ಗುಂಡಿಯಲ್ಲಿ ಕಾಯಿಗಡ್ಡೆಗಳಾಗಲಿ, ಹಣ್ಣುಗಳಾಗಲಿ ಇಡಬೇಕು.

### ಸಂಗ್ರಹಿಸಿರಿ :



- ಹಪ್ಪಳಗಳು, ಸಂಡಿಗೆಗಳು ವರ್ಷ್ಯಾಂತದವರೆಗೆ ಸಂಗ್ರಹಣೆ ಮಾಡಬಹುದು, ಇವುಗಳನ್ನು ಹೇಗೆ ತಯಾರಿಸುತ್ತಾರೆ ?
- ನಿಮ್ಮ ಮನೆಯಲ್ಲಿ ಚಟ್ನಿಗಳನ್ನು ಹೇಗೆ ತಯಾರು ಮಾಡುತ್ತಾರೆ ?
- ನಿಮ್ಮ ಮನೆಯಲ್ಲಿ ಸಂಗ್ರಹಣೆ ಮಾಡಿ, ಬಳಸುವ ಆಹಾರ ಪದಾರ್ಥಗಳ ಪಟ್ಟಿಯನ್ನು ಬರೆಯಿರಿ.
- ತರಕಾರಿಗಳು, ಹಣ್ಣುಗಳು, ಮೊದಲಾದವುಗಳನ್ನು ಎರಡು, ಮೂರು ದಿನಗಳವರೆಗೆ ತಾಜಾವಾಗಿಡುವುದಕ್ಕೆ ಏನು ಮಾಡುತ್ತಾರೋ ನಿಮ್ಮ ತಂದೆ ತಾಯಿಯರನ್ನು ಕೇಳಿ ತಿಳಿದುಕೊಳ್ಳಿ.

### ಹೀಗೆ ಮಾಡಿರಿ :

- ತರಕಾರಿಗಳು, ಕಾಯಿಗಡ್ಡೆಗಳು, ಹಣ್ಣುಗಳನ್ನು ತಣ್ಣನೇ ಬಟ್ಟೆಯಲ್ಲಿ ಸುತ್ತಿ, ದಿನಕ್ಕೆ ನಾಲ್ಕೈದು ಸಾರಿ ಅದರ ಮೇಲೆ ನೀರು ಸಿಂಪಡಿಸಬೇಕು. ಹಾಗೆ ಅವುಗಳನ್ನು ಎಷ್ಟು ದಿನಗಳವರೆಗೂ ತಾಜಾವಾಗಿಡಬಹುದು ಪರಿಶೀಲಿಸಿರಿ.

SCERT TELANGANA

ಅವುಗಳ ಮೇಲೆ ನೀರಿನಿಂದ ನೆನಸಿದ ಗೋಣಿಚೀಲವಾಗಲಿ, ದಪ್ಪವಾಗಿರುವ ಬಟ್ಟೆಯನ್ನು ಹೊದಿಸಬೇಕು. ಅದರ ಮೇಲೆ ನೀರನ್ನು ಚಿಮ್ಮಿಸಬೇಕು. ಬಟ್ಟೆಯು ಆರಿಹೋಗದಂತೆ ದಿನದಲ್ಲಿ ಮೂರು ನಾಲ್ಕು ಸಾರಿ ನೀರನ್ನು ಸಿಂಪಡಿಸುತ್ತಾ ಇರಬೇಕು. ಇದನ್ನೇ ಜನತಾ ಫ್ರಿಜ್ ಎನ್ನುವರು. ಅಂದರೆ ಬಡವರ ಫ್ರಿಜ್ ಎಂದರ್ಥ.



ಜನತಾ ಫ್ರೀಜ್



ಎಲೆಕ್ಟ್ರೀಕಲ್ ಫ್ರಿಜ್

ಮೇಲಿನ ಚಿತ್ರಗಳನ್ನು ಪರಿಶೀಲಿಸಿರಿ.

**ಗುಂಪಿನಲ್ಲಿ ಚರ್ಚಿಸಿರಿ :**



- ಜನತಾ ಫ್ರಿಜ್‌ನಲ್ಲಿ ತರಕಾರಿಗಳು ಏಕೆ ತಾಜತನದಿಂದ ಕೂಡಿರುತ್ತವೆ ?
- ಜನತಾ ಫ್ರಿಜ್‌ನಲ್ಲಿ ತರಕಾರಿಗಳಲ್ಲದೇ ಇನ್ನೂ ಯಾವುವುಗಳನ್ನು ಸಂಗ್ರಹಣೆ ಮಾಡಬಹುದು?
- ಮಣ್ಣು ತೊಟ್ಟಿಗಳ ಫ್ರಿಜ್, ಎಲೆಕ್ಟ್ರಾನಿಕ್ ಫ್ರಿಜ್‌ಗಳಲ್ಲಿ ಯಾವುದು ಸಹಜವಾದುದು ?
- ಮನೆಯಲ್ಲಿ ಎಲೆಕ್ಟ್ರೀಕಲ್ ಫ್ರಿಜ್ ಬಳಸುವುದರಿಂದ ಯಾವ ಸಮಸ್ಯೆಗಳು ಬರುತ್ತವೆ ?
- ಈ ಎರಡರಲ್ಲಿ ಯಾವುದು ಕಡಿಮೆ ಖರ್ಚಿನಿಂದ ಕೂಡಿದೆ ?
- ಈ ಎರಡರಲ್ಲಿ ಯಾವುದು ಹೆಚ್ಚಿನ ಮಂದಿಗೆ ಲಭಿಸುವಂತದ್ದು ?

ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದಕ್ಕೆ ವಿವಿಧ ವಿಧಾನಗಳನ್ನು ಅವಲಂಬಿಸುತ್ತಾರೆ. ಸಾಧಾರಣವಾಗಿ ಆಹಾರ ಪದಾರ್ಥಗಳನ್ನು ತಂಪಾದ ಪ್ರದೇಶಗಳಲ್ಲಿ ಅಥವಾ ರಿಫ್ರಿಜಿರೇಟರ್‌ಗಳಲ್ಲಿ ಭದ್ರಪಡಿಸುತ್ತಾರೆ. ಇದು ತುಂಬ ಖರ್ಚಿನಿಂದ ಕೂಡಿದ ಕೆಲಸ. ಇದರಿಂದ ವಿದ್ಯುತ್ ಖರ್ಚಾಗುತ್ತದೆ. ರಿಫ್ರಿಜಿರೇಟರ್‌ಗಳನ್ನು ಉಪಯೋಗಿಸುವಾಗ, ವಿದ್ಯುತ್ ಉಳಿತಾಯವಾಗುವಂತೆ ಜಾಗ್ರತೆಗಳನ್ನು ತೆಗೆದುಕೊಳ್ಳಬೇಕು. ಫ್ರಿಜ್ ಬಾಗಿಲನ್ನು ಚಿತ್ರದಲ್ಲಿ ತೋರಿಸಿರುವಂತೆ ತೆರೆದಿಡಬಾರದು. ಬೇಗನೆ ಮುಚ್ಚಬೇಕು. ಫ್ರಿಜ್‌ನ್ನು ಖರೀದಿಸುವಾಗ ಅದರ ಮೇಲೆ 5 ನಕ್ಷತ್ರಗಳ ಗುರ್ತು ಇರುವುದನ್ನು ಖರೀದಿ ಮಾಡಬೇಕು. ಈ ಗುರ್ತು ಇರುವ ಫ್ರಿಜ್‌ಗಳು ಕಡಿಮೆ ವಿದ್ಯುತ್‌ನ್ನು ವಿನಿಯೋಗಿಸಿಕೊಳ್ಳುತ್ತವೆ.

SCERT TELANGANA

## 10.6. ಆಹಾರ ವ್ಯರ್ಥಮಾಡುವುದು :

ಚಿತ್ರವನ್ನು ನೋಡಿದ್ದೀರಲ್ಲವೇ! ಪ್ಲೇಟ್‌ಗಳಲ್ಲಿ ಆಹಾರ ಪದಾರ್ಥಗಳನ್ನು ವ್ಯರ್ಥವಾಗಿ ಬಿಸಾಡಿದ್ದಾರೆ. ಈ ರೀತಿಯಾಗಿ ಅನೇಕ ಕಾರ್ಯಕ್ರಮಗಳಲ್ಲಿ, ಔತಣಕೂಟದಲ್ಲಿ ಹೀಗೆ ಬಿಸಾಡುವುದು ನಾವು ನೋಡಿರುತ್ತೇವೆ. ಈ ಕೆಳಗಿನ ಪ್ರಶ್ನೆಗಳನ್ನು ಓದಿರಿ, ನಿಮ್ಮ ಸ್ನೇಹಿತರೊಂದಿಗೆ ಚರ್ಚಿಸಿರಿ.



**ಗುಂಪಿನಲ್ಲಿ ಚರ್ಚಿಸಿರಿ :**



- ಔತಣಕೂಟದಲ್ಲಿ ತಯಾರಿಸುವ ಪ್ರತ್ಯೇಕ ಅಡುಗೆಗಳು ಯಾವುವು ಇರುತ್ತವೆಯೋ ಬರೆಯಿರಿ.
- ಔತಣಕೂಟದಲ್ಲಿ ಯಾರಾದರೂ ನೀವು ಆಹಾರವನ್ನು ಬೀಸಾಡುತ್ತೀರೇ ? ಏಕೆ ಹಾಗೆ ಬೀಸಾಡುತ್ತೀರಿ ? ಅದರಿಂದಾಗುವ ನಷ್ಟಗಳೇನು ?
- ಔತಣಕೂಟದಲ್ಲಿ, ಶುಭ ಸಮಾರಂಭಗಳಲ್ಲಿ ಯಾವ ಪ್ಲಾಸ್ಟಿಕ್ ಸಾಮಾಗ್ರಿಗಳನ್ನು ಉಪಯೋಗಿಸುತ್ತಾರೆ ?
- ಆಹಾರವನ್ನು ವ್ಯರ್ಥಮಾಡದಂತೆ ಇರಬೇಕಾದರೆ ಏನು ಮಾಡಬೇಕು ?
- ಒಂದು ಕಾಲದಲ್ಲಿ ಸಮಾರಂಭಗಳಲ್ಲಿ ಎಲೆಗಳಿಂದ ಮಾಡಿದ ಪತ್ರಾವಳಿಗಳನ್ನು ಬಳಸುತ್ತಿದ್ದರು. ಈಗ ಅವುಗಳನ್ನು ಬಳಸುವುದು ಕಡಿಮೆಯಾಗಿದೆ ಏಕೆ ?
- ಆಹಾರವನ್ನು ಬೀಸಾಡುವುದು, ಪ್ಲಾಸ್ಟಿಕ್ ಗ್ಲಾಸುಲು, ಪ್ಲಾಸ್ಟಿಕ್ ಪತ್ರಾವಳಿಗಳನ್ನು ಬಳಸುವುದರಿಂದಾಗುವ ನಷ್ಟಗಳಾವುವು ?

ಮದುವೆಗಳಲ್ಲಾಗಲಿ, ಸಮಾರಂಭಗಳಾಗಲಿ, ಅಥವಾ ಇತರೆ ಕಾರ್ಯಕ್ರಮಗಳಲ್ಲಿ ಸಾಮೂಹಿಕ ಭೋಜನಗಳು ಸರ್ವಸಾಧಾರಣ. ಈ ಸಂದರ್ಭಗಳಲ್ಲಿ ಹೊಸ ಪರಿಚಯಗಳಾಗುತ್ತವೆ. ದಿನವು ಕಾಣದ ಎಷ್ಟೋ ಜನ ಆ ಸಮಾರಂಭಗಳಲ್ಲಿ ಸೇರಿರುತ್ತಾರೆ. ಅನೇಕ ವಿಷಯಗಳನ್ನು ಮಾತನಾಡಿಕೊಳ್ಳುತ್ತಾರೆ. ಕ್ಷೇಮಾ ಸಮಾಚಾರಗಳನ್ನು ಹೇಳಿಕೊಳ್ಳುತ್ತಾರೆ. ಒಬ್ಬರಿಗೊಬ್ಬರ ಮಧ್ಯ ಸಂಬಂಧಗಳು ಇನ್ನಷ್ಟು ದೃಡವಾಗುವುದಕ್ಕೆ ಅವಕಾಶಗಳಿರುತ್ತವೆ.

ಮದುವೆಗಳಾಗಲಿ, ಇತರೆ ಪಂಕ್ತಿ ಭೋಜನಗಳಾಗಲಿ ಪ್ರತ್ಯೇಕವಾದ ಅಡುಗೆಗಳು ಇರುತ್ತವೆ. ಕೆಲವರು ಅವಶ್ಯಕತೆಗೆ ಮೀರಿ ಆಹಾರ ಪದಾರ್ಥಗಳನ್ನು ತಯಾರು ಮಾಡಿರುತ್ತಾರೆ. ಕೆಲವರು ಒಂದೇ ಸಾರಿ ಎಲ್ಲಾ ರೀತಿಯ ಪದಾರ್ಥಗಳನ್ನು ತಯಾರು ಮಾಡಿರುತ್ತಾರೆ. ಸರಿಯಾಗಿ ಬಳಸದೇ ಅವುಗಳನ್ನು ವ್ಯರ್ಥ ಮಾಡುತ್ತಾರೆ. ನಮ್ಮ ಮನೆಯಲ್ಲದೇ ಇಂತಹ ಸಂದರ್ಭಗಳಲ್ಲಿ ಹೆಚ್ಚಾಗಿ ಆಹಾರ ಪದಾರ್ಥಗಳು ನೀರು ಕೂಡ ಹಾಗೇ ವ್ಯರ್ಥವಾಗುತ್ತಿರುತ್ತವೆ. ಪಿಕ್ನಿಕ್‌ನಲ್ಲಿ, ಫಂಕ್ಷನ್‌ಗಳಲ್ಲಿ ಪ್ಲಾಸ್ಟಿಕ್ ಪ್ಲೇಟ್, ಗ್ಲಾಸುಗಳು ಬಳಸುತ್ತಿರುತ್ತಾರೆ. ಇವುಗಳನ್ನು ಬಳಸುವುದರಿಂದ ಕಡಿಮೆ ಪರಿಮಾಣದಲ್ಲಿ, ಸ್ವಲ್ಪ ಪ್ಲಾಸ್ಟಿಕ್ ನಮ್ಮ ಶರೀರದೊಳಗೆ ಸೇರುತ್ತದೆ. ಇದು ಆರೋಗ್ಯಕ್ಕೆ ಹಾನಿಕರ. ಪ್ಲಾಸ್ಟಿಕ್ ಭೂಮಿಯಲ್ಲಿ ವೀಲಿನವಾಗುವುದಕ್ಕೆ ಕೆಲವು ಲಕ್ಷ ವರ್ಷಗಳುಬೇಕು.

**ಆಲೋಚಿಸಿರಿ...**

- **ಪ್ಲಾಸ್ಟಿಕ್ ಪ್ಲೇಟ್, ಗ್ಲಾಸುಗಳ ಬದಲಾಗಿ ಯಾವುದನ್ನು ಬಳಸಿದರೆ ಚೆನ್ನಾಗಿರುತ್ತದೆ ?**
- **ಪಂಕ್ತಿ ಭೋಜನ ಇಲ್ಲವೇ ಸಾಮೂಹಿಕ ಭೋಜನದ ಸಮಯದಲ್ಲಿ ಆಹಾರ ಪದಾರ್ಥಗಳನ್ನು, ನೀರನ್ನು ವ್ಯರ್ಥ ಮಾಡದ ಹಾಗೆ ಏನೇನು ಮಾಡಬೇಕು ?**



ಭೂ ಕಾಲುಷ್ಯವನ್ನು ಹೆಚ್ಚಿಸುತ್ತದೆ. ಭೂಮಿಯಲ್ಲಿ ಸಾರ ಹೆಚ್ಚಿಸುವ ಜೀವಿಗಳಿಗೆ ಇವು ಅಡ್ಡಿಯಾಗುತ್ತವೆ. ಪ್ಲೇಟಗಳನ್ನು ಗ್ಲಾಸುಗಳನ್ನು ಸುಟ್ಟಾಗ ಅವುಗಳಿಂದ ಹೊರಬರುವ ರಸಾಯನಗಳು ವಾತಾವರಣಕ್ಕೆ ಕಾಲುಷ್ಯವನ್ನು ಹೆಚ್ಚಿಸುತ್ತವೆ.

ಮುತ್ತುಗದ ಎಲೆಗಳಿಂದ ಪತ್ರಾವಳಿಯನ್ನು ತಯಾರು ಮಾಡಿರುವರು. ಈ ಎಲೆಗಳು ಬಹುಬೇಗ ಮಣ್ಣಿನೊಂದಿಗೆ ಬೆರೆತು ಹೋಗುತ್ತದೆ. ಇದು ಪರಿಸರವನ್ನು ಕಾಪಾಡುತ್ತದೆ.



SCERT TELANGANA

**ಆಲೋಚಿಸಿರಿ...**

- ನೀವು ಯಾವಗಾಲಾದರೂ ಊಟದ ಎಲೆಗಳನ್ನು ನೋಡಿದ್ದೀರಾ ಈ ಎಲ್ಲಿ ನೋಡಿದ್ದೀರಿ ?
- ಅವು ಯಾವ ಪದಾರ್ಥಗಳಿಂದ' ತಯಾರಾಗುತ್ತವೆ ?

ಆದರೆ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟ ಪ್ಲೇಟ್‌ಗಳು, ಲೋಟಗಳಲ್ಲಿ ಆಹಾರ ಸೇವಿಸುವುದು ಆರೋಗ್ಯಕ್ಕೆ ಹಾನಿಕರ ಮಾತ್ರವಲ್ಲದೇ ಭೂಕಾಲುಷ್ಯವನ್ನುಂಟುಮಾಡುತ್ತದೆ. ಭೂಮಿಯನ್ನು ಸಾರವಂತವಾಗಿ ಮಾಡುವ ಸೂಕ್ಷ್ಮಜೀವಿಗಳಿಗೆ ಇವು ಅಡ್ಡಿಯುಂಟು ಮಾಡುತ್ತದೆ. ಪ್ಲೇಟ್‌ಗಳು, ಗ್ಲಾಸುಗಳನ್ನು ಸುಡುವುದರಿಂದ ಹೊರಬರುವ ರಸಾಯನಗಳು ಪರಿಸರ ಮಾಲಿನವನ್ನುಂಟು ಮಾಡುತ್ತವೆ.

## 10.7 ಮನೆಯಲ್ಲಿ ಆಹಾರ ಪದಾರ್ಥಗಳ ವ್ಯರ್ಥ ಬಳಕೆ :

ಔತಣ ಕೂಟದಲ್ಲಿ, ಮಧ್ಯಾಹ್ನದ ಊಟದಲ್ಲಿ ಆಹಾರವು ಹೇಗೆ ವ್ಯರ್ಥವಾಗುತ್ತೆಂಬುದನ್ನು ತಿಳಿದುಕೊಂಡಿರೀಲ್ಲವೆ ? ಮತ್ತೆ ಮನೆಯಲ್ಲಿಯೂ ಆಹಾರ ಪದಾರ್ಥಗಳು ವ್ಯರ್ಥವಾಗುತ್ತವೆಯೇ ?

ಅವಶ್ಯಕತೆಗಿಂತ ಹೆಚ್ಚು ಬೇಯಿಸಿಕೊಳ್ಳುವುದು, ಉಳಿದವುಗಳನ್ನು ಬಿಸಾಡುವುದರಿಂದ ಮನೆಯಲ್ಲಿ, ಆಹಾರ ಪದಾರ್ಥಗಳು ವ್ಯರ್ಥವಾಗುತ್ತಿರುತ್ತವೆ. ತಿನ್ನುತ್ತಿರುವಾಗ ಕೆಲವು ಸಾರಿ ಸುತ್ತ ಬೀಸಾಡುತ್ತಿರುತ್ತಾರೆ. ತಿನ್ನಲಾಗದೇ ಹಾಗೆ ಬಿಟ್ಟುಬಿಡುತ್ತಾರೆ. ಹೀಗೂ ಆಹಾರ ಪದಾರ್ಥಗಳು ವ್ಯರ್ಥವಾಗುತ್ತಿರುತ್ತವೆ.

ಅಕ್ಕಿ, ಬೇಳೆ, ನೆಲಗಡಲೆ, ಕಡಲೆ, ಮೊದಲಾದವುಗಳಿಗೆ ಕೀಟಗಳು ಬೀಳತ್ತುವೆ. ಇಲಿಗಳು ಸಂಗ್ರಹಣೆ ಮಾಡಿದ ದವಸ – ಧಾನ್ಯಗಳನ್ನು ನಾಶ ಪಡಿಸುತ್ತವೆ. ಸಂಗ್ರಹಣೆ ಮಾಡಿದ ಬೀಜಗಳನ್ನು ವಿವಿಧ ರೀತಿಯ ಕೀಟಗಳು ಬಿದ್ದು ಹಾಳು ಮಾಡುತ್ತವೆ. ಅಕ್ಕಿ, ಬೇಳೆಗಳಿರುವ ಚೀಲಗಳಾಗಲ್ಲಿ, ಡಬ್ಬಿಗಳಾಗಲ್ಲಿ, ಬೇವಿನ ಎಲೆಗಳನ್ನು ಮಿಶ್ರಣ ಮಾಡಿದರೆ ಕೀಟಗಳನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಬಹುದು. ಸಕ್ಕರೆ, ಬೆಲ್ಲ, ಸಿಹಿ ಪದಾರ್ಥಗಳಿಗೆ ಇರುವೆಗಳು ಬರುತ್ತವೆ.

ಪದಾರ್ಥವು ಕೀಟಗಳು ಬಿದ್ದು ಹಾಳಾದಾಗ, ಉಳಿದ ಆಹಾರ ಪದಾರ್ಥಗಳು ಹಾಳಾಗಿ ಬೀಸಾಡುತ್ತೀರುವಾಗ ನಿಮಗೆ ಯಾವಾಗಲಾದರೂ ಅಯ್ಯೋ ! ಎಂದು ಅನಿಸುತ್ತದೆಯೇ ? ಹಾಗೆ ಏಕೆ ಅನಿಸುತ್ತದೆ ?

ಮತ್ತೆ ನಾವು ತಿನ್ನುವ ಆಹಾರವು ಹೇಗೆ ಲಭಿಸುತ್ತದೆ ಗೊತ್ತೆ ?

**ಗುಂಪಿನಲ್ಲಿ ಚರ್ಚಿಸಿರಿ :**



- ನಾವು ಅಕ್ಕಿ, ಬೇಳೆ, ಇತರೆ ಕಿರಾಣಿ ಸಾಮಾಗ್ರಿಗಳನ್ನು ಎಲ್ಲಿಂದ ತರುತ್ತೇವೆ ?
- ಕಾಯಿಗಡ್ಡೆಗಳು, ಹಣ್ಣುಗಳು ಎಲ್ಲಿ ಖರೀದಿಸುತ್ತೀರಿ. ಯಾರು ಬೆಳೆಸುತ್ತಾರೆ ?
- ಮಾರ್ಕೆಟ್‌ನಲ್ಲಿ ತರಕಾರಿಗಳು, ಹಣ್ಣುಗಳು ಇತರೆ ಆಹಾರ ಪದಾರ್ಥಗಳು ಎಲ್ಲಿಂದ ಬರುತ್ತವೆ ?
- ಇವುಗಳನ್ನು ಬೆಳೆಸುವುದರಲ್ಲಿ ಯಾರ ಶ್ರಮವಿದೆ ?

SCERT TELANGANA

ಕೆಳಗಿನ ಚಿತ್ರಗಳನ್ನು ನೋಡಿರಿ. ನಾವು ತಿನ್ನುವ ಅನ್ನವು ನೆಲ್ಲು (ಭತ್ತ) ಗಳಿಂದ ಬರುತ್ತವೆ. ಇದರ ಹಿಂದೆ ಎಷ್ಟೋ ಜನರ ಶ್ರಮವಿದೆ ಚಿತ್ರಗಳನ್ನು ನೋಡಿ ಹೇಳಿರಿ



ವ್ಯವಸಾಯ ಪರಿಕರಗಳನ್ನು ಸಿದ್ಧ ಮಾಡಿಕೊಳ್ಳುವುದು



ಬೆಳೆಗಳಿಗೆ ನೀರು ಬಿಡುವುದು



ಬೆಳೆದ ಆಹಾರ ಧಾನ್ಯಗಳನ್ನು ತೆಗೆದುಕೊಂಡು ಬರುವುದು



ಬೆಳೆಗಳನ್ನು ಮಾರ್ಕೆಟ್‌ನಲ್ಲಿ ಮಾರುವುದು



ಧಾನ್ಯಗಳನ್ನು ಕಿರಾಣಿ ಅಂಗಡಿಯಲ್ಲಿ ಖರೀದಿಸುವುದು



ಎಷ್ಟೋ ಜನರ ಶ್ರಮದಿಂದ ತಯಾರಾದ ಆಹಾರವನ್ನು ತಿನ್ನುವುದು.

SCERT TELANGANA

ನಾವು ತಿನ್ನುತ್ತಿರುವ ಆಹಾರದ ಹಿಂದೆ ಎಷ್ಟೊ ಜನರ ಶ್ರಮವಿದೆ. ವ್ಯವಸಾಯದಾರರು, ವ್ಯವಸಾಯ ಕೂಲಿಗಳು, ಇತರೆ ಕಾರ್ಮಿಕರು, ಹೀಗೆ ಎಷ್ಟೊ ಜನರು ಕೃಷಿ ಮಾಡಿದರೆ ನಮ್ಮ ಮನೆಯಲ್ಲಿ ಅನೇಕ ವಿಧವಾದ ಆಹಾರ ಧಾನ್ಯಗಳು, ತರಕಾರಿಗಳು, ಹಣ್ಣುಗಳು, ಬರುತ್ತವೆ. ಹೊಲವನ್ನು ಹಸನುಗೊಳಿಸಿ, ಬೀಜಗಳನ್ನು ಬಿತ್ತುವುದರಿಂದ ಹಿಡಿದು ಬೆಳೆ ಕೈಗೆ ಬರುವವರೆಗೆ ರೈತರು, ರೈತಕೂಲಿಗಳು, ಎಷ್ಟೋ ಜನರು ಕಷ್ಟ ಪಡುವುದರಿಂದ ಮಾತ್ರ ನಮ್ಮ ಮನೆಯಲ್ಲಿ ಬರುತ್ತವೆ. ಹೀಗೆ ಎಲ್ಲರ ಶ್ರಮದಿಂದ ಬೆಳೆದಾಗ ಬಂದಿದ್ದವುಗಳನ್ನು ಪರಿಮಿತಿಯಾಗಿ ಬಳಸುವುದಲ್ಲದೇ ವ್ಯರ್ಥ ಮಾಡದೇ ನೋಡಿಕೊಳ್ಳಬೇಕು. ಪೂರ್ತಿಯಾಗಿ ವಿನಿಯೋಗಿಸಬೇಕು. ಸಂಗ್ರಹಣಾ ಧಾನ್ಯಗಳಿಗೆ ಇರುವೆಗಳು, ಕೀಟಗಳಾಲಿ ಬೀಳದಂತೆ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಇಲಿಗಳು ಆಹಾರ ಧಾನ್ಯಗಳನ್ನು ತಿನ್ನದ ಹಾಗೇ ಸರಿಯಾದ ಪದ್ಧತಿಗಳನ್ನು ಪಾಲಿಸಬೇಕು. ಹೆಚ್ಚಾಗಿ ಅಡುಗೆ ಮಾಡುವುದು, ವ್ಯರ್ಥ ಮಾಡದಂತೆ ಕ್ರಮ ಕೈಗೊಳ್ಳಬೇಕು.

**ಮುಖ್ಯ ಪದಗಳು :**

| | | |
|---|---|---|
| 1 ಸಾಮೂಹಿಕ ಭೋಜನಾ | 5 ಶ್ರಾಮಿಕರು | 9 ರೈತರು |
| 2. ವ್ಯರ್ಥ | 6. ವ್ಯವಸಾಯದಾರರು | 10. ಆಹಾರ ಧಾನ್ಯಗಳು |
| 3. ಕ್ರಿಮಿಕೀಟಗಳು | 7. ವ್ಯವಸಾಯ ಕೂಲಿಗಳು | 11. ಶ್ರಮ |
| 4. ಸೂಕ್ಷ್ಮಜೀವಿಗಳು | 8. ವ್ಯವಸಾಯ ಪರಿಕರಗಳು | 12. ಪರ್ಯಾವರಣ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

**1. (ವಿಷಯಾವಗಹನ) ತಿಳುವಳಿಕೆ :**

ಅ) ಸಾಮೂಹಿಕ ಭೋಜವನ್ನು ಯಾವಾಗ, ನಡೆಯುತ್ತವೆ ತಿಳಿಸಿರಿ.

ಆ) ಪ್ಲಾಸ್ಟಿಕ್ ಪ್ಲೇಟ್‌ಗಳನ್ನು, ಗ್ಲಾಸುಗಳನ್ನು ಏಕೆ ಉಪಯೋಗಿಸಬಾರದು ?

ಇ) ಉತ್ತಮ ಹವ್ಯಾಸಗಳಾವುವು ? ಅವುಗಳನ್ನು ಬರೆಯಿರಿ.

ಈ) ನಿಮ್ಮಲ್ಲಿ ಯಾವ ಒಳ್ಳೆಯ ಹವ್ಯಾಸಗಳಿವೆ ? ಅವುಗಳ ಬಗ್ಗೆ ಬರೆಯಿರಿ.

ಉ) ಆಹಾರವು ಯಾವ ಸಂದರ್ಭಗಳಲ್ಲಿ ವ್ಯರ್ಥವಾಗುತ್ತದೆ ?

ಊ) ಆಹಾರವು ಹೇಗೆ ವ್ಯರ್ಥವಾಗುತ್ತದೆ ? ಏಕೆ ವ್ಯರ್ಥ ಮಾಡಬಾರದು ?

ಋ) ನಾವು ತಿನ್ನುವ ಆಹಾರದ ಹಿಂದೆ ಯಾರ ಶ್ರಮವಿದೆ ?

**2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :**

ಅ) ಶಾಲೆಯಲ್ಲಿ ಮಧ್ಯಾಹ್ನದ ಊಟವು ಇನ್ನೂ ಚೆನ್ನಾಗಿ ಇರಬೇಕೆಂದು ಕವಿತ ಅಂದುಕೊಂಡಳು. ಇದರ ಬಗ್ಗೆ ಮುಖ್ಯೋಪಾಧ್ಯಾಯರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದಳು. ನೀವಾದರೆ ಯಾವ ಯಾವ ಪ್ರಶ್ನೆಗಳನ್ನು ಕೇಳುತ್ತೀರಿ?

ಆ) ಆಹಾರ ಪದಾರ್ಥಗಳು ಹಾಳಾವಾಗುವುದಕ್ಕೆ ಕಾರಣಗಳು ಏನಾಗಿರಬಹುದು ? ಹಾಳಾಗದಂತೆ ಇರುವುದಕ್ಕೆ ಏನು ಮಾಡಬೇಕು ?

SCERT TELANGANA

3. **ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :**

ಅ) ಊಟದ ಎಲೆಗಳನ್ನು ತಯಾರಿಸುವ ಪದ್ಧತಿಯನ್ನು ಕ್ರಮಬದ್ಧವಾಗಿ ಬರೆಯಿರಿ.

ಆ) ಕೆಲವು ಕಾಯಿಗಡ್ಡೆಗಳನ್ನು ತಣ್ಣನೇ ಬಟ್ಟೆಯಲ್ಲಿ ಸುತ್ತಿ ಇಡಿರಿ. ಇನ್ನೂ ಕೆಲವನ್ನು ಹೊರಗಡೆ ಇಡಿರಿ. ಇನ್ನೂ ಕೆಲವು ಮಣ್ಣಿನ ತೊಟ್ಟಿಯ ಫ್ರಿಜ್‌ನಲ್ಲಿ ಇಡಿರಿ. ಮೂರು ದಿನಗಳ ನಂತರ ನೋಡಿರಿ. ಏನು ನಡೆದಿದೋ ನಿಮ್ಮ ಪರಿಶೀಲನೆಗಳನ್ನು ಬರೆಯಿರಿ. ಯಾವುದರಲ್ಲಿ ಇಟ್ಟ ಕಾಯಿಗಡ್ಡೆಗಳು ತಾಜಾತನದಿಂದ ಕೂಡಿರುತ್ತವೆ ?

4 **ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :**

ಅ) ಯಾವುದಾದರೂ ಔತಣಕೂಟ ನಡೆಯುವ ಸ್ಥಳಕ್ಕೆ ಹೋಗಿರಿ. ಆಹಾರವು ಯಾವ ವಿಧವಾಗಿ ವ್ಯರ್ಥವಾಗುತ್ತದೋ, ಯಾವ ಕಸ ಬರುತ್ತದೆಯೋ ಬರೆಯಿರಿ. ಹಾಗೆ ಆಗದಂತೆ ಇರಬೇಕಾದರೆ ಯಾವ ನಿಯಮಗಳನ್ನು ಪಾಲಿಸಬೇಕು . ಪಟ್ಟಿಯನ್ನು ತಯಾರಿಸಿರಿ.

5. **ಚಿತ್ರ ಕೌಶಲ್ಯ , ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :**

ಅ) ಮಣ್ಣಿನ ತೊಟ್ಟಿಗಳಿಂದ ಜನತಾ ಫ್ರಿಜ್‌ನ್ನು ತಯಾರಿಸಿರಿ. ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.

ಆ) ಎಲೆಗಳನ್ನು ಸಂಗ್ರಹಿಸಿ, ಪತ್ರಾವಳಿಗಳನ್ನು ತಯಾರಿಸಿ, ಪಾಠಶಾಲೆಗೆ ತೆಗೆದುಕೊಂಡು ಬನ್ನಿರಿ. ಪ್ರದರ್ಶಿಸಿರಿ.

ಇ) ಜನತಾ ಫ್ರಿಜ್ ಚಿತ್ರವನ್ನು ಬರೆಯಿರಿ.

6. **ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ನಾವು ತಿನ್ನುವ ಆಹಾರದ ಹಿಂದೆ ಎಷ್ಟೋ ಮಂದಿಯ ಶ್ರಮವಿದೆ. ಅವರ ಶ್ರಮವನ್ನು ಅಭಿನಂದಿಸುತ್ತಾ ಬರೆಯಿರಿ.

ಆ) ಸಹಪಂಕ್ತಿ ಭೋಜನ, ವನಭೋಜನಗಳಲ್ಲಿ ಏಕೆ ? ನೀವು ಪಡೆದ ಅನುಭವಗಳಾವುವು ?

ಇ) ನಿಮ್ಮ ಮನೆಯಲ್ಲಿ ಆಹಾರ ಪದಾರ್ಥಗಳು ಹಾಳಾಗದಂತೆ, ವ್ಯರ್ಥವಾಗದಂತೆ ಇರಬೇಕಾದರೆ ನೀವು ಏನು ಮಾಡುತ್ತೀರಿ?

ಈ) ಪ್ರತಿ ದಿನವು ನೀವು ಪಾಲಿಸುತ್ತಿರುವ ಉತ್ತಮ ಆರೋಗ್ಯದ ಹವ್ಯಾಸಗಳನ್ನು ಬರೆಯಿರಿ.

**ನಾನು ಇವುಗಳನ್ನು ಮಾಡಬಲ್ಲೆನಾ ?**

| | | |
|---|---|---|
| 1 | ಆಹಾರ ವ್ಯರ್ಥವಾಗುವುದರ ಬಗ್ಗೆ, ತೆಗೆದುಕೊಳ್ಳಬೇಕಾದ ಜಾಗ್ರತೆಗಳ ಬಗ್ಗೆ ಒಳ್ಳೆಯ ಆಹಾರದ ಅಭ್ಯಾಸಗಳ ಬಗ್ಗೆ ವಿವರಿಸಬಲ್ಲೆನು. | ಹೌದು / ಇಲ್ಲ |
| 2 | ಮಧ್ಯಾಹ್ನದ ಊಟದ ಬಗ್ಗೆ ಮುಖ್ಯೋಪಾಧ್ಯಾಯರಿಗೆ ಪ್ರಶ್ನೆಗಳನ್ನು ಕೇಳಬಲ್ಲೆನು. | ಹೌದು / ಇಲ್ಲ |
| 3 | ಕಾಯಿಗಡ್ಡೆಗಳು ಸಂಗ್ರಹಣೆ ಮಾಡುವುದರ ಬಗ್ಗೆ ಪ್ರಯೋಗ ಮಾಡಿ ವಿವರಿಸಬಲ್ಲೆನು. | ಹೌದು / ಇಲ್ಲ |
| 4 | ನಾವು ತಿನ್ನುವ ಆಹಾರದ ಹಿಂದೆ ಎಷ್ಟು ಜನರ ಶ್ರಮ ಇದೆ ? ಎಂಬುದನ್ನು ವಿವರಿಸಿರಿ. | ಬಲ್ಲೆನು/ ಇಲ್ಲ |

SCERT TELANGANA

# 11 ಹಳ್ಳಿಯಿಂದ ಡಿಲ್ಲಿಗೆ



ರವಿ ಪ್ರಕಾಶನಿಗೆ, ಬಹಳ ಆನಂದವಾಗಿದೆ. ಆತನು ಬರೆದ 'ಎತ್ತಿಬಂಡಿಗಳ ಮೇಲೆ ಪ್ರಯಾಣಿಸುವ ಗ್ರಾಮೀಣರು' ಎನ್ನುವ ಚಿತ್ರಕ್ಕೆ ಬಹುಮಾನ ಬಂದಿದೆ. ಮಕ್ಕಳ ದಿನಾಚರಣೆಯ ದಿನ ಢಿಲ್ಲಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನವನ್ನು ತೆಗೆದುಕೊಳ್ಳುವುದಕ್ಕೆ ಮಾವ ವೇಣುಗೋಪಾಲನೊಡನೆ ಕೂಡಿ ಡಿಲ್ಲಿಗೆ ಹೋಗುತ್ತಿದ್ದೇನೆ. ನವೆಂಬರ್ 10ನೇ ತಾರೀಖಿನಂದು ತಮ್ಮ ಊರು ತಾಂಡೂರುನಿಂದ ಡಿಲ್ಲಿಗೆ ಹೋಗುವುದಕ್ಕೆ ಸಿದ್ದನಾಗಿದ್ದಾನೆ.

## 11.1. ಬಸ್ಸಿನಲ್ಲಿ ಪ್ರಯಾಣ :



ರವಿ ಪ್ರಕಾಶ್ ಮೊಟ್ಟಮೊದಲಿಗೆ ಹೈದ್ರಾಬಾದ್‌ಗೆ ಹೊರಟಿದ್ದಾನೆ. ಹೈದ್ರಾಬಾದ್‌ಗೆ ಹೋಗುವ ಒಂದು ಬಸ್ಸು , ನಿಲ್ದಾಣದಲ್ಲಿದೆ. ' ಆ ಬಸ್ಸಿನಲ್ಲಿ ಹೋಗೋಣವೇ? ಮಾವ... ಎಂದು ರವಿ ಪ್ರಕಾಶ ಕೇಳಿದನು. ಇದು ಸಾಮಾನ್ಯ ಬಸ್ಸು. ಇದನ್ನೇ 'ಪಲ್ಲೆ ವೆಲುಗು' ಬಸ್ ಎಂದು ಕರೆಯುತ್ತಾರೆ. ವೇಗದೂತ ಬಸ್ಸಿನಲಿ ಹೋಗೋಣ ಎಂದನು ವೇಣುಗೋಪಾಲ. ಈ ಬಸ್ಸಿನಲಿ ಏಕೆ ಬೇಡ ? ಎಂದು ಕೇಳಿದನು ರವಿ ಪ್ರಕಾಶ್. ವೇಗದೂತ ಬಸ್ಸಿನಲ್ಲಿ ಹೋಗೋಣ ಎಂದು ವೇಣುಗೋಪಾಲನಿಗೆ ಏಕೆ ಹೇಳಿದನು ?

**ಗುಂಪಿನಲ್ಲಿ ಚರ್ಚಿಸಿರಿ :**



- ಸಾಮಾನ್ಯ ಬಸ್‌ಗೆ, ವೇಗದೂತ ಬಸ್‌ಗೆ ಇರುವ ವ್ಯತ್ಯಾಸಗಳನ್ನು ಬರೆಯಿರಿ ?
- ಇನ್ನೂ ಯಾವ ಯಾವ ಬಸ್ಸುಗಳಿವೆಯೋ ತಿಳಿದುಕೊಂಡು ಬರೆಯಿರಿ ?
- ಬಸ್ ಟಿಕೇಟ್‌ನ ಮೇಲೆ ಯಾವ ಯಾವ ವಿವರಗಳಿವೆ ?

**ನಿಮಗೆ ಗೊತ್ತೆ ?**



ಬಸ್ಸಿನಲ್ಲಿ ಈಗ ಯಂತ್ರಗಳ ಮೂಲಕ ಟಿಕೆಟ್‌ಗಳನ್ನು ಕೊಡುತ್ತಿದ್ದಾರೆ. ಇದನ್ನು "TIMS" (ಟಿಕೆಟ್ ಇಷ್ಯೂಯಿಂಗ್ ಮಿಷನ್) ಎನ್ನುವರು. ಟಿಕೆಟ್‌ಗಳನ್ನು ಹರಿದು, ಪಂಚ್ ಮಾಡಿ ಕೊಡುವ ಸಮಸ್ಯೆ ಇದರಲ್ಲಿ ಇರುವುದಿಲ್ಲ.

SCERT TELANGANA

### 11.1.1. ಚಿಲ್ಲರೆ ಸಮಸ್ಯೆ :

ಒಂದು ನಿಲ್ದಾಣದಲ್ಲಿ ಬಸ್ಸು ನಿಂತಿದೆ. ಬಹಳಷ್ಟು ಜನ ಬಸ್ಸಿನಿಂದ ಕೆಳಗೆ ಇಳಿದರು. ಕೆಲವರು ಬಸ್ಸಿನೊಳಗೆ ಏರಿದರು. ಕೋಟನ್ನು ಹಾಕಿಕೊಂಡು, ಟೈ ಕಟ್ಟಿಕೊಂಡ ಒಬ್ಬ ವ್ಯಕ್ತಿ ಟಿಕೆಟ್ ಗೋಸ್ಕರ ಐದು ನೂರು ರೂಪಾಯಿಯ ನೋಟ್‌ನ್ನು ನಿರ್ವಾಹಕನಿಗೆ ಕೊಟ್ಟನು. ನಿರ್ವಾಹಕನು ಚಿಲ್ಲರೆಬೇಕೆಂದನು. ಆತನು ಚಿಲ್ಲರೆ ಇಲ್ಲವೆಂದು ಚಿಲ್ಲರೆಯನ್ನು ಕುರಿತು ಬಸ್ಸಿನಲ್ಲಿ ಬರೆದ ವಾಕ್ಯಗಳನ್ನು ರವಿ ಪ್ರಕಾಶ ಓದಿದನು. ಆ ವಾಕ್ಯಗಳು ಏನೋ ನೀವು ಓದಿರಿ.

**ಟಿಕೆಟ್‌ಗೆ ಸರಿಹೋಗುವ ಚಿಲ್ಲರೆ ಕೊಟ್ಟು ನಿರ್ವಾಹಕನ ಜೊತೆ ಸಹಕರಿಸಿರಿ**

**ಆಲೋಚಿಸಿರಿ...**

- ಟಿಕೆಟ್‌ಗೆ ಸರಿಹೋಗುವ ಚಿಲ್ಲರೆ ಏಕೆ ತೆಗೆದುಕೊಂಡು ಹೋಗಬೇಕು ?
- ಬಸ್ಸಿನಲ್ಲಿ ಇನ್ನೂ ಏನೇನು ಪ್ರಕಟಣೆಗಳನ್ನು ಬರೆದಿರುತ್ತಾರೆ ? ನೋಡಿ ನಿಮ್ಮ ನೋಟ್ ಪುಸ್ತಕದಲ್ಲಿ ಬರೆಯಿರಿ

**ನಿಮಗೆ ಗೊತ್ತೆ ?**

ನಮ್ಮ ರಾಜ್ಯದಲ್ಲಿ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬಸ್ಸುಗಳನ್ನು ನಡೆಸುತ್ತಿದ್ದಾರೆ. ಆರ್ಡಿನರಿ, ಸಾಮಾನ್ಯ ದರ್ಜೆ, ವೇಗದೂತ, ಡೀಲಕ್ಸ್, ಲಗ್ಜರಿ ಸೆಮಿ ಲಗ್ಜರಿ, ಸೂಪರ್ ಲಗ್ಜರಿ, ಗರುಡ, ಇಂದ್ರನಂತಹ ವಿಧವಿಧಗಳ ಬಸ್ಸುಗಳನ್ನು ನಡೆಸುತ್ತಿದ್ದಾರೆ. ಬಸ್ಸಿನಲ್ಲಿ ಪ್ರಯಾಣಿಸುವುದಕ್ಕೆ ಮೊದಲೇ ಟಿಕೆಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸೌಲಭ್ಯವಿದೆ. ಆನ್‌ಲೈನ್ ಬುಕಿಂಗ್ ಸೌಕರ್ಯ ಸಹ ಇದೆ. ವನಿತ ಕಾರ್ಡು, ಕ್ಯಾಟ್ ಕಾರ್ಡು ಇರುವವರಿಗೆ ಪ್ರಯಾಣ ಧರದಲ್ಲಿ 10% ಶೇಕಡ ರಿಯಾಯಿತಿ ಕೊಡುತ್ತಾರೆ. ಅಂಗವಿಕಲರಿಗೆ ಸಹ ರಿಯಾತಿಯ ಸೌಕರ್ಯ ವಿದೆ.

ಬಸ್ಸು ಚಲಿಸುತ್ತಲಿದೆ. ಬಸ್ಸು ಕಿಟಿಕಿಯಿಂದ ನೋಡಿದರೆ ಬಹಳ ಸುಮಧುರವಾಗಿತ್ತು. ಸೀಟ್‌ಗಳು ಕೂಡ ಓಡಿಹೋಗುತ್ತಿರುವಂತೆ ಅನಿಸುತ್ತದೆ. ನಂತರ ಬಸ್ ನಿಲ್ದಾಣದಲ್ಲಿ ಇಬ್ಬರು ವ್ಯಕ್ತಿಗಳು ಬಂದು, ಎಲ್ಲರ ಹತ್ತಿರವಿರುವ ಟಿಕೆಟ್‌ಗಳನ್ನು ತನಿಖೆ ಮಾಡಿದರು.

**ಆಲೋಚಿಸಿರಿ...**

- ನೀವು ಪ್ರಯಾಣ ಮಾಡುವಾಗ ಯಾವಾಗಲಾದರೂ ತನಿಖೆ ನಡೆದಿದೆಯೇ ?
- ಟಿಕೆಟ್ ಇಲ್ಲದೇ ಪ್ರಯಾಣ ಮಾಡಿದರೆ ಏನು ಮಾಡುತ್ತಾರೆ ?
- ಬಸ್ಸಿನಲ್ಲಿ ಹೋಗುತ್ತಿರುವಾಗ ಇನ್ನೂ ಏನು ಮಾಡಬಾರದೋ ಹೇಳಿರಿ.

**ನಿಮಗೆ ಗೊತ್ತೆ ?**

ಟಿಕೆಟ್ ಇಲ್ಲದೇ ಪ್ರಯಾಣ ಮಾಡುವುದು ಅಪರಾಧ. ಅದಕ್ಕೆ ರೂ. 500/– ವರೆಗೆ ದಂಡ ಅಥವಾ ಆರು ತಿಂಗಳಗಳ ಕಾಲ ಜೈಲು ಶಿಕ್ಷೆ ಅಥವಾ ಎರಡನ್ನೂ ದಂಡ ಹಾಕಬಹುದು.

SCERT TELANGANA

ಬಸ್ಸಿನಲ್ಲಿ ಎಲ್ಲರ ಹತ್ತಿರ ಟಿಕೆಟ್‌ಗಳು ಇದೆಯೇ ? ಅಥವಾ ಇಲ್ಲವೆ ಎಂದು ಪರಿಶೀಲಿಸಿ, ಅವರು ಇಳಿದು ಹೋದರು. ಬಸ್ಸು ಪುನಃ ಪ್ರಯಾಣ ಬೆಳೆಸಿತು. ನಾನು ಕಿಟಕಿಗಳಿಂದ ನನ್ನ ಕೈಗಳನ್ನು ಹೊರಗೆ ಹಾಕಿದನು. ಅಷ್ಟರಲ್ಲಿ ನಿರ್ವಾಹಕ ನನ್ನನ್ನು ನೋಡಿ ಕೈಗಳನ್ನು ಕಿಟಕಿಯ ಹೊರಗಡೆಗೆ ಹಾಕಬಾರದು ಎಂದು ಹೇಳಿದನು.

### 11.1.2. ಟ್ರಾಫಿಕ್ ಸಿಗ್ನಲ್ :



ಹೈದ್ರಾಬಾದ್ ಬಸ್ ನಿಲ್ದಾಣದಲ್ಲಿ ಬಸ್ಸು ನಿಂತಿತು. ರವಿ ಪ್ರಕಾಶ್, ವೇಣು ಗೋಪಾಲ್ ಇಬ್ಬರೂ ಆಟೋದಲ್ಲಿ ಸಿಕಿಂದ್ರಾಬಾದ್ ರೈಲ್ವೆ ನಿಲ್ದಾಣದ ಕಡೆ ಪ್ರಯಾಣ ಬೆಳೆಸಿದರು. ದಾರಿಯಲ್ಲಿ ಕೆಂಪು ದೀಪ ಬಿದ್ದಾಗ ಆಟೋ ನಿಲ್ಲುವುದು. ಹಳದಿ ದೀಪ ಬಿದ್ದಾಗ ಆಟೋ ಹೊರಡಲು ಸಿದ್ದವಾಗುವುದು. ಹಸಿರು ದೀಪ ಬಿದ್ದಾಗ ಮುಂದಕ್ಕೆ ಚಲಿಸುವುದು ರವಿ ಪ್ರಕಾಶ್ ಗಮನಿಸಿದನು.



ಆಟೋ ನಿಂತಾಗ ರಸ್ತೆಯ ಮೇಲೆ ಎಳೆದ ಬಿಳಿಯ ಬಣ್ಣದ ಗೆರೆಗಳು ಎಳೆದ ಪ್ರದೇಶದಲ್ಲಿ ಮನುಷ್ಯರು ರಸ್ತೆಗೆ ಒಂದು ದಿಕ್ಕಿನಿಂದ ಮತ್ತೊಂದು ದಿಕ್ಕಿಗೆ ಹೋಗುವುದು. ಬಿಳಿ ಬಟ್ಟೆಗಳನ್ನು ಧರಿಸಿದ ಪೋಲಿಸ್‌ರು ಎಲ್ಲರಿಗೂ ಸಹಾಯ ಮಾಡುವುದನ್ನು ಗಮನಿಸಿದನು. ಈ ಬಿಳಿಯ ಗೆರೆಗಳನ್ನು 'ಜೀಬ್ರಾ ಕ್ರಾಸಿಂಗ್' ಎನ್ನುವರು. ಜೀಬ್ರಾ ಕ್ರಾಸಿಂಗ್‌ನ ಮೇಲೆ ಪಾದಚಾರಿಗಳು ರಸ್ತೆ ದಾಟುವರೆಂದು ವೇಣುಗೋಪಾಲ್ ಹೇಳಿದನು. ಆಟೋ ಕೆಲವು ಕಡೆ 'ಸ್ಪೀಡ್ ಬ್ರೇಕರ್' ಇರುವುದರಿಂದ ನಿಧಾನವಾಗಿ ಮುಂದೆ ಸಾಗುವುದು.

**ಗುಂಪಿನಲ್ಲಿ ಚರ್ಚಿಸಿರಿ :**



- ಟ್ರಾಫಿಕ್ ಸಿಗ್ನಲ್ ಇಲ್ಲದಿದ್ದರೆ ಏನಾಗುತ್ತದೆ ?
- ಗ್ರಾಮಗಳಲ್ಲಿ ಟ್ರಾಫಿಕ್ ಸಿಗ್ನಲ್ ಏಕೆ ಇರುವುದಿಲ್ಲ ?
- ಟ್ರಾಫಿಕ್ ಜ್ಯಾಂ ಏಕೆ ಆಗುತ್ತದೆ ?
- ರಸ್ತೆಯ ಮೇಲೆ ಹೋಗುತ್ತಿರುವಾಗ ತೆಗೆದುಕೊಳ್ಳಬೇಕಾದ ನಿಯಮಗಳಾವುವು ?



ಚಿತ್ರಗಳನ್ನು ನೋಡಿರಿ. ಈ ರೀತಿ ಪ್ರಯಾಣ ಮಾಡಬಹುದೇ? ಏನಾಗುತ್ತದೆ ? ಆಲೋಚಿಸಿರಿ ಯಾವ ನಿಯಮ ಗಳನ್ನು ಪಾಲಿಸಬೇಕು ?



SCERT TELANGANA

**ವಾಹನಗಳನ್ನು ನಡೆಸುತ್ತಿರುವಾಗ ಪಾಲಿಸಬೇಕಾದ ನಿಯಮಗಳು**

- ಸೆಲ್‌ಫೋನ್‌ನಲ್ಲಿ ಮಾತನಾಡುತ್ತಾ ವಾಹನವನ್ನು ಚಲಿಸಬಾರದು.
- ದ್ವಿಚಕ್ರ ವಾಹನಗಳ ಮೇಲೆ ಹೋಗುವವರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು.
- ಕಾರಿನಂತಹ ವಾಹನಗಳನ್ನು ನಡೆಸುವವರು, ಸೀಟ್‌ನಲ್ಲಿ ಕುಳಿತಿರುವವರು ತಪ್ಪದೇ ಸೀಟ್ ಬೆಲ್ಟ್‌ನ್ನು ಹಾಕಿಕೊಳ್ಳಬೇಕು.
- ಇಯರ್ ಫೋನ್‌ನಲ್ಲಿ ಹಾಡುಗಳನ್ನು ಕೇಳುತ್ತಾ ವಾಹನಗಳನ್ನು ನಡೆಸಬಾರದು.
- ಜನರನ್ನು ವಿಪರೀತವಾಗಿ ಕರೆದುಕೊಂಡು ವಾಹನಗಳನ್ನು ನಡೆಸಬಾರದು.
- ಮುಂದೆ ಇರುವ ವಾಹನದಾರರಿಗೆ ಯಾವುದೇ ಸೂಚನೆ ಕೊಡದೇ ಓವರ್‌ಟೇಕ್ ಮಾಡಬಾರದು.
- ಹಿಂಭಾಗದಲ್ಲಿರುವ ವಾಹನಗಳಿಗೆ ಸೂಚನೆಗಳು ಕೊಡದಂತೆ ಎಡ, ಬಲಕ್ಕೆ ತಿರುಗಿಸಬಾರದು.
- ರಸ್ತೆಯ ನಿಯಮಗಳನ್ನು ಪಾಲಿಸಿ, ಸಿಗ್ನಲ್ ಪ್ರಕಾರವಾಗಿ ಪ್ರಯಾಣಿಸಬೇಕು.
- ನಿಯಮಿತ ವೇಗದಲ್ಲಿ ವಾಹನ ನಡೆಸಿದರೆ ವಾಹನವು ನಮ್ಮ ಅಧೀನದಲ್ಲಿರುತ್ತದೆ. ಅಪಘಾತಗಳನ್ನು ತಪ್ಪಿಸಬಹುದು.

**ಆಲೋಚಿಸಿರಿ...**

**ಪಟ್ಟಣಗಳಲ್ಲಿ ಸಿಗ್ನಲ್ ಇಲ್ಲದಿದ್ದರೆ ನಾಲ್ಕು ರಸ್ತೆಗಳು ಕಲಿಯುವ ಸ್ಥಳದಲ್ಲಿ ಯಾವ ಪರಿಸ್ಥಿತಿ ಇರುವುದೋ ಊಹಿಸಿ ಬರೆಯಿರಿ.**

ವಾಹನಗಳ ಮೇಲೆ ಹೋಗುವವರಾಗಲಿ, ರಸ್ತೆಯ ಮೇಲೆ ನಡೆದು ಹೋಗುವವರಾಗಲಿ ರಸ್ತೆಯ ನಿಯಮಗಳನ್ನು ಪಾಲಿಸಬೇಕು. ಆದರಿಂದ ಅಪಘಾತಗಳನ್ನು ನಿವಾರಿಸಬಹುದು. ಶಾಲೆಗೆ ಹೋಗುವ ಮಕ್ಕಳು, ಚಿಕ್ಕ ಮಕ್ಕಳು ರಸ್ತೆಯನ್ನು ದಾಟುತ್ತಿರುವಾಗ ದೊಡ್ಡವರ ಕೈಗಳನ್ನು ಹಿಡಿದು ದಾಟಬೇಕು. ರಸ್ತೆಯ ಮೇಲೆ ವಾಹನಗಳು ಬರುತ್ತಿರುವಾಗ ಎಲ್ಲೆಂದರಲ್ಲಿ ದಾಟಬಾರದು. ಜೀಬ್ರಾಕ್ರಾಸಿಂಗ್ ಗೆರೆಗಳನ್ನು ಎಳೆದ ಹಾದಿಯಲ್ಲೇ ದಾಟಬೇಕು. ಅವಶ್ಯವಿದ್ದರೆ ಟ್ರಾಫಿಕ್ ಪೋಲಿಸರ ಸಹಾಯವನ್ನು ಕೇಳಬೇಕು.

## 11.2 ರೈಲಿನಲ್ಲಿ ಪ್ರಯಾಣ :



ಡಿಲ್ಲಿಗೆ ಹೋಗುವುದಕ್ಕೆ ಸಿಕಿಂದ್ರಾಬಾದ್ ರೈಲ್ವೆ ನಿಲ್ದಾಣಕ್ಕೆ ಸೇರಿಕೊಂಡನು ರವಿ ಪ್ರಕಾಶ. ಮೊದಲನೇ ಬಾರಿ ರೈಲು ಪ್ರಯಾಣ ಮಾಡುತ್ತಿದ್ದಾನೆ. ಆದ್ದರಿಂದ ರೈಲ್ವೆ ನಿಲ್ದಾಣದ ಪರಿಸರಗಳನ್ನು ಆಸಕ್ತಿಯಾಗಿ ನೋಡಿದನು. ಅವರು ರೈಲ್ವೆ ನಿಲ್ದಾಣಕ್ಕೆ ತಲುಪಿದ ಅರ್ಧ ಗಂಟೆಗೆ ಡಿಲ್ಲಿಗೆ ಹೋಗುವ ರೈಲು ಪ್ಲಾಟ್‌ಫಾರಂ ಕಡೆ ಬರುವುದು ಎಂಬ ಸೂಚನೆ ಕೇಳಿಸಿತು.



SCERT TELANGANA




ರೈಲ್ವೆ ಪ್ಲಾಟ್‌ಫಾರಂನ ಮೇಲೆ ಬಂದಾಗ ಬೋಗಿ ನೋಡಿಕೊಂಡು ತಮ್ಮ ಸೀಟುಗಳ ಹತ್ತಿರ ಸೇರಿಕೊಂಡರು. ತನಗಿಂತ ಹೆಚ್ಚಿನ ವಯಸ್ಸು ಇರುವ ಇಬ್ಬರೂ ಹುಡುಗರು, ಒಬ್ಬಮಹಿಳೆ ಕೂಡ ತಾವು ಕುಳಿತಿರುವ ಸೀಟಿನ ಎದುರಿಗೆ ಕುಳಿತುಕೊಂಡಿದ್ದಾರೆ. ಸ್ವಲ್ಪ ಸಮಯದ ನಂತರ ರೈಲು ಪ್ರಯಾಣಿಸುತ್ತಿದ್ದಾಗ ಕರಿಕೋಟ್‌ನ್ನುಧರಿಸಿದ ಒಬ್ಬವ್ಯಕ್ತಿ, ಅವರು ಕುಳಿತಿರುವ ಸ್ಥಳಕ್ಕೆ ಬಂದನು. ರವಿ ಪ್ರಕಾಶ್‌ಗೆ ಎದುರಾಗಿ ಕುಳಿತಿರುವವರು ಅವರ ಟಿಕೆಟ್‌ಗಳನ್ನು ಆತನಿಗೆ ತೋರಿಸುವುದನ್ನು ಗಮನಿಸಿ ಆತನು ಟಿಕೆಟ್‌ಗಳನ್ನು ತನಿಖೆ ಮಾಡುವ ವ್ಯಕ್ತಿಯಾಗಿ (T.C) ಗುರ್ತು ಹಿಡಿದನು.

ವೇಣುಗೋಪಾಲ್ ಆತನಿಗೆ ಟಿಕೆಟ್‌ಗಳನ್ನು ತೋರಿಸಿದನು. 'ಬಸ್ಸಿನಲ್ಲಿ ಟಿಕೆಟ್‌ಗಳನ್ನು ತೆಗೆದುಕೊಳ್ಳುವುದನ್ನು ನೋಡಿದ್ದನು. ಆದರೆ ರೈಲಿನ ಟಿಕೆಟ್‌ಗಳನ್ನು ಯಾವಾಗ ತೆಗೆದುಕೊಳ್ಳುತ್ತಾರೆ ಎಂದು ರವಿ ಪ್ರಕಾಶ್‌ಗೆ ಅನುಮಾನ ಬಂದಿದೆ. ಅದೇ ವಿಷಯವನ್ನು ಮಾವನನ್ನು ಕೇಳಿದನು. ವೇಣು ಗೋಪಾಲ್ ಮುಂಚೆಯೇ ಟಿಕೆಟ್‌ಗಳನ್ನು ಹೇಗೆ ತೆಗೆದುಕೊಳ್ಳಬಹುದೋ ಹೇಳಿದನು. ಟಿಕೆಟ್‌ಗಳನ್ನು ತೋರಿಸಿದನು.




**ಗುಂಪಿನಲ್ಲಿ ಚರ್ಚಿಸಿರಿ :**

- ರೈಲ್ವೆ ಟಿಕೆಟ್‌ಗೂ, ಬಸ್ ಟಿಕೆಟ್‌ಗೂ ಇರುವ ವ್ಯತ್ಯಾಸವೇನು ?

ನಮ್ಮ ದೇಶದಲ್ಲಿ ಎಲ್ಲಾ ರಾಜ್ಯಗಳನ್ನು ಸೇರಿಸುವ ರೈಲು ಮಾರ್ಗಗಳಿವೆ. ನಮ್ಮ ರಾಜ್ಯದಿಂದ ಚಲಿಸುವ ರೈಲುಗಳನ್ನು ದಕ್ಷಿಣ ಮಧ್ಯೆ ರೈಲ್ವೆ ಸಂಸ್ಥೆ ನಿರ್ವಹಿಸುತ್ತದೆ. ನಮಗೆ ಹೆಸರುಗಳಿದ್ದಂತೆ ರೈಲಿಗೂ ಒಂದೊಂದು ಹೆಸರುಗಳಿವೆ. ಕಾಕತೀಯ ಎಕ್ಸ್‌ಪ್ರೆಸ್, ಅಜಂತಾ ಎಕ್ಸ್‌ಪ್ರೆಸ್, ತೆಲಂಗಾಣಾ ಎಕ್ಸ್‌ಪ್ರೆಸ್, ಗೋದಾವರಿ ಎಕ್ಸ್‌ಪ್ರೆಸ್, ಗರೀಬ್ ರಥ್, ರಾಜಧಾನಿ, ಸಂಪರ್ಕ ಕ್ರಾಂತಿ, ತುಂಗಾಭದ್ರಾ ಎಕ್ಸ್‌ಪ್ರೆಸ್, ಶತಾಬ್ದಿ ಎಕ್ಸ್‌ಪ್ರೆಸ್ ಇತ್ಯಾದಿ ಈ ರೀತಿಯ ಹೆಸರುಗಳಿರುತ್ತವೆ. ಮೊದಲೇ ಸೀಟ್‌ಗಳನ್ನು ಪಡೆಯುವುದಕ್ಕೆ ಕಂಪ್ಯೂಟರ್‌ನ ಮೂಲಕ ಆನ್‌ಲೈನ್ ಪದ್ಧತಿಯಲ್ಲಿ ಟಿಕೆಟ್‌ಗಳನ್ನು ಕೊಡುತ್ತಾರೆ. ತತ್ಕಾಲ್ ಮೂಲಕ ಆಗಿಂದಾಗಲೇ ಟಿಕೆಟ್‌ಗಳನ್ನು ಕೊಡುತ್ತಾರೆ. ವಯಸ್ಸಾದವರಿಗೆ, ಅಂಗವಿಕಲರಿಗೆ ದರದಲ್ಲಿ ವಿನಾಯಿತಿ ಸೌಕರ್ಯವಿದೆ.

SCERT TELANGANA

## 11.2.1. ವಿಧವಿಧವಾದ ಬಟ್ಟೆಗಳು-ಭಾಷೆಗಳು :

ರವಿ ಪ್ರಕಾಶ್ ಭೋಗಿಯಲ್ಲಿ ವ್ಯಕ್ತಿಗಳನ್ನು ಪರಿಶೀಲಿಸಿದನು. ಅವರೆಲ್ಲರೂ ವಿವಿಧ ರೀತಿಯ ಬಟ್ಟೆಗಳನ್ನು ಧರಿಸಿದ್ದಾರೆ. ಕೆಲವು ರೀತಿಯ ಬಟ್ಟೆಗಳನ್ನು ಆತನು ಎಂದೂ ನೋಡಿರಲಿಲ್ಲ. ವಿವಿಧ ರೀತಿಯ ಭಾಷೆಗಳನ್ನು ಮಾತನಾಡುತ್ತಿದ್ದಾರೆ. ಬಸ್ಸಿನಲ್ಲಿ ಕಾಣಿಸಿರುವುದಕ್ಕಿಂತ ಇಲ್ಲಿ ವಿವಿಧ ರೀತಿಯ ಮನುಷ್ಯರು ವಿವಿಧ ಬಟ್ಟೆಗಳನ್ನು ಧರಿಸಿ ವಿವಿಧ ರೀತಿಯ ಭಾಷೆಗಳನ್ನು ಮಾತನಾಡುವವರು ಕಾಣಿಸಿದರು.

ರವಿ ಪ್ರಕಾಶ್ ಪ್ರತಿ ನಿಲ್ದಾಣದಲ್ಲಿ ವಿವಿಧ ಭಾಷೆಗಳಲ್ಲಿ ಪ್ರಕಟಿಸುವುದನ್ನು ಕೇಳಿದನು. ರೈಲು ನಿಲ್ಲಿಸಿದ ಪ್ರತಿ ನಿಲ್ದಾಣದಲ್ಲಿ ವಿವಿಧ ಭಾಷೆಗಳಲ್ಲಿ ಆ ಪ್ರದೇಶದ ಹೆಸರು ಇರುವುದನ್ನು ನೋಡಿದನು. ರೈಲಿನಲಿ ಸಹ ವಿವಿಧ ಭಾಷೆಗಳಲ್ಲಿ ಬರೆದಿರುವುದನ್ನು ನೋಡಿದನು.

**ಆಲೋಚಿಸಿರಿ...**

**ರೈಲ್ವೆ ನಿಲ್ದಾಣದಲ್ಲಿ ಯಾವ ಯಾವ ಭಾಷೆಗಳಲ್ಲಿ ತಿಳಿಸುತ್ತಾರೇ ? ಏಕೆ ?**

**ರೈಲ್ವೆ ಸೂಚನೆಗಳು ವಿವಿಧ ಭಾಷೆಗಳಲ್ಲಿ ಏಕೆ ಬರೆಯುತ್ತಾರೇ ಹೇಳಿರಿ.**

## 11.2.2. ರೈಲಿಯಲ್ಲಿ ಭೋಜನ (ಊಟ) :



ರೈಲು ಮಹಾರಾಷ್ಟ್ರದಲ್ಲಿ ನಾಗಪುರ್ ದಾಟಿದ ನಂತರ ಊಟವು ಬಂದಿತು. ರೈಲಿನಲ್ಲಿ ಊಟವು ಯಾವಕಡೆಯಿಂದ ಬಂದಿರಿತೋ ರವಿ ಪ್ರಕಾಶನಿಗೆ ಅರ್ಥವಾಗಲಿಲ್ಲ. ಮಾವಯ್ಯನನ್ನು ಕೇಳಿದರೆ ರೈಲಿನಲ್ಲಿ ಒಂದು ಬೋಗಿಯಲ್ಲಿ ಆಹಾರ ಪದಾರ್ಥಗಳನ್ನು ತಯ್ಯಾರು ಮಾಡುತ್ತಾರೆ. ಊಟ ಬೇಕಾದವರು ಮೊದಲೆ ಹಣವನ್ನು ಕೊಟ್ಟರೆ ಅವರು ಕೇಳಿದ ಆಹಾರ ಪದಾರ್ಥಗಳನ್ನು ತಂದು ಕೊಡುತ್ತಾರೆಂದು ಹೇಳಿದನು. ರೈಲಿನಲ್ಲಿ ಕೊಟ್ಟಿರುವ ಆಹಾರದಲ್ಲಿ ಉಪ್ಪು, ಖಾರ ಕಡಿಮೆ ಇರುವುದರಿಂದ ರವಿಪ್ರಕಾಶನಿಗೆ ಸೇರಲಿಲ್ಲ.

ಊಟದ ನಂತರ ಕೈಗಳನ್ನು ತೊಳೆದುಕೊಳ್ಳಲು ಬೋಗಿಯ ಕೊನೆಯಲ್ಲಿ ಇರುವ ವಾಷ್ ಬೇಸಿನ್ ಸಮೀಪ ಹೋದ ರವಿ ಪ್ರಕಾಶ ಶೌಚಾಲಯವನ್ನು ಗಮನಿಸಿದನು. ರೈಲಿನಲ್ಲಿ ಅನೇಕ ಸೌಕರ್ಯಗಳಿರುತ್ತವೆಂದು ಅಂದುಕೊಂಡನು.

ರೈಲು ಭೋಪಾಲ್‌ನಲ್ಲಿ ಬಹಳ ಹೊತ್ತು ನಿಂತಿತು. ರೈಲ್ವೆ ಪ್ಲಾಟಫಾರಂ ಮೇಲೆ ಕೂಡ ವಿವಿಧ ತರಹದ ಆಹಾರ ಪದಾರ್ಥಗಳು ಮಾರುತ್ತಿರುವುದನ್ನು ರವಿಪ್ರಕಾಶ ನೋಡಿದ. ಇಬ್ಬರೂ ಹಣ್ಣು, ನೆಲಗಡಲೆ ಖರೀದಿಸಿಕೊಂಡು ತಿಂದರು. ತಿಂದ ಮೇಲೆ ಕಸವೆಲ್ಲವನ್ನು ಒಂದು ಕವರ್‌ನಲ್ಲಿ ಹಾಕಿಕೊಂಡು ಪ್ಲಾಟಫಾರಂ ಮೇಲೆ ಇರುವ ಕಸದ ತೊಟ್ಟಿಯಲ್ಲಿ ಹಾಕಿದರು.

**ಗುಂಪಿನಲ್ಲಿ ಚರ್ಚಿಸಿರಿ :**



- ರವಿ ಪ್ರಕಾಶ್‌ಗೆ ಆಹಾರ ಪದಾರ್ಥಗಳು ಏಕೆ ಇಷ್ಟವಾಗಲಿಲ್ಲ ?
- ಊಟದಲ್ಲಿ ಯಾವ ಪದಾರ್ಥಗಳು ಇದ್ದರೆ ನಿನಗೆ ಸೇರುತ್ತದೆ ?
- ನೀವು ಪ್ರಯಾಣ ಮಾಡುತ್ತಿರುವಾಗ ಯಾವ ಪದಾರ್ಥಗಳನ್ನು ತಿಂದಿರುವಿರಿ ?
- ಪ್ರಯಾಣದಲ್ಲಿ ನೀವು ಆಹಾರ ಪದಾರ್ಥಳನ್ನು ತೆಗೆದುಕೊಂಡು ಹೋಗುತ್ತೀರಾ ? ಏಕೆ ?



SCERT TELANGANA

ರೈಲುಗಳು ವಿವಿಧ ರಾಜ್ಯಗಳ ಮೂಲಕ ಪ್ರಯಾಣ ಮಾಡುತ್ತವೆ. ವಿವಿಧ ರೀತಿಯ ವ್ಯಕ್ತಿಗಳ ಪರಿಚಯವಾಗುತ್ತವೆ. ರೈಲಿನಲ್ಲಿ ಎಲ್ಲಾ ರೀತಿಯ ಭಾಷೆಗಳನ್ನು ಮಾತನಾಡುವವರು ಪ್ರಯಾಣಿಸುತ್ತಾರೆ. ಆದ್ದರಿಂದ ರೈಲಿನಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರುತ್ತದೆ ಎಂದು ಮಾವಯ್ಯಾ ಹೇಳಿದನು.

### 11.2.3. ರೈಲಿನಲ್ಲಿ ಸ್ವಚ್ಛತೆ :

ರೈಲು ಹೋಗುತ್ತಾ ಇದೆ. ರೈಲಿನಲ್ಲಿ ಕೆಲವರು ಶೇಂಗಾ ತಿನ್ನುತ್ತಿದ್ದಾರೆ. ಇನ್ನೂ ಕೆಲವರು ಬಾಳೆ ಹಣ್ಣುಗಳು, ಕಿತ್ತಳೆ ಹಣ್ಣುಗಳನ್ನು ತಿನ್ನುತ್ತಿದ್ದಾರೆ. ಅವುಗಳ ಸಿಪ್ಪೆಗಳನ್ನು ಅಲ್ಲೇ ಬಿಸಾಡುತ್ತಿದ್ದರು. ಇದು ರವಿಗೆ ಇಷ್ಟವಾಗಲಿಲ್ಲ. ರೈಲು ಬೋಗಿಯಲ್ಲಿಯ ಕಸದ ತೊಟ್ಟಿಯಲ್ಲಿ ಹಾಕಬಹುದು ಅಲ್ಲವೇ ! ಎಂದುಕೊಂಡನು.

**ಗುಂಪಿನಲ್ಲಿ ಚರ್ಚಿಸಿರಿ :**



- ರೈಲಿನಲ್ಲಿ ತಿಂದ ಮೇಲೆ ಹಣ್ಣಿನ ಸಿಪ್ಪೆಗಳು, ಕಸಕಡ್ಡಿಗಳನ್ನು ಏನು ಮಾಡಬೇಕು ? ಎಲ್ಲಿ ಹಾಕಬೇಕು ?
- ರೈಲಿನ ಕಿಟಕಿಯಲ್ಲಿ ಕೈಗಳನ್ನು ತೋಳೆದರೆ ಏನಾಗುತ್ತದೆ ?
- ಶೌಚಾಲಯವನ್ನು ಉಪಯೋಗಿಸಿದ ನಂತರ ನೀರನ್ನು ಚೆನ್ನಾಗಿ ಹಾಕದಿದ್ದರೆ ಏನಾಗುತ್ತದೆ ?
- ರೈಲು ನಿಂತಾಗ ಶೌಚಾಲಯವನ್ನು ಉಪಯೋಗಿಸಬಾರದೆಂದು ಹೇಳುತ್ತಾರೆ ? ಏಕೆ ?

### 11.2.4. ರೈಲ್ವೆ ಸಿಗ್ನಲ್ಸ್ (ಸೂಚನೆಗಳು) :



ಮಾರನೆ ದಿನ, ರೈಲಿನಲ್ಲಿ ಪ್ರಯಾಣಿಸುತ್ತಿದ್ದ , ಅನಿತ ಎಂಬ ಹುಡುಗಿಯ ಪರಿಚಯವಾಯಿತು. ಅನಿತಳು ಸಹ ನಾವು ಪಾಲ್ಗೊಳ್ಳುವ ಕಾರ್ಯಕ್ರಮಕ್ಕೆ ಬರುತ್ತಿದ್ದಾಳೆಂದು ಹೇಳಿದಳು. ಒಂದು ಕಡೆ ರೈಲು ಬಹಳಷ್ಟು ಸಮಯವು ನಿಂತಿದೆ. ಏಕೆ ನಿಂತಿದೆ ಎಂದು ರವಿ ಪ್ರಕಾಶ್ ಕೇಳಿದನು. ಕೆಂಪು ದೀಪ ಬೆಳಗಿದೆ ಎಂದು ಅನಿತ ಹೇಳಿದಳು. ರೈಲಿಗೆ ಸಹ ಸಿಗ್ನಲ್ಸ್ ಇರುತ್ತವೆಯೇ ? ಎಂದು ರವಿ ಪ್ರಕಾಶ್ ಕೇಳಿದನು.

ರೈಲು ರಸ್ತೆಯನ್ನು ದಾಟುತ್ತಿರುವಾಗ ರೈಲು ಹಳಿಗಳ ಎರಡು ಕಡೆ ಗೇಟುಗಳನ್ನು ಹಾಕಿರುವುದನ್ನು ಅನಿತ ತೋರಿಸಿದಳು. ರೈಲು ಹೋದ ನಂತರ ಗೇಟುಗಳನ್ನು ತೆರೆದು ವಾಹನಗಳನ್ನು ಬಿಡುತ್ತಾರೆ ಎಂದು ಅನಿತ ಹೇಳಿದಳು. ಹಸಿರು ದೀಪ ಬೆಳಗಿದೆ. ರೈಲು ಹೊರಟಿದೆ.

**ಆಲೋಚಿಸಿರಿ...**

- ರೈಲಿಗೆ ಸಿಗ್ನಲ್ಸ್ ಏಕೆ ಇರುತ್ತವೆ ?
- ರೈಲ್ವೆ ಗೇಟ್‌ನ್ನು ಏಕೆ ಹಾಕುತ್ತಾರೆ ?

## ಗುಂಪಿನಲ್ಲಿ ಚರ್ಚಿಸಿರಿ :



- ರೈಲ್ವೆಗೇಟು ಹಾಕಿದಾಗ ಏಕೆ ದಾಟಬಾರದು ? ಎಂತಹ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು?
- ರೈಲಿನಲ್ಲಿ ಬಾಗಿಲ ಹತ್ತಿರ ಏಕೆ ನಿಲ್ಲಬಾರದು ?
- ರೈಲು ಪ್ರಯಾಣದಲ್ಲಿ ಇನ್ನೂ ಯಾವ ಜಾಗ್ರತೆಗಳನ್ನು ತೆಗೆದುಕೊಳ್ಳಬೇಕು ?
- ಪ್ರಯಾಣದಲ್ಲಿ ಕಡಿಮೆ ಸಾಮಾನುಗಳನ್ನು ಏಕೆ ತೆಗೆದುಕೊಂಡು ಹೋಗಬೇಕು ?
- ರೈಲನ್ನು ಅತ್ಯವಸರವಾಗಿ ನಿಲ್ಲಿಸುವುದಕ್ಕೆ ಎಂತಹ ಸೌಕರ್ಯವಿರುತ್ತದೆ ?

ರೈಲು ದಿನವೆಲ್ಲಾ ವಿವಿಧ ಪ್ರದೇಶಗಳ ಮೂಲಕ ಪ್ರಯಾಣಿಸುತ್ತದೆ. ಕಿಟಕಿಯಿಂದ ನೋಡಿದಾಗ ಬೆಟ್ಟಗಳು, ಅರಣ್ಯಗಳು, ನದಿಗಳು, ಬೆಳೆ ಪೈರುಗಳು, ಬ್ರಿಡ್ಜ್‌ಗಳು, ಸುರಂಗ ಮಾರ್ಗ, ಬೆಳೆಗಳಿಲ್ಲದ ಭೂಮಿಗಳು, ಮರಳು ಭೂಮಿಗಳು ಕಾಣುತ್ತವೆ.

ರೈಲು ಪ್ರಯಾಣದಲ್ಲಿ ಮತ್ತೊಂದು ದಿನ ಕಳೆದೆವು. ಡಿಲ್ಲಿಗೆ ಸೇರಿದೆವು ಎಂದು ವೇಣು ಗೋಪಾಲ ಹೇಳಿದನು. ಮಕ್ಕಳ ದಿನಾಚಾರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರವಿಪ್ರಕಾಶನು ಆ ಸ್ಪರ್ಧೆಗಳಲ್ಲಿ ಬಹುಮಾನವನ್ನು ಗೆದ್ದನು. ಪುನಃ ಪ್ರಯಾಣಕ್ಕೆ ವಿಮಾನದಲ್ಲಿ ಪ್ರಯಾಣಿಸುವುದಕ್ಕೆ ಅನುಮತಿ ನೀಡಿದರು. ಹೀಗೆ ವಿಮಾನಯಾನಕ್ಕೆ ಅವಕಾಶದೊರೆತ್ತಿದ್ದರಿಂದ ಎಲ್ಲರೂ ಬಹಳಷ್ಟು ಆನಂದಪಟ್ಟರು.




**ರವಿ ಪ್ರಕಾಶ್ ವಿಮಾನ ಪ್ರಯಾಣವನ್ನು ಕುರಿತು ಏನು ಹೇಳಿದ್ದಾನೆ ಹೇಳಿರಿ.**

### ಮುಖ್ಯ ಪದಗಳು :

| | | | | | |
|---|---|---|---|---|---|
| 1 | ಬಸ್ಸು ಪ್ರಯಾಣ | 4 | ರೈಲು ಪ್ರಯಾಣ | 7. | ರೈಲಿನಲ್ಲಿ ಸ್ವಚ್ಛತೆ |
| 2 | ಟಿಕೆಟ್ ತನಿಖೆ | 5 | ರೈಲ್ವೆ ಪ್ಲಾಟ್‌ಫಾರಂ | 8. | ರೈಲ್ವೆ ಸಿಗ್ನಲ್ಸ್ |
| 3 | ಟ್ರಾಫಿಕ್ ಸಿಗ್ನಲ್ಸ್ | 6 | ರೈಲ್ವೆ ಭೋಗಿಗಳು, ಪ್ರಯಾಣಿಕರು | 9. | ರೈಲ್ವೆ ಗೇಟ್‌ಗಳು |

SCERT TELANGANA

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1 (ವಿಷಯಾವಗಹನೆ) ತಿಳುವಳಿಕೆ :

ಅ) ಪ್ರಯಾಣದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳಾವುವು ?

ಆ) ಬಸ್ಸಿನಲ್ಲಿ ಯಾವ ಸೂಚನೆಗಳನ್ನು ಬರೆದಿರುತ್ತಾರೆ ?

ಇ) ರೈಲ್ವೆ ಗೇಟ್ ಹಾಕಿದಾಗ ರಸ್ತೆ ದಾಟಬಾರದು ಏಕೆ ?

ಈ) ವಾಹನಗಳನ್ನು ನಡೆಸುವಾಗ ಯಾವ ನಿಯಮಗಳನ್ನು ಪಾಲಿಸಬೇಕು ?

ಉ) ರೈಲು ಪ್ರಯಾಣಕ್ಕೆ, ಬಸ್ಸು ಪ್ರಯಾಣಕ್ಕೆ ಇರುವ ವ್ಯತ್ಯಾಸಗಳೇನು ?

ಊ) ಬೇರೆ ಪ್ರದೇಶಗಳಿಗೆ ಹೋಗುವಾಗ ರೈಲಿನಲ್ಲಿ ಹೆಚ್ಚಾಗಿ ಪ್ರಯಾಣ ಮಾಡುತ್ತಿರುತ್ತಾರೆ ಏಕೆ ?

ಋ) ಸಿಗ್ನಲ್ಸ್ ವ್ಯವಸ್ಥೆ ಇಲ್ಲದಿದ್ದರೆ ಏನಾಗುತ್ತಿತ್ತು ?

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ಬಸ್ಸು ನಿಲ್ದಾಣ ಅಥವಾ ರೈಲ್ವೆ ನಿಲ್ದಾಣದಲ್ಲಿ ವಿಚಾರಣೆ ಕೇಂದ್ರಗಳಿರುತ್ತವೆ. ನಾವು ಯಾವುದಾದರೂ ಪ್ರಯಾಣಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿದುಕೊಳ್ಳಬೇಕಾದರೆ ಇವರನ್ನು ಸಂಪರ್ಕಿಸಬಹುದು. ನೀವು ರೈಲಿನಲ್ಲಿ ಡಿಲ್ಲಿಗೆ ಹೋಗುವುದಕ್ಕೆ ವಿವರಗಳನ್ನು ತಿಳಿದುಕೊಳ್ಳಬೇಕಾದರೆ ಯಾವ ಯಾವ ಪ್ರಶ್ನೆಗಳನ್ನು ಕೇಳುತ್ತೀರಿ ?

### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ನಿಮ್ಮ ಸಮೀಪದಲ್ಲಿರುವ ಬಸ್ ನಿಲ್ದಾಣ / ರೈಲು ನಿಲ್ದಾಣವನ್ನು ಸಂದರ್ಶಿಸಿ, ಪರಿಶೀಲಿಸಿರಿ. ನಿಮ್ಮ ಪರಿಶೀಲನೆಗಳನ್ನು ಬರೆಯಿರಿ. ನಿಲ್ದಾಣದ ಹೆಸರು, ಶೌಚಾಲಯ, ಇವೆಯೇ ? ಪ್ರಯಾಣಿಕರಿಗೆ ಸೌಕರ್ಯಗಳು ಇವೆಯೇ ? ಪ್ರಯಾಣಿಕರಿಗೆ ಪ್ರಯಾಣಿಸುವ ವಿವರಗಳನ್ನು ತಿಳಿಸುವ ವಿಚಾರಣಾ ಫಲಕಗಳು ಇವೆಯೇ ? ಮುಂತಾದ ವಿವರಗಳನ್ನು ಪರಿಶೀಲಿಸಿ ಬರೆಯಿರಿ.

### 4 ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :

- ವಾರ್ತಾಪತ್ರಿಕೆಗಳನ್ನು ನೋಡಿರಿ. ನಿಮ್ಮ ಹತ್ತಿರದಲ್ಲಿರುವ ರೈಲು ನಿಲ್ದಾಣದಿಂದ ಯಾವ ಪ್ರದೇಶಗಳಿಗೆ ರೈಲಿನಲ್ಲಿ ಪ್ರಯಾಣ ಮಾಡಬಹುದೋ ವಿವರಗಳನ್ನು ಸಂಗ್ರಹಿಸಿರಿ.

| ರೈಲುಗಳ ಹೆಸರು | ಬಿಡುವ ಸ್ಥಳ | ಹೋಗುವ ಸ್ಥಳ | ಸ್ಟೇಷನ್‌ಗೆ ಬರುವ ಸಮಯ | ಹೋಗುವ ಸಮಯ |
|---|---|---|---|---|
| | | | | |

- ಒಂದು ರೈಲ್ವೆ ರಿಜರ್ವೇಷನ್ ಫಾರಂ ತೆಗೆದುಕೊಂಡು ತುಂಬಿರಿ. ಅದನ್ನು ನಿಮ್ಮ ಶಿಕ್ಷಕರಿಗೆ ತೋರಿಸಿ.

SCERT TELANGANA

**5 ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :**

ಅ) ತೆಲಂಗಾಣ ನಕ್ಷೆಯಲ್ಲಿ, ಮುಖ್ಯವಾದ ರೈಲ್ವೆ ಜಂಕ್ಷನ್‌ಗಳನ್ನು ಗುರ್ತಿಸಿರಿ.



ಆ) ರಟ್ಟುಗಳು, ಕಾಗದಗಳಿಂದ ರೈಲು / ಬಸ್ಸು ಮೊದಲಾದವುಗಳನ್ನು ತಯಾರು ಮಾಡಿ. ಪ್ರದರ್ಶಿಸಿರಿ.

ಇ) ನಿಮ್ಮ ಗ್ರಾಮದಿಂದ ಡಿಲ್ಲಿಗೆ ಹೋಗುವುದಕ್ಕೆ ಬಸ್ಸು, ರೈಲಿನಲ್ಲಿ ಪ್ರಯಾಣ ಮಾಡಿದರೆ ಯಾವ ಯಾವ ಪಟ್ಟಣಗಳ ಮೂಲಕ ಹೋಗಬೇಕಾಗುತ್ತದೆಯೋ ನಕ್ಷೆಯನ್ನು ನೋಡಿ ಹೇಳಿರಿ.

**6 ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :**

ಅ) ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ ತೆಗೆದುಕೊಳ್ಳಬೇಕಾದ ಜಾಗ್ರತೆಗಳಾವುವು ?

ಆ) ನೀನು ರೈಲಿನಲ್ಲಿ ಪ್ರಯಾಣ ಮಾಡಿ ಬಂದಿದ್ದೀಯೇ ? ಆ ಅನುಭವದಿಂದ ರೈಲು ಪ್ರಯಾಣದಲ್ಲಿ ಯಾವ ಜಾಗ್ರತೆಗಳನ್ನು ತೆಗೆದುಕೊಳ್ಳಬೇಕೆಂದು ನಿಮ್ಮ ಗೆಳೆಯರಿಗೆ ತಿಳಿಯಪಡಿಸಿರಿ ?

ಇ) ರೈಲಿನಲ್ಲಿ ಜಬಾಬ್ದಾರಿ ಇರುವ ಪ್ರಯಾಣಿಕರಾಗಿ ವ್ಯವಹರಿಸಬೇಕು. ಪರಿಶುಭ್ರತೆಯನ್ನು ಪಾಲಿಸಬೇಕು. ಇದಕ್ಕಾಗಿ ನೀನು ಏನು ಮಾಡುವಿರಿ?

ಈ) ನಾವು ಪ್ರಯಾಣಿಸುವಾಗ ನಮ್ಮ ಜೊತೆಗೆ ಇರುವ ಪ್ರಯಾಣಿಕರೊಡನೆ ಯಾವ ರೀತಿ ಪ್ರವರ್ತಿಸಬೇಕು ? ವೃದ್ದರು, ಮಹಿಳೆಯರಿಗೆ, ನಿನಗಿಂತ ಚಿಕ್ಕ ಮಳಕ್ಕಳಿಗೆ ನೀನು ಎಂತಹ ಸಹಾಯವನ್ನು ಮಾಡುವಿರಿ ?

## ನಾನು ಇವುಗಳನ್ನು ಮಾಡಬಲ್ಲೆನಾ ?

| | | |
|---|---|---|
| 1 | ರೈಲು, ಬಸ್ಸು ಪ್ರಯಾಣಗಳ ವಿವರಗಳನ್ನು, ತೆಗೆದುಕೊಳ್ಳಬೇಕಾದ ಮುಂಜಾಗ್ರತೆಗಳನ್ನು ಕುರಿತು ವಿವರಿಸುತ್ತೇನೆ. | ಹೌದು / ಇಲ್ಲ |
| 2 | ಪ್ರಯಾಣಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಕೇಳುತ್ತೇನೆ. | ಹೌದು / ಇಲ್ಲ |
| 3 | ಬಸ್ಸು / ರೈಲು ನಿಲ್ದಾಣದಲ್ಲಿಯ ಸೌಕರ್ಯಗಳ ವಿವರಗಳನ್ನು ಪರಿಶೀಲಿಸಿ ಬರೆಯುವೆನು. | ಹೌದು / ಇಲ್ಲ |
| 4 | ರೈಲು ನಿಲ್ದಾಣದಲ್ಲಿ ಬಂದು ಹೋಗುವ ರೈಲಿನ ವಿವರಗಳ ಪಟ್ಟಿಯನ್ನು ತಯಾರು ಮಾಡಬಲ್ಲೆನು. | ಹೌದು / ಇಲ್ಲ |
| 5 | ರಾಜ್ಯ ನಕ್ಷೆಯಲ್ಲಿ ರೈಲು ನಿಲ್ದಾಣವನ್ನು ಗುರ್ತಿಸುವೆನು. | ಹೌದು / ಇಲ್ಲ |
| 6 | ಪ್ರಯಾಣದಲ್ಲಿ ಜವಾಬ್ದಾರಿಯಿಂದ ವ್ಯವಹರಿಸುವೆನು. ಜೊತೆಯಲ್ಲಿರುವವರಿಗೆ ಸಹಾಯ ಮಾಡುವೆನು. | ಹೌದು / ಇಲ್ಲ |

SCERT TELANGANA

# 12 ಭಾರತ ದೇಶದ ಚರಿತ್ರೆ - ಸಂಸ್ಕೃತಿ

''ಕುಟುಂಬ ಚರಿತ್ರೆ'' ಯನ್ನು ಕುರಿತು ಮೂರನೇ ತರಗತಿಯಲ್ಲಿ ತಿಳಿದುಕೊಂಡಿದ್ದೀರಲ್ಲವೇ! ಕುಟುಂಬದಲ್ಲಿ ಅಜ್ಜನ ಕುರಿತು, ಅಜ್ಜನ ತಂದೆಯ ಕುರಿತು ಹೇಗೆ ತಿಳಿದುಕೊಳ್ಳಬೇಕು ? ನಮ್ಮ ಮನೆಯ ಹಿರಿಯರನ್ನು ಕೇಳಿದಾಗ ಅವರ ಕುಟುಂಬದ ಚರಿತ್ರೆ ಎಂದರೆ ಕುಟುಂಬದಲ್ಲಿ ಯಾರ್ಯಾರು ಇರುವರು. ಆ ಕುಟುಂಬಕ್ಕೆ ಸಂಬಂಧಿಸಿದ ಪ್ರಸಿದ್ಧ ವ್ಯಕ್ತಿಗಳು. ಆ ಕುಟುಂಬದವರು ಪೂರ್ವ ಕಾಲದಲ್ಲಿ ಎಲ್ಲಿ ವಾಸಿಸುತ್ತಿದ್ದರು. ಎಂತಹ ಮನೆಗಳಲ್ಲಿ ನಿವಾಸಿಸುತ್ತಿದ್ದರು ? ಅವರು ಎಂತಹ ಬಟ್ಟೆಗಳನ್ನು ಧರಿಸುತ್ತಿದ್ದರು ? ಎಂತಹ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು ಇಂತಹ ಅನೇಕ ವಿಷಯಗಳು ನಮಗೆ ತಿಳಿಸುತ್ತವೆ. ಅದೇ ರೀತಿಯಾಗಿ ಪ್ರತಿ ಗ್ರಾಮಕ್ಕೆ ಒಂದು ಚರಿತ್ರೆ ಇದೆ. ಈ ಊರಿಗೆ ಆ ಹೆಸರು ಹೇಗೆ ಬಂದಿದೆ ? ಊರಿನ ವೈಶಿಷ್ಟ್ಯಗಳೇನು ? ಪುರಾತನ ಕಾಲದಲ್ಲಿ ಆ ಊರು ಹೇಗಿತ್ತು, ಇಂತಹ ಅನೇಕ ವಿಷಯಗಳು ನಮ್ಮ ಹಿರಿಯರ ಮೂಲಕ ತಿಳಿದುಕೊಳ್ಳುತ್ತಾ ಇರುತ್ತೇವೆ. ಹೀಗೆ ಗತಿಸಿದ ಬಹಳಷ್ಟು ವಿಷಯಗಳನ್ನು ಚರಿತ್ರೆ ಎಂದು ಹೇಳುವರು.

## 12.1. ಪ್ರಾಚೀನ ಚರಿತ್ರೆ :

ಹಿಂದಿನ ಕಾಲದಲ್ಲಿ ಆದಿ ಮಾನವರು ಕಾಲ ಕ್ರಮೇಣವಾಗಿ ಯಾವ ರೀತಿಯಲ್ಲಿ ಬದಲಾವಣೆಗೆ ಒಳಪಟ್ಟಿರೆಂಬುದನ್ನು ಪ್ರಾಚೀನ ಚರಿತ್ರೆ ಹೇಳುತ್ತದೆ. ಹಿಂದಿನ ಕಾಲದಲ್ಲಿನ ಮಾನವನು ಹೇಗೆ ಇಂದಿನ ಮಾನವನಾಗಿ ಮಾರ್ಪಟ್ಟನು ಎಂಬುದನ್ನು ಚಿತ್ರದಲ್ಲಿ ಪರಿಶೀಲಿಸಿರಿ. ತರಗತಿಯಲ್ಲಿ ಚರ್ಚಿಸಿರಿ.



**ಆಲೋಚಿಸಿರಿ ...**

- ಮೇಲಿನ ಚಿತ್ರವನ್ನು ನೋಡಿದರೆ ನಿಮಗೆ ಏನು ಅನಿಸುತ್ತದೆ ?
- ಆಗಿನ ಮಾನವರಿಗೂ, ಈಗಿನ ಮಾನವರಿಗೂ ಇರುವ ವ್ಯತ್ಯಾಸಗಳೇನು ?

ಆದಿ ಮಾನವನು ಅಲೆಮಾರಿ ಜೀವನವನ್ನು ನಡೆಸುತ್ತಿದ್ದನು. ಬೆಟ್ಟ, ಗುಹೆಗಳಲ್ಲಿ, ಮರದ ಪೊಟರೆಗಳಲ್ಲಿ ನಿವಾಸಿಸುತ್ತಿದ್ದರು. ಪ್ರಾಣಿಗಳನ್ನು ಭೇಟೆಯಾಡಿ ಹಸಿ ಮಾಂಸವನ್ನು ತಿನ್ನುತ್ತಿದ್ದರು. ಕಾಲಕ್ರಮೇಣ ಬೆಂಕಿಯನ್ನು ಕಂಡು ಹಿಡಿದ ನಂತರ ಆಹಾರವನ್ನು ಸುಟ್ಟುಕೊಂಡು ತಿನ್ನುವುದನ್ನು ಕಲಿತರು.


SCERT TELANGANA

ವ್ಯವಸಾಯ ಮಾಡುವುದನ್ನು ಪ್ರಾರಂಭಿಸಿದರು. ಪಶುಗಳ ಸಾಕಣೆ ಮಾಡಿದರು. ಮಣ್ಣಿನ ಪಾತ್ರೆಗಳನ್ನು ತಯಾರು ಮಾಡಿಕೊಂಡು ಆಹಾರವನ್ನು ತಯಾರಿಸಿಕೊಳ್ಳುತ್ತಿದ್ದರು. ವಸ್ತುಗಳನ್ನು ಮಣ್ಣಿನ ಪಾತ್ರೆಯಲ್ಲಿ ಇಡುತ್ತಿದ್ದರು. ಈ ಮಣ್ಣಿನ ಪಾತ್ರೆಗಳನ್ನು ಆಕರ್ಷಣೀಯವಾಗಿ ಅಲಂಕರಿಸುತ್ತಿದ್ದರು. ಆಹಾರ ಶೇಖರಣೆ ಹಂತದಿಂದ ಆಹಾರವನ್ನು ಉತ್ಪತ್ತಿಮಾಡುವ ಹಂತಕ್ಕೆ ಸೇರಿದರು. ಚಕ್ರವನ್ನು ಸಹ ಕಂಡು ಹಿಡಿದರು. ಇದರಿಂದ ಮಾನವ ಜೀವನ ವಿಧಾನದಲ್ಲಿ ಅನೇಕ ಬದಲಾವಣೆಗಳು ಬಂದಿವೆ.

## 12.2. ಭಾರತ ದೇಶದ ಚರಿತ್ರೆ :

ಕುಟುಂಬ ಚರಿತ್ರೆ, ಊರಿನ ಚರಿತ್ರೆಯ ಹಾಗೆ ಭಾರತದ ದೇಶಕ್ಕೂ ಸಹ ಒಂದು ಚರಿತ್ರೆ ಇದೆ. ಭಾರತ ದೇಶದಲ್ಲಿ ಹಿಂದಿನ ಕಾಲದಿಂದ ನಡೆದ ಬಹಳ ಸಂಘಟನೆಗಳು. ಪ್ರಜೆಗಳ ಜೀವನ ವಿಧಾನದಲ್ಲಿ ಬಂದ ಬದಲಾವಣೆಗಳನ್ನು ಕುರಿತು ತಿಳಿಯಪಡೆಸುವುದೇ ಚರಿತ್ರೆ. ಹಾಗಾದರೆ ಚರಿತ್ರೆಯನ್ನು ತಿಳಿದುಕೊಳ್ಳವುದು ಹೇಗೆ? ಆಲೋಚಿಸಿರಿ.

ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೆ ಪುರಾತನ ವಸ್ತು ಇಲಾಖೆಯವರು ಅನೇಕ ಕಡೆ ಉತ್ಖನನವನ್ನು ಕೈಗೊಂಡಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವದಕ್ಕಿಂತ ಮುಂಚೆಯೇ ಬ್ರಿಟೀಷ್ ದೇಶಕ್ಕೆ ಸೇರಿದ ಸರ್‌ಜಾನ್ ಮಾರ್ಷಲ 1922 ರಲ್ಲಿ ಸಿಂಧು ನದಿ ಪ್ರದೇಶದಲ್ಲಿ ಭೂಮಿಯನ್ನು ಉತ್ಖನನ ಮಾಡಿಸಿದನು. ಇದರಿಂದ ಹರಪ್ಪಾ ನಾಗರೀಕತೆಯ ಅಸ್ಥಿತ್ವ ತಿಳಿದು ಬಂದಿದೆ. ಸಿಂಧೂ ನಾಗರೀಕತೆ, ಒಂದು ಪಟ್ಟಣ ನಾಗರೀಕತೆ, ಪಟ್ಟಣಗಳನ್ನು ಒಂದು ಯೋಜನಾಬದ್ದವಾಗಿ ನಿರ್ಮಿಸಿದ್ದರು. ದೊಡ್ಡ ಭವನಗಳು, ಬೀದಿಗಳು, ವ್ಯವಸ್ಥಿತವಾಗಿ ನಿರ್ಮಿಸಿದರು. ಹರಪ್ಪಾ ಪ್ರಜೆಗಳ ಮುಖ್ಯ ವೃತ್ತಿ ವ್ಯವಸಾಯ. ಗೋಧಿ, ಭತ್ತ, ಬಾರ್ಲಿ ಪ್ರಧಾನ ಆಹಾರದ ಬೆಳೆಗಳು, ತಾಮ್ರ, ಕಂಚು, ಸೀಸ, ಬೆಳ್ಳಿ ಲೋಹಗಳಿಂದ ಇವರು ವಿಧ ವಿಧವಾದ ವಸ್ತುಗಳನ್ನು ತಯಾರು ಮಾಡುತ್ತಿದ್ದರು. ಹರಪ್ಪಾ ಪ್ರಜೆಗಳು ಪಶ್ಚಿಮ ಏಪ್ಯಾ ಈಜಿಪ್ಟ್ ದೇಶಗಳಲ್ಲಿ ವಾಣಿಜ್ಯ ವ್ಯಾಪಾರ ಮಾಡುತ್ತಿದ್ದರು. ಇವರ ಪ್ರಧಾನ ವ್ಯಾಪಾರ ಕೇಂದ್ರ 'ಲೋಥಾಲ್' ಇವರು ಪ್ರಧಾನವಾಗಿ 'ಪಶುಪತಿಯನ್ನು' ಪೂಜಿಸುತ್ತಿದ್ದರು. ಇವರ ಲಿಪಿ ಗೊಂಬೆಗಳಿಂದ ಕೂಡಿರುತ್ತವೆ.

**ಆಲೋಚಿಸಿರಿ...**

- **ನಾಗರೀಕತೆಗಳು ನದಿಗಳ ಸಹಾಯದಿಂದ ಏಕೆ ಬೆಳೆಯುತ್ತವೆಯೋ ಚರ್ಚಿಸಿ, ಬರೆಯಿರಿ.**
- **ಸಿಂಧೂ ನಾಗರೀಕತೆಯನ್ನು ಈಗಿನ ನಾಗರೀಕತೆಗೆ ಹೋಲಿಸಿರಿ.**

ಭಾರತದೇಶದ ಚರಿತ್ರೆ ತಿಳಿದುಕೊಳ್ಳುವುದಕ್ಕೆ ಉತ್ಖನನ ಮಾಡುವುದಲ್ಲದೇ ಕಟ್ಟಡಗಳು, ನಿರ್ಮಾಣಗಳು, ಶಾಸನಗಳು, ಗ್ರಂಥಗಳು, ಉಪಯೋಗವಾಗುತ್ತವೆ. ಪುರಾತನ ಕಾಲದ ವಸ್ತುಗಳ ಅವಶೇಷಗಳನ್ನು ಸಂಗ್ರಹಿಸಿ, ಒಂದು ಸ್ಥಳದಲ್ಲಿ ಭದ್ರಪಡಿಸುತ್ತಾರೆ. ಇವುಗಳನ್ನೇ ಚಾರಿತ್ರಿಕ ಮ್ಯೂಜಿಯಂಗಳೆನ್ನುತ್ತಾರೆ. ಇಂತಹುದೇ ಹೈದ್ರಾಬಾದ್‌ನಲ್ಲಿರುವ ಸಾಲಾರ್‌ಜಂಗ್ ಮ್ಯೂಜಿಯಂ. ಹಾಗೆಯೇ ಗಿರಿಜನ ಸಂಸ್ಕೃತಿ ಸಂಪ್ರದಾಯಗಳನ್ನು ತಿಳಿದುಕೊಳ್ಳುವುದಕ್ಕೆ ಗಿರಿಜನ ಸಂಸ್ಕೃತಿ ವಸ್ತು ಸಂಗ್ರಹಾಲಯ ಶ್ರೀಶೈಲದಲ್ಲಿದೆ. ಹೀಗೆ ನಮ್ಮ ಸಂಸ್ಕೃತಿ ಸಂಪ್ರದಾಯ ಗಳು ನಮ್ಮ ಪಾರಂಪರ್ಯವಾದ ಸಿರಿಸಂಪತ್ತನ್ನು ತಿಳಿದುಕೊಳ್ಳುವುದಕ್ಕೆ ಮ್ಯೂಜಿಯಂಗಳೇ ಸಹಕಾರಿಯಾಗಿವೆ.



ಸಾಲಾರ್ಜಂಗ್ ವಸ್ತು ಸಂಗ್ರಹಾಲಯ

ಗ್ರಂಥಗಳು, ಗ್ರಂಥಾಲಯಗಳಿಂದಲೂ ಸಹ ನಾವು ಇತಿಹಾಸವನ್ನು ತಿಳಿದುಕೊಳ್ಳಬಹುದು.

**ಗುಂಪಿನಲ್ಲಿ ಚರ್ಚಿಸಿರಿ :**



- ಮ್ಯೂಜಿಯಂಗೆ ಹೋದರೆ, ಮ್ಯೂಜಿಯಂಗಳಲ್ಲಿ ಏನು ಇರುತ್ತವೆ ?
- ನಿಮ್ಮ ವಸ್ತು ಸಂಗ್ರಹಾಲಯವನ್ನು ಏರ್ಪಾಟು ಮಾಡಿದರೆ, ಯಾವ ವಸ್ತುಗಳನ್ನು ಭದ್ರಪಡಿಸಲು ಇಚ್ಛಿಸುವಿರಿ ?
- ನಮ್ಮ ಚರಿತ್ರೆಯನ್ನು ಯಾವ ಅಂಶಗಳ ಮೂಲಕ ತಿಳಿದುಕೊಳ್ಳಬಹುದು ?
- ಚರಿತ್ರೆ ಎಂದರೇನು ? ನಮ್ಮ ಪೂರ್ವಿಕರು ಹೇಗೆ ನಿವಾಸಿಸುವರೋ, ಹೇಗೆ ಜೀವನ ನಡೆಸುವವರು ಎಂದು ತಿಳಿದುಕೊಳ್ಳಬಹುದು ?

## 12.3. ಸಂಸ್ಕೃತಿ :

ನಾವು ಧರಿಸುವ ಬಟ್ಟೆಗಳು, ಮಾತನಾಡುವ ಭಾಷೆ, ಆಚರಿಸುವ ಹಬ್ಬಗಳು, ಜಾತ್ರೆಗಳು, ಬೆಳೆಗಳು, ಆಟಗಳು, ಹಾಡುಗಳು, ಮೊದಲಾದವು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಾವು ಯಾವುದೇ ಹೊಸ ಪ್ರಾಂತಕ್ಕೆ ಹೋಗಿದ್ದೇವೆಂದು ಭಾವಿಸಿರಿ. ಅಲ್ಲಿನ ಜನರ ವೇಷ, ಭಾಷೆಗಳು, ಆಹಾರದ ಅಭ್ಯಾಸಗಳು ನಮ್ಮಂತೆ ಇರುವುದಿಲ್ಲ ಅದು ಅವರ ಸಂಸ್ಕೃತಿ.

ನಮ್ಮ ಜೀವನ ವಿಧಾನಗಳಲ್ಲಿ, ಆಲೋಚನೆಗಳಲ್ಲಿ, ದಿನನಿತ್ಯದ ಕೆಲಸಗಳಲ್ಲಿ, ಕಲೆಗಳಲ್ಲಿ, ಸಾಹಿತ್ಯದಲ್ಲಿ, ಮನರಂಜನೆಯಲ್ಲಿ, ಸುಖ ಸಂತೋಷದಲ್ಲಿ ನಮ್ಮ ಸಂಸ್ಕೃತಿ ಅಭಿವ್ಯಕ್ತಗೊಳ್ಳುತ್ತದೆ. ಹಿರಿಯರನ್ನು ಗೌರವಿಸುವುದು, ಇತರರಿಗೆ ಸಹಾಯ ಮಾಡುವುದು, ಸಹಾಯ ಮಾಡಿದವರಿಗೆ ಕೃತಜ್ಞತೆ ಹೇಳುವುದು, ಪ್ರಾರ್ಥನಾ ಮಂದಿರಗಳಲ್ಲಿ ಪೂಜೆ ಮಾಡುವುದು ಸಹಾ ನಮ್ಮ ಸಂಸ್ಕೃತಿಯಾಗಿದೆ. ಗಿಡಗಳನ್ನು, ಪಕ್ಷಿಗಳನ್ನು, ಜಂತುಗಳನ್ನು, ಗಾಳಿಯನ್ನು, ನೀರನ್ನು, ಬೆಂಕಿಯನ್ನು ಆರಾಧಿಸುವ ಮೂಲಕ ಪ್ರಕೃತಿಯನ್ನು ಗೌರವಿಸುತ್ತೇವೆ. ಜೀವರಾಶಿಗಳೆಲ್ಲ ಸಮಾನ ಎಂಬ ಭಾವನೆ ಹುಟ್ಟುವಂತೆ ಜೀವ ವೈವಿಧ್ಯತೆಗೆ ಪ್ರಾಮುಖ್ಯತೆಯನ್ನು ಕೊಡುವಂತೆ ನಮ್ಮ ಸಂಸ್ಕೃತಿ ಇರುವುದು ನಮ್ಮ ದೇಶಕ್ಕೆ ಹೆಮ್ಮೆಯಾಗಿದೆ.

ಭಾರತದ ಸಂಸ್ಕೃತಿಗೆ ಪ್ರಪಂಚದಲ್ಲಿಯೇ ಪ್ರತ್ಯೇಕವಾದ ಸ್ಥಾನ, ಮಾನ್ಯತೆ, ಗೌರವ ಇದೆ. ಅದ್ಭುತವಾದ ಶಿಲ್ಪಕಲಾ ಕೌಶಲ್ಯದಿಂದ ಗೋಚರಿಸುತ್ತಿರುವ ಕಟ್ಟಡಗಳು, ಸಂಗೀತ, ನೃತ್ಯ, ಚಿತ್ರಕಲೆ, ಪುರಾಣಗಳು, ಇತಿಹಾಸಗಳು ನಮ್ಮ ಸಾಂಸ್ಕೃತಿಕ ಸಂಪತ್ತಿನ ಪರಂಪರೆಯಾಗಿದೆ. ನಾವು ನಮ್ಮ ಸಂಸ್ಕೃತಿಯನ್ನು ಕಾಪಾಡಬೇಕು. ಭವಿಷ್ಯತ್ತಿನ ತಲೆಮಾರುಗಳಿಗೆ ಲಭಿಸುವಂತೆ ಮಾಡಬೇಕು.

## 12.4. ಭಾರತ ದೇಶದ ಚರಿತ್ರೆಯನ್ನು ತಿಳಿಸುವ ಕೆಲವು ಐತಿಹಾಸಿಕ ಸ್ಮಾರಕಗಳು :

ನಮ್ಮ ದೇಶದ ಚರಿತ್ರೆ, ಸಂಸ್ಕೃತಿಗಳನ್ನು ತಿಳಿಸುವ ಪುರಾತನ ಕಟ್ಟಡಗಳು, ಪ್ರಾಚೀನ ಶಾಸನಗಳು, ದೇವಾಲಯಗಳು, ಸ್ತೂಪಗಳು, ಕಟ್ಟಡಗಳು, ಕೋಟೆಗಳು, ಮೊದಲಾದವುಗಳು ನಮ್ಮ ದೇಶದಲ್ಲಿ ಸಾಕಷ್ಟು ಇವೆ. ಇವುಗಳನ್ನು ನೋಡುವುದರ ಮೂಲಕ ಅಲ್ಲಿನ ವಿವರಗಳನ್ನು ಸಂಗ್ರಹಿಸುವುದರ ಮೂಲಕ, ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಬಹುದು. ನಮ್ಮ ದೇಶದ ಚರಿತ್ರೆಗೆ ಸಂಬಂಧಿಸಿದ ಕೆಲವು ಐತಿಹಾಸಿಕ ಸ್ಮಾರಕಗಳನ್ನು ನೋಡಿರಿ.



### ಸಾರನಾಥ ಸ್ತೂಪ :

ಸಾರನಾಥ್ ಸ್ತೂಪವನ್ನು ಅಶೋಕನು ನಿರ್ಮಿಸಿದನು. ಇಟ್ಟಿಗೆಗಳಿಂದಾಗಲೀ, ಕಲ್ಲುಗಳಿಂದಾಲಿ ನಿರ್ಮಿಸಿದ ಗುಮ್ಮಟ ಆಕಾರದಲ್ಲಿರುವ ನಿರ್ಮಾಣವನ್ನು ಸ್ತೂಪ ಎನ್ನುವರು. ಸಾರನಾಥ್ ಸ್ತೂಪವು ಉತ್ತರ ಪ್ರದೇಶ ರಾಜ್ಯದ ವಾರಣಾಸಿಯ ಹತ್ತಿರ ಇರುವ ಸಾರನಾಥ್‌ನಲ್ಲಿದೆ. ಇದು ಅತಿ ಪ್ರಾಚೀನವಾದ ಸ್ಮಾರಕ.

SCERT TELANGANA

## ಅಶೋಕನ ಸ್ತಂಭ :



ಇದು ಉದ್ದವಾಗಿರುವ ಒಂದು ಕಲ್ಲಿನ ಸ್ತಂಭ. ಇದರ ಮೇಲೆ ನಾಲ್ಕು ಸಿಂಹದ ಮುಖಗಳನ್ನು ಕೆತ್ತಿದ್ದಾರೆ. ನಮ್ಮ ನಾಣ್ಯಗಳ ಮೇಲೆ ಇರುವ ಮುದ್ರೆ ಇದೆ. ಈ ನುಣಗಿಸಿದೆ. ಶಿಲಾ ಸ್ತಂಭವು ರಾಜಸ್ಥಾನ ಶಿಲ್ಪಕಲೆ ಶೈಲಿಯಲ್ಲಿದೆ. ಸ್ಥಂಭಗಳನ್ನು ಕಲ್ಲಿನಿಂದ ನಿರ್ಮಿಸಿದ್ದಾರೆ. ಸ್ತಂಭವನ್ನು ವಾರಣಾಸಿ ಹತ್ತಿರದಲ್ಲಿರುವ ಚೂನಾರ್‌ನಲ್ಲಿ ದೊರೆಯುವ ಶಿಲೆಯಿಂದ ನಿರ್ಮಿಸಿದ್ದಾರೆ.



## ತೆಲಂಗಾಣ ಅಮರ ವೀರರ ಸ್ಮಾರಕ :

ಇದು ಹೈದರಾಬಾದಿನಲ್ಲಿ ವಿಧಾನಸೌಧ (ಅಸೆಂಬ್ಲಿ) ದ ಮುಂದೆ ಇದೆ. 1969 ರಲ್ಲಿ ತೆಲಂಗಾಣ ಚಳುವಳಿಯಲ್ಲಿ ಆತ್ಮ ಬಲಿದಾನ ಗೈದ ಅಮರರ ನೆನಪಿಗಾಗಿ ಇದನ್ನು ಸ್ಥಾಪಿಸಿದ್ದಾರೆ. ಇದು ತೆಲಂಗಾಣ ಹೋರಾಟದ ಸ್ಫೂರ್ತಿಯನ್ನು ಯಾವಾಗಲೂ ನೆನಪಿಗೆ ತರುವ ಸ್ಮಾರಕವಾಗಿದೆ.



## ಕುತೂಬ್ ಮೀನಾರ್

ಕುತುಬ್ ಮಿನಾರ್‌ನ ಎತ್ತರ 225 ಮೀಟರಗಳಷ್ಟು ಇರುತ್ತದೆ, ಇದು ನಮ್ಮ ದೇಶದ ರಾಜಧಾನಿಯ ದೆಹಲಿಯಲ್ಲಿದೆ. ಈ ಸ್ಮಾರಕದ ನಿರ್ಮಾಣವನ್ನು ಕುತ್ಬುದ್ದೀನ್ ಐಬಕ್‌ನು ಪ್ರಾರಂಭಿಸಿದನು. ಇಲ್ತಮಷ್‌ನು ಪೂರ್ಣಗೊಳಿಸಿದನು.

## ಕೆಂಪು ಕೋಟೆ



ಕೆಂಪುಕೋಟೆ ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿದೆ. ಈಗಲೂ ಸಹ ಇದರ ಮೇಲೆ ರಾಷ್ಟ್ರೀಯ ದಿನಾಚಾರಣೆಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸುತ್ತಾರೆ. ಇದನ್ನು ಕೆಂಪು ಕಲ್ಲು ಗಳಿಂದ ನಿರ್ಮಿಸಿದ್ದಾರೆ. ಇದರಲ್ಲಿ ಪರ್ಷಿಯನ್ ಭಾರತೀಯ ವಿಧಾನಗಳನ್ನು ಸ್ಪಷ್ಟವಾಗಿ ಕಾಣಿಸುತ್ತದೆ.



## ಚಾರ್ಮಿನಾರ್

ಚಾರ್ಮಿನರ್ ನಮ್ಮ ರಾಜ್ಯದಲ್ಲಿ ಹೈದ್ರಾಬಾದ್ ನಗರದಲ್ಲಿದೆ. ಇದರ ಎತ್ತರ 58 ಮೀಟರ್‌ಗಳು. ಇದರ ಮೇಲೆ ನಾಲ್ಕು ಗೋಪುರಗಳಿವೆ. ಇದನ್ನೇ 1591 ನೇ ವರ್ಷದಲ್ಲಿ ನಿರ್ಮಿಸಿದ್ದಾರೆ.



## ಸಾವಿರ ಸ್ಥಂಭಗಳ ದೇವಾಲಯ

ಇದು ನಮ್ಮ ರಾಜ್ಯದಲ್ಲಿ ವರಂಗಲ್ ಪಟ್ಟಣದಲ್ಲಿದೆ. ಇದು ಕಾಕತೀಯರ ಕಾಲಕ್ಕೆ ಸಂಬಂಧಿಸಿರುವಂತಹುದು ಇದು ಅದ್ಭುತವಾದ ಶಿಲ್ಪಕಲಾಕೃತಿಯನ್ನು ಹೊಂದಿದೆ.

SCERT TELANGANA

**ಗುಂಪಿನಲ್ಲಿ ಚರ್ಚಿಸಿರಿ :**



- ಪ್ರಮುಖವಾದ ಕಟ್ಟಡಗಳ ಮೂಲಕ ನಾವು ಏನು ತಿಳಿದುಕೊಳ್ಳಬಹುದು ?
- ಇವುಗಳಿಗೆ ಸಂಬಂಧಿಸಿದ ಇನ್ನಷ್ಟು ವಿವರಗಳ ಪುಸ್ತಕಗಳನ್ನು ಓದಿ, ಸಂಗ್ರಹಿಸಿ, ಚರ್ಚಿಸಿರಿ.

## 12.5. ಭಾರತ ದೇಶದ ಚರಿತ್ರೆಯಲ್ಲಿನ ಕೆಲವು ಪ್ರಮುಖರು :

### ಅಶೋಕ



ಮೌರ್ಯ ಸಾಮ್ರಾಜ್ಯದ ಸ್ಥಾಪಕನು ಚಂದ್ರಗುಪ್ತ. ಈತನ ಮೊಮ್ಮಗ ಅಶೋಕ. ಅಶೋಕನು ಮೌರ್ಯಸಾಮ್ರಾಜ್ಯದ ಪ್ರಸಿದ್ಧ ರಾಜರಲ್ಲಿ ಒಬ್ಬ ಈತನು ಕಳಿಂಗ ಯುದ್ಧದ ನಂತರ ಬೌದ್ಧ ಮತವನ್ನು ಸ್ವೀಕರಿಸಿದನು. ಅಹಿಂಸಾ ಮಾರ್ಗವನ್ನು ಬೋಧಿಸುತ್ತಾ ಬೌದ್ದ ಮತದ ಏಳಿಗೆಗೆ ಕೃಷಿ ಮಾಡಿದನು. ನಮ್ಮ ರಾಷ್ಟ್ರೀಯ ಧ್ವಜದ ಮಧ್ಯೆ ಇರುವ ಧರ್ಮಚಕ್ರವನ್ನು ಅಶೋಕನ ಸಾರನಾಥ್ ಸ್ತೂಪದಿಂದ ತೆಗೆದುಕೊಳ್ಳಲಾಗಿದೆ.



### ಚಂದ್ರಗುಪ್ತ ವಿಕ್ರಮಾದಿತ್ಯ

ಕ್ರಿ.ಪೂ. 320 ನೇ ವರ್ಷದಲ್ಲಿ ಶ್ರೀಗುಪ್ತನು ಗುಪ್ತ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಗುಪ್ತ ವಂಶಸ್ಥರಲ್ಲಿ ಸುಪ್ರಸಿದ್ದನಾದ ಚಂದ್ರಗುಪ್ತ ವಿಕ್ರಮಾಧಿತ್ಯನ ಆಸ್ಥಾನದಲ್ಲಿ ನವರತ್ನಗಳು ಎನ್ನುವ ಕವಿಗಳಿದ್ದರು. ಇವರಲ್ಲಿ ಕಾಳಿದಾಸನು ಪ್ರಸಿದ್ಧಿ ಹೊಂದಿದವನು. ಪ್ರಪಂಚ ಪ್ರಸಿದ್ಧಿ ಹೊಂದಿದ ಎಲ್ಲೋರ ಗುಹೆಗಳು ಇವರ ಕಾಲಕ್ಕೆ ಸಂಬಂಧಿಸಿರುವುದು. ಇವರ ಕಾಲದಲ್ಲಿ ಶಿಲ್ಪಕಲೆ, ಚಿತ್ರಕಲೆ ಎಷ್ಟೋ ಅಭಿವೃದ್ಧಿ ಹೊಂದಿದೆ.

### ಗಣಪತಿ ದೇವನು, ರುದ್ರಮ್ಮದೇವಿ



ಕಾಕತೀಯರಲ್ಲಿ ಗಣಪತಿ ದೇವನು, ಈತನ ಕುಮಾರಿ ರುದ್ರಮದೇವಿ ಪ್ರಸಿದ್ಧಿ ಹೊಂದಿರುವವರು. ಇವರು ತೆಲುಗು ಭಾಷೆ ಮಾತನಾಡುವವರೆಲ್ಲರನ್ನು ಒಂದಾಗಿ ಮಾಡಿದರು. ಇವರ ಕಾಲದಲ್ಲಿ ವರಂಗಲ್ಲು ಕೋಟೆ, ಸಾವಿರ ಸ್ತಂಭಗಳ ಗುಡಿ, ರಾಮಪ್ಪದೇವಾಲಯ, ರಾಮಪ್ಪ, ಪಾಕಲ ಎನ್ನುವ ಕೆರೆಗಳನ್ನು ನಿರ್ಮಿಸಿದ್ದಾರೆ.

SCERT TELANGANA



## ಶ್ರೀಕೃಷ್ಣ ದೇವರಾಯರು

ವಿಜಯನಗರ ರಾಜರುಗಳಲ್ಲಿ ಶ್ರೀಕೃಷ್ಣ ದೇವರಾಯ ಪ್ರಮುಖನು. 1509 ರ ವರ್ಷದಿಂದ 1529 ರ ವರೆಗೆ ವಿಜಯನಗರ ರಾಜ್ಯವನ್ನು ಆಳಿದನು. ಇತನ ಕಾಲದಲ್ಲಿ ಅಷ್ಟದಿಗ್ಗಜರು ಎನ್ನುವ ಕವಿಗಳು ಇದ್ದರು. ಈತನು ಸಹ ಸ್ವಯಂಕವಿ. ಈತನು 'ಅಮುಕ್ತಮೌಲ್ಯ' ಎನ್ನುವ ಗ್ರಂಥವನ್ನು ರಚಿಸಿದ್ದಾನೆ. ''ದೇಶ ಭಾಷಲಂದು ತೆಲುಗು ಲೆಸ್ಸಾ'' ಎಂದು ಹೇಳಿದ್ದು ಸಹ ಈತನೇ.

## ಅಕ್ಬರ್



ನಮ್ಮ ದೇಶವನ್ನು ಆಳಿದ ಮೊಘಲ್ ಚಕ್ರವರ್ತಿಗಳಲ್ಲಿ ಅಕ್ಬರ್ ಪ್ರಮುಖನು. ಈತನು ಮುಸ್ಲಿಂ ಕುಲದವನು. ಇತರೆ ಮತಗಳನ್ನು ಸಹ ಗೌರವಿಸುತ್ತಿದ್ದನು. ಈತನ ಕಾಲದಲ್ಲಿ ಸಾಹಿತ್ಯ, ಆಡಳಿತದಲ್ಲಿ ವಿಶೇಷವಾದ ಹೆಸರನ್ನು ಪಡೆದಿದ್ದನು.



## ಛತ್ರಪತಿ ಶಿವಾಜೀ

ಮೊಘಲರನ್ನು ಎದುರಿಸಿ, ಮರಾಠ ರಾಜ್ಯವನ್ನು ಸ್ಥಾಪಿಸಿದ ಪ್ರಸಿದ್ಧ ವೀರನು ಶಿವಾಜಿ. ಈತನು ಸಹ ಹಿಂದು ಮತಸ್ಥನಾದರು ಪರಮತ ಸಹಿಷ್ಣುತೆ ಹೊಂದಿದ್ದ ಪ್ರಸಿದ್ದ ರಾಜನೆಂದು ಹೆಸರನ್ನು ಸಂಪಾದಿಸಿಕೊಂಡಿದ್ದನು. ಶಿವಾಜಿಯ ಗುರುಗಳಾದ ತುಕಾರಂ ಸಮರ್ಥ ರಾಮದಾಸು, ಈತನ ಕಾಲದವನು.

## ಮೀರ್ ಉಸ್ಮಾನ ಅಲಿ ಖಾನ್



ಹೈದರಾಬಾದ ರಾಜ್ಯವನ್ನು ನಿಜಾಂ ವಂಶಸ್ಥರು ಪಾಲಿಸಿದ್ದಾರೆ. ಇವರು ಮಹಮ್ಮದಿಯರು ದಖನಿ ಉರ್ದೂ ಮಾತನಾಡುತ್ತಿದ್ದರು. ಆದರೆ ರಾಜ್ಯದಲ್ಲಿಯ ಹೆಚ್ಚಿನ ಪ್ರತಿಶತ ಜನರು ಹಿಂದುಗಳು ಇವರು ತೆಲುಗು, ಕನ್ನಡ, ಮರಾಠಿ ಮಾತನಾಡುವವರು. ಹೈದರಾಬಾದ ರಾಜ್ಯದ ಕೊನೆಯ ಪಾಲಕನಾದ ಮೀರ್ ಉಸ್ಮಾನ ಅಲಿಖಾನ್ ಬ್ರಿಟೀಷರ ಪ್ರಭಾವದಿಂದ ವ್ಯವಸಾಯವನ್ನು ಕಾರ್ಖಾನೆಗಳನ್ನು ಅಭಿವೃದ್ಧಿ ಮಾಡಿದರು. ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು.

ನಿಜಾಂಸಾಗರ, ಅಲಿಸಾಗರದಂತಹ ದೊಡ್ಡ ಪ್ರಾಜೆಕ್ಟಗಳ ನಿರ್ಮಾಣವನ್ನು ಮಾಡಿದರು. 1920ನೇ ವರ್ಷದಲ್ಲಿ ಮೂಸಿ ನದಿಯ ಮೇಲೆ ಉಸ್ಮಾನಸಾಗರ ಆಣೆಕಟ್ಟನ್ನು ನಿರ್ಮಿಸಿ ಹೈದರಾಬಾದ ನಗರದ ಪ್ರಜೆಗಳಿಗೆ ಒಳ್ಳೆಯ ನೀರಿನ ಸೌಕರ್ಯವನ್ನು ಕಲ್ಪಿಸಿದರು.

SCERT TELANGANA

## ಗುಂಪಿನಲ್ಲಿ ಚರ್ಚಿಸಿರಿ :



- ನಮ್ಮ ದೇಶಕ್ಕೆ ಸೇರಿದ ಕೆಲವು ಪ್ರಮುಖರನ್ನು ಕುರಿತು ತಿಳಿದುಕೊಂಡಿದ್ದೀರಲ್ಲವೇ! ಇವರಲ್ಲಿರುವ ವಿಶಿಷ್ಟತೆ ಏನು ?
- ಇವರ ಮೂಲಕ ನಾವು ಗ್ರಹಿಸಬೇಕಾದ ಅಂಶಗಳೇನು ?

## ಮುಖ್ಯ ಪದಗಳು :

| | | | | | |
|---|---|---|---|---|---|
| 1 | ಚರಿತ್ರೆ | 4 | ಜೀವನ ವಿಧಾನ | 7 | ಸಾಮ್ರಾಜ್ಯ |
| 2 | ಸಂಸ್ಕೃತಿ | 5 | ನಾಗರೀಕತೆ | 8 | ಪಾಲಕರು |
| 3 | ಆದಿ ಮಾನವರು | 6 | ದೇಶ ಸಂಸ್ಕೃತಿ | 9 | ಪರಮತ ಸಹಿಷ್ಣುತೆ |

## ನಾವು ಎಷ್ಟರ ಮಟ್ಟಿಗೆ ಕಲಿತಿದ್ದೇವೆ

### 1. (ವಿಷಯಾವಗಹನ) ತಿಳುವಳಿಕೆ :

ಅ) ಆದಿ ಮಾನವರ ಜೀವನ ವಿಧಾನಕ್ಕೂ, ಈಗಿನ ಜೀವನ ವಿಧಾನಕ್ಕೂ ಇರುವ ಹೋಲಿಕೆಗಳು, ವ್ಯತ್ಯಾಸಗಳನ್ನು ಬರೆಯಿರಿ

ಆ) ನಮ್ಮ ದೇಶದ ಚರಿತ್ರೆಗೆ ಸಂಬಂಧಿಸಿದ ಕಟ್ಟಡಗಳನ್ನು ನಾವು ರಕ್ಷಿಸಬೇಕು. ಏಕೆ ?

ಇ) ನಮ್ಮ ದೇಶದ ಚರಿತ್ರೆಯನ್ನು ಯಾವ ಆಧಾರಗಳ ಮೂಲಕ ತಿಳಿದುಕೊಳ್ಳಬಹುದು ?

ಈ) ನಮ್ಮ ದೇಶಕ್ಕೆ ಸೇರಿದ ಕೆಲವು ಪ್ರಮುಖರನ್ನು ಕುರಿತು ಹೇಳಿರಿ. ಅವರು ಏಕೆ ಪ್ರಸಿದ್ಧಿ ಹೊಂದಿದರು ?

### 2 ಪ್ರಶ್ನಿಸುವುದು - ಪರಿಕಲ್ಪನೆ ಮಾಡುವುದು :

- ಯಾವುದಾದರೂ ಒಂದು ಪುರಾತನ ಕಟ್ಟಡ ಅಥವಾ ಕೋಟೆಯನ್ನು ನೋಡುವುದಕ್ಕೆ ಹೋದರೆ ಅದರ ಮೂಲಕ ಚರಿತ್ರೆಗೆ ಸಂಬಂಧಿಸಿದ ಯಾವ ವಿವರಗಳನ್ನು ತಿಳಿದುಕೊಳ್ಳಬಹುದು. ಇದಗೋಸ್ಕರ ಯಾವ ಪ್ರಶ್ನೆಗಳನ್ನು ಕೇಳುತ್ತೀರಿ ?

### 3 ಪ್ರಯೋಗಗಳು - ಕ್ಷೇತ್ರ ಪರಿಶೀಲನೆ :

- ನಿಮ್ಮ ಗ್ರಾಮದ ಚರಿತ್ರೆಯನ್ನು ತಿಳಿಸುವ ಅಂಶಗಳಾವುವು ? ಅಲ್ಲಿಗೆ ಹೋಗಿ ಪರಿಶೀಲಿಸಿರಿ. ಅವುಗಳ ವಿವರಗಳನ್ನು ತಿಳಿಸಿರಿ.

### 4 ಸಮಾಚಾರ ಕೌಶಲ್ಯತೆ ಪ್ರಾಜೆಕ್ಟ್‌ಗಳು :

ಅ) ಪಾಠದ ಆಧಾರವಾಗಿ ನಮ್ಮ ದೇಶಕ್ಕೆ ಸೇರಿರುವ ಪ್ರಮುಖ ಕಟ್ಟಡಗಳು ಪ್ರಸಿದ್ಧ ವ್ಯಕ್ತಿಗಳ ವಿವರಗಳನ್ನು ಪಟ್ಟಿ ರೂಪದಲ್ಲಿ ತಯಾರು ಮಾಡಿರಿ.

ಆ) ಕಾಕತೀಯ ರಾಜರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿ ನಿಮ್ಮ ತರಗತಿಯಲ್ಲಿ ಪ್ರದರ್ಶಿಸಿರಿ.

SCERT TELANGANA

## 5. ಚಿತ್ರ ಕೌಶಲ್ಯ, ಚಿತ್ರಗಳನ್ನು ಬಿಡಿಸುವುದು, ಮಾದರಿಗಳನ್ನು ತಯಾರಿಸುವುದರಿಂದ ಭಾವ ಪ್ರಕಟನೆ :

ಅ) ಈ ಪಾಠದಲ್ಲಿ ಕೆಲವು ಪ್ರಮುಖವಾದ ಕಟ್ಟಡಗಳನ್ನು ಕುರಿತು ತಿಳಿದುಕೊಂಡಿದ್ದೀರಾ ? ಇದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಿಸಿದವುಗಳನ್ನು ನಕ್ಷೆಯಲ್ಲಿ ಗುರ್ತಿಸಿರಿ.

ಆ) ನಮ್ಮ ದೇಶಕ್ಕೆ ಸೇರಿರುವ ಕೆಲವರು ಪ್ರಮುಖರಲ್ಲಿ ಕಾಕತೀಯರು, ನಿಜಾಮರು ಈ ರಾಜ್ಯಕ್ಕೆ ಸೇರಿದವರು. ಇವರಿಗೆ ಸೇರಿದ ಪ್ರದೇಶಗಳನ್ನು ತೆಲಂಗಾಣ ರಾಜ್ಯದ ನಕ್ಷೆಯಲ್ಲಿ ಗುರ್ತಿಸಿರಿ.

## 6. ಪ್ರಶಂಸೆ, ಮೌಲ್ಯಗಳು, ಜೀವವೈವಿಧ್ಯತೆ ಬಗ್ಗೆ ಅರಿವು ಮೂಡಿಸುವುದು :

ಅ) ಪ್ರಾಚೀನ ಕಟ್ಟಡಗಳನ್ನು ನಾವು ಸಂರಕ್ಷಿಸಬೇಕು. ಇದಕೋಸ್ಕರ ನಾವು ಏನು ಮಾಡಬೇಕೋ ಹೇಳಿರಿ.

ಆ) ನಮ್ಮ ದೇಶದ ಸಂಸ್ಕೃತಿ ಬಹಳ ಪ್ರಸಿದ್ಧವಾದುದು ಎಂದು ನೀವು ಹೇಳುವಿರೇ ?

ಇ) ನಮ್ಮ ಸಂಸ್ಕೃತಿಗೆ ಸಂಬಂಧಿಸಿದ ಅಂಶಗಳಲ್ಲಿ ನಿಮಗೆ ಮೆಚ್ಚಿದವು ಯಾವುವು ? ಇವುಗಳನ್ನು ನೀವು ರಕ್ಷಿಸುವುದಕ್ಕೆ ಏನು ಮಾಡುತ್ತೀರಿ ?

ಈ) ನಮ್ಮ ದೇಶಕ್ಕೆ ಸೇರಿರುವ ಪ್ರಮುಖರಲ್ಲಿ ಒಬ್ಬರ ಪಾತ್ರವನ್ನು ಏಕಾಪಾತ್ರಾಭಿಯ ಮಾಡಿ ಪ್ರದರ್ಶಿಸಿರಿ.

### ನಾನು ಇವುಗಳನ್ನು ಮಾಡಬಲ್ಲೆನಾ ?

| | | |
|---|---|---|
| 1 | ನಮ್ಮ ದೇಶದ ಚರಿತ್ರೆ, ಸಂಸ್ಕೃತಿಗಳ ಕುರಿತು ವಿವರಿಸುವೆನು. | ಹೌದು / ಇಲ್ಲ |
| 2 | ನಮ್ಮ ದೇಶದ ಚರಿತ್ರೆಯನ್ನು ತಿಳಿದುಕೊಳ್ಳುವುದಕ್ಕೆ ಅವಶ್ಯಕವಾದ ಪ್ರಶ್ನೆಗಳನ್ನು ಕೇಳುವೆನು. | ಹೌದು / ಇಲ್ಲ |
| 3 | ಗ್ರಾಮ ಚರಿತ್ರೆಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸುವೆನು. | ಹೌದು / ಇಲ್ಲ |
| 4 | ನಮ್ಮ ದೇಶದ ಪ್ರಮುಖರ ವಿವರಗಳನ್ನು ಪಟ್ಟಿ ರೂಪದಲ್ಲಿ ಬರೆಯುವೆನು. | ಹೌದು / ಇಲ್ಲ |
| 5 | ನಮ್ಮ ದೇಶದಲ್ಲಿನ ಪ್ರಮುಖ ಕಟ್ಟಡಗಳ, ವ್ಯಕ್ತಿಗಳ ವಿವರಗಳನ್ನು ನಕ್ಷೆಯಲ್ಲಿ ಗುರ್ತಿಸುವೆನು. | ಹೌದು / ಇಲ್ಲ |
| 6 | ನಮ್ಮ ಸಂಸ್ಕೃತಿಗೆ ಸಂಬಂಧಿಸಿದ ಕಟ್ಟಡಗಳನ್ನು ರಕ್ಷಣೆ ಮಾಡುವುದಕ್ಕೆ ಶ್ರಮ ಪಡುವೆನು. | ಹೌದು / ಇಲ್ಲ |



SCERT TELANGANA